# ಸಾ.ವೆಂ. ಆಚಾರ್ಯ

## ಆಯ್ದ ಹರಟೆಗಳು

ಸಂಪಾದಕರು:

ಪ್ರೊ॥ ಅ.ರಾ. ಮಿತ್ರ

ಡಾ॥ ಶ್ರೀನಿವಾಸ ಹಾವನೂರ



ಪಾ. ವೆಂ. ಆಚಾರ್ಯ ಸಮಗ್ರ ಸಾಹಿತ್ಯ

ಸಂಪುಟ - ೧

# ಆಯ್ದ ಹರಟೆಗಳು

## ಪಾ. ವೆಂ. ಆಚಾರ್ಯ ಸಮಗ್ರ ಸಾಹಿತ್ಯ

### ಸಂಪುಟ - ೧

# ಆಯ್ದ ಹರಟೆಗಳು

ಲಾಂಗೂಲಾಚಾರ್ಯ
(ಪಾ. ವೆಂ. ಆಚಾರ್ಯ)

ಸಂಪಾದಕರು
ಪ್ರೊ|| ಅ.ರಾ. ಮಿತ್ರ
ಡಾ|| ಶ್ರೀನಿವಾಸ ಹಾವನೂರ

ಪ್ರಿಸಮ್ ಬುಕ್ಸ್ ಪ್ರೈ. ಲಿ.
ನಂ. 1865, 32ನೇ ಕ್ರಾಸ್, ಬನಶಂಕರಿ ಎರಡನೇ ಹಂತ
ಬೆಂಗಳೂರು - 560 070

**Pa. Vem. Acharya Samgra Sahitya Samputa-1: Aayda Harategalu—** Selected essays of Sri Pa.Vem. Acharya, edited by Prof: A.R. Mitra and Dr. Srinivasa Havanur

Published by
**Prism Books Pvt Ltd.**
1865, 32nd Cross
Banashankari 2nd Stage
Bangalore - 560070.
Ph: 6713979

Pages: 144

First edition: 2000
Second Edition 2003

Price: Rs. 70

© ಮುರಳೀಧರ ಪಾಡಿಗಾರ

ಬೆಲೆ: ರೂ. ೭೦

ಪುಟಗಳು: ೧೪೪

ಪ್ರಥಮ ಮುದ್ರಣ: ೨೦೦೦
ದ್ವಿತೀಯ ಮುದ್ರಣ : 2003

ಪಾ.ವೆಂ. ಭಾವಚಿತ್ರ ಕೃಪೆ: ಕೆ. ಜಿ. ಸೋಮಶೇಖರ್

ರಕ್ಷಾಪುಟ ವಿನ್ಯಾಸ : ಸುಧಾಕರ ದರ್ಬೆ

ಮುದ್ರಣ: ಸ್ಟ್ಯಾಂಡರ್ಡ್ ಪ್ರೆಸ್, ಬೆಂಗಳೂರು

# ಮುನ್ನುಡಿ

'ಪ್ರಹಾರ', 'ಲೋಕದ ಡೊಂಕು', 'ವಕ್ರದೃಷ್ಟಿ' ಮತ್ತು 'ವಿಪರೀತ' ಎಂಬ ನಗೆ ಬರಹಗಳ ಲೇಖಕರು ಪಾಡಿಗಾರು ವೆಂಕಟರಮಣ ಆಚಾರ್ಯರು. ಇವೇ ಅಲ್ಲದೆ ಅವರ ನೂರಾರು ಹರಟೆ ಪ್ರಬಂಧಗಳು ಪುಸ್ತಕ ಭಾಗ್ಯವನ್ನೇ ಕಾಣದೆ ಚದುರಿ ಬಿದ್ದಿವೆ. ಇವರು ಪಾ.ವೆಂ., ಪಾ.ವೆಂ. ಆಚಾರ್ಯ, ಪಿ.ವಿ. ಆಚಾರ್ಯ ಈ ಎಲ್ಲ ಹೆಸರುಗಳಿಂದಲೂ ಪ್ರಸಿದ್ಧರಾಗಿದ್ದಾರೆ. ಉಡುಪಿಯ ಈ ವ್ಯಕ್ತಿಗೆ ತನ್ನ ವಿಶಿಷ್ಟ ಹರಟೆಗಳೆಲ್ಲ ನಗೆ ಚೇಷ್ಟೆ ವಕ್ರತೆ ವಿಡಂಬನೆ ಕೆಣಕಾಟ ಕಿಡಿಗೇಡಿತನಗಳಿಂದ ಕೂಡಿರುವಾಗ ಮೇಲಿನ ಗಂಭೀರ ಹೆಸರುಗಳಾವುವೂ ಸರಿಯಲ್ಲ ಎನಿಸಿರಬೇಕು. ಆದ್ದರಿಂದ 'ಲಾಂಗೂಲಾಚಾರ್ಯ' ಎಂಬುದಾಗಿ ಸ್ವನಾಮಕರಣ ಮಾಡಿ ಕೊಂಡಿದ್ದಾರೆ. ಅಲ್ಲಿಗೂ ಬಾಲದಯ್ಯ ಅಂತಲೋ ಲಾಂಗೂಲಯ್ಯ ಅಂತಲೋ ಇಟ್ಟುಕೊಳ್ಳದೆ 'ಆಚಾರ್ಯ' ಎಂಬ ದಪ್ಪ ಬಿರುದಿನ ಮೊರೆಹೊಕ್ಕಿದ್ದಾರೆ. ಅವರ ಲೇವಡಿ ಸ್ವಭಾವಕ್ಕೆ ಇದೊಂದು ಒಳ್ಳೆಯ ನಿದರ್ಶನ. ತಮ್ಮ ಪ್ರಬಂಧಗಳಲ್ಲಿ ಎಲ್ಲ ಪ್ರಾಣಿಗಳ ಬಗೆಗೂ ಪ್ರಸ್ತಾಪ ಮಾಡಿರುವ ಈ ಪ್ರಾಣಿಗೆ 'ಹನುಮನುದಿಸಿದ ನಾಡು' ಎಂದು ಸೇವೆಗೆ ಪ್ರಸಿದ್ಧವಾಗಿರುವ ಕನ್ನಡ ನಾಡಿನ ರಾಷ್ಟ್ರೀಯ ಪ್ರಾಣಿಯ ಬಾಲವನ್ನು ಸಂಕೇತವಾಗಿಟ್ಟುಕೊಂಡು ಬರೆಯುವ ಪ್ರಚೋದನೆ ಯಾವಾಗ ಬಂತೋ, ಏಕೆ ಬಂತೋ ನನಗೆ ತಿಳಿಯದು. ಅವರೂ ತುಂಬ ಆಲೋಚಿಸಿ ಈ ಹೆಸರಿಟ್ಟುಕೊಂಡಂತೆ ಕಂಡುಬರುವುದಿಲ್ಲ ಎಂಬ ಸಂಗತಿ ಅವರ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. "ಲಾಂಗೂಲಾಚಾರ್ಯರ ಹುಟ್ಟು ಹೆಸರೇನು? ಲಾಂಗೂಲಾಚಾರ್ಯ ಎಂಬ ಬಿರುದನ್ನು ಅವರಿಗೆ ಯಾರು ದಯಪಾಲಿಸಿದರು? ಎಂದು ಕುತೂಹಲ ಪ್ರದರ್ಶಿಸಲಾಗಿದೆ. ಮೊದಲನೆಯದಾಗಿ ಲಾಂಗೂಲಾಚಾರ್ಯರು ಹುಟ್ಟಲೇ ಇಲ್ಲ. ಆದ್ದರಿಂದ ಅವರಿಗೆ ಹುಟ್ಟು ಹೆಸರೇನು?—ಎಂಬ ಪ್ರಶ್ನೆ ಏಳುವುದೇ ಇಲ್ಲ. ಅವರು ಸ್ವಯಂಭುಲಿಂಗದಂತೆ. ಕಾಲರಾ ಪಿಡುಗಿನಂತೆ ಏಕಾಏಕಿ ಪ್ರಕಟವಾದರು" (ಲೋಕದ ಡೊಂಕು–ಪುಟ ೨೦೪)

ಹಾಸ್ಯಬರಹಗಾರರ ಬಳಗಕ್ಕೆ ಸೇರಿದ ನನಗೆ ಲಾಂಗೂಲಾಚಾರ್ಯರಂತಹ ಹಿರಿಯರ ಬಾಲವನ್ನು ಸ್ವಲ್ಪ ಅಲ್ಲಾಡಿಸಿ ನೋಡಬೇಕೆನಿಸಿದ್ದು ತೀರ ಸಹಜವಾಗಿದೆ. ಭೀಮನಂತೆ ಅಹಂಕಾರದಿಂದ ಈ ಸಾಹಸಕ್ಕೆ ನಾನು ಹೋಗಲಿಲ್ಲ. ಹಾಗೆ ಹೋಗಿದ್ದರೆ ಈ ಬಾಲ ಹನುಮನ ಬಾಲದಷ್ಟೇ ಗಡುಸಾದದ್ದು ಎಂಬ 'ಭೀಮಾನುಭವ' ನನಗಾಗುತ್ತಿತ್ತು. ಭೀಮನಂತೆಯೇ ಊರ್ಧ್ವಶ್ವಾಸ ಲಹರಿಯಲ್ಲಿ ಲಟಕಟಿಸಬೇಕಾದ ಸ್ಥಿತಿ ನನಗೂ ಬರುತ್ತಿತ್ತು.

ಆದರೆ ನಾನು ವಿನೀತ ಭಾವದಿಂದ "ಬಾಲದ ಕದವ ತೆಗೆ" ಎಂದು ಪ್ರಬಂಧಕಾರ ಲಾಂಗೂಲಾಚಾರ್ಯರನ್ನು ಬೇಡಿಕೊಂಡೆ. ಅವರ ದಯೆಯಿಂದ ಅವರ ಕೃತಿಗಳ ಬಾಲದ ಕದ ಧಾರಾಳವಾಗಿ ತೆರೆಯಿತು. ಅಲ್ಲದೆ ಅಲ್ಲೇ ಸೌಗಂಧಿಕ ಪುಷ್ಪವೂ ನನ್ನ ಪಾಲಿಗೆ ಸಿಕ್ಕಿತು. ಈ ಪುಷ್ಪದ ಸೌರಭವನ್ನು ಹಂಚುವುದಷ್ಟೇ ನನ್ನ ಉದ್ದೇಶ.

ಅವರ ಬರಹಗಳು ನೂರಾರಿವೆ. ಕೆಲವನ್ನು ನೋಡೋಣ. 'ಯದ್ವಾತದ್ವಾ ಯೆಂಕಣ್ಣಯ್ಯನವರು' ಪ್ರಬಂಧ ಎನ್ನುವುದಕ್ಕಿಂತ ಒಂದು ಸುಂದರ ಕಥೆ ಅಥವಾ ವ್ಯಕ್ತಿಚಿತ್ರ ಎನ್ನುವುದು ಸೂಕ್ತ. 'ಮಂತ್ರಿಗಳ ದಿನಚರಿ' ದಿನಚರಿಯ ರೂಪದಲ್ಲೇ ಲಿಖಿತವಾಗಿದೆ. 'ದೇವಚರ್ಚೆ' ಸಂಭಾಷಣೆಯ ರೂಪದಲ್ಲಿದೆ. 'ಕಳಾಪ್ರಪೂರ್ಣ ಆಯುಷ್ಕರ್ಮ ಶಾಲಾ' ಆಂಧ್ರದ ವೆಂಕಟೇಶ್ವರುಡು ಎಂಬ ಕಲಾವಿದ ಕ್ಷೌರಿಕನ ವ್ಯಕ್ತಿಚಿತ್ರಣ. ಕೆಲವು ಶುದ್ಧಾಂಗ ನಗೆಬರೆಹಗಳು. ಸಾಧಾರಣವಾಗಿ ಎಲ್ಲ ಹಾಸ್ಯ ಪ್ರಬಂಧಕಾರರೂ ಬರೆಯಲು ಬಯಸುವ ವಿಷಯಗಳೇ ಇಲ್ಲಿವೆ. ಸಲಹೆಗಳು, ಬೆಳಗ್ಗೆ ಏಳುವ ವಿಷಯ, ಕಾಯಿಲೆಗಳು, ಪವಾಡಗಳು, ಕ್ಯೂ, ಈರುಳ್ಳಿ ಮಹಿಮೆ, ದಾಂಪತ್ಯದ ಸಂದಿಗ್ಧಗಳು ಇತ್ಯಾದಿ. ಈ ವಿಷಯಗಳಲ್ಲಿ ಹೆಚ್ಚಳವಿಲ್ಲ. ಆದರೆ ಪ್ರತಿಯೊಂದು ಬರಹದಲ್ಲೂ ಈ ಲೇಖಕರಿಗೇ ವಿಶಿಷ್ಟವಾದ "ಆಚಾರ್ಯ ಛಾಪು" ಸ್ಪಷ್ಟವಾಗಿ ಕಾಣಬರುತ್ತದೆ.

ಲಾಂಗೂಲಾಚಾರ್ಯರದು 'ಲಾಂಗೂಲ ಚಾಲನ' ಸ್ವಭಾವವಲ್ಲ—ಲಾಂಗೂನಾಸ್ಫಾಲನ ಸ್ವಭಾವ. ಈ ಅರ್ಥದಲ್ಲಿ ಅವರು ಬಾಲ-ಬಡುಕರು. ವಿಷಯವನ್ನು ಹರಡುವುದರಲ್ಲಿ, ಭಾಷೆಯ ಬಳಕೆಯಲ್ಲಿ , ಪ್ರಸಂಗೋದ್ಧರಣದಲ್ಲಿ, ಉಪಮಾವಿಧಾನದಲ್ಲಿ ಈ ಎಲ್ಲದರಲ್ಲೂ ಅವರ ಚೇಷ್ಟೆಯ ಬೇರುಗಳು ಕಾಣಿಸುತ್ತವೆ. ಆದ್ದರಿಂದಲೇ ಅವರು ಕನ್ನಡದಲ್ಲಿ ವಿಶಿಷ್ಟ ಬಗೆಯ ಹರಟೆಗಾರರಾಗಿ ಉಳಿದಿದ್ದಾರೆ. 'ಪ್ರಹಾರ', 'ಲೋಕದ ಡೊಂಕು', 'ವಿಪರೀತ', 'ವಕ್ರದೃಷ್ಟಿ' ಇವು ಶ್ರೀಯುತರ ನಗೆ ಬರಹಗಳ ಸಂಕಲನಗಳು. ಪ್ರಹಾರದಲ್ಲಿ, ರಾಮಾಯಣ, ಭಾರತ, ಭಾಗವತ ಮತ್ತು ಪುರಾಣಗಳ ಕಥೆಗಳ ವಿಚಿತ್ರ ವಿಶ್ಲೇಷಣೆಗಳು ಸಾಕಷ್ಟಿದ್ದು ಸಮಸಾಮಯಿಕ ಹರಟೆಗಳೂ ಇವೆ. 'ಲೋಕದ ಡೊಂಕು', 'ವಕ್ರದೃಷ್ಟಿ', 'ವಿಪರೀತ'ಗಳಲ್ಲಿ ಎಲ್ಲ ಬಗೆಯ ಹರಟೆಗಳಿವೆ.

'ಲಾಂಗೂಲಾಚಾರ್ಯ' ಎಂಬ ಹೆಸರಿನಲ್ಲಿ ಅಚ್ಚಾದ ಯಾವ ಪುಸ್ತಕ ತೆಗೆದು ನೋಡಿದರೂ ಹಿಮ್ಮುಖದಲ್ಲಿ ಅವರ ಪರಿಚಯ ಸಿಕ್ಕುತ್ತದೆ. ಅವರು ೧೯೧೫ರಲ್ಲಿ ಉಡುಪಿಯಲ್ಲಿ ಹುಟ್ಟಿದ ಸಂಗತಿಯಾಗಲಿ ಒಂದು ಸಾವಿರಕ್ಕೂ ಮೇಲ್ಪಟ್ಟು ನಗೆಬರಹಗಳನ್ನು ಬರೆದಿರುವ ಸಂಗತಿಯಾಗಲೀ, ಅವರು ಶಾಲಾ ಮಾಸ್ತರಾಗಿ, ಮುದ್ರಣಾಲಯದ ಮೆನೇಜರ್ ಆಗಿ, ಪತ್ರಿಕಾ ಸಂಪಾದಕರಾಗಿ, ಹೋಟೆಲ್ ಬಿಲ್ ರೈಟರ್ ಆಗಿ ಇನ್ನೂ ಏನೇನೋ ಆಗಿದ್ದರೆಂಬ ವಿಷಯಗಳೆಲ್ಲಾ ಆ ಬ್ಲರ್ಬುಗಳಲ್ಲೇ ದೊರೆಯುವುದರಿಂದ ಆ ದಿಕ್ಕಿನಲ್ಲಿ ನಾನು ಸಾಗುವುದಿಲ್ಲ. ಆದರೆ ಅವರ ಹರಟೆಗಳ ಕವಲು ದಾರಿಗಳಲ್ಲಿ ಅವರು ಸ್ವಕೀಯವಾದ ಸಾಕಷ್ಟು ಸಂಗತಿಗಳನ್ನು ವಿನೋದಪೂರ್ಣವಾಗಿ ಪ್ರಸ್ತಾಪಿಸಿ, ತಮ್ಮ

ಬದುಕಿನ ಪರಿಚಯ ಮಾಡಿಕೊಡುತ್ತ ಹೋಗುತ್ತಾರೆ. ಇವರ ಐದನೆಯ ವಯಸ್ಸಿನಲ್ಲಿ ತೀರಿಕೊಂಡ ತಂದೆಯವರು ಹರಿಕತೆ ಮಾಡುವುದು, ಕವಿತೆ ಬರೆಯುವುದು ಮೊದಲಾದ ಹವ್ಯಾಸಗಳಿಂದ ಕೂಡಿದವರಾಗಿದ್ದರೆಂಬುದನ್ನೂ, ಅಪೂರ್ಣ ಕವಿತೆಯನ್ನು ರಚಿಸುವ ಚಟ ತಮ್ಮಲ್ಲಿ ಆರಂಭವಾದ ಬಗೆಯನ್ನೂ ಅವರು "ನಾನು ಕವಿತೆ ಬರೆಯತೊಡಗಿದ್ದು" ಎಂಬ 'ಪ್ರಹಾರ'ದ ಹರಟೆಯಲ್ಲಿ ವಿವರಿಸಿದ್ದಾರೆ. "ಲೋಕದ ಡೊಂಕು"ನಲ್ಲಿ "ನಾನು ಹುಟ್ಟಿದ್ದು", "ನಾನು ಯಾರು?", "ನನ್ನ ಆಸ್ತ್ಯಾರ್ಧ ಷಷ್ಟ್ಯಬ್ದಿ", "ಲಾಂಗೂಲಾಚಾರ್ಯರು ಯಾರು?" "ಸವಿಗನಸುಗಳು"-ಹರಟೆಗಳು ಅವರ ವ್ಯಕ್ತಿ ಪರಿಚಯವನ್ನೂ ಬರವಣಿಗೆಯ ತಂತ್ರವನ್ನೂ ಸ್ಪಷ್ಟವಾಗಿ ತಿಳಿಸಿಬಿಡುತ್ತವೆ.

ಪತ್ರಕರ್ತರೂ ಬಹುಶ್ರುತರೂ ಸಾರವತ್ತಾದ ಲೇಖನಗಳ ಅನುವಾದಕರೂ ಆದ ಲಾಂಗೂಲಾಚಾರ್ಯರು ತಮ್ಮ ನೆನಪಿನ ಪ್ರಭೆಯಿಂದ ಯಾವ ವಿಷಯದ ಕತ್ತಲಿಗಾದರೂ ದಾಳಿಯಿಡಬಲ್ಲವರಾಗಿದ್ದಾರೆ. ಕನ್ನಡದ ಎಲ್ಲ ಭಾಷಾ ಪ್ರಭೇದಗಳ ಅನುಭವಜನ್ಯ ತಿಳುವಳಿಕೆ, ಹಳಗನ್ನಡದ ಅಧ್ಯಯನ, ಸಂಸ್ಕೃತ, ಕನ್ನಡ, ಇಂಗ್ಲಿಷ್ ಕಾವ್ಯಗಳ ಸಾರೋಕ್ತಿಗಳ ತಲಸ್ಪರ್ಶಿಯಾದ ಜ್ಞಾನ, ಭಾಷೆಯನ್ನು ವಿಚಾರವನ್ನು ಹೇಗೆಂದರೆ ಹಾಗೆ ತಿರುಚಬಲ್ಲ ನಮ್ಯಸತ್ವ—ಇವುಗಳಿಂದ ಅವರ ಪ್ರಬಂಧ-ಹರಟೆಗಳು ಕಂಪು ಪಡೆದಿವೆ. ಅಣಕು ಗಾಂಭೀರ್ಯವೇ ಅವರ ಶೈಲಿಯ ಮೂಲ ನೆಲೆಯಾದ್ದರಿಂದ ಅವರು ಎಂಥ ಭಾರವಾದ ವಿಚಾರವನ್ನೂ ಹಗುರವಾಗಿ ತೇಲಿಸಬಲ್ಲ ಮರ್ಮವನ್ನು ಅರಿತವರಾಗಿದ್ದಾರೆ. ಸಮಕಾಲೀನ ಜೀವನದ ಗತಿಯೊಂದಿಗೆ ಸಜೀವ ಸಂಬಂಧ ಇರಿಸಿಕೊಂಡಿರುವ, ಹಳೆಯದರೊಂದಿಗೆ ಸುಲಭವಾಗಿ ಬೆರೆಯಬಲ್ಲ ಇಂಥ ಚಿಂತನಶೀಲ ವ್ಯಕ್ತಿಗೆ ಓದುವ ಜನರ ಆಕಳಿಕೆಗೆ ಕಾರಣನಾಗಬಾರದೆಂಬ ವಿವೇಕವೂ ಮೊಳೆತಿರುವುದರಿಂದ ಅವರ ಬರವಣಿಗೆ ಏನಾಗದಿದ್ದರೂ 'ಬೋರ್' ಅಂತೂ ಆಗುವುದಿಲ್ಲ. ಕನ್ನಡ ಸಾಹಿತ್ಯ ಚಳುವಳಿಗಳ ಎಲ್ಲ ಪಂಥಗಳ ಪರಿಚಯವೂ ಅವರಿಗಿರುವುದೊಂದು ಸೌಭಾಗ್ಯ ಎನ್ನಬೇಕು.

ಹರಟೆಗಳ ಕವಲು ದಾರಿಯಲ್ಲಿ ಸಾಗುವಾಗ ಅನಿರೀಕ್ಷಿತವಾಗಿ ಬೇರೊಂದು ಸಂಗತಿಯೊಂದಿಗೆ ವಿಚಿತ್ರ ಸಂಬಂಧ ಕಲ್ಪಿಸಿ ಮತ್ತೆ ಹಳೆಯ ಜಾಡಲ್ಲಿ ಸಾಗುವ ವಕ್ರ ಪಂಥದ ಗುಣವೂ ಈ ಹರಟೆಗಾರರಿಗಿರುವುದು ಒಂದು ವೈಶಿಷ್ಟ್ಯ. ಉದಾಹರಣೆಗೆ 'ನೀರುಳ್ಳಿಯ ಮಹಿಮೆ' ಎಂಬ ಪ್ರಬಂಧದಲ್ಲಿ ದಾಂಪತ್ಯದ ಕೆಲವು ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಬಸವಣ್ಣ, ಹಸೀ ಬ್ರಾಹ್ಮಣರು, ಪುರಾಣ ಲೋಕಗಳನ್ನೆಲ್ಲಾ ಚರ್ಚೆಗೆ ಎತ್ತಿಕೊಂಡು ಈರುಳ್ಳಿಯ ಮಹಿಮೆಯನ್ನು ವಿನೋದ-ಗಂಭೀರ ಶೈಲಿಯಲ್ಲಿ ವರ್ಣಿಸಿ ತಟಕ್ಕನೆ:

"ಈರುಳ್ಳಿಯೆಂದರೆ ನಾಚುಗುಳಿ ಹೆಣ್ಣಿನ ಹಾಗೆ. ನಾಚಿಕೆಯ ಒಂದು ಪರೆಯನ್ನು ಸುಳಿದು ಹಾಕಿದರೆ ಒಳಗೆ ಇನ್ನೊಂದು ಪರೆ ಇರುತ್ತದೆ. ಅದನ್ನು ತೆಗೆದರೆ ಒಳಗೆ ಮತ್ತೂ ಒಂದಿದೆ. ತಿರುಳಿನವರೆಗೂ ಇದೇ ಕಥೆ. ಎಲ್ಲಾ ನಾಚಿಕೆ ಪರೆಗಳನ್ನು ಹೋಗಲಾಡಿಸಿದರೆ ಒಳಗೆ ಏನೂ ಇಲ್ಲ! ಆಗಲೇ ನಿಮಗೆ ಗೊತ್ತು—ಹೆಣ್ಣೆಂದರೆ ನಾಚಿಕೆಯ ಅಸಂಖ್ಯ

ಸುರುಳಿಗಳ ಸಂಯೋಜನೆ ಅಂತ. ಮತ್ತೆ ಈ ಪರೆಗಳ ಕಳಚುವಿಕೆಯಲ್ಲಿ ತುಸು ಅಚಾತುರ್ಯವಾಯಿತೋ, ನಿಮ್ಮ ಕಣ್ಣಲ್ಲಿ ನೀರು!"

ಅದೇ ರೀತಿಯಲ್ಲಿ ಗಣಪತಿಯನ್ನು ವರ್ಣಿಸುವಾಗ, ಅವನ ಹೊಟ್ಟೆಬಾಕತನವನ್ನು ಮೆಚ್ಚುವಾಗ ತಟಕ್ಕನೆ: "ಅವನು ಹಸಿಯಾದ ನವ್ಯ ಕವಿತೆಗಳನ್ನು ಬರೆದಿರಲಾರ. ಅವನು ರೊಮ್ಯಾಂಟಿಕ್ ಸಂಪ್ರದಾಯದವನೇ ಆಗಿರಬೇಕು" ಎಂದು ಕನ್ನಡ ಕಾವ್ಯದ ನವ್ಯ-ನವೋದಯ ಪಂಥಗಳ ಸ್ವರೂಪವನ್ನು ವಿಶ್ಲೇಷಿಸುತ್ತಾರೆ.

ಕೇವಲ ೧೮೦ ವರ್ಷಗಳ ಹಿಂದೆ ಕಾಣಿಸಿಕೊಂಡ 'ಸತ್ಯನಾರಾಯಣ' ಎಂಬ ಹೊಸದೇವರ ಜನಪ್ರಿಯತೆಗೆ ಆತನ ಪಾಕಾಭಿರುಚಿಯೇ ಕಾರಣವಿರಬೇಕು ಎಂದು ವಾದಿಸುವ ಲಾಂಗೂಲಾಚಾರ್ಯರು ಸತ್ಯನಾರಾಯಣನನ್ನು 'ಗಣಿತಪ್ರಿಯ' ಎಂದು ಕರೆಯುತ್ತಾರೆ. ವಿಶ್ವ ಸೃಷ್ಟಿಕರ್ತನು ಪೂರ್ಣಾಂಕಗಳಲ್ಲಿ ಚಿಂತಿಸುವ ಗಣಿತ ಶಾಸ್ತ್ರಜ್ಞ ಎಂಬ ವಿಜ್ಞಾನಿಯ ಹೇಳಿಕೆಯನ್ನು ಒಪ್ಪದೆ "ನಮ್ಮ ಸತ್ಯನಾರಾಯಣ ಪೂರ್ಣಾಂಕಗಳಲ್ಲಿ ಅಲ್ಲ, ಭಿನ್ನರಾಶಿಗಳಲ್ಲಿ ಚಿಂತಿಸುವ ದೇವರು" ಎನ್ನುತ್ತಾರೆ. ಏಕೆಂದರೆ ಸತ್ಯನಾರಾಯಣನ ಪ್ರಸಾದದ ಎಲ್ಲ ಅಂಗಗಳನ್ನು ಸಪಾದ—ಎಂದರೆ ಒಂದೂಕಾಲು ಪ್ರಮಾಣದಲ್ಲಿ ಹಾಕಬೇಕಂತೆ!

ಹಾಗೆಯೇ ಹೆಂಡತಿಯನ್ನು ಅರ್ಥಮಾಡಿಕೊಳ್ಳುವುದೆಂದರೆ ಆಚಾರ್ಯರ ದೃಷ್ಟಿಯಲ್ಲಿ ನವ್ಯ ಕವಿತೆಯನ್ನು ಅರ್ಥಮಾಡಿಕೊಳ್ಳುವಷ್ಟೇ ಕಷ್ಟದ ಸಾಹಸದ ಕೆಲಸವಾಗುತ್ತದಂತೆ.

ಕಾಯಿಲೆಗಳನ್ನು ಚರ್ಚಿಸುತ್ತ ಸಾಹುಕಾರರ ಜಾತಿಯನ್ನು ಮಧ್ಯಮವರ್ಗದವರು ಹೇಗೆ ಕಾಣಬಲ್ಲರು ಎಂಬುದನ್ನು ವಿವರಿಸುತ್ತಾರೆ. ಶ್ರೀಮಂತರಿಗೆ ಸ್ವರ್ಗದ ಮುಂಬಾಗಿಲಿನಿಂದ ಪ್ರವೇಶವಿಲ್ಲ ಎಂದು ಬೈಬಲ್ ಹೇಳಿದ್ದರೆ ಭಾರತದ ರಾಜಕಾರಣವನ್ನೂ ಸಮಾಜವಾದದ ವೈಭವವನ್ನೂ ಚೆನ್ನಾಗಿ ಬಲ್ಲ ಆಚಾರ್ಯರು "ಹಿಂಬಾಗಿಲ ಮೂಲಕ ಶ್ರೀಮಂತರಿಗೆ ಸುಲಭವಾಗಿ ಪ್ರವೇಶಕೊಡಿಸುವ ಏರ್ಪಾಡು ಇದೆ ಅಂತ ನನಗೆ ಸಂಶಯ" ಎನ್ನುತ್ತಾರೆ.

ಮೇಲೆ ಹೇಳಿದ ಅವರ ಪ್ರಬಂಧಗಳ ಗುಣಗಳಲ್ಲಿ ಒಂದೊಂದು ಅಂಶವನ್ನು ಲಕ್ಷ್ಯಪೂರ್ವಕವಾಗಿ ವಿವರಿಸುತ್ತ ಹೋಗಬಹುದು. ಆದರೆ ಮೂಲ ರಚನೆಗಳ ಮೊರೆ ಹೊಕ್ಕರೆ ಓದುಗರಿಗೆ ಹೆಚ್ಚು ಲಾಭವಿದೆಯೆಂದು ಸೂಚಿಸಿ ಕೆಲವೇ ರಚನಾಸಿದ್ಧಿಗಳನ್ನು ಉದಹರಿಸುತ್ತೇನೆ.

ಮೊದಲು ನಮ್ಮ ಮನಸ್ಸಿಗೆ ತಟ್ಟುವ ಅಂಶ ಲಾಂಗೂಲಾಚಾರ್ಯರ ಲೋಕಜ್ಞಾನ ಮತ್ತು ಭಯಂಕರ ಸ್ಮರಣಶಕ್ತಿ, ಹರಟೆಗೆ ಯಾವುದೇ ವಿಷಯ ಎತ್ತಿಕೊಂಡರೂ ಅದರಲ್ಲಿ ತಮ್ಮ ವಿಚಿತ್ರವಾದ ತರ್ಕಸರಣಿಯನ್ನು ಅವರು ಪ್ರತಿಪಾದಿಸುತ್ತಾರೆ. ಅದಕ್ಕೆ ನಮ್ಮ ಪುರಾಣಗಳಿಂದಲೋ, ಪ್ರಾಚ್ಯ ಪಾಶ್ಚಾತ್ಯ ಕಾವ್ಯ ನಾಟಕಗಳಿಂದಲೋ, ಜನೋಕ್ತಿಯಿಂದಲೋ, ಸಂಶೋಧನ ಗ್ರಂಥಗಳಿಂದಲೋ, ಸುದ್ದಿಪತ್ರಿಕೆಯಿಂದಲೋ, ಐತಿಹ್ಯದಿಂದಲೋ ಅಂತೂ ಒಂದಲ್ಲ ಒಂದು ಕಡೆಯಿಂದ ಪುರಾವೆಗಳನ್ನೊದಗಿಸಿ ಹೂವೆತ್ತಿದಷ್ಟು ಹಗುರವಾಗಿ

ವಿಷಯವನ್ನು ಮುಂದಿಡುತ್ತ ಹೋಗುತ್ತಾರೆ. 'ಹಳೇದಾದರೂ ಹೊಸದು' ಎಂಬ ಪ್ರಬಂಧದಲ್ಲಿ ಈ ಬಗೆಯ ರಚನೆಗೆ ತಕ್ಕುದಾದ ಅವರ ತಾತ್ತ್ವಿಕ ನಿಲುವು ಪ್ರತಿಪಾದಿತವಾಗಿಯೂ ಇದೆ ಸಮರ್ಥವಾಗಿಯೂ ಇದೆ. ಅಜ್ಜ ನೆಟ್ಟ ಆಲದ ಮರಕ್ಕೆ ಹಳೇ ಹಗ್ಗದಿಂದ ನೇಣು ಹಾಕಿಕೊಳ್ಳುವವರು ತಾವಲ್ಲ ಎನ್ನುತ್ತಾರೆ. ಏಕೆಂದರೆ ಅವರ ದೃಷ್ಟಿಯಲ್ಲಿ ಹಳೆಯ ಹಗ್ಗಕ್ಕಿಂತ ನೈಲಾನ್ ಹಗ್ಗವೂ ಆಲದ ಮರಕ್ಕಿಂತ ಮನೆಯ ತೊಲೆಯೂ ಉತ್ತಮವಂತೆ! ಪೊಳ್ಳುಬಿದ್ದ ಮರಕ್ಕೆ ನೇಣು ಹಾಕಿಕೊಳ್ಳಲು ಹೊರಟರೆ ಅದರ ಕೊಂಬೆ ಬಿದ್ದು ಮೈ ಕೈ ಗಾಯವಾದರೇನು ಗತಿ ಎಂಬ ಭಯವೂ ಅವರಿಗಿದೆ. ಆದರೂ ಅಜ್ಜ ನೆಟ್ಟ ಆಲದ ಮರವನ್ನು ಕಡಿದೇ ಹಾಕಿಬಿಡಬೇಕು ಎನ್ನುವ ಕ್ರಾಂತಿಕಾರನ ಹುಮ್ಮಸ್ಸೂ ಅವರಿಗಿಲ್ಲವಂತೆ. ಮರದ ನೆರಳಿನಲ್ಲಿ ಹಾಯಾಗಿ ಒರಗಿ ಸೋಮಾರಿ ಹಗಲು ನಿದ್ದೆ ಮಾಡುವುದಕ್ಕೆ ಅವರಿಗೆ ಇಷ್ಟ. ಆದ್ದರಿಂದ ಅವರ ಅಂತಿಮ ನಿರ್ಧಾರ ಇದು: "ಹಳೇದನ್ನ ಹೇಗೆ ಉಪಯೋಗಿಸಬೇಕು ಅಂತ ತಿಳಕೊಂಡವನೇ ಕಡು ಜಾಣ."

ಈ ನಿಲುವಿಗೆ ಅನುಗುಣವಾಗಿಯೇ ಅವರ ಪ್ರಬಂಧ ಬೆಳೆಯುತ್ತದೆ. ಹಳತರ ಒಳಿತು ಕೆಡುಕುಗಳೆರಡನ್ನೂ ಹೆಕ್ಕಿ ತೋರಿಸುವ ದಾರಿ ಅವರದು. ಹಳೇ ಕಾಲದ ಕಷ್ಟಗಳನ್ನೆಲ್ಲ ಮರೆತು ಸುಖಗಳನ್ನು ಮಾತ್ರ ನಮ್ಮ ಮನಸ್ಸು ಜೋಪಾನವಾಗಿ ಟ್ರೆಜರಿಯಲ್ಲಿ ಯಾಕೆ ಇಟ್ಟುಕೊಳ್ಳುತ್ತೆ ಎನ್ನುವುದು ಅವರಿಗೆ ಇನ್ನೂ ಅರ್ಥವಾಗಿಲ್ಲವಂತೆ. ಮುಂದೆ ಲೇಖಕರು ಪುರಾತತ್ವ ಶೋಧಕರಾದ ಇತಿಹಾಸಕಾರರನ್ನು ಚರ್ಚೆಯ ಅಖಾಡಕ್ಕೆ ಇಳಿಸಿಕೊಳ್ಳುತ್ತಾರೆ. ಇವರುಗಳು ಸಾತವಾಹನರ ಕಾಲದ ಗಡಿಗೆಯ ಚೂರನ್ನು ಗುರುತಿಸುವಷ್ಟು ಶೀಘ್ರವಾಗಿ ಮನೆಯ ಹೆಂಡತಿಯರನ್ನೇ ಗುರುತಿಸಬಲ್ಲರೇ ಎಂದು ಪ್ರಶ್ನಿಸುತ್ತಾರೆ. ಇಂದಿನ ದಿನಪತ್ರಿಕೆಯನ್ನು ಕೂಡ ಓದಿರದ ಈ ಪ್ರಾಕ್ ಇತಿಹಾಸ ಸಂಶೋಧಕರು ೧೮೭೬ನೇ ಇಸವಿಯ ಪೇಪರಿನ ಸಂಚಿಕೆ ಒಂದು ಸಿಕ್ಕಿದೆ ಎಂದರೆ ದಿಗ್ಗನೆ ಎದ್ದು ಅದನ್ನು ಹುಡುಕಲು ಧಾವಿಸುತ್ತಾರಂತೆ. ಮುಂದೆ ಹಳೆಯ ಅಂಚೆ ಚೀಟಿಗಳಿಗೆ, ಹಸ್ತಪ್ರತಿಗಳಿಗೆ ಸಿಕ್ಕ ಹೊಸ ಪ್ರಾಶಸ್ತ್ಯದ ಪ್ರಸ್ತಾಪ ಮಾಡುತ್ತಾರೆ. ಅನಂತರ ಹಳೆಯ ಮದ್ಯವನ್ನು ಚರ್ಚೆಗೆ ಎತ್ತಿಕೊಂಡು ಹುಳಿ ಮಜ್ಜಿಗೆಯ ವಿಷಯಕ್ಕೆ ಬರುತ್ತಾರೆ. ಕೇರಳದಲ್ಲಿ ಹಿಂದೆ ಮುರಜಪ ಎಂಬ ಭಾರಿಯ ವಿದ್ವತ್ಸಭೆಗಳು ಏರ್ಪಾಟಾದಾಗ ಭಾರೀ ಮಣ್ಣಿನ ಗುಡಾಣಗಳಲ್ಲಿ ೪೮ ದಿನಗಳವರೆಗೆ ಭೂಗತವಾಗಿ ಪಳಗಿದ ಹುಳಿ ಮಜ್ಜಿಗೆಯನ್ನು ವಿದ್ವಾಂಸರಿಗೆ ಕುಡಿಯಲು ಹಂಚಲಾಗುತ್ತಿದ್ದಿತಂತೆ. ಅದನ್ನು ಸೇವಿಸಿದ ವಿದ್ವಾಂಸರ ಬುದ್ಧಿ ಕ್ಷೌರದ ಕತ್ತಿಯ ಹಾಗೆ ಹರಿತವಾಗುತ್ತಿತ್ತಂತೆ!

ಹೀಗೆ ಈ ಪ್ರಬಂಧ 'ನಾವು ಎಷ್ಟೇ ಹೊಸ ಕಾಲದವರಾದರೂ ಹಳೆಕಾಲದ ಬೇರುಗಳನ್ನು ಹುಡುಕುತ್ತೇವೆ' ಎಂಬ ನಿಲುವನ್ನು ಪುನಃ ಮಂಡಿಸಿ ಮತ್ತೆ "ನೀವು ಪ್ರೀತಿಸಿದ್ದರೆ ಹಳೇ ಹೆಂಡತಿ ಕಡೇವರೆಗೂ ಹೊಸಬಳೇ" ಎಂಬ ಸ್ಪಷ್ಟ ಸಂದಿಗ್ಧತೆಯ ಉಯ್ಯಾಲೆಯಲ್ಲಿ ನಮ್ಮನ್ನು ಕೂರಿಸಿ ತೂಗುತ್ತದೆ.

ನಶ್ಯದ ಮಹಾಗುಣಗಳನ್ನು ಒಂದು ಪ್ರಬಂಧದಲ್ಲಿ ವಿವರಿಸುತ್ತ ಲಾಂಗೂಲಾಚಾರ್ಯರು

ಅದು ಎಲ್ಲರಿಗೂ ಹೇಗೆ ಪ್ರಿಯವಾಗಿದೆ ಎಂಬುದಕ್ಕೆ ಹೀಗೆ ಕಾರಣ ಕೊಡುತ್ತಾರೆ: "ಸಿಗರೇಟು ಸೇದಿದರೆ ಎಂಜಲಾಗುತ್ತದೆ. ವೀಳ್ಯ ತಿಂದರೆ ಮೈಲಿಗೆ ಆಗುತ್ತದೆ. ಬಾಯಿಯ ಮೂಲಕ ಹೋದದ್ದು ಬಂದದ್ದು ಎಲ್ಲವೂ ಮೈಲಿಗೆ ಅಂತ ಶಾಸ್ತ್ರ ಹೇಳುತ್ತದೆ, ಆದರೆ ಮೂಗಿನ ಮೂಲಕ ಹೋದ್ದದು ಬಂದದ್ದು ನಿಮ್ಮ ಮಡಿಯನ್ನು ಕೆಡಿಸುವುದಿಲ್ಲ. ಆದ್ದರಿಂದ ನಶ್ಯ ಶಾಸ್ತ್ರ ಸಮ್ಮತ. ನಶ್ಯ ಸೇದಿ ನರಕಕ್ಕೆ ಹೋದ ಅನ್ನುವುದನ್ನು ನಾನಂತೂ ಕೇಳಿಲ್ಲ. ನಶ್ಯ ಸೇದಿದರೆ ವೈದಿಕರದೇ ಏಕೆ, ಹೆಂಗಸರ ಮಾನಕೂಡ ಕಮ್ಮಿಯಾಗುವುದಿಲ್ಲ."

ಪುಕ್ಕಟೆ ಸಲಹೆ ಕೊಡುವವರು ಎದುರಾದಾಗ ಲಾಂಗೂಲಾಚಾರ್ಯರು ವಿತಂಡವಾದ ದಿಂದಲೇ ಬಾಯಿ ಮುಚ್ಚಿಸಬೇಕು ಎಂಬ ಅಭಿಪ್ರಾಯದವರಾಗಿದ್ದಾರೆ. ಚಳಿಯ ವಿರುದ್ಧ ರಕ್ಷಣೆ ಹೇಗೆಂಬ ಬಗೆಗೆ ನಾನಾ ಸಲಹೆಗಳನ್ನು ನೀಡಿದ. ಒಬ್ಬ ಮಹಾನುಭಾವ, ಆಚಾರ್ಯರಿಗೆ 'ಮೊಟ್ಟೆ ತಿನ್ನಬೇಕಿತ್ತು' ಎಂದರೆ ಇವರ ಉತ್ತರ ನೋಡಿ "ಅದೂ ತಿಂದು ನೋಡಿದ್ದೇನೆ. ವನಸ್ಪತಿ ಮೊಟ್ಟೆ, ದೇಶಿ ಕೋಳಿಮೊಟ್ಟೆ, ಲೆಗ್ ಹಾರ್ನ್ ಮೊಟ್ಟೆ ಮತ್ತು ಕುದುರೇ ಮೊಟ್ಟೆ." "ಕುದುರೆ ಮೊಟ್ಟೆ? ಕೇಳಿಯೇ ಇಲ್ಲವಲ್ಲ!" (ಪುಕ್ಕಟೆ ಸಲಹೆಗಳನ್ನು ಕೊಡುವವರಿಗೆ ತಮಾಷೆ ಅರ್ಥವಾಗುವುದಿಲ್ಲವಂತೆ).

"ಹೌದು ಓದಿಲ್ಲವೇ ನೀವು.... 'ಕುದುರೆ ಮೊಟ್ಟೆ' ಅನ್ನೋ ಪುಸ್ತಕ ಕಳೆದ ವರ್ಷ ಪ್ರಕಟವಾಗಿದೆ. ನೀವು ಓದಲೇಬೇಕು..." ಆತ ಪಲಾಯನ ಮಾಡಿದ ಎಂದು ಹೇಳಬೇಕಿಲ್ಲವಷ್ಟೆ. ಆದರೆ ಆತನ ಸಂತತಿಯವರು ರಕ್ತಬೀಜಾಸುರ ಸಂತತಿಯವರು ತಾನೆ. ಇನ್ನೊಂದು ಪ್ರಾಣಿ ಆಚಾರ್ಯರಿಗೆ ಗಂಟು ಬಿತ್ತು. ರಿಟೈರ್ ಆಗಿರುವುದರಿಂದ ಉತ್ಕಟಾನಂದರ ಆಧ್ಯಾತ್ಮದ ಕ್ಲಾಸಿಗೆ ಸೇರಬೇಕೆಂಬ ಸಲಹೆ ಕೊಟ್ಟಿತು. ರಿಟೈರ್ ಆದರೆ ಆಧ್ಯಾತ್ಮ ಯಾಕೆ ಅಭ್ಯಾಸ ಮಾಡಬೇಕು ಎಂದು ಆಚಾರ್ಯರಿಗೆ ಅರ್ಥವಾಗಲಿಲ್ಲ. ಆತ್ಮದ ಅಸ್ವಸ್ಥತೆಗೆ ಎಂದು ಆ ಪ್ರಾಣಿಯ ಉಪದೇಶ. ಕೆಟ್ಟ ಕೆಲಸ ಮಾಡಲು ಹೊರಟರೆ ತನ್ನ ಆತ್ಮ 'ಬೇಡ' ಎಂದು ಇನ್ನೂ ಹೇಳುತ್ತಿದೆಯಾದ್ದರಿಂದ ತಮ್ಮ ಆತ್ಮ ಅಸ್ವಸ್ಥವಾಗಿಲ್ಲ ಎಂಬುದು ಆಚಾರ್ಯರ ನಂಬಿಕೆ. "ಹಾಗಲ್ಲ, ಒಳ್ಳೇದು ಕೆಟ್ಟದ್ದು ಎರಡರ ದ್ವಂದ್ವವನ್ನು ಅಳಿಸುವ ಶಕ್ತಿ ಆತ್ಮಜ್ಞಾನಕ್ಕಿದೆ" ಎಂಬ ಆ ಪ್ರಾಣಿ ಉಪದೇಶಿಸಿದರೆ ಆಚಾರ್ಯರಿಗೆ ಅರ್ಥವಾಗಬೇಕಲ್ಲ. "ಒಳ್ಳೇದು-ಕೆಟ್ಟದ್ದರಿಂದ ವಿಚಲಿತವಾಗದ ಆತ್ಮವನ್ನು ನಾನು ಮೆಚ್ಚುವುದಿಲ್ಲ" ಎಂದು ಒರಟು ಉತ್ತರ ಕೊಟ್ಟು ಹೊರಡಲು ಯತ್ನಿಸಿದರೆ ಆ ಪ್ರಾಣಿ ಬಿಡಬೇಕಲ್ಲ.

"ನಿಲ್ಲಿ ಆಚಾರ್ರೆ ಸ್ವಲ್ಪ. ನಾನು ಯಾರು, ಇಲ್ಲಿ ಯಾಕೆ ಬಂದೆ? ಎಲ್ಲಿಗೆ ಹೋಗುತ್ತಿದ್ದೇನೆ? ಅಂತ ತಿಳಿದುಕೊಳ್ಳಬೇಕೆಂತ ನಿಮಗೆ ಅನಿಸುವುದಿಲ್ಲವೆ?" ಅಷ್ಟು ಹೊತ್ತಿಗೆ ಆಚಾರ್ಯರ ಸಹನೆಯ ಕಟ್ಟೆ ಒಡೆದಿರಬೇಕು. ಅವರು ಆ ಪ್ರಾಣಿಗೆ ಒರಟಾಗಿಯೇ ಹೇಳಿರಬೇಕು:

"ನಾನು ಲಾಂಗೂಲಾಚಾರ್ಯ ಅನ್ನೋದು ನನಗೆ ಚೆನ್ನಾಗಿ ಗೊತ್ತು. ನನಗೇನೂ ಆಮ್ನೇಷಿಯಾ ಆಗಿಲ್ಲ. ಇಲ್ಲಿ ಯಾಕೆ ಬಂದೆ ಅಂದರೆ ನಮ್ಮನೆಯಿಂದ ಪೋಸ್ಟಾಫೀಸಿಗೆ

ಹೋಗಬೇಕಾದರೆ ಈ ದಾರಿಯೇ ಅತಿ ಸಮೀಪ; ಎಲ್ಲಿಗೆ ಹೋಗುತ್ತಿದ್ದೇನೆ ಎಂದರೆ ಪೋಸ್ಟಾಫೀಸಿಗೆ; ಯಾಕೆ ಅಂದರೆ ಸ್ಟಾಂಪ್ ತೆಗೆದುಕೊಳ್ಳೋದಕ್ಕೆ..."

ಪುಕ್ಕಟೆ ಸಲಹೆಯ ಆ ಪ್ರಾಣಿ ಅಲ್ಲಿಗೆ ಸುಸ್ತಾಯಿತೆ? ಅವರ ಪ್ರಶ್ನೆ ಮುಂದುವರಿಯಿತು.

"ಆದರೆ ಸತ್ತ ಮೇಲೆ..."

ಆಚಾರ್ಯರಿಗೆ ಇನ್ನು ಕೊನೆಯ ಅಸ್ತ್ರ ಬಳಸದೆ ವಿಧಿಯಿಲ್ಲ ಎನಿಸಿರಬೇಕು. ನೇರವಾಗಿ ಆ ಪ್ರಾಣಿಯ ಮೇಲೆ ಎರಗಿದರು.

"ಸತ್ತ ಮೇಲೆ ನಾನು ಪುಕ್ಕಟೆ ಸಲಹೆಗಾರರು ಇಲ್ಲದಿದ್ದ ಲೋಕಕ್ಕೆ ಹೋಗುತ್ತೇನೆ..."

ಆಚಾರ್ಯರ ಬಲುಮಟ್ಟಿನ ಬರಹಗಳಲ್ಲಿ ತಮ್ಮಂತಹ ಸಾವಿರ ಜನರ ಭಾವನೆಗಳ ಸಾಮಾನ್ಯೀಕರಣದ ಪ್ರಯತ್ನ ತುಂಬ ಸಫಲವಾಗಿದೆ. ಒಂದು ಉತ್ತಮ ಉದಾಹರಣೆ "ಮದುವೆಯಾದರೂ ಸುಖಪಡುವುದು ಹೇಗೆ?" ಎಂಬ ಪ್ರಬಂಧ. ಈ ಪ್ರಬಂಧ ಏಕಕಾಲದಲ್ಲಿ ಸರಳತೆ-ಸಂಕೀರ್ಣತೆಗಳನ್ನು ಬೆಸುಗೆಗೊಳಿಸುತ್ತ ಸಾಗುವ ಪ್ರಬಂಧವಾಗಿದೆ-'ಬ್ರಹ್ಮ ಹೆಣ್ಣನ್ನು ಸೃಷ್ಟಿ ಮಾಡಿದ. ಆದರೆ ಅರ್ಥಮಾಡಿಕೊಂಡ ಅನ್ನುವ ಭರವಸೆ ನನಗಿಲ್ಲ" ಎಂದು ಆಚಾರ್ಯರು ಅಭಿಪ್ರಾಯ ಪಡುತ್ತಾರೆ. ಅನಾದಿಕಾಲದಿಂದಲೂ ಮದುವೆಯಾದ ಗಂಡು ಪತ್ನಿಯನ್ನು ಸುಖವಾಗಿಟ್ಟುಕೊಳ್ಳುವ ಸೂತ್ರ ಯಾವುದು ಎಂದು ಚಿಂತಿಸುತ್ತಲೇ ಬಂದಿದೆಯಂತೆ. ಇದರ ಪರಿಣಾಮವಾಗಿ ಬಹುಪತ್ನೀ ವಿವಾಹ, ಏಕಪತ್ನೀ ವಿವಾಹ ಮತ್ತು ಅಂಶ ಪತ್ನೀ ವಿವಾಹ ಈ ಎಲ್ಲ ಪ್ರಯೋಗಗಳನ್ನೂ ಗಂಡು ಮಾಡಿದ್ದಾನಂತೆ. ಒಂದಕ್ಕಿಂತ ಕಮ್ಮಿ ಹೆಂಡತಿಯನ್ನು ಮದುವೆಯಾಗುವುದನ್ನು 'ಅಂಶ ಪತ್ನೀ ವಿವಾಹ' ಎನ್ನುತ್ತಾರೆ ಆಚಾರ್ಯರು. ದ್ವಾಪರ ಯುಗದಲ್ಲಿ ಪಾಂಡವರು ಈ ಪ್ರಯೋಗ ಮಾಡಿ ನೋಡಿದರಂತೆ. ಅದಕ್ಕಾದರೂ ಏನು ಗತಿ ಆಯಿತು? "ಗಂಡರೋ ನೀವ್ ಷಂಡರೋ" ಅಂತ ದ್ರೌಪದಿ ಅವರಿಗೆ ಸವಾಲು ಹಾಕಿದಳಂತೆ. ಆದ್ದರಿಂದ ಹೆಂಡಂದಿರ ಸಂಖ್ಯೆಯಿಂದ ವೈವಾಹಿಕ ಸಂಖ್ಯೆ ನಿರ್ಧಾರ ಆಗುವುದಿಲ್ಲ ಎಂಬ ತೀರ್ಮಾನಕ್ಕೆ ಲೇಖಕರು ಬರುತ್ತಾರೆ. ಡೈವೋರ್ಸಿನಲ್ಲೂ ಆಚಾರ್ಯರಿಗೆ ಸುಖ ಕಾಣಿಸುವುದಿಲ್ಲ. ಏಕೆಂದರೆ ಹೊಸ ಹೆಂಡತಿ ನಮಗೆ ಹೊಸದೇ ಪಾಠ ಕಲಿಸಬಹುದಲ್ಲ. ಆದ್ದರಿಂದ ಜಾಣರಾದವರು ಸಿಕ್ಕಿದ ಹೆಂಡತಿಯ ಸಂಗಾತವೇ ಹೇಗಾದರೂ ಪುದುವಾಳುವುದಕ್ಕೆ ಕಲಿಯುತ್ತಾರಂತೆ. ಮುಂದೆ ಮಡದಿಯನ್ನು ಅರ್ಥಮಾಡಿಕೊಳ್ಳುವುದರ ಬಗ್ಗೆ ಲೇಖಕರು ಚಿಂತಿಸುತ್ತಾರೆ. ಗಂಡು ಮಾಡಬೇಕಾದ್ದು ಇಷ್ಟು: "ನಿಮ್ಮ ತಲೆಯನ್ನು ಆದಷ್ಟು ಕಾಲ ನಿಮ್ಮ ಹೆಗಲ ಮೇಲೆ ಉಳಿಸಿಕೊಂಡು, ಅವಳ ಇಷ್ಟಾನಿಷ್ಟಗಳು ಏನು? ಅವಳ ಕಣ್ಣುಗಳ ಭಾಷೆಯ ಲಿಪಿ ಯಾವುದು, ಅವಳ ಅಂತರಂಗದ ಭಾಷೆಯ ಶಬ್ದಗಳಿಗೆ ಅವಳ ಬಹಿರಂಗದ ಭಾಷೆಯಲ್ಲಿನ ಪರ್ಯಾಯ ಪದಗಳು ಯಾವುವು, ಅವಳ ಹುಸಿಕೋಪಕ್ಕೂ, ಹಸಿಕೋಪಕ್ಕೂ ಅವಳ ಹಣೆ, ಹುಬ್ಬು, ತುಟಿ, ಗಲ್ಲಗಳ ಮೋಡಿಗಳಲ್ಲಿ ಏನೇನು ವ್ಯತ್ಯಾಸಗಳು ಬರುತ್ತವೆ. ಅವಳ ದೌರ್ಬಲ್ಯಗಳೇನು ಎಂದೆಲ್ಲಾ ಅಧ್ಯಯನ ಮಾಡುತ್ತ, ಸಾಧ್ಯವಿದ್ದರೆ ಒಂದು ದಿನಚರಿಯನ್ನು ಬರೆದಿಡಿ."

ಕೊನೆಗೂ ಅವರ ತೀರ್ಮಾನ ಇದು. "ಒಲಿಸಿಕೊಂಡಿರುವುದಕ್ಕೆ ಒಂದು ರೂಲ್ ಆಫ್ ದಿ ಥಂಬ್ ಅನ್ನುವುದು ಇಲ್ಲ. ಪ್ರತಿ ಮಡದಿಗೂ ಅವಳದೇ ಕಾನೂನುಗಳು ಇರುತ್ತವೆ. ಅವುಗಳನ್ನು ಅರಿತುಕೊಳ್ಳುವುದರಲ್ಲಿ ಅರ್ಧಾಯುಷ್ಯ ಹೋಗಬಹುದು. ಅಷ್ಟರಲ್ಲಿ ಅವಳ ಕಾನೂನುಗಳೇ ಬದಲಾಗಿರಬಹುದು. ಹೆಂಡತಿಯನ್ನು ಒಲಿಸಿಕೊಂಡಿರುವುದು ಸುಮಾರು ಮಟ್ಟಿಗೆ ನಿಮ್ಮ ಅದೃಷ್ಟವೂ ಹೌದು. ಎಲ್ಲಾ ಮಾಡಿಯೂ ನಿಮ್ಮ ಮಡದಿ ಸೆಟೆದುಕೊಂಡೇ ಇದ್ದರೆ ಹರ್ಮನ್ ಕೆಸರ್‌ಲಿಂಗನ ತತ್ತ್ವಜ್ಞಾನದಿಂದ ನೀವು ಸಮಾಧಾನ ತಾಳಬೇಕಷ್ಟೆ. ಹೆಚ್ಚು ಜನ ಮಹಾಪುರುಷರು ಸುಖಹೀನ ದಾಂಪತ್ಯಕ್ಕೆ ಹುಟ್ಟಿದವರಾಗಿರುತ್ತಾರೆ ಅಂತ ಆತ ಹೇಳುತ್ತಾನೆ. ನೀವು ಸುಖೀ ಗಂಡ ಆಗದಿದ್ದರೆ ಮಹಾಪುರುಷ ತಂದೆ ಆಗುವ ಚಾನ್ಸ್ ಇದೆ."

ಹಾಗೇ 'ರಾತ್ರಿ ಸಮಸ್ಯೆ' ಎಂಬ ಕಿರುಲೇಖನದಲ್ಲಿ ಹೆಂಗಸರಿಗೆ ಯಾವಾಗ ಯಾವುದು ಮೆಚ್ಚಿಕೆಯಾಗುತ್ತದೆಂದು ಹೇಳಲಾಗುವುದಿಲ್ಲ ಎಂಬ ನಿಲುವಿಗೆ ತಲುಪುತ್ತಾರೆ. ವಿಮಾನ ಪ್ರಯಾಣದಲ್ಲಿ ಹೆಂಗಸಿಗೆ ಪರಪುರುಷ ಸಹಪ್ರಯಾಣಿಕರು ಹಗಲು ಹೊತ್ತಿನಲ್ಲಿ ಸಹ್ಯರಾಗಿ ರಾತ್ರಿ ಪ್ರಯಾಣದಲ್ಲಿ ಅವಿಶ್ವಸನೀಯರಾಗುವ ಸಂಗತಿ ಅವರಲ್ಲಿ ವಿಚಿತ್ರವಾದ ವಿಚಾರಗಳನ್ನು ಎಬ್ಬಿಸಿದೆ.

ಲಾಂಗೂಲಾಚಾರ್ಯರ ಹಾಸ್ಯಭಾಷೆಯ ಮಟ್ಟದಲ್ಲಿ ವಿಷಯದ ವಿವರಣೆಯ ಮಟ್ಟದಲ್ಲಿ ಹೀಗೆ ಸವ್ಯಸಾಚಿತ್ವ ಗುಣವನ್ನು ಪಡೆದಿದೆ. ಕಿಂ ಕಿಂ ನಸಾಧಯತಿ ಕಲ್ಪಲತೇವ ಉಳ್ಳೀ! ಎಂದು ಸಂಸ್ಕೃತ ವಾಕ್ಯವನ್ನು ತಮಗೆ ಅನುಕೂಲವಾಗುವ ಹಾಗೆ ತಿರುಚಿಕೊಳ್ಳುತ್ತಾರೆ. ನಲ್ಲಿಯ ನೀರು ನಿಂತಿದ್ದನ್ನು ವಿವರಿಸುವುದಕ್ಕೆ 'ನಲ್ಲಿಕ್ಷ್ಟೋಮಿ' ಎಂಬ ಶಬ್ದ ಬಳಸುತ್ತಾರೆ. ಕನ್ನಡ ಸಂಸ್ಕೃತ ಕವಿಗಳ ಯಾವುದೋ ಸಂದರ್ಭದ ಮಾತುಗಳನ್ನು ತಮ್ಮ ಅಭಿಪ್ರಾಯದ ವ್ಯಾಖ್ಯಾನಕ್ಕೆ ಬಳಸಿಕೊಳ್ಳುತ್ತಾರೆ. ಇನ್ನೊಬ್ಬಳ ಪ್ರಶಂಸೆಯನ್ನು ಕೇಳುವುದೆಂದರೆ ಯಾವ ಹೆಂಡತಿಗೂ ಪಿರಿದೆಂದೆನಿಸುವ "ಕರ್ಣಶೂಲೆಯಂ ಪುಟ್ಟಿಸುಗುಂ", "ವಿದ್ಯುತ್ಕಾಂತಾ" ಎಂಬ ಶಬ್ದಕ್ಕೆ ಸಂಸಾರದಲ್ಲಿ ಹೆಂಡತಿಯ (ಕಾಂತೆಯ) ವಿದ್ಯುತ್ ಅಲ್ಲೋಲ ಕಲ್ಲೋಲ ಎಂದು ವ್ಯಾಖ್ಯಾನಿಸುತ್ತಾರೆ. ಆತ್ಮಸಾಕ್ಷಿಯಲ್ಲಿ ನೆಗೆಟಿವ್, ಪಾಸಿಟಿವ್ ಎಂಬ ಎರಡು ಬಗೆಗಳನ್ನು ಅವರು ಗುರುತಿಸಿಕೊಡುತ್ತಾರೆ. ಬಾಯಿ ತೆರೆದು ಗೊರಕೆಯಿಂದ ಪೀಡಿಸುವವರನ್ನು 'ಗೊರಕನಾಥ' ಎಂದು ಕರೆದಿದ್ದಾರೆ.

ಲಾಂಗೂಲಾಚಾರ್ಯರ ವಿಚಾರ ವಿಮರ್ಶೆಯಲ್ಲಿ ಹಾಸ್ಯ ಹರಳುಗಟ್ಟಿರುತ್ತದೆ. ಇದಕ್ಕೆ ಇಡೀ ಗ್ರಂಥದಿಂದ ಹೇರಳ ಉದಾಹರಣೆಗಳನ್ನು ಒದಗಿಸಬಹುದು.

ಕೋಟ್ಯಾಧಿಪತಿಗಳಿಗೆ ಶಾರೀರಿಕ ಕೋಟಲೆಗಳು ಹಿಂಡು ಹಿಂಡಾಗಿಯೇ ಭಿಕ್ಷುಕರಂತೆ ಗಂಟು ಬೀಳುತ್ತವಂತೆ. ಮನುಷ್ಯನು ಬ್ಯಾಂಕಿನಲ್ಲಿಟ್ಟ ಹಣ ಒಂದು ಲಕ್ಷ ರೂಪಾಯಿಗೆ ಮೀರಿದ ಕೂಡಲೇ ಹೈ ಬ್ಲಡ್ ಪ್ರೆಶರ್, ಹಾರ್ಟ್ ಟ್ರಬಲ್, ಡಯಾಬಿಟೀಸ್ ಮೊದಲಾದ ಅಸಂಖ್ಯಾತ ರೋಗಗಳು ಆ ವ್ಯಕ್ತಿಯನ್ನು ಅಟ್ಟಿಸಿಕೊಂಡು ಹೋಗುತ್ತವಂತೆ. ಬಡವರಿಗೆ

ಅವು ಬರುವುದಿಲ್ಲ ಎಂದಲ್ಲ. ಆದರೆ ಬಡವರಿಗೆ ಬಂದಾಗ ರೋಗಗಳಿಗೆ ಹೆಸರೇ ಇರುವುದಿಲ್ಲವಂತೆ!

ಕಾಳು ಮೆಣಸು ಹಾಕಿ ಮಾಡಿದ 'ಮೊಳಗುವಡೆ'ಯ ರುಚಿ ಸವಿಯಬೇಕಾದರೆ ಅದನ್ನು ನಮ್ಮ ಬಿನಾಕಾ ದೃಢೀಕೃತ ದಂತಪಂಕ್ತಿಗಳ ನಡುವೆ ನುರಿಸಿ ಚಪ್ಪರಿಸುವ ಸಾಮರ್ಥ್ಯ ಇರಬೇಕಂತೆ!

"ಎಲ್ಲ ಜೀನಿಯಸ್ಸುಗಳ ಹಾಗೇ ಯೆಂಕಣ್ಣಯ್ಯನವರೂ ಸರಿಯಾದ ಕಾಲ ನೋಡಿ ಮಾತ್ರವಲ್ಲ, ಸರಿಯಾದ ಅಜ್ಜನನ್ನು ನೋಡಿ ಹುಟ್ಟಿದರು"—ಇದು ಯದ್ವಾದತ್ವಾ ಯೆಂಕಣ್ಣಯ್ಯನ ಜನನದ ವ್ಯಾಖ್ಯಾನ!

ತುಂಬ ಗಂಭೀರವಾದ ಸಂಗತಿಗಳನ್ನೂ ಅವರು ಹಾಸ್ಯದ ಮೆರುಗಿನಿಂದ ಮನಗಾಣಿಸಬಲ್ಲರು ಎಂಬುದು ಅವರ ವಾಗ್ಧೋರಣೆಯಿಂದ ಸ್ಪಷ್ಟವಾಗುತ್ತದೆ.

"ಆತ್ಮ ಮತ್ತು ಸಾಕ್ಷಿ ಇವೆರಡೂ ಸಾಬೂನಿನಷ್ಟು ಜಾರು ಪದಾರ್ಥಗಳಾಗಿರುವಾಗ ಆತ್ಮಸಾಕ್ಷಿಯೆಂಬುದು ಎಷ್ಟು ನುಣುಚಿಕೊಳ್ಳುವ ವಸ್ತು ಎಂದು ಊಹಿಸಿಕೊಳ್ಳಬಹುದು..."

"ಮೋಕ್ಷವಾದ ಮೇಲೆ ಆತ್ಮ ಏನು ಮಾಡುತ್ತದೆ ಎಂಬ ಬಗ್ಗೆ ಬಹಳ ಭಿನ್ನಾಭಿಪ್ರಾಯಗಳಿವೆ. ಸುಖವಾಗಿ ಪೆನ್‌ಷನ್ ಅನುಭವಿಸುತ್ತ ಇರುತ್ತವೆಂದು ಹೇಳಲಾಗುತ್ತದೆ. ನಿವೃತ್ತ ಹೈಕೋರ್ಟ್ ಅಥವಾ ಸುಪ್ರಿಂ ಕೋರ್ಟ್ ನ್ಯಾಯಾಧೀಶರು ವಿಶೇಷ ಆಯೋಗಗಳ ಅಧ್ಯಕ್ಷರಾಗಿ ಮಾಡಲ್ಪಡುವಂತೆ ಕೆಲವು ಸಲ ಈ ಮುಕ್ತಾತ್ಮಗಳು ಪ್ರಪಂಚಕ್ಕೆ ಕಳಿಸಲ್ಪಡುವುದುಂಟು. ಇವರಿಗೆ 'ಅವತಾರ ಪುರುಷರು' ಎಂದು ಹೆಸರು."

'ಪ್ರಬಂಧ ಸಂಕಲನದಿಂದ ಪ್ರಬಂಧ ಸಂಕಲನಕ್ಕೆ ಪ್ರಬಂಧಕಾರರು ಬೆಳೆಯುತ್ತ ಹೋಗಿದ್ದಾರೆ' ಎಂಬ ಸವಕಲು ವಿಮರ್ಶೆಯ ಪ್ರಶಂಸೆಯನ್ನು ಆಚಾರ್ಯರ ಮೇಲೆ ಎಸೆಯುವಂತಿಲ್ಲ. ಏಕೆಂದರೆ ಕಾಲದ ದೃಷ್ಟಿಯಿಂದ ಇವರ ಪ್ರಬಂಧಗಳನ್ನು ಸಮೀಕ್ಷಿಸುವುದು ವ್ಯರ್ಥ ಪ್ರಯತ್ನ. ಅಖಂಡವಾಗಿ ಬಲಿತ ಲೇಖಕನೊಬ್ಬ ಈ ಪ್ರಬಂಧದಲ್ಲಿ ತೊಡಗಿರುವಂತೆ ಕಾಣುತ್ತದೆ. ಈ ದೃಷ್ಟಿಯಿಂದ ಈತ ಅನಾದಿ, ಅನಂತ. ಅವರ ಬೌದ್ಧಿಕ ಗುಣ ಹಿಂದಿನಂತೆಯೇ ಈಗಲೂ ಪ್ರಕರ್ಷವಾಗಿದೆ. ಈ 'ವರ'ದ ವಿಷಯವಾಗಿ ಅವರದೇ ಭಾವವೊಂದನ್ನು ಉದಹರಿಸಿ ನನ್ನ ಕೊರೆತವನ್ನು ನಿಲ್ಲಿಸುತ್ತೇನೆ.

"ಅಂತರ್ಮುಖಿಗಳಿಗೆ ಕಾಫಿ ಒಳ್ಳೆಯದಲ್ಲ ಎಂದು ಈಗ ಸುದ್ದಿ ಬಂದಿದೆ. ಅದು ಅವರ ಬುದ್ಧಿಯನ್ನು ಮಂಕು ಮಾಡುತ್ತದೆಂದು ಇನ್ನೊಬ್ಬ ಅಮೇರಿಕನ್ ಡಾಕ್ಟರ್ ಕಂಡುಹಿಡಿದ್ದಾನೆ. ನಾನೋ ಹೊರಗೆ ತೋರಿಸಿ ಹೆಮ್ಮೆ ಪಡಬಹುದಾದಂಥ ಮುಖ ಇಲ್ಲದ್ದರಿಂದ ಅಪ್ಪಟ ಅಂತರ್ಮುಖಿ. ಈ ಕಾಲದಲ್ಲಿ ಹಾರ್ಟ್ ಇಲ್ಲದಿದ್ದರೆ ಅಂಥಾ ಕಷ್ಟವೇನೂ ಬರಲಿಕ್ಕಿಲ್ಲ. ಬುದ್ಧಿ ಮಂಕಾದರೆ ಬದುಕುವುದೇ ಕಷ್ಟ."

ಲಾಂಗೂಲಾಚಾರ್ಯರ ಎಲ್ಲ ಪ್ರಬಂಧಗಳೂ ಈ ಪುಟ್ಟ ಸಂಪುಟದಲ್ಲಿ ಬಂದಿಲ್ಲ. ಅನುಕ್ರಮವಾಗಿ ಅವು ಮುಂದಿನ ಸಂಪುಟಗಳಲ್ಲಿ ಬರಲಿವೆ.

ಪ್ರಿಸಮ್ ಬುಕ್‌ಹೌಸಿನವರು ಈ ಪುಟ್ಟಸಂಕಲನವನ್ನು ಸಿದ್ಧಮಾಡಿಕೊಡಿ ಎಂದಾಗ ನನಗೆ ಸ್ವಲ್ಪ ಕಸಿವಿಸಿಯೇ ಆಯಿತು. ಲಾಂಗೂಲಾಚಾರ್ಯರ ಬರಹಗಳಲ್ಲಿ ಕೆಲವನ್ನೇ ಆಯ್ಕೆ ಮಾಡಲು ಹೊರಟಾಗ ಹೀಗಾಗುವುದುಂಟು. ಈ ಸಂಕಲನದ ನೆಪದಿಂದಾದರೂ ನಮ್ಮ ಜನ ಅವರ ಉಳಿದ ಕೃತಿಗಳನ್ನು ಓದಿ ಸಂತೋಷಪಡಲಿ ಎಂದು ಹಾರೈಸುತ್ತೇನೆ. ಈ ಡಿಸೆಂಬರ್ ಇಪ್ಪತ್ತೈದರಂದು ನಡೆಯುವ ಹಾಸ್ಯೋತ್ಸವದಲ್ಲಿ ಈ ಹೊತ್ತಗೆಯನ್ನು ಪ್ರಕಾಶಪಡಿಸಲು ಮುಂದೆ ಬಂದಿರುವ ಪ್ರಿಸಮ್ ಪ್ರಕಾಶನ ಸಂಸ್ಥೆಯ ಶ್ರೀ ಎಸ್. ಪ್ರಾಣೇಶ್ ಹಾಗೂ ಟಿ. ರಂಗನಾಥನ್ ಅವರಿಗೆ ನನ್ನ ಕೃತಜ್ಞತೆಗಳು.

**ಪ್ರೊ|| ಅ. ರಾ. ಮಿತ್ರ**

# ಪಾ. ವೆಂ. ಆಚಾರ್ಯ - ಪರಿಚಯ

'ಕಸ್ತೂರಿ'ಯ ಸಮರ್ಥ ಸಂಪಾದಕರು,
'ಓದುಗರೊಡನೆ ಹರಟೆ' ಹೊಡೆದ ಲಾಂಗೂಲಾಚಾರ್ಯರು,
ಪ್ರಥಮ ದರ್ಜೆಯ ಚಿಂತಕರು,
ಸರ್ವಕುತೂಹಲಿ - ಸರ್ವಜ್ಞಾಚಾರ್ಯರು,
ಪ್ರತಿಭಾವಂತ ಪಂಡಿತರು;

ಈ ರೀತಿಯ ನಾನಾ ಉಪಾಧಿಗಳನ್ನು ಪಡೆದಿದ್ದ ದಿವಂಗತ ಪಾಡಿಗಾರು ವೆಂಕಟರಮಣ ಆಚಾರ್ಯರ ಸಮಗ್ರ ಬರಹಗಳನ್ನು ಪ್ರಕಟಿಸುವ ಯೋಜನೆಯೊಂದು ರೂಪುಗೊಂಡಿದೆ. ಮೊದಲಿಗೆ ಅವರ ಜೀವನ, ಕಾರ್ಯದ ಪರಿಚಯವನ್ನು ಮಾಡಿಕೊಳ್ಳೋಣ.

ಪಾ.ವೆಂ., ಉಡುಪಿಯ ಪಾಂಡಿತ್ಯದ ಪರಂಪರೆಯ ಆದರೆ ಕಡು ಬಡತನದ ಮನೆಯಲ್ಲಿ ದಿನಾಂಕ ೬, ಫೆಬ್ರವರಿ ೧೯೧೫ರಂದು ಜನ್ಮ ತಾಳಿದರು. ಆಗಿನ ಎಸ್.ಎಸ್.ಎಲ್.ಸಿ.ಯಲ್ಲಿ ಶಾಲೆಗೆ ಪ್ರಥಮಸ್ಥಾನ ಪಡೆದು ಪಾಸಾಗಿದ್ದರೂ ಕಾಲೇಜಿನ ಕಟ್ಟೆಯನ್ನು ಏರಲಾಗಲಿಲ್ಲ. ದಾರಿದ್ರ್ಯದಲ್ಲಿ ಹೇಗೆ ಸಾಧ್ಯ?

ಇಂಥದರಲ್ಲಿಯೇ ಸಾಹಿತ್ಯ ರಚನೆಯ ಹಂಬಲ ಮೂಡಿತ್ತು. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ, ಔಷಧಿ ಬಾಟಲಿಗೆ ಸಂಬಂಧಿಸಿದ ಬಂಗಾಲೀ ಜಾಹೀರಾತಿನ ಮೂಲಕ ಬಂಗಾಲೀ ಕಲಿತರು. ಕಾರಣ? ರವೀಂದ್ರರ 'ಗೀತಾಂಜಲಿ'ಯಲ್ಲಿ ಅನುವಾದಿಸಬೇಕೆನ್ನುವ ಛಲ!

ಹೊಟ್ಟೆಯ ಪಾಡಿಗಾಗಿ, ಅವರು ಉಡುಪಿಯಲ್ಲಿ ಶಾಲಾ ಮಾಸ್ತರಿಕೆ, ಅಂಗಡಿ ಲೆಕ್ಕ, ಮುದ್ರಣ ಕೆಲಸ—ಮುಂತಾದ ಹೋರೆಗಳಲ್ಲಿ, ಜೊತೆಗೆ ಆಗಿನ ಸುಪ್ರಸಿದ್ಧ 'ಅಂತರಂಗ' ಪತ್ರಿಕೆಯ ಸಹಸಂಪಾದನೆಯಲ್ಲಿ ಏಳೆಂಟು ವರ್ಷ ಕಳೆದರು. ಅಲ್ಲಿಂದ ಮದ್ರಾಸಿನಲ್ಲಿ ಕೆಲಕಾಲ ಸವೆಯಿತು. ಅವರು ೧೯೪೨ರಲ್ಲಿ ಹುಬ್ಬಳ್ಳಿಗೆ ಬಂದು 'ಸಂಯುಕ್ತ ಕರ್ನಾಟಕ'ದಲ್ಲಿ ಮುದ್ರಣ ಮೇಲ್ವಿಚಾರಣೆಯ ನೌಕರಿಗೆ ಸೇರಿದರು. ಕೆಲವೇ ದಿನಗಳಲ್ಲಿ ಅವರ ಲೇಖನ ಕಾರ್ಯದ ಒಲವು ವ್ಯಕ್ತವಾದ್ದರಿಂದ 'ಕರ್ಮವೀರ'ದಲ್ಲಿ ಬರೆಯತೊಡಗಿದರು. 'ಲಾಂಗೂಲಾಚಾರ್ಯ'ರಾಗಿ ಹರಟೆಗಳು, ಸಂಪಾದಕ ಸಹಾಯಕರಾಗಿ ಪುಸ್ತಕ ವಿಮರ್ಶೆ, ರಾಜಕೀಯ ಟೀಕೆ-ಟಿಪ್ಪಣೆ ಮುಂತಾದವನ್ನು ಬರೆಯತೊಡಗಿದರು.

೧೯೫೫ರಲ್ಲಿ ಕಸ್ತೂರಿ ಡೈಜೆಸ್ಟ್ ಪತ್ರಿಕೆ ಆರಂಭವಾದಾಗ ಪಾ.ವೆಂ. ಅವರಿಗೇ ಅದರ ಸಂಪಾದಕತ್ವವನ್ನು ವಹಿಸಿಕೊಡಲಾಯಿತು. ಅಖಂಡ ೧೮ ವರ್ಷ ಅದರ ಸಂಪಾದನ ಕಾರ್ಯ. ಅವರ ಬೌದ್ಧಿಕ ನೆಲೆಯು ವಿಸ್ತಾರಗೊಂಡದ್ದು ಈ ಕಾಲದಲ್ಲಿಯೇ. ಅವರ ಲೇಖನ ಕಾರ್ಯವೂ ಗರಿಷ್ಠ ಪ್ರಮಾಣವನ್ನು ಕಂಡಿತು.

ಉಡುಪಿಯಲ್ಲಿದ್ದಾಗಲೇ ಲಕ್ಷ್ಮೀ ಅವರೊಂದಿಗೆ ಮದುವೆಯಾಗಿತ್ತು. ನಿವೃತ್ತಿಯ ಕಾಲದಲ್ಲಿ ಆಚಾರ್ಯರು ಅಷ್ಟ ಪುತ್ರ/ಪುತ್ರಿಯರ ಪರಿವಾರವನ್ನು ಹೊಂದಿದ್ದರು.

ನಿವೃತ್ತಿಯ ಹಿಂದಿನ ವರ್ಷ ಪಾ.ವೆಂ. ಕರುಳಿನ ಬೇನೆಯಿಂದ ತತ್ತರಿಸಿದರು. ಆಪರೇಶನ್ ಆಯಿತು; ಒಂದೇ ತಿಂಗಳಲ್ಲಿ ಎರಡು ಬಾರಿ. 'ಸತ್ತೇ ಹೋದರು' ಎನ್ನುವ ಘಟ್ಟದಲ್ಲಿಯೂ ಸಾವನ್ನು ಗೆದ್ದು ಬದುಕಿದರು. ಅವರ ಬರವಣಿಗೆ ಮುಂದುವರೆಯಿತು.

ಅರವತ್ತರ ಗಡಿಯನ್ನು ದಾಟಿದ್ದರಲ್ಲವೆ? ಹಲವಾರು ಸನ್ಮಾನ ಸಮಾರಂಭಗಳು ಜರುಗಿದವು. ೧೯೭೭ರಲ್ಲಿ ಮೈಸೂರವರು ಸಂಭಾವನಾ ಗ್ರಂಥವನ್ನು ('ಪಾವೆಂ-ಕಸ್ತೂರಿ') ಸಮರ್ಪಿಸಿದರು. ಪತ್ರಿಕೋದ್ಯಮದ ಸಾಧನೆಗಾಗಿ ಪಿ. ಆರ್. ರಾಮಯ್ಯ-ಹೆಸರಿನ ಪ್ರಶಸ್ತಿ ಲಭಿಸಿತು. ಅದೇ ಸಾಧನೆಗಾಗಿ ಅಖಿಲಭಾರತ ಮಟ್ಟದ ಗೋಯೆಂಕಾ ಪ್ರಶಸ್ತಿಗಾಗಿ ಆಯ್ಕೆಯಾದರು (೧೯೯೨). ಅದನ್ನು ಸ್ವೀಕರಿಸಲೆಂದು ಮುಂಬಯಿಗೆ ಹೋದರು; ಗೊತ್ತಾಗಿದ್ದ ಆ ದಿನ ಸಮಾರಂಭ ನಡೆಯಲಿಲ್ಲ. ಮರು ತಾರೀಖು ನಿಗದಿಮಾಡಿದ್ದರ ಮುಂಚೆಯೇ ಆಚಾರ್ಯರು ಅಸುನೀಗಿದರು (೪ ಮೇ, ೧೯೯೨).

## ಕೃತಿ ರಚನೆ

ಪಾ.ವೆಂ. ಅವರ ಸಾಹಿತ್ಯ ಕಾರ್ಯವನ್ನು ಈ ಮೂರು ಕಾಲಖಂಡಗಳಲ್ಲಿ ಗುರುತಿಸಬಹುದು.

—೧೯೩೨ರಿಂದ ೧೯೪೨. ಉಡುಪಿಯಲ್ಲಿದ್ದಾಗ, 'ಅಂತರಂಗ', 'ಜಯಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ಬಂದಂಥ ಕತೆ-ಕವನಗಳ ರಚನೆ. ಅವರ ಮೊದಲ ಕವನ 'ಉದ್ಗಾರ' ಎಂಬುದು 'ಜಯಕರ್ನಾಟಕ'ದಲ್ಲಿ ಪ್ರಕಟವಾಯಿತು (೧೯೩೩). ಅವರ ಪ್ರಥಮ ಸಣ್ಣಕತೆ 'ಮಧುವನ' ಎಂಬ ಕಥಾಸಂಗ್ರಹದಲ್ಲಿ ಬಂದಿದೆ (೧೯೩೫).

—೧೯೪೨ ರಿಂದ ೧೯೭೪. ನಿವೃತ್ತರಾದ ಮೇಲೆ ತುಷಾರ, ಸುಗುಣಮಾಲಾ, ತರಂಗ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಸರ್ವವಿಧದ ಬರಹಗಳು. ತುಳುಕವನಗಳ ರಚನೆಯೂ ಇದೇ ಅವಧಿಯದು. ಜೊತೆಗೆ 'ಕಸ್ತೂರಿ'ಯಲ್ಲಿಯೇ ಪ್ರತಿ ತಿಂಗಳು ವಿವೇಚಿಸಲಾದ 'ಪದಾರ್ಥ ಚಿಂತಾಮಣಿ'.

ಪಾ.ವೆಂ. ಅವರ ಒಟ್ಟಿನ ಬರವಣಿಗೆ ಹತ್ತುಸಾವಿರ ಪುಟಗಳನ್ನು ಮೀರುವುದಾಗಿದ್ದರೂ ಪುಸ್ತಕ ರೂಪದಲ್ಲಿ ಬಂದದ್ದು ತೀರಾ ಕಡಿಮೆ. 'ರಶಿಯದ ರಾಜ್ಯಕ್ರಾಂತಿ' ಮತ್ತು 'ಸ್ವತಂತ್ರ ಭಾರತ' ಎಂಬೆರಡು ಪ್ರಚಲಿತ ರಾಜಕೀಯ ವಿಶ್ಲೇಷಣೆಗಳು, ನಾಲ್ಕು ಹರಟೆಗಳ

ಸಂಗ್ರಹಗಳು ಮತ್ತು ಎರಡೇ ಕವನ ಸಂಗ್ರಹಗಳು. ಎದ್ದು ಕಾಣುವ ಕೃತಿಗಳೆಂದು 'ಸುಭಾಷಿತ ಚಮತ್ಕಾರ' ಹಾಗೂ 'ಪದಾರ್ಥ ಚಿಂತಾಮಣಿ' ಇವನ್ನು ಹೆಸರಿಸಬೇಕು.

## ಪಂಚಮುಖಗಳು

ಪಾ.ವೆಂ. ಆಚಾರ್ಯರ ಕೃತಿರಚನೆಯ ಭೂಮಿಕೆಯನ್ನು ಐದು ಮುಖಗಳಲ್ಲಿ ರೇಖಿಸಬಹುದು. ಅವೆಂದರೆ: ಕಲ್ಪಕತೆ; ಚಿಂತಪರತೆ; ಶಬ್ದಾಸಕ್ತಿ; ಪತ್ರಿಕಾಧರ್ಮ ಹಾಗೂ ಅಣಕಪ್ರವೃತ್ತಿ.

ಕಲ್ಪಕತೆ ಅವರ ಕವನ, ಕತೆಗಳಲ್ಲಿ ವ್ಯಕ್ತವಾದರೆ, ಚಿಂತನಪರತೆಯು ಜೀವನ ಸಮಸ್ಯೆಗಳ ಕುರಿತ ವಿಚಾರಮಂಥನದಲ್ಲಿ ವ್ಯಕ್ತವಾಗಿದೆ. ಶಬ್ದಾಸಕ್ತಿಯಂತೂ 'ಕಸ್ತೂರಿ'ಯು ಆರಂಭವಾದ ಕಾಲದಿಂದ ತೋರಿಬಂದಿದೆ. ಪತ್ರಿಕಾಧರ್ಮದ ಬಗೆಯನ್ನು ಅವರು ಪಾಲಿಸುವುದಕ್ಕೂ 'ಕಸ್ತೂರಿ'ಯೇ ಕಾರಣವಾಯ್ತು. ಅಣಕ ಪ್ರವೃತ್ತಿ ಅವರಿಗೆ ಜನ್ಮಜಾತವಾಗಿದ್ದು ಅವರ ಹೆಚ್ಚಿನ ಕೃತಿರಚನೆಗೆ ಅರ್ಥಾತ್ ಹರಟೆಗಳಿಗೆ ಪ್ರಮುಖ ಪ್ರೇರಣೆಯಾಗಿ ನೆಲೆಗೊಂಡಿದೆ. ಇವು ಐದೂ ಭೂಮಿಕೆಗಳ ಹಿಂದೆ ಅಖಂಡವಾದ ವ್ಯಾಸಂಗಪ್ರಿಯತೆ ಇದ್ದುದನ್ನೂ ನಾವು ಗಣಿಸತಕ್ಕುದು.

ತುಸು ವಿವರಗಳನ್ನು ಕೊಡೋಣವೆ?

ಅನೇಕರಂತೆ ಪಾವೆಂ ತಮ್ಮ ಲೇಖನವನ್ನು ಕವನಿಸುವುದರಿಂದಲೇ ಆರಂಭಿಸಿದರು. ಅದೂ ಹನ್ನೊಂದು ವರ್ಷದವರಿದ್ದಾಗ. ಆ ಮುಂದೆಯೂ ಕವಿತಾರಚನೆಗೆ ಮನಗೊಟ್ಟರೂ, ನಿಯಮಿತವಾಗಿ ಬರೆಯುವುದಕ್ಕೆ ಆಗಲೆ ಅಲ್ಲ. ಆದರೆ ಕಾಲ ಸರಿದಂತೆ ಅವರ ಪ್ರಯೋಗಶೀಲ ಪ್ರವೃತ್ತಿ ಕವಿತೆಯಲ್ಲಿ ನವನವೀನ ಪ್ರಯೋಗ ಮಾಡುವುದಕ್ಕೆ ಪ್ರೇರಿಸಿತು. ಅವರ ಮೊದಲ ಕವನ ಸಂಗ್ರಹ 'ನವನೀರದ'ಕ್ಕೆ ಆಗಿನ ಮುಂಬಯಿ ಸರಕಾರದಿಂದ ಪಾರಿತೋಷಕವೂ ಲಭಿಸಿತ್ತು. ಅನಂತರ ಪ್ರಕಟವಾದ 'ಕೆಲವು ಪದ್ಯಗಳು' ಕೆಲವೇ ಇದ್ದು; ಅವರ ಒಟ್ಟಿನ ಕವನ ರಚನೆಗೂ ಅನ್ವಯಿಸುತ್ತದೆ.

'ಮಂಕುತಿಮ್ಮ'ನ ಮಾದರಿಯಲ್ಲಿ ಅವರು 'ಪೆಂಗೋಪದೇಶ'ದ ಪದ್ಯಗಳನ್ನು ರಚಿಸಿದ್ದಾರೆ. ಅವು ಈ ಮುಂಚೆ ಪ್ರಕಟವಾಗಿಲ್ಲ. ಇದೊಂದು ಮಾದರಿ:

ಬದುಕು ಖಟರಾ-ಬಸ್ಸು; ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ
ಗಟರವೊ ಮರವೊ ಸಂಕವೊ ಟ್ರಕ್ಕೊ ಗೋಡೆಯೊ
ಮಡಿದವನಿಗಾವುದೇನೊ ಎಲವೊ ಪೆಂಗೇ.

ಅವರು ಕತೆಗಳನ್ನು ಬರೆದದ್ದಾದರೂ ಕಡಿಮೆಯೇ. ಹೆಚ್ಚಾಗಿ ಉಡುಪಿಯ ಲ್ಲಿದ್ದಾಗ ಬರೆದವುಗಳು. ಅವು ೧೯೩೦ರ ದಶಕದ ಕತೆಗಳಾದರೂ ವಿಶಿಷ್ಟ ಸನ್ನಿವೇಶಗಳು ಹಾಗೂ

ಅನಿರೀಕ್ಷಿತ ಕೊನೆಯಿಂದ ಕೂಡಿದವುಗಳಾಗಿವೆ. ಆ ಕಾಲದಲ್ಲಿ ಬರೆದ 'ಅಪರಜೀವನ' ಎಂಬ ಕತೆಯು ಕನ್ನಡದಲ್ಲಿ ಅತೀಂದ್ರಿಯ ಪ್ರಜ್ಞೆಯನ್ನು ಮೈಗೂಡಿಸಿದಂಥ ಮೊತ್ತ ಮೊದಲಿನ ಕತೆಯಾಗಿದೆ.

ಸಾಹಿತ್ಯಿಕ ಬರಹಗಳಲ್ಲಿ ಪಾ.ವೆಂ. ಅವರದು ಇನ್ನೊಂದು ಬಗೆಯ ವಿಶಿಷ್ಟ ಕೊಡುಗೆ. ಸಂಸ್ಕೃತ ಸಾಹಿತ್ಯ, ಹಳಗನ್ನಡ ಮತ್ತು ಭಾಷಾವಿಷಯಗಳಿಗೆ ಸಂಬಂಧಿಸಿದ ಅವರ ಲೇಖನಗಳು ಮೌಲಿಕ ಅಂಶಗಳನ್ನು ಒಳಗೊಂಡಿವೆ. ಸಂಸ್ಕೃತ ಕಾವ್ಯಗಳಲ್ಲಿಯ ಪ್ರಣಯ ವಿವೇಚನೆ ಗಮನಾರ್ಹವಾಗಿದೆ. ಇತ್ತ ನೇಮಿಚಂದ್ರ, ಕುಮಾರವ್ಯಾಸರ ಬಗೆಗೆ ನವೀನ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಮಕಾಲೀನ ಕನ್ನಡ ಸಾಹಿತ್ಯದ ಬಗ್ಗೆ ಆಳವಾಗಿ ಯೋಚಿಸಿ ಬರೆದದ್ದು ಕಂಡುಬಾರದಿದ್ದರೂ ತಮ್ಮ ಸಮಕಾಲೀನ—ಆದರೆ ಹಿರಿಯರಾದ, ಸಾಹಿತಿ ಪತ್ರಕರ್ತರ ಬಗ್ಗೆ ಮನನೀಯವಾದ ವ್ಯಕ್ತಿಚಿತ್ರಗಳನ್ನು ಕೊಟ್ಟಿದ್ದಾರೆ. ಶಿವರಾಮ ಕಾರಂತ, ಶಂ.ಬಾ. ಜೋಶಿ ಇವರ ವ್ಯಕ್ತಿ ಚಿತ್ರಣದ ಜೊತೆಗೆ ಅವರ ಕೃತಿಗಳ ಆಳವಾದ ಅಭ್ಯಾಸಮಾಡಿ ಬರೆದ ಪ್ರಬಂಧಗಳು ಆಚಾರ್ಯರ ವೈದುಷ್ಯಕ್ಕೆ ನಿದರ್ಶನಗಳಾಗಿವೆ. ಇತ್ತ ತಮ್ಮ ಸ್ನೇಹಿತರಾಗಿದ್ದ ದ.ಬಾ. ಕುಲಕರ್ಣಿಯವರ ವ್ಯಕ್ತಿಚಿತ್ರದಲ್ಲಿ ಆತ್ಮೀಯತೆ ಎದ್ದು ತೋರುವಂತಿದೆ.

ದಕ್ಷಿಣ ಕನ್ನಡ ಜಿಲ್ಲೆಯವರೇ ಆದ ಪಾ.ವೆಂ. ಅವರಿಗೆ ತುಳುಭಾಷೆ, ಉಡುಪಿ, ಕೃಷ್ಣಮಠದ ಸ್ವಾಮಿಗಳು-ಮುಂತಾದ್ದರ ಬಗ್ಗೆ ಸದ್ಭಾವ ಇದ್ದುದು ಸ್ವಾಭಾವಿಕ. ಈ ಕುರಿತು ಬರೆದಿದ್ದಾರೆ. ತುಳುವಿನ ಶಿಷ್ಟಭಾಷೆಯಲ್ಲಿಯೂ ಅವರಿಗೆ ಪರಿಶ್ರಮವಿತ್ತು. ತುಳುಕಾವ್ಯ 'ಭಾಗವತೋ'ದ ಮೇಲಿನ ಲೇಖನ ಈ ದೃಷ್ಟಿಯಿಂದ ಗಮನಾರ್ಹವಾದುದು. ಅವರ ತುಳು ಕವನಗಳ ಸಂಗ್ರಹವೂ ಪ್ರಕಟವಾಗಿದೆ. ('ಬಯ್ಯ ಮಲ್ಲಿಗೆ'). ಧರ್ಮದ ಹೆಸರಿನಲ್ಲಿ ನಡೆಯುವ ತಿಕ್ಕಾಟವನ್ನು 'ಆಯ ಬತ್ತೆ ಇಂಬೈ ಬತ್ತೆ' ಎಂಬ ಕವನದಲ್ಲಿ ಚಿತ್ರಿಸಿದ್ದು, ತುಳುಭಾಷಿಕರ ವಿಶೇಷ ಮೆಚ್ಚುಗೆಯನ್ನು ಗಳಿಸಿದೆ.

ಇವೆಲ್ಲವನ್ನು ಮೀರಿಸಿದುವೆಂದರೆ ಅವರ ಮೌಲಿಕ ಚಿಂತನೆಯನ್ನೊಳಗೊಂಡ ಪ್ರಬಂಧಗಳು. ಅವು ಆಚಾರ್ಯರ ವ್ಯಾಸಂಗಪ್ರೇರಿತವಾದ, ಆದರೆ ಮೂಲಭೂತವಾದ ವಿಚಾರಗಳನ್ನು ಒಳಗೊಂಡಿವೆ. 'ಜೀವನಕ್ಕೆ ಅರ್ಥವುಂಟೆ?' ಎಂಬುದು, ಅದರಂತೆ ಮಾನವ ಪ್ರವೃತ್ತಿ ಹಾಗೂ ಮೌಲ್ಯಗಳು, ಪಾಪಪ್ರಜ್ಞೆ, ಆಜ್ಞಾಪಾಲನೆ, ಆತ್ಮಸಾಕ್ಷಿ—ಈ ಬಗೆಯ ಹತ್ತಾರು ವಿಷಯಗಳನ್ನು ಅವರು ಎತ್ತಿಕೊಂಡಿದ್ದಾರೆ. ಪಕ್ವ ಆಲೋಚನೆಯ ಅಭಿವ್ಯಕ್ತಿ ಇಲ್ಲಿದೆ.

ಕೆಲವು ಪ್ರಬಂಧಗಳು ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳನ್ನು ವಿವೇಚಿಸುತ್ತವೆ. ಉದಾಹರಣೆಗೆ ಶಾಸ್ತ್ರಗಳನ್ನು ಏಕೆ ಪಾಲಿಸಬೇಕು?, ಶಿಕ್ಷಣ ಮತ್ತು ಜೀವನ ಮೌಲ್ಯಗಳು, ಸಾಮಾಜಿಕ ಬದಲಾವಣೆ ಹಾಗೂ ಮನೋವೃತ್ತಿಗಳು. ಇವನ್ನು ಪರಿಶೀಲಿಸಿದಾಗ ಪಾ.ವೆಂ. ಪ್ರಥಮ ದರ್ಜೆಯ ಚಿಂತಕರೆಂಬುದು ಮನವರಿಕೆಯಾಗುವುದು. ಅವರ 'ಬ್ರಾಹ್ಮಣರೇನು

ಮಾಡಬೇಕು?' ಎಂಬ ಸವಿವರ ವಿಶ್ಲೇಷಣಾ ಪ್ರಬಂಧವನ್ನು ವಿಶೇಷವಾಗಿ ಹೆಸರಿಸಬೇಕು. ಅತ್ಯಂತ ನಿಷ್ಪಕ್ಷವಾದ ರೀತಿಯಲ್ಲಿ ವಿಷಯಮಂಡನೆ ಮಾಡಿದ್ದಾರೆ.

'ಕಸ್ತೂರಿ'ಗಾಗಿ ಬರೆದ ಲೇಖನಗಳು ೬೦೦ರ ಸಂಖ್ಯೆಯನ್ನು ಮೀರಿವೆ. ಅವನ್ನು ಹೀಗೆ ವರ್ಗೀಕರಿಸಬಹುದು:

ಅ) ಜಗದ್ವಿಖ್ಯಾತ ವ್ಯಕ್ತಿಗಳ ಚರಿತ್ರೆ

ಆ) ದೇಶ-ವಿದೇಶಗಳ ಪರಿಚಯ

ಇ) ಜಗತ್ತಿನಲ್ಲಿ ನಡೆದ ವೈಚಿತ್ರ್ಯಗಳು

ಈ) ಭಾರತದ ಆಗು-ಹೋಗುಗಳು

ಉ) ವೈಜ್ಞಾನಿಕ ವಿಷಯಗಳು

ಇಷ್ಟೊಂದು ವೈವಿಧ್ಯಮಯ ಲೇಖನಗಳಿಗಾಗಿ ಪಾ.ವೆಂ. ಮಾಹಿತಿಯನ್ನು ಕಲೆಹಾಕುವಲ್ಲಿ, ಅವನ್ನು ಪರಿಶೋಧಿಸಿ ವ್ಯವಸ್ಥಿತವಾಗಿ ನಿರೂಪಿಸುವಲ್ಲಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇವನ್ನೆಲ್ಲ ಮರು-ಮುದ್ರಣ ಮಾಡಿ ಪ್ರಕಟಿಸಿದರೆ ವಿಶ್ವಕೋಶದ ಮಾದರಿಯಲ್ಲಿ ಯುವ ಪೀಳಿಗೆಗೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಅವರ ವೈಜ್ಞಾನಿಕ ಲೇಖನಗಳನ್ನು ಎತ್ತಿ ಹೇಳಬೇಕು. ಕಸ್ತೂರಿಗಾಗಿ ಇತರ ವಿಷಯಗಳ ಬಗ್ಗೆ ಲೇಖನಗಳು ವಿಪುಲವಾಗಿ ಬರುತ್ತಿದ್ದರೂ, ವಿಜ್ಞಾನದ ಬಗ್ಗೆ ಬರೆಯುವ ಶ್ರಮವನ್ನು ವಹಿಸುವವರಿರಲಿಲ್ಲ. ಆದರೆ ಆ ವಿಷಯ ಕಸ್ತೂರಿಯಲ್ಲಿ ಬರಲೇಬೇಕು. ಹೀಗಾಗಿ 'ಕಸ್ತೂರಿ' ದಿನಗಳಲ್ಲಿ ಪಾ.ವೆಂ. ಅವರ ವಾಚನದ ಬಹುಪಾಲು ವಿಜ್ಞಾನ ವಿಷಯಕ್ಕೇ ಮೀಸಲಾಗಿದ್ದಿತು. ಅವರೇನೂ ವಿಜ್ಞಾನವನ್ನು ಕಾಲೇಜು ಮಟ್ಟದಲ್ಲಿ ಓದಿದವರಲ್ಲ. ಪ್ರಕೃತ ಬರಹಗಳನ್ನು ಇಂಗ್ಲಿಷ್‌ನಲ್ಲಿ ಓದಿ ತಾವು ಅದನ್ನು ಮೊದಲಿಗೆ ಅರ್ಥಮಾಡಿ ಕೊಳ್ಳಬೇಕಿತ್ತು. ಅದರ ವಿಷಯ ಪೂರ್ತತೆಗೆ ಬೇರೆ ಲೇಖನಗಳನ್ನು ಓದಬೇಕಿತ್ತು; ಕನ್ನಡ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡು ಆಮೇಲೆ ಕನ್ನಡ ಲೇಖನವಾಗಿ ಸಿದ್ಧಗೊಳಿಸಬೇಕಿತ್ತು. ಪಾ.ವೆಂ. ಕಸ್ತೂರಿಯ ಮೊದಲ ಸಂಚಿಕೆಯಿಂದ ಹಿಡಿದು ೧೮ ವರ್ಷಗಳ ಪರ್ಯಂತ ಹಾಗೆ ಮಾಡಿದ್ದಾರೆ. ಆ ಲೆಕ್ಕದಲ್ಲಿ ಅವರೊಬ್ಬ ಗಣ್ಯ ವಿಜ್ಞಾನ-ಲೇಖಕರೆಂದೇ ಪರಿಗಣಿಸತಕ್ಕುದು.

ಅವರು ಪ್ರಾಯಶಃ ವಿಜ್ಞಾನದ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆ; ಖಗೋಳ ಶಾಸ್ತ್ರ, ಭೂಭೌತಿಕ, ಸಸ್ಯ-ಪ್ರಾಣಿಗಳ ಪ್ರಪಂಚ, ಜೊತೆಗೆ ಮನೋವಿಜ್ಞಾನ, ಲೈಂಗಿಕ ವಿಜ್ಞಾನಗಳೂ ಅವರ ಗಮನವನ್ನು ಸೆಳೆದಿವೆ. ಆದರೆ ಈ ವಿಜ್ಞಾನ ಲೇಖನ ಸಮುದಾಯದಲ್ಲಿ ವೈದ್ಯಕೀಯಕ್ಕೆ ಹೆಚ್ಚಿನ ಪಾಲು ಸಂದಿದೆ. ರೋಗಗಳ ಸ್ವರೂಪವನ್ನು ತಿಳಿದು ಜನ ಆರೋಗ್ಯವಂತರಾಗಿ ಬಾಳಬೇಕೆಂಬ ಸದಾಶಯವನ್ನು ನಾವು ಅಲ್ಲಿ ಗುರುತಿಸಬಹುದು. ಕೆಲವು ಪ್ರಸಿದ್ಧ ವಿಜ್ಞಾನಿಗಳ ಸಾಧನೆಯನ್ನು ವಿವರಿಸುವ ಚರಿತ್ರೆಗಳನ್ನೂ ಬರೆದಿಟ್ಟಿದ್ದಾರೆ.

ಇನ್ನೀಗ ಹರಟೆಗಳು. ಅವರ ಒಟ್ಟಿನ ಕೃತಿರಚನೆಯ ದೊಡ್ಡ ಮೊತ್ತ 'ಲಾಂಗೂಲಾಚಾರ್ಯ' ಹೆಸರಿನ ಹರಟೆಗಳದ್ದೇ. ಐನೂರನ್ನು ಮಿಕ್ಕಿದ ಇಷ್ಟೊಂದು ಹರಟೆಗಳನ್ನು ಕನ್ನಡದಲ್ಲಿ ಬೇರಾರೂ ಬರೆದಂತಿಲ್ಲ. ಆದರೇನು, ಹಾಗೆ ವಿಷಯದ ಮಂಡನೆಯ ಅಥವಾ ಪದಗುಚ್ಛದ ಪುನರಾವರ್ತನೆ ಕಂಡುಬರುವುದಿಲ್ಲ. (ಉದಾ: 'ಕತ್ತೆ'ಯ ನಿಮಿತ್ತದ ಗಾರ್ದಭಗಾನ ಮತ್ತು ಗಾರ್ದಭೋಪಾಖ್ಯಾನ ಎಂಬ ಎರಡು ಹರಟೆಗಳು).

ಹರಟೆ ಬರೆಯುವುದಕ್ಕೆ ಏನಾದರೊಂದು ಪ್ರಕೋಪನ (provocation) ಬೇಕು. ಒಂದು ಯಃಕಶ್ಚಿತ ಘಟನೆ, ಸಣ್ಣ ವಿಚಾರ ಇಲ್ಲವೆ ಆಡಿದ ಒಂದು ಮಾತು-ಇಷ್ಟರ ಮಟ್ಟಿಗಿನ ಪ್ರಕೋಪನೆ ಅವರಿಗೆ ಸಾಕಿತ್ತು. ಹಾಗೆ ಆರಂಭಿಸಿ ತಮ್ಮ ಬಹುಶ್ರುತತ್ವದ ಬೆಂಬಲದಿಂದ ವಿಷಯವನ್ನು ವ್ಯಂಗ್ಯದ ಧಾಟಿಯಲ್ಲಿಯೇ* ಮುಂದುವರಿಸುತ್ತಿದ್ದರು.

'ಕಸ್ತೂರಿ' ನಿಮಿತ್ತದ ಅವರ ಪತ್ರಿಕಾ ಧರ್ಮವನ್ನು ತುಸು ವಿವರಿಸಬೇಕು. ಈಗಿನ ಪತ್ರಿಕಾವೃತ್ತಿಯೆಂದರೆ ತತ್ಕಾಲದ ಸಂಚಿಕೆಗೆ ಏನು ಬೇಕೋ ಅದನ್ನು ಸೆಳೆದುಕೊಂಡು, ಎಷ್ಟು ಬೇಕೋ ಅಷ್ಟಕ್ಕೇನೆ ಗೀಚುವುದನ್ನು ಮುಗಿಸಿ, ಆಮೇಲೆ ಆ ಲೇಖನವನ್ನು (ಆ ಲೇಖಕನನ್ನೂ) ಮರೆತುಬಿಡಬಹುದಾಗಿದೆ. ಪಾವೆಂ. ಅವರಿಗೆ ಅದೊಂದು ಶ್ರದ್ಧೆಯಿಂದ ಮಾಡಬೇಕಾದ ಧರ್ಮಕಾರ್ಯವೇ ಎಂಬಂತಿದ್ದಿತು. ವಿಷಯವೊಂದರ ಬಗ್ಗೆ ಕುತೂಹಲದ ಆಸಕ್ತಿ ಮೂಡಿತೆಂದರೆ ತಾವು ಪೂರ್ವಭಾವಿಯಾಗಿ ತಿಳಿದುಕೊಂಡು ಸೂಕ್ತ ಲೇಖಕರನ್ನು ಹುಡುಕುತ್ತಿದ್ದರು. ಅವರಿಂದ ಬರೆಯಿಸುವುದು; ಅನಂತರವೇ ಅದನ್ನು ಪ್ರಕಟಿಸುವುದಾಗಬೇಕು. ಈ ಸಂದರ್ಭದಲ್ಲಿ ಪಾವೆಂ. ಹಿರಿ-ಕಿರಿಯರೆನ್ನದೆ ಸಂತತವಾಗಿ ಪತ್ರವ್ಯವಹಾರ ಮಾಡುತ್ತಿದ್ದರು. ಹಳೆಯ 'ಕಸ್ತೂರಿ'ಯ ಲೇಖಕರು ಯಾರನ್ನು ಕೇಳಿದರೂ ಪಾವೆಂ. ಅವರ ಈ ವಿಶೇಷತೆಯನ್ನು ಬಾಯ್ತುಂಬ ಹೊಗಳುತ್ತಾರೆ.

ಕಸ್ತೂರಿ ವಸ್ತುತಃ ಡೈಜೆಸ್ಟ್ ಪತ್ರಿಕೆ. ನಾನಾ ಕಡೆಗಳಿಂದ ಮಧುವನ್ನು ತಂದು ಇರಿಸಿದ ಜೇನ್ಗೂಡಿನ ಹಾಗೆ. ಪಾ.ವೆಂ. ಅವರ ಮೇಲ್ಕಂಡ ಪತ್ರಿಕಾಧರ್ಮದಿಂದಾಗಿ ಈ ಜೇನುತುಪ್ಪ ತರುಣರಿಂದ ಮುದುಕರ ವರೆಗೆ ಸರ್ವಗ್ರಾಹ್ಯವಾಯಿತು.

ಈ 'ಕಸ್ತೂರಿ' ಪತ್ರಿಕೆಯೇ ಅವರ ಶಬ್ದಾಸಕ್ತಿಗೆ ಪುಟಕೊಟ್ಟಿತು. ಮುದ್ದಣ, ಗೋವಿಂದ ಪೈಗಳಂಥ ಶಬ್ದಾಸಕ್ತರು ಬಾಳಿದ ಪ್ರದೇಶದಿಂದ ಬಂದವರಾಗಿ, ಅವರಲ್ಲಿ ಈ ಪ್ರವೃತ್ತಿ ಮೊದಲಿನಿಂದಲೇ ಇದ್ದಿರಬೇಕು. ಕಸ್ತೂರಿಯ ಆರಂಭದ ಸಂಚಿಕೆಗಳಲ್ಲಿ ಕ್ರಮವಾಗಿ ಬರತೊಡಗಿದ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಎಂಬುದರಲ್ಲಿ, ಅನಂತರ ಬರತೊಡಗಿದ 'ಪದ-ಅರ್ಥ ಚಿಂತಾಮಣಿ'ಯ ನಿಯಮಿತ ವಿವೇಚನೆಯಲ್ಲಿ ಅದು ಸುವ್ಯಕ್ತವಾಗಿದೆ. ಶಬ್ದದ

---

* ಅನೇಕ ಹರಟೆಗಳ ಶೀರ್ಷಿಕೆಗಳೇ ಪ್ರಚೋದಕವಾಗಿವೆ: 'ನಗ್ನಾಪರಾಧ', 'ಗೋಹತ್ಯೆ ಮಾಡಿರಿ', 'ಮನುಷ್ಯ ನಗದಿದ್ದರೆ', 'ಶ್ಮಶ್ರು (ಗಡ್ಡ) ಚಿಂತಾರತ್ನಂ', 'ನೀವು ಹೆಂಡತೀನ್ನ ಹೊಡೆಯುವುದನ್ನು ಬಿಟ್ಟಿದ್ದೀರಾ?'

ಪೂರ್ವಾಪರ, ಅದರ ಜ್ಞಾತಿಪದಗಳು, ಅದರಿಂದ ತಿಳಿದು ಬರುವ ಸಾಂಸ್ಕೃತಿಕ ಅಂಶಗಳು—ಇವುಗಳ ಆಳಕ್ಕೆ ಇಳಿದು 'ಚಿಂತಾಮಣಿ' ರತ್ನವನ್ನೇ ಹೊರತೆಗೆದರೆನ್ನಬೇಕು. ಇಲ್ಲಿ ಶಬ್ದಗಳ ಗಂಟನ್ನು ಬಿಚ್ಚುವುದಲ್ಲದೆ, ಅನ್ಯಭಾಷಾ ಶಬ್ದಗಳ ನಂಟನ್ನು ತೋರ್ಪಡಿಸಿದ್ದೂ ಕಂಡುಬರುತ್ತದೆ. ಈ ವೈದುಷ್ಯದಿಂದಾಗಿ ಕಿಟಲ್, ಡಿ.ಎಲ್. ನರಸಿಂಹಾಚಾರ್ಯ ಮತ್ತು ಜಿ. ವೆಂಕಟಸುಬ್ಬಯ್ಯ—ಇವರ ಸಾಲಿನಲ್ಲಿಯೇ ಪಾವೆಂ. ಅವರನ್ನೂ ಹೆಸರಿಸಬೇಕಾಗುವುದು.

## ಸಮಾರೋಪ

ಪಾ.ವೆಂ. ಆಚಾರ್ಯರು ಕಲಿತದ್ದ ಕಡಿಮೆ; ಓದಿದ್ದೇ ಜಾಸ್ತಿ. ಅವರ ಈ ಓದು ಬಿಡುವರಿಯದ್ದು. ಮತ್ತೆ ಅದೇನೂ ವ್ಯವಸ್ಥಿತವಾದದ್ದಲ್ಲ. ಆದರೆ ಓದಿದ್ದನ್ನು ತಮ್ಮ ಬೌದ್ಧಿಕ ಜರಡಿಯಲ್ಲಿ ಹಿಡಿದು ಗಟ್ಟಿಯಾದ ಆಲೋಚನೆಗಳನ್ನಷ್ಟೇ ಉಳಿಸಿಕೊಂಡರು. ಇನ್ನು ಸಮಕಾಲೀನ ಘಟನೆಗಳಿದ್ದರೆ ತೀವ್ರ ಪ್ರಭಾವಕ್ಕೊಳಗಾಗುತ್ತಿದ್ದರು. ಅನಂತರದ ತಮ್ಮ ಪ್ರತಿಕ್ರಿಯೆಯನ್ನು ಹಿಂದು-ಮುಂದುಗಳನ್ನು ಪರಾಮರ್ಶಿಸಿ, ಸಾರಾಸಾರ ವಿವೇಕದಿಂದ ನಿರೂಪಿಸುತ್ತಿದ್ದರು. ಈ ಕ್ರಮದಲ್ಲಿ ಸ್ವಂತದ ಅಭಿರುಚಿ ಮತ್ತು ಸ್ವತಂತ್ರ ದೃಷ್ಟಿ ಇವನ್ನು ತಮ್ಮ ಬದುಕು ಮತ್ತು ಬರಹಗಳಲ್ಲಿ ಉಳಿಸಿಕೊಂಡಿದ್ದರು.

ಪಾ.ವೆಂ. ಅವರ ಇನ್ನೊಂದು ವಿಶೇಷತೆ ಎಂದರೆ ಹತ್ತಾರು ವಿಷಯಗಳಲ್ಲಿ ಏಕಕಾಲಕ್ಕೆ ಚಿಂತನೆ ನಡೆಸುತ್ತಿದ್ದುದು. ಬರಹವಂತೂ ಸರಿಯೇ, ಅವರೊಡನೆ ಮಾತಿಗೆ ನಿಂತಾಗಲೂ ಇದು ಮನವರಿಕೆಯಾಗುವಂತಿತ್ತು. ವಿಧ-ವಿಧವಾದ, ಎಷ್ಟೋ ಸಲ ಒಂದಕ್ಕೊಂದು ಸಂಬಂಧವಿಲ್ಲ-ಎನಿಸುವಂತಹ ವಿಚಾರಗಳು ಕಾರಂಜಿಯ ನೀರಿನಂತೆ ಚಿಮ್ಮುತ್ತಿದ್ದವು. ಸ್ಫುರಣ-ಎನ್ನುವುದು ಹೀಗೇ ಕಾಣಿಸಿಕೊಳ್ಳುವುದಲ್ಲವೆ? ಈ ಸ್ಫುರಣವೇ ನವನವೋನ್ಮೇಷಶಾಲಿನಿಯಾದ ಪ್ರತಿಭೆ-ಎನಿಸಿಕೊಳ್ಳುತ್ತದೆ. ಇಂಥ ಪ್ರತಿಭೆ ಬೇಂದ್ರೆಯವರಲ್ಲಿ ಇದ್ದಿತು. ಅವರ ಅನಂತರ ಹೆಸರಿಸಬೇಕಾದವರು ಪಾ.ವೆಂ. ಆಚಾರ್ಯರೇ.

## ಸಮಗ್ರ ಪಾವೆಂ.

ಪಾ.ವೆಂ. ಆಚಾರ್ಯರ ಸಮಸ್ತ ಬರಹಗಳನ್ನು ೧೫ ಸಂಪುಟಗಳಲ್ಲಿ ಹೊರತರುವ ಯೋಜನೆ ಇದ್ದು, ಅದರ ರೂಪರೇಷೆ ಇಂತಿದೆ.

—ಲಾಂಗೂಲಾಚಾರ್ಯ -ಹೆಸರಿನ ಹರಟೆಗಳು, ನಗೆಬರಹಗಳು

—ಉಡುಪಿಯ ಪರಿಸರದ ಲೇಖನಗಳು (ತುಳು ವಿಷಯವೂ ಸೇರಿ)

—ಜಗದ್ವಿಖ್ಯಾತ ವ್ಯಕ್ತಿಗಳು (ಚರಿತ್ರಾತ್ಮಕ)

—ಜೀವನ ಮಂಥನ (ಮೌಲಿಕ ವಿಚಾರಗಳು)

—ಸಾಹಿತ್ಯ ಸ್ಫುರಣ (ಹಿರಿಯ ಸಾಹಿತಿಗಳ ವ್ಯಕ್ತಿಚಿತ್ರ ಸಹಿತ)

—ಜಗತ್ತಿನಲ್ಲಿ ಜರುಗಿದ ವೈಚಿತ್ರ್ಯದ ಘಟನೆಗಳು

—ವೈಜ್ಞಾನಿಕ ಆವಿಷ್ಕಾರ
—ಲಲಿತ ಸೃಷ್ಟಿ (ಕವನ, ಸಣ್ಣಕತೆ, ಪೆಂಗೋಪದೇಶ)
—ಪ್ರಪಂಚ ಪರ್ಯಟನ (ವಿವಿಧ ದೇಶಗಳ ತ್ರೋಟಿಕ ಪರಿಚಯ)
—ಪಾ.ವೆಂ. ಕಂಡ ಭಾರತ (ಪ್ರಚಲಿತ ಸಮಸ್ಯೆಗಳ ವಿಶ್ಲೇಷಣೆ)
—ಸುಭಾಷಿತ ಚಮತ್ಕಾರ (ಮರುಮುದ್ರಣ)

ಈ ಯೋಜನೆಗೆ ಚಾಲನೆ ಕೊಟ್ಟವರನ್ನು ನೆನೆಯಬೇಕು. ಮೊದಲಿಗೆ ಹೇಳಬೇಕಾದ ಹೆಸರು—ಹುಬ್ಬಳಿಯ ಸಾಹಿತ್ಯ ಪ್ರಕಾಶನದ ಶ್ರೀ ಸುಬ್ರಹ್ಮಣ್ಯಂ ಅವರದು. ಪಾ.ವೆಂ. ಕೃತಿಗಳೆಲ್ಲವನ್ನು ಹೊರತರಬೇಕೆಂದು ಆಗಾಗ ಸೌಮ್ಯ ರೀತಿಯಿಂದ (ನಾವು ಹಿರಿಯರಾದ್ದರಿಂದ!) ಒತ್ತಾಯಿಸುತ್ತಿದ್ದರು. ಯೋಜನೆ ಸಿದ್ಧವಾದ ಮೇಲೆ ಕೆಲವು ಸಂಪುಟಗಳನ್ನು ಪ್ರಕಟಿಸುವುದಾಗಿ ಸ್ವಯಂ ಮುಂಬಂದರು.

ಪಾ.ವೆಂ. ಅವರ ಹೆಚ್ಚಿನ ಬರಹಗಳು ಕರ್ಮವೀರ, ಕಸ್ತೂರಿಯಲ್ಲಿ ಬಂದವುಗಳು. ಅವುಗಳನ್ನು ಮರು-ಮುದ್ರಿಸಲು ಉದಾರವಾಗಿ ಸಮ್ಮತಿಸಿದ ಶ್ರೀ ಕೆ. ಶಾಮರಾಯರನ್ನು ಮನಸಾ ಅಭಿವಂದಿಸುವೆವು.

ಈ ಕಾರ್ಯದಲ್ಲಿ ನಮಗೆ ನೈತಿಕ ಬೆಂಬಲ ನೀಡಿದ ಪೂಜ್ಯರಾದ ಪೇಜಾವರ ಶ್ರೀಗಳವರನ್ನೂ, ಅದರಂತೆ ಶ್ರೀ ಪಾಟೀಲ ಪುಟ್ಟಪ್ಪ ಅವರನ್ನೂ ಕೃತಜ್ಞತಾಪೂರ್ವಕ ನೆನೆಯುತ್ತೇವೆ.

ಪ್ರತ್ಯೇಕವಾಗಿ ಹೇಳಬೇಕಾದ ಹೆಸರು ಪ್ರೊ. ಎಸ್.ಎಲ್. ಶ್ರೀನಿವಾಸಮೂರ್ತಿಯವರದು. ಪಾ.ವೆಂ. ಅವರ ನಾನಾ ಬಗೆಯ ಲೇಖನಗಳ ವರ್ಗೀಕರಣ ಮುಂತಾದ ಕೆಲಸಗಳಲ್ಲಿ ವಿಮರ್ಶನ-ವಿಚಕ್ಷಣೆಯನ್ನು ತೋರಿದ್ದಾರೆ. ಒಂದರ್ಥದಲ್ಲಿ ಅವರು ಈ ಎಲ್ಲ ಸಂಪುಟಗಳ ಸಹಾಯಕ ಸಂಪಾದಕರು.

**ಡಾ|| ಶ್ರೀನಿವಾಸ ಹಾವನೂರ**
**ಎಂ. ವಿ. ಪಾಡಿಗಾರ**

# ಪರಿವಿಡಿ


| | | |
|---|---|---|
| ೧. | ಸಂಗೀತ ಮಹಿಮೆ | ೨೫ |
| ೨. | ಮಕ್ಷಿಕಧ್ವಂಸಕ ಯಂತ್ರ | ೨೭ |
| ೩. | ನಿಮ್ಮ ಅಲರ್ಜಿ ಯಾವುದು? | ೩೦ |
| ೪. | ಚಂದ್ರಲೋಕಕ್ಕೇಕೆ ಹೋಗಬೇಕು? | ೩೫ |
| ೫. | ಸಂತೋಷ ಘಾತಕರು | ೩೮ |
| ೬. | ಶ್ರೀಮನ್ನಾರಾಯಣನ ನಿವೃತ್ತಿ... | ೪೧ |
| ೭. | ಆನೆಚರ್ಮ | ೪೬ |
| ೮. | ಮೂಷಕ ಪುರಾಣ | ೫೦ |
| ೯. | ಯಾರೂ ಕೆಮ್ಮಬಾರದು | ೫೨ |
| ೧೦. | ಅಡಿಗಲ್ಲು ಸಮಾರಂಭ | ೫೫ |
| ೧೧. | ದೇವರ ಕೆಲಸ | ೫೮ |
| ೧೨. | ಕಳೆದುಹೋದ ಚಪ್ಪಲಿ | ೬೦ |
| ೧೩. | "ಕಥಕ್ಕಳಿ"ಗೊಂದು ಅವಕಾಶ | ೬೩ |
| ೧೪. | ಏಕ ಬತ್ತಿ - ಏಕ ರಾಸ್ತಾ | ೬೭ |
| ೧೫. | ಐದು ಸಾಲದು, ಏಳು ಬೇಕು | ೭೧ |
| ೧೬. | ಪಾದುಕಾ ಉಪಚಾರ | ೭೪ |
| ೧೭. | ಮಾವು ಎಂಬ ಹಣ್ಣು | ೭೭ |
| ೧೮. | ಗದ್ದಲ ಮಾಡಿ | ೮೦ |
| ೧೯. | ಬೆಣ್ಣೆ ಹಾಕುವುದು | ೮೩ |
| ೨೦. | ರಾಜಕೀಯ ಗುಳಿಗೆಗಳು | ೮೬ |

| | | |
|---|---|---|
| ೨೧. | ಬುದ್ಧಿವಂತರು ಯಾರು? | ೮೯ |
| ೨೨. | ಬಿರುದಿಲ್ಲದ ಭಾರತ | ೯೨ |
| ೨೩. | ಒಂದು ಪ್ರತ್ಯೇಕ ಸಂದರ್ಶನ | ೯೫ |
| ೨೪. | ಕಾಯದೆ ಮತ್ತು ದೊಡ್ಡವರು | ೯೮ |
| ೨೫. | ರೋಗಿಗಳು ಯಾಕೆ ಸತ್ತರು? | ೧೦೨ |
| ೨೬. | ಚುಂಬನದ ರಾದ್ಧಾಂತ | ೧೦೭ |
| ೨೭. | ನಿಮ್ಮ ನಾತೆ ಯಾವುದು? | ೧೧೧ |
| ೨೮. | ಹಳದಿ ಪತ್ರಿಕೆಗಳು | ೧೨೦ |
| ೨೯. | ಮಹಿಷ ನೀತಿ ಸುಧಾರಣೆ | ೧೨೨ |
| ೩೦. | ವೇದಾಂತ ಮತ್ತು ಸ್ತ್ರೀಕಲಹ | ೧೨೫ |
| ೩೧. | ಸವತಿ ಮತ್ಸರ | ೧೨೭ |
| ೩೨. | ಬಸ್ಸಿನಲ್ಲಿ ಸ್ವಾತಂತ್ರ್ಯ | ೧೨೯ |
| ೩೩. | ಎರಡನೇ ಮದುವೆ | ೧೩೨ |
| ೩೪. | ಚುನಾವಣೆ ಸ್ವಾರಸ್ಯಗಳು | ೧೩೫ |
| ೩೫. | ಘಾತಕ ಹರ್ಷೋನ್ಮಾದ | ೧೩೭ |
| ೩೬. | ಸುದ್ದಿಸ್ವಾರಸ್ಯ | ೧೩೯ |

# ಸಂಗೀತ ಮಹಿಮೆ

ಸಂಗೀತ ಮಳೆಯನ್ನು ಬರಿಸಬಲ್ಲದು. ಸಂಗೀತ ಬೆಂಕಿಯನ್ನು ಹೊತ್ತಿಸಬಲ್ಲದು. ಸಂಗೀತ ಹಾವುಗಳನ್ನು ತಲೆಹಾಕಿಸಬಲ್ಲದು. ಸಂಗೀತ ಮಗುವಿನ ಬಾಯಿ ಮುಚ್ಚಿಸಬಲ್ಲದು. ಸಂಗೀತ ತಂಬಾಕಿನ ಗಿಡಗಳನ್ನು ವೇಗವಾಗಿ ಬೆಳಸಬಲ್ಲದು. ಸಂಗೀತ ಹೇಡಿಗಳನ್ನು ವೀರರಾಗಿ ಮಾಡಬಲ್ಲದು. ಸಂಗೀತ ಬಹುಶಃ ವೀರರನ್ನು ಹೇಡಿಗಳಾಗಿಯೂ ಮಾಡಬಲ್ಲದು. ಈಗ ಒಬ್ಬ ಡಾಕ್ಟರರೇ ಹೇಳುತ್ತಾರೆ—ಸಂಗೀತ ನಿಮ್ಮ ರಕ್ತದ ಒತ್ತಡವನ್ನೂ ಇಳಿಸಬಲ್ಲದು.

ಡಾ. ತೋನ್ಸೆ ಮಾಧವ ಪೈಗಳಂಥ ಪಳಗಿದ ಡಾಕ್ಟರರು ಮತ್ತು ಬ್ಯಾಂಕಿಂಗ್ ತಜ್ಞರು ಮೊನ್ನೆ ಬೆಂಗಳೂರಿನಲ್ಲಿ ಸಂಗೀತಕ್ಕೆ ಈ ಶಿಫಾರಸು ಪತ್ರ ಕೊಟ್ಟಿದ್ದಾರೆ. ಎಂ.ಎಸ್. ಸುಬ್ಬುಲಕ್ಷ್ಮಿಯವರ ಸಂಗೀತ ಕೇಳಿದ ನಂತರ ಡಾಕ್ಟರ್ ಸಾಹೇಬರ ರಕ್ತದ ಒತ್ತಡ ಅನೇಕ ಅಂಶಗಳಷ್ಟು ಇಳಿಯಿತಂತೆ. ಡಾ|| ಪೈಗಳು ಅನೇಕ ವರ್ಷಗಳಿಂದ ರಕ್ತದ ಒತ್ತಡದಿಂದ ಬಳಲುತ್ತಿದ್ದರು. ಅವರ ಡಾಕ್ಟರ್ ಬಂಧುಗಳು ಅವರಿಗೆ ವಿಶ್ರಾಂತಿಯನ್ನು ಸೂಚಿಸುತ್ತಾ ಬಂದಿದ್ದಾರೆ. ಆದರೀಗ ಅವರಿಗೆ ಯಾವ ಗುಳಿಗೆಗಳೂ ವಿಶ್ರಾಂತಿಯೂ ಮಾಡದ ಉಪಕಾರವನ್ನು ಸುಬ್ಬುಲಕ್ಷ್ಮೀ ಸಂಗೀತಾಸವ ಮಾಡಿದೆ.

* * *

ಇರಬಹುದು. ಸಂಗೀತದಿಂದ ರಕ್ತದ ಒತ್ತಡ ಇಳಿಮುಖವಾಗುತ್ತಿರಬಹುದು. ಆದರೆ ಮೊದಲು ರಕ್ತದ ಒತ್ತಡ ಹೆಚ್ಚಾಗುವುದು ಹೇಗೆ? ಅದಕ್ಕೂ ಸಂಗೀತ ಕೇಳುವುದೇ ಕಾರಣವಾಗಿರಲಾರದೆ? ಎಂದು ನನಗೆ ಸಂಶಯ. ನನ್ನದೇ ಅನುಭವ ಹೇಳುವುದಾದರೆ, ಕೆಲವೊಂದು ಸಂಗೀತ ಕೇಳುವಾಗ ನನಗೆ ಈ ಕ್ಷಣ ಯಾವನಾದರೂ ಸಂಗೀತಗಾರನನ್ನು ಕೊಲೆ ಮಾಡಿಬಿಡಬೇಕು ಎನ್ನಿಸುತ್ತದೆ. ಇಂಥ ಸಂಗೀತ ಕೇಳುತ್ತಿರುವಾಗ ನಾನು ನನ್ನ ರಕ್ತದ ಒತ್ತಡವನ್ನು ತೆಗೆಸಿಕೊಂಡಿಲ್ಲ ನಿಜ. ಆದರೂ ನನ್ನ ಕೆನ್ನೆಗಳಲ್ಲಿ ರಕ್ತನಾಳ ಉಬ್ಬುವುದು. ನನ್ನ ಕಣ್ಣುಗಳು ಕೆಂಪೇರುವುದು ಮೊದಲಾದವುಗಳನ್ನು ನೋಡಿದರೆ ನನ್ನ ರಕ್ತದ ಒತ್ತಡವೂ ಬಹಳ ಹೆಚ್ಚಿರಬೇಕೆನಿಸುತ್ತಿದೆ.

* * *

ಅಣ್ಣಾಮಲೆ ವಿಶ್ವವಿದ್ಯಾಲಯದ ಡಾ|| ಟಿ.ಎನ್. ಸಿಂಗರು ಹಿಂದೆ ಸಸ್ಯಗಳ ಮೇಲೆ ಸಂಗೀತದ ಪ್ರಭಾವವನ್ನು ಕುರಿತು ಸಂಶೋಧನೆ ಮಾಡಿ ಕೆಲವು ರಾಗಗಳನ್ನು ಬೆಳಗ್ಗೆ

ಹಾಡಿದರೆ ಗಿಡಗಳು ವೇಗವಾಗಿ ಬೆಳೆಯುತ್ತವೆ ಎಂದು ಸಾರಿದರು. ಪಿಟೀಲು ಚೌಡಯ್ಯನವರು ಸಂಗೀತದಿಂದ ಬೆಳೆ ಹೆಚ್ಚಿಸಬಹುದೆಂದು ಡಾ॥ ಸಿಂಗರ ಸಂಶೋಧನೆಗಳ ಆಧಾರದಿಂದ ಛಾಲೆಂಜು ಮಾಡಿದರು. ಆದರೆ ಸರಕಾರದವರು ದುರ್ದೈವದಿಂದ ಇದನ್ನು ಗಮನಿಸದೆ ಸುಧಾರಿಸಿದ ಬೀಜ, ಸೀಮೆಗೊಬ್ಬರ ಮೊದಲಾದವುಗಳಿಗೆ ಶರಣು ಹೋಗಿ ನಿರರ್ಥಕವಾಗಿ ಹಣ ದುಂದುಮಾಡಿದರು. ಏನು ಮಾಡೋಣ? ನಮ್ಮ ಸರಕಾರದ ಅಧ್ವರ್ಯುಗಳಿಗೆ ತಿಳಿಯುವುದು ಒಂದೇ ಸಂಗೀತ. ಅದೇ ಪ್ರಶಂಸಾ ಸಂಗೀತ. ಈ ಸಂಗೀತದಿಂದ ಅವರ ಗಾತ್ರ ಖಂಡಿತವಾಗಿ ಹೆಚ್ಚಿದೆ. ಆದರೆ ಗಿಡಮರಗಳ ಮೇಲೆ ಇಂಥಾ ಸಂಗೀತ ಪ್ರಭಾವಶಾಲಿ ಯಾಗುವುದಿಲ್ಲವೆಂದು ಕಂಡುಬಂದಿದೆ.

* * *

"ಬಡತನವನ್ನು ಗಡೀಪಾರು ಮಾಡಿರಿ!" ಎಂದು ಮುಂಬಯಿ ಕಾಂಗ್ರೆಸ್ (ಇಂದಿರಾ) ಅಧಿವೇಶನ ಯುದ್ಧ ಸಾರಿತು. "ನಿರುದ್ಯೋಗವನ್ನು ನಾಶಪಡಿಸಿರಿ" ಎಂದು ಅಹಮದಾಬಾದ್ ಕಾಂಗ್ರೆಸ್ (ಸಿಂಡಿಕೇಟ್) ಘೋಷಿಸಿತು. ಈ ಪ್ರಾಸಬದ್ಧ ಘೋಷಣೆಗಳನ್ನು ಕೇಳಿ ಬಡತನವೂ ನಿರುದ್ಯೋಗವೂ ಗಡಗಡನೆ ನಡುಗತೊಡಗಿದವಂತೆ. ತಮ್ಮನ್ನು ಗಡೀಪಾರು ಮಾಡಿದರೆ ಎಲ್ಲಿಗೆ ಹೋಗಬೇಕೆಂದೇ ಅವುಗಳಿಗೆ ತಿಳಿಯುತ್ತಿಲ್ಲ. ರಾಜಕೀಯ ಸಂತ್ರಸ್ತರೆಂದು ಅವು ಅಮೇರಿಕ ಅಥವಾ ಬ್ರಿಟನ್ನಿನಲ್ಲಿ ಆಶ್ರಯ ಬೇಡಬೇಕೆಂದಿವೆಯಂತೆ.

ಆದರೆ ನಿಜವಾಗಿ ಅವು ಅಷ್ಟು ಹೆದರಬೇಕಾದ್ದಿದೆಯೆ? ಎಂದು ನನ್ನ ಪ್ರಶ್ನೆ. ಬಡತನವನ್ನು ಗಡೀಪಾರು ಮಾಡಿದರೆ ಇಂಡಿಕೇಟಿಗೆ ಬೇರೆ ಆಧಾರವೇನು? ನಿರುದ್ಯೋಗ ನಿವೃತ್ತಿಯಾದರೆ ಸಿಂಡಿಕೇಟಿಗೆ ಕೆಲಸವೇನು? ನಿಜವಾಗಿ ಇವರೆಡೂ ನಮ್ಮ ರಾಜಕಾರಣಿಗಳ ಮುಖ್ಯ ಆಧಾರಸ್ತಂಭಗಳು. ನಿಜವಾಗಿ ನಮ್ಮ ಮುಂದಾಳುಗಳು ದರಿದ್ರನಾರಾಯಣನ ಆರಾಧಕರು. ಅವನು ಅವರನ್ನು ಕೈಬಿಡಲಾರ.

* * *

ಗಾಂಧೀ ಮತ್ತು ನೆಹರೂ ನಾಣ್ಯ ಮತ್ತು ಎರಡು ರೂಪಾಯಿ ನೋಟುಗಳನ್ನು ತಯಾರಿಸುತ್ತಿದ್ದ ಕೆಲವರನ್ನು—ಇಬ್ಬರು ಮಹಿಳೆಯರ ಸಮೇತ—ಬೆಂಗಳೂರಲ್ಲಿ ಬಂಧಿಸಿದರಂತೆ.

—ಚಿಕ್ಕ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಈಚೆಗಿನ ಸರಕಾರಿ ಧೋರಣೆಯ ಪ್ರಕಾರವೇ ಈ ಜನರು ಈ ನಾಣ್ಯ ಮತ್ತು ಚಿಕ್ಕ ನೋಟುಗಳ ತಯಾರಿಕೆಯಲ್ಲಿ ತೊಡಗಿದ್ದರಂತೆ. ಗಾಂಧೀಜಿ ಪ್ರತಿಯೊಂದರಲ್ಲಿಯೂ ನಾವು ಸ್ವಯಂಪೂರ್ಣರಾಗಿರಬೇಕೆಂದು ಹೇಳಿದ್ದರು. ಅದನ್ನು ಆಚರಣೆಗೆ ತರುತ್ತಿರುವವರನ್ನು ಪೊಲೀಸರು ಹಿಡಿಯುವುದು ಶುದ್ಧ ಅನ್ಯಾಯ.

❑

# ಮಕ್ಷಿಕಧ್ವಂಸಕ ಯಂತ್ರ

ನಿರುದ್ಯೋಗಿಗಳಿಗೂ ಗಿರಾಕಿಗಳಿಲ್ಲದ ಅಂಗಡಿಗಾರರಿಗೂ ಒಂದು ಸಂತೋಷದ ಸುದ್ದಿ ಬಂದಿದೆ. ಅವರಿನ್ನು ಯಂತ್ರದ ಮೂಲಕ ನಿರುದ್ಯೋಗ ಮಾಡಬಹುದು. ಅಂಗಡಿ ನಡೆಸಬಹುದು. ನಿರುದ್ಯೋಗಿಗಳಿಗೆ ಪುಟಪೂರ್ತಿ ನಿರುದ್ಯೋಗಿಗಳಾಗಲು ಈವರೆಗೆ ಒಂದು ವಿಷಯ ಅಡ್ಡ ಬರುತ್ತಿತ್ತು. ಅದೆಂದರೆ ನೊಣ ಝಾಡಿಸುವ ಅವಶ್ಯಕತೆ ನೀವು ನಿರುದ್ಯೋಗದ ಸರಿಯಾದ ಉಪಯೋಗ ಮಾಡಿಕೊಳ್ಳಲು, ಮಧ್ಯಾಹ್ನದ ಊಟವಾದ ಕೂಡಲೇ ವಾಮಕುಕ್ಷಿಗೆ ಅನುವಾಗುತ್ತೀರಿ ಬಿಸಿಲು ಕಾಯುತ್ತಿರುತ್ತದೆ ಒಳಗೆ ಸೆಕೆಯೋ ಸೆಕೆ ಕವಿವರ್ಯ ಅಡಿಗರು ಹೇಳುವಂತೆ "ಬಚ್ಚಲು ಹಂಡೆಯೊಳಗಿನ ಆವೆ"ಯಂತೆ ಬೇಯತೊಡಗುತ್ತೀರಿ. ಆದ್ದರಿಂದ ಒಳ್ಳೆ ಗಾಳಿ ಬರುವ ಸ್ಥಳ ನೋಡಿ ಜಮಖಾನೆ ಹಾಸಿ ಹೊರಳಾಡಲಾರಂಭಿಸುತ್ತೀರಿ. ಮೆಲ್ಲ ಮೆಲ್ಲಗೆ ನಿಮ್ಮ ಹೊರಳಾಟ ನಿಲ್ಲುತ್ತದೆ. ನಿಮ್ಮ ಮುಖಾರವಿಂದ ಅರ್ಧತೆರೆಯುತ್ತದೆ. ಅಲ್ಲೇ ನಿಮಗೆ ನಿರುದ್ಯೋಗ ಸಮಾಧಿ ಹತ್ತುತ್ತದೆ. ನಿಮ್ಮ ಮುಖನಾಸಿಕೆಗಳ ರಂಧ್ರತ್ರಯದಿಂದ ಒಂದು ಅಪೂರ್ವವಾದ ಮೇಳವಾದ್ಯದ ಅನಿರ್ವಚನೀಯ ಸಂಗೀತ ಮಂದ್ರಸ್ಥಾಯಿಯಲ್ಲಿ ಪ್ರಾರಂಭವಾಗುತ್ತದೆ... ಪ್ರಾರಂಭವಾಗುತ್ತದೆ. ಅಷ್ಟೇ—ಮುಂದುವರಿಯುವುದಿಲ್ಲ. ಒಮ್ಮೆಲೇ ಏನೋ ಸಂಭವಿಸಿ ನಿಮ್ಮ ಗೋರಖ ಸಮಾಧಿ ಭಂಗವಾಗುತ್ತದೆ. ನಿಮ್ಮ ಮುಖಾರವಿಂದದ ಸುಗಂಧದಿಂದ ಆಕೃಷ್ಟವಾದ ನೊಣಗಳು ನಿಮ್ಮ ಅಧರ ಪರಿಧಿಯ ಸುತ್ತಲೂ ಸರಿದಾಡಹತ್ತಿದ್ದರಿಂದಲೇ ಈ ಸಮಾಧಿಭಂಗ! ನೀವು ಮನ್ಮಥಬಾಣದಿಂದ ಕೋಪಾವಿಷ್ಟನಾದ ಪಿನಾಕಧಾರಿಯಂತೆ ಉದ್ರಿಕ್ತರಾಗಿ ಕಣ್ದೆರೆಯುತ್ತೀರಿ.

* * *

ನೊಣಗಳು ಜಗತ್ತಿನ ಅತ್ಯಂತ ಹೇಯ ಜಂತುಗಳೆಂದು ಪ್ರತಿಯೊಬ್ಬ ನಿರುದ್ಯೋಗಿಯೂ ಬಲ್ಲ. ಅವುಗಳ ದಂಡುಗಳು ಚೆಂಗಿಸ್‌ಖಾನನ ದಂಡುಗಳಂತೆ ಅಸಂಖ್ಯವಾದವುಗಳಾದರೂ ಚೆಂಗಿಸನ ಸೈನಿಕರ ಶೌರ್ಯ—ಲೇಶವೂ ಅವುಗಳಲ್ಲಿಲ್ಲ. ನಿಮ್ಮ ಮೈ ಅಲುಗುವ ಮುಂಚೆಯೇ ಅವು ಪಲಾಯನ ಮಾಡಿರುತ್ತವೆ. ಆದರೆ ನಿಮ್ಮ ಎರಡನೇ ಗೊರಕೆ ಪ್ರಾರಂಭವಾಗುವಷ್ಟರಲ್ಲೇ ಅವು ಮತ್ತೆ ದಾಳಿ ಪ್ರಾರಂಭಿಸಿರುತ್ತವೆ. ಇರುಳಲ್ಲಿ ನಿಮ್ಮನ್ನು ಪೀಡಿಸುವ ಸೊಳ್ಳೆಗಳ ವೃತ್ತಿ ನಿಮಗೆ ಅರ್ಥವಾಗಬಲ್ಲದು. ಅವುಗಳಿಗೆ ಹಸಿವಾಗಿರುತ್ತದೆ,

ನಿಮ್ಮ ರಕ್ತವನ್ನು ಹೀರಲು ಅವು ದಾಳಿ ಮಾಡುತ್ತವೆ. ರಕ್ತ ಕುಡಿಯದೆ ಹೋದರೆ ಸೊಳ್ಳೆಗಳ ಸತ್ವ ಕುಂದುತ್ತ ಹೋಗಿ, ಕೆಲ ತಲೆಮಾರುಗಳಲ್ಲೇ ಅವು ನಿರ್ವಂಶವಾಗುತ್ತವೆಂದು ವಿಜ್ಞಾನಿಗಳು ಹೇಳುತ್ತಾರೆ. ಆದ್ದರಿಂದ ನಿಮ್ಮ ಮೇಲೆ ದಾಳಿಮಾಡಲು ಅವುಗಳಿಗೆ ಒಳ್ಳೆ ಕಾರಣವಿದೆ ಮತ್ತು ಎಲ್ಲ ಮಾಂಸಾಹಾರಿ ಜೀವಿಗಳಂತೆ ಅವು ತುಂಬ ಶೌರ್ಯದಿಂದಲೇ ನಿಮ್ಮ ಮೇಲೆರಗುತ್ತವೆ. ಗಂಡು ಸೊಳ್ಳೆ ಎಂದೂ ನಿಮ್ಮನ್ನು ಕಡಿಯುವುದಿಲ್ಲೆಂದೂ ನಿಮ್ಮ ರಕ್ತ ಹೀರುವುದು ಹೆಣ್ಣು ಸೊಳ್ಳೆಯೆಂದೂ ವಿಜ್ಞಾನಿಗಳು ನಿಮಗೆ ಹೇಳುವುದರಿಂದ ಸ್ತ್ರೀಪಕ್ಷಪಾತಿಗಳಾಗಿದ್ದರೆ ನೀವು ತುಂಬ ಸಮಾಧಾನಪಟ್ಟುಕೊಳ್ಳುತ್ತೀರಿ (ಹೇಗಿದ್ದರೂ ಸ್ತ್ರೀಯರೇ ತಾನೆ ನಿಮ್ಮ ರಕ್ತ ಹೀರುವವರು!) ಆದರೆ ಈ ನೊಣಗಳು ನಿಮಗೇಕೆ ಮುತ್ತಿಗೆ ಹಾಕಬೇಕು? ಅವೇನು ನಿಮ್ಮ ರಕ್ತ ಕುಡಿಯಬೇಕಾಗಿಲ್ಲವಲ್ಲ? ಈ ಹೇಡಿ, ಹೇಯ ಜಂತುಗಳಿಗೆ ಆ ಧೈರ್ಯವಾದರೂ ಎಲ್ಲಿ! ಅಂದಮೇಲೆ ಅವು ನಿಮ್ಮ ಮುಖಾರವಿಂದದ ಎಸಳುಗಳ ಮೇಲೇಕೆ ಹರಿದಾಡಬೇಕು, ನಿಮ್ಮ ಕಿವಿಯ ಅಂಚುಗಳ ಮೇಲೆ ಅವುಗಳ ಸಂಚಾರವೇಕೆ? ಇದು ಕೇವಲ ಉಪದ್ರವವಲ್ಲವೆ? ನೀವು ಒಂದು ಸೊಳ್ಳೆಯನ್ನು ಅಪ್ಪಳಿಸಿಕೊಂಡರೆ ಅಷ್ಟು ಸ್ಥಳ ಕೆಂಪಾಗಿ ನಿಮ್ಮ ರಕ್ತ ಕುಡಿದ ಶತ್ರುವನ್ನು ಇಕ್ಕಿದ ರಾಜಸ ಸಂತೋಷವಾದರೂ ನಿಮಗಾಗುತ್ತದೆ. ಆದರೆ ಅಪ್ಪಿತಪ್ಪಿ ನೀವು ಹೊಡೆದ ಪೆಟ್ಟಿಗೆ ಒಂದು ನೊಣವೇನಾದರೂ ಸತ್ತರೆ..... ಅಸಹ್ಯ.... ಅಸಹ್ಯ.... ಜೀವಂತ ನೊಣಕ್ಕಿಂತ ಅಸಹ್ಯವಾಗಿರುವ ಒಂದೇ ಒಂದು ಪದಾರ್ಥವಿದೆ: ಅದೇ ಸತ್ತ ನೊಣ!

* * *

...ಆದರೆ ಈವರೆಗೆ ಮಾತ್ರ ಇನ್ನು ಮೇಲೆ ನಿಮಗೆ ಕಿರುಕುಳ ಕೊಡುವ ಈ ಹೇಯ ಜಂತುಗಳನ್ನು ನಿರ್ನಾಮ ಮಾಡಲು ನೀವು ಯಂತ್ರಗಳನ್ನು ಉಪಯೋಗಿಸಬಹುದು ಉತ್ತರ ಪ್ರದೇಶದ ಕೇಶವ ಪ್ರಸಾದ ವರ್ಮರಿಗೆ ನೊಣಘಾತಕ ಯಂತ್ರವೊಂದನ್ನು ಕಂಡು ಹಿಡಿದದ್ದಕ್ಕೆ ಅಲ್ಲಿನ ಸರಕಾರ ೨,೫೦೦ ರೂಪಾಯಿ ಬಹುಮಾನ ಕೊಟ್ಟಿದೆ. ಈಗ ಬಂದಿರುವ ಸುದ್ದಿಯ ಮೇಲಿಂದ ಹೇಳುವುದಾದರೆ ಅದು ಇಲಿಬಲೆಯ ಹಾಗೆಯೇ ಇರುವ ಒಂದು ಯಂತ್ರವಾಗಿರಬೇಕು. ಅದನ್ನು ನೀವು ನಿಮ್ಮ ಬಳಿ ಇಟ್ಟುಕೊಂಡರೆ ತೀರಿತು. ನೊಣಗಳೆಲ್ಲ ನಿಮ್ಮನ್ನು ಬಿಟ್ಟು ಆ ಯಂತ್ರಕ್ಕೆ ಮುತ್ತಿಗೆ ಹಾಕುತ್ತವೆ. ಅದರೊಳಗೆ ಹೊಕ್ಕ ಮೇಲೆ ನೆಟ್ಟಗೆ ಅವು ಬೇರೊಂದು ಲೋಕವನ್ನು ಪ್ರವೇಶಿಸುತ್ತವೆ.

* * *

ಕೇಶವ ಪ್ರಸಾದರ ಈ ಯಂತ್ರವೆಂದರೆ ಸರಳತೆಯೇ ಯಂತ್ರೀಭೂತವಾದಂತಿದೆ ಅದರಲ್ಲಿ ಒಂದು ಪ್ರಕಾಶಮಾನವಾದ ಮರದ ಪೆಟ್ಟಿಗೆ ಇದೆ. ಅದರ ಒತ್ತಿಗೆ ಒಂದು ತಂತಿಯ ಕೋಣೆಯಿದೆ. ಇದನ್ನು ಕೇಶವ ಪ್ರಸಾದರ ಬದಲು ಆಚಾರ್ಯರ ಅಜ್ಜಿ ಕೂಡ ಕಂಡುಹಿಡಿಯಬಹುದಾಗಿತ್ತು. ಏಕೆಂದರೆ ನೊಣಗಳ ಪೀಡೆ ಹೆಚ್ಚಾದಾಗ ಬೆಲ್ಲದ ನೀರನ್ನು

ಮಾಡಿ ಇಟ್ಟು ಅದರೊಳಗೆ ನೊಣಗಳು ಬಿದ್ದು ಸಾಯುವಂತೆ ಅವರು ಮಾಡುತ್ತಿದ್ದರು. ವರ್ಮಾ ಅವರು ಇದೇ ತಂತ್ರವನ್ನು ಸುಧಾರಿಸಿ ಉಪಯೋಗಿಸಿಕೊಂಡಿದ್ದಾರಷ್ಟೇ. ಅವರ ಯಂತ್ರದ ತಳದಲ್ಲಿ ಬೆಲ್ಲ ಹಚ್ಚಿರುತ್ತದೆ. ನೊಣಗಳು ಅಲ್ಲಿ ಬಂದು ಮುಸುರಿದೊಡನೆ ಅದರ ಮುಚ್ಚಳವನ್ನು ಸಟ್ಟನೆ ಮುಚ್ಚಲಾಗುತ್ತದೆ. ಅದರೊಳಗೆ ಕತ್ತಲು ತುಂಬಿದೊಡನೆ ಎಲ್ಲ ಹೇಡಿಗಳಂತೆ ಕತ್ತಲೆಗೆ ಅಂಜುವ ನೊಣಗಳು ಹೆದರಿ ನೆರೆಯ ತಂತಿಯ ಕೋಣೆಗೆ ಧಾವಿಸುತ್ತವೆ. ಅಲ್ಲಿ ಅವುಗಳಿಗೆ ಲೋಕಾಂತರ ಪ್ರಾಪ್ತಿಯಾಗುತ್ತದೆ.

*  *  *

ಕೇಶವ ಪ್ರಸಾದ ವರ್ಮರಿಗೆ ಈ ಮಕ್ಷಿಕಾಂತಕ ಯಂತ್ರವನ್ನು ನಿರ್ಮಿಸುವ ಸ್ಫೂರ್ತಿ ಹೇಗೆ ಬಂತು? ಎಂಬುದೂ ಒಂದು ಕಥೆಯೇ. ಅದು ೧೦ ವರ್ಷ ಹಿಂದೆ ಪ್ರಾರಂಭವಾಯಿತು. ಒಂದು ದಿನ ವರ್ಮರು ಗಡ್ಡ ಬೋಳಿಸಲು ಕುಳಿತಿದ್ದರು. ಗಡ್ಡ ಬೋಳಿಸಲು ಬೆಳಕು ಬೇಕಲ್ಲ, ಅದಕ್ಕೇ ಬೆಳಕಿಂಡಿಯ ಬಳಿ ಅವರು ಆಯುಷ್ಕರ್ಮ ದೀಕ್ಷಿತರಾಗಿ ಕುಳಿತಿದ್ದರೆನ್ನಿ ಆಗ ಪ್ರಾರಂಭವಾಯಿತು ಅವರ ಕಷ್ಟ. ನೊಣಗಳಿಗೂ ಬೆಳಕೆಂದರೆ ಪ್ರೀತಿ ತಾನೆ? ಅವು ಬಂದು ಅಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸಲು ಯತ್ನಿಸಿದವು. ವರ್ಮಾಜಿಯ ಪಿತ್ತನೆತ್ತಿಗೇರಿತು. ಈ ಅಕ್ರಮ ಪ್ರವೇಶಕರನ್ನು ಅಟ್ಟಲು ಅವರು ಕ್ಷತ್ರಿಯಸದೃಶವಾದ ಆವೇಶದಿಂದಲೇ ಉದ್ಯುಕ್ತರಾದರು. ಆದರೆ ನೇರವಾದ ಯುದ್ಧದಲ್ಲಿ ನೊಣಗಳನ್ನು ಸೋಲಿಸುವವರಾರು? ಅದು ವಿಷಮ ಯುದ್ಧವಾಯಿತು. ಸಂಪೂರ್ಣ ಉದ್ರೇಕಗೊಂಡ ಅವರು ನೊಣಗಳನ್ನು ಚದುರಿಸಲು ವಾಯ್ವವ್ಯಾಸ್ತ್ರವನ್ನು ಬಿಡುವೆನೆಂದುಕೊಂಡು ಇಲೆಕ್ಟ್ರಿಕ್ ಫ್ಯಾನ್ ತಿರುಗಿಸಲು ಧಾವಿಸಿದರು. ಗಡಿಬಿಡಿಯಲ್ಲಿ ಅವರು ಕ್ಷೌರದ ಕತ್ತಿಯ ಮೇಲೆ ಕಾಲಿಟ್ಟರು. ರಕ್ತಪಾತವಾಯಿತು. ನಿಮ್ಮ ನಮ್ಮಂಥವರಾಗಿದ್ದರೆ ನಮ್ಮ ಹೋರಾಟ ಅಲ್ಲಿಗೇ ಸಮಾಪ್ತವಾಗಬಹುದಿತ್ತು. ವರ್ಮಾಜಿ ಹಾಗಲ್ಲ. ಅವರು ಅದೇ ಕ್ಷಣಪ್ರತಿಜ್ಞೆ ಮಾಡಿದರು. ಈ ಮಕ್ಷಿಕಕುಲವನ್ನೇ ನಾಶಮಾಡದಿದ್ದರೆ ನಾನು ವರ್ಮನೇ ಅಲ್ಲ ಎಂದು! ಅವರಿಗೆ ಹತ್ತು ವರ್ಷ ಹಿಡಿಯಿತು ಆದರೆ ಅವರು ಯಶಸ್ವಿಯಾದರು.

*  *  *

ಈ ಸುದ್ದಿಯೋದಿದ ಮೇಲೆ ಲಾಂಗೂಲಾಚಾರ್ಯರು ಸರಕಾರಕ್ಕೆ ಎರಡು ಸೂಚನೆಗಳನ್ನು ಕೊಡಬೇಕೆನ್ನುತ್ತಾರೆ: ಒಂದು, "ವರ್ಮಾಜಿಯವರಿಗೆ ನೊಳಂಬಾಂತಕ" ಎಂದು ಬಿರುದು ಕೊಡಬೇಕು. ಈ ಬಿರುದನ್ನು ಹೊತ್ತ ಅರಸನೊಬ್ಬ ಕರ್ನಾಟಕದಲ್ಲಿ ಆಗಿಹೋದುದರಿಂದ ಇವರನ್ನು "ಇಮ್ಮಡಿ ನೊಳಂಬಾಂತಕ" ಎಂದು ಕರೆಯಬಹುದು.

ಎರಡು, ಈ ಯಂತ್ರಗಳನ್ನು ಲಕ್ಷಗಟ್ಟಳೆಯಲ್ಲಿ ಮಾಡಿಸಿ ಪ್ರತಿಯೊಬ್ಬ ನಿರುದ್ಯೋಗಿಗೂ ಒಂದರಂತೆ ಪುಕ್ಕಟೆಯಾಗಿ ಒದಗಿಸಬೇಕು. ಅಂದರೆ ನಿರುದ್ಯೋಗಿಗಳಿಗೆ ನಿರಾತಂಕವಾಗಿ ತಮ್ಮ ನಿರುದ್ಯೋಗ ವೃತ್ತಿಯನ್ನು ಸಾಗಿಸಲು ಅನುಕೂಲವಾದೀತು.

❑

# ನಿಮ್ಮ ಅಲರ್ಜಿ ಯಾವುದು?

ನೀವು ಅಲರ್ಜಿ ಪೀಡಿತರೇ? ಹಾಗಾದರೆ ಒಳ್ಳೇದಾಯಿತು. ಹಾಂ! ಹಾಗೆ ಮೂಗು ಸೊಟ್ಟಗೆ ಮಾಡಬೇಡಿ. ಬನ್ನಿ, ಇಲ್ಲಿ ಕೂತುಕೊಳ್ಳಿ. ನನಗೂ ಅಲರ್ಜಿ ಇದೆ...ಬೇಡ. ಅಷ್ಟು ಹತ್ತಿರ ಕೂಡ್ರಬೇಡಿ ನೀವು. ನನ್ನ ವುಲನ್ ಕೋಟಿಗೆ ಅಲರ್ಜಿಕ್ ಇರಬಹುದು. ಸ್ವಲ್ಪ ಹಳೇದು ನೋಡಿ, ನನ್ನ ಮಾವ ಕೊಟ್ಟದ್ದು. ಹಳೇ ವುಲನ್ ಕೆಲವರಿಗೆ ಅಲರ್ಜಿ ತರುತ್ತಂತೆ. ಅಥವಾ ನಿಮ್ಮ ಮೈ ಬೆವರಿನಲ್ಲಿರುವ ಚಂಚಲ ತೈಲಕ್ಕೆ ನಾನು ಅಲರ್ಜಿಕ್ ಆಗಿರಬಹುದು. ಕೆಲವರಿಗೆ ಕೆಲವರ ಬೆವರು ಅಲರ್ಜಿ ಉಂಟು ಮಾಡುತ್ತೆ ಅಂತ ಮೊನ್ನೆ ಯಾವುದೋ ಫಾರಿನ್ ಪೇಪರಿನಲ್ಲಿ ಓದಿದೆ. ಆದ್ದರಿಂದ ನೀವು ಕೆಲ ನಿಮಿಷ ಸ್ವಲ್ಪ ದೂರದಲ್ಲಿ ಕೂತರೆ ಇಬ್ಬರಿಗೂ ಕ್ಷೇಮ.

ಏನು? ಅಲರ್ಜಿಗೆ ಶುದ್ಧ ಕನ್ನಡದಲ್ಲಿ 'ಒಗ್ಗದಿಕೆ' ಅಂತ ಒಂದು ಶಬ್ದ ಸೃಷ್ಟಿ ಮಾಡಿದ್ದಾರೆ ಅಂತೀರಾ? ಹೌದು, ನಾನೂ ನೋಡಿದೇನೆ. ಆದರೆ ಆ ಶಬ್ದಕ್ಕೇ ನಾನು ಸ್ವಲ್ಪ ಅಲರ್ಜಿಕ್ ಆಗಿದ್ದೇನೆ. ಯಾಕೋ ನನಗೆ ಸರಿಯಾಗಿ ಗೊತ್ತಿಲ್ಲ. ಸಾಮಾನ್ಯವಾಗಿ ನಾನು ಕನ್ನಡ ಶಬ್ದಗಳಿಗೆ ಅಲರ್ಜಿಕ್ ಆಗಿಲ್ಲ. ಆದರೆ 'ಒಗ್ಗದಿಕೆ'ಗೂ 'ಒಗ್ಗರಣೆ'ಗೂ ಧ್ವನಿಸಾಮ್ಯ ಇದೆಯಲ್ಲ! ಮನೇಲಿ ಮೇಲೋಗರಕ್ಕೆ ಒಗ್ಗರಣೆ ಹಾಕುವಾಗ ನಾನು ಅಲ್ಲಿದ್ದರೆ ನನಗೆ ಆಸ್ಮಾ ಬರುತ್ತೆ. 'ಒಗ್ಗದಿಕೆ' ಅನ್ನುವ ಪದವನ್ನು ಕೇಳಿದರೆ ಅಥವಾ ಉಚ್ಚರಿಸಿದರೆ ಒಗ್ಗರಣೆಯ ನೆನಪು ನನ್ನ ಸುಪ್ತ ಮನಸ್ಸಿನಲ್ಲಿ ಕೆರಳಿ, ಸೌಮ್ಯ ಅಲರ್ಜಿಕ್ ಪ್ರತಿಕ್ರಿಯೆ ಉಂಟಾಗುತ್ತಿರಬಹುದು ಅಂತ ನನ್ನ ಡಾಕ್ಟರರು ಊಹಿಸಿದ್ದಾರೆ. ಸತ್ಯ ಇರಬೇಕು. ಅಕ್ಕೀ! ನೋಡಿ, ಇಷ್ಟಕ್ಕೇ ಶೀನು ಪ್ರಾರಂಭವಾಯಿತು. ಶೀನು ನನ್ನ ಅಲರ್ಜಿಯ ಒಂದು ಖಂಡಿತ ಪೂರ್ವಲಕ್ಷಣ. ಆದ್ದರಿಂದ ದಯವಿಟ್ಟು—ಅಕ್ಕೀ!, ಇಕ್ಕೀ!, ಎಕ್ಕೀ!—ಆ ಶಬ್ದವನ್ನು ನನ್ನ ಎದುರು ಇನ್ನೊಮ್ಮೆ ಉಚ್ಚರಿಸಬೇಡಿ. ಒಕ್ಕೀ! ಅಂ...ಕ್ಕೀ! ಇಷ್ಟಕ್ಕೇ ಮುಗಿದರೆ ನನ್ನ ಪುಣ್ಯ.

ನಿಮ್ಮ ಅಲರ್ಜಿ ರೂಪ ಯಾವುದು? ಎಕ್ಜಿಮಾ? ಪಾಪ! ಪಾಪ! ಎಲ್ಲಿ? ಪಾದಗಳಲ್ಲಿ? ಒಣಾ ಎಗ್ಜಿಮಾವಾ? ಅಳೋ ಎಗ್ಜಿಮಾವಾ? ಒಣಾದ್ದೋ? ಒಂದಿಷ್ಟು ತುರಿಕೆ ಇರುತ್ತೆ ಅಲ್ಲವೆ? ತುರಿಸಿಕೊಳ್ಳಬೇಡಿ. ಇನ್‌ಫೆಕ್ಷನ್ ಆದೀತು. ಇದ್ದಿದ್ದರಲ್ಲಿ ನೀವು ಪುಣ್ಯವಂತರು. ಹಾ! ಸಿಟ್ಟಾಗಬೇಡಿ! ಎಗ್ಜಿಮಾ ನಿಮ್ಮ ಪೂರ್ವಪುಣ್ಯದಿಂದ ಬಂದಿದೆ ಅಂತ ನಾನು ಹೇಳ್ತಾ ಇಲ್ಲ. ಆದರೆ ಅಳೋ ಎಗ್ಜಿಮಾ ಇರೋವರಿಗಿಂತ ಒಣಾ ಎಗ್ಜಿಮಾದವರು ಪುಣ್ಯವಂತರು ಅಂತಷ್ಟೇ ನಾನು ಹೇಳಿರೋದು. ಅದೂ ಪಾದಗಳಲ್ಲಿದ್ದರೆ ಇದ್ದಷ್ಟರಲ್ಲಿ

ಪುಣ್ಯ. ಯಾಕೆ? ಪುಣ್ಯ ಅನ್ನೋ ಶಬ್ದಕ್ಕೇ ನೀವು ಅಲರ್ಜಿಕ್ ಇರುವ ಹಾಗೆ ಕಾಣುತ್ತಲ್ಲ? ತಮಾಷೆಯಾಗಿದೆ. ಏನು ಕಾರಣವಿರಬಹುದು? ನಿಮ್ಮ ಪೂಜ್ಯ ತಂದೆಯವರು ಪುಣ್ಯ ಪುಣ್ಯ ಅಂತ ಯಾವಾಗಲೂ ನಿಮ್ಮನ್ನು ತಣ್ಣೀರಲ್ಲಿ ಸ್ನಾನ ಮಾಡಿಸುತ್ತಿದ್ದರೇ? ಇಲ್ಲವೇ? ಬರೇ ಯಾವಾಗಲೂ ಪುಣ್ಯ ಪುಣ್ಯ ಅಂತ ಬಡಬಡಿಸುತ್ತ ಇದ್ದರೇ? ಚು! ಚ್ಚು! ಚ್ಚು! ಅದನ್ನ ಕೇಳಿ ಕೇಳಿಯೇ ನೀವು ಆ ಶಬ್ದಕ್ಕೆ ಸೆನ್ಸಿಟೈಸ್ ಆಗಿರಬೇಕು. ಇದೊಂದು ಅತಿರೇಕ ಪ್ರಸಂಗ—ಎಕ್ಸ್‌ಟ್ರೀಂ ಕೇಸ್. ಆದರೆ ಅಸಾಧ್ಯವಲ್ಲ. ಅಲರ್ಜಿ ವಿಷಯ ಹೀಗೇ ಅಂತ ಏನೊಂದನ್ನೂ ಖಂಡಿತವಾಗಿ ಹೇಳುವ ಹಾಗಿಲ್ಲ. ಹೋಗಲಿ ಬಿಡಿ! ಇನ್ನು ಆ ಶಬ್ದವನ್ನ ಆದಷ್ಟು ವರ್ಜಿಸಿ ಅಗತ್ಯಬಿದ್ದರೆ 'ಕಡಿಮೆ ಪಾಪ' ಅಂತ ಹೇಳುತ್ತೇನೆ. ಆದರೆ ಕೈಯಲ್ಲೂ ಅದೂ ಅಳೋ ಎಗ್ಜಿಮಾ ಇರೋದಕ್ಕಿಂತ ಪಾದದಲ್ಲಿ ಒಣಾ ಎಗ್ಜಿಮಾ ಇರೋದು ವಾಸಿ ಅಂತ ಹೇಳದೆ ಇರಲಾರೆ. ನನ್ನ ಒಬ್ಬ ಸ್ನೇಹಿತನಿಗೆ ಕೈಲೇ ಅದೂ ಅಳೋ ಎಗ್ಜಿಮಾ. ಊಟ ಮಾಡಲಿಕ್ಕೇ ತನಗೆ ಹೇಸಿಗೆಯಾಗುತ್ತೆ ಅದು ಅಳತೊಡಗಿದಾಗ, ಅಂತ ಅಳ್ತಾನೆ ಪಾಪ! ಪಾದದಲ್ಲಿದ್ದರೆ ಹೆಚ್ಚು ಪಕ್ಷ ಅದನ್ನು ಇತರರ ಕಣ್ಣು ತಪ್ಪಿಸಬಹುದು. ಈಗೀಗ ಯಾರೂ ಬಗ್ಗಿ ಪಾದಕ್ಕೆ ನಮಸ್ಕಾರ ಮಾಡುವ ಕಷ್ಟ ತೆಗೆದುಕೊಳ್ಳೋದಿಲ್ಲ ನೋಡಿ. ಕೈಲಿ ಎಕ್ಜಿಮಾ ಆದರೆ ಮುಚ್ಚಿಕೊಳ್ಳೋದು ಹೇಗೆ?

ನನ್ನ ಅಲರ್ಜಿ ಯಾವುದು ಅಂತ ಕೇಳ್ತೀರಿ, ಅಲ್ಲವೆ? ಛೇ ಛೇ ಛೇ ಛೇ! ಅದನ್ನ ಏನಂತ ಹೇಳಲಿ? ನಾನು ಅಲರ್ಜಿಯ ಒಂದು ಪ್ರಯೋಗಶಾಲೆಯೇ ಅಂದರೂ ತಪ್ಪಿಲ್ಲ. ಅಥವಾ ದೇವರು ಈ ಪ್ರಪಂಚದಲ್ಲಿ ಮನುಷ್ಯನಿಗೆ ಯಾವ ಯಾವ ಅಲರ್ಜಿ ಉಂಟುಮಾಡಬಹುದು ಅಂತ ಕಂಡುಹಿಡಿಯೋಕ್ಕೆ ನನ್ನನ್ನು, ಒಂದು ಪ್ರಯೋಗಪಶುವಾಗಿ ಉಪಯೋಗಿಸುತ್ತಿರಬಹುದು. ಸಿಂಪಲ್ ಶೀನಿನಿಂದ ಆರಂಭಿಸಿ ಆಸ್ತ್ಮಾ ದಡಿಕೆ, ಎಗ್ಜಿಮಾ... ಥೋ ಥೋ ಥೋ ಥೋ ಅದರ ಲೆಕ್ಕ ಕೇಳಬೇಡಿ. ನಿನಗೆ ಇಲ್ಲದ ಅಲರ್ಜಿ ಯಾವುದು ಅಂತ ಬೇಕಾದರೆ ಕೇಳಿ. ನಿಜ ಕೇಳಿದರೆ ಜೀವಮಾನವೆಲ್ಲ ನಾನು ಒಂದು ಅಲರ್ಜಿಯಿಂದ ಇನ್ನೊಂದು ಅಲರ್ಜಿಗೆ ಕಪ್ಪೆ ಹಾರುತ್ತ ಬಂದಿದ್ದೇನೆ. ಮೊದಲು ಏನೂ ಕಾರಣವಿಲ್ಲದೆ ನಾನು ಶೀನುವುದಕ್ಕೆ ಆರಂಭಿಸುತ್ತೇನೆ. ಆಮೇಲೆ ಮೂಗು, ತೂತುಬಿದ್ದ ಗುಡಾಣದಂತೆ ಸೋರತೊಡಗುತ್ತೆ. ಅದನ್ನ ಒರೆಸುವುದಕ್ಕೆ ಗೋಣೀಚೀಲ ಬೇಕಾಗುತ್ತೆ. ಒಂದೆರಡು ಗೋಣೀಚೀಲ ಒದ್ದೆಯಾದ ಮೇಲೆ ನಾನು ಶೀತಕ್ಕೆ ಮದ್ದು ತೆಗೆದುಕೊಳ್ಳುತ್ತೇನೆ. ಅದು ಬಂದಾಗುತ್ತದೆ—ಅಂದರೆ ಮೂಗು ಬಂದಾಗುತ್ತದೆ. ಒಂದು ಗಂಟೆಯೊಳಗೆ ಗಂಟಲೊಳಗೆ ಹದಿನೇಳು ತಂತಿಯ ಚೌಡಯ್ಯ ಪಿಟೀಲು ಗುಂಯ್ಗುಡುವುದಕ್ಕೆ ತೊಡಗುತ್ತದೆ. ಸ್ವಲ್ಪ ಹೊತ್ತಿನಲ್ಲಿ ಅದು ಕಲಾಯಿ ಸಾಬಿಯ ತಿದಿಯ ಹಾಗೆ ಬುಸುಗುಟ್ಟುತ್ತದೆ. ಅರ್ಧ ಫರ್ಲಾಂಗು ದೂರದಲ್ಲಿರುವ ನನ್ನ ಡಾಕ್ಟರರಿಗೆ ಅದರ ಶಬ್ದ ಕೇಳಿಸಿ, ಅವರಾಗಿ ಬಂದು ಅಡ್ರಿನಾಲಿನ್ನೋ ಎಮಿನೊ ಫಿಲಿನ್ನೋ ಚುಚ್ಚಿ, ಲೇಟೆಸ್ಟ್ ಯಾವುದಾದರೂ ಆಸ್ತ್ಮಾ ಗುಳಿಗೆಯನ್ನು ತಿನ್ನಿಸುತ್ತಾರೆ. ಆಸ್ತ್ಮಾ ಇನ್ನು ಉಪಾಯವಿಲ್ಲ ಅಂತ ವ್ಯವಸ್ಥಿತ ಹಿನ್ನಡೆಕೈಕೊಳ್ಳುತ್ತದೆ.

ಮರುದಿವಸ ಬೆಳಿಗ್ಗೆ ಹೊತ್ತಿಗೆ ಆಸ್ತ್ಮಾ ನಮ್ಮ ಕಾಲನಿಯಲ್ಲೇ ಎಂದೂ ಇದ್ದಿಲ್ಲವೆಂಬ ಹಾಗೆ ಅದು ಮಾಯವಾಗಿರುತ್ತದೆ. ಆದರೆ ಅದರದೇ ಅವತಾರವಾದ ಎಗ್ಜಿಮಾ ಬೆರಳ ಸಂದಿಗಳಲ್ಲಿ ಕಾಣಿಸಿಕೊಳ್ಳುತ್ತದೆ...

ನನ್ನದೇ ಪುರಾಣ ಬಹಳ ಹೇಳಿಕೊಳ್ಳುತ್ತಿದ್ದೇನೆ ಅಂತ ನಿಮಗೆ ಬೋರ್ ಆಗುತ್ತೆ ಅಲ್ಲವೆ? ನೀವೂ ನಾನೂ ಸಮದುಃಖಿಗಳು ಅಂತ ಹೇಳುತ್ತಿದ್ದೇನೆ; ಇಲ್ಲದಿದ್ದರೆ ನಾನು ಹೀಗೆ ಬಡಬಡಿಸುವವನಲ್ಲ. ನಿಮಗೊಂದು ಗುಟ್ಟು ಹೇಳಲೇ? ನನ್ನ ಡಾಕ್ಟರ ಪಥ್ಯ ಪಟ್ಟಿಯಲ್ಲಿ ಇದೂ ಒಂದು. ಅಲರ್ಜಿ ರೋಗಿಗಳು ಹೆಚ್ಚಾಗಿ ಅಂತರ್ಮುಖಿ ಸ್ವಭಾವದವರು ಅಂತ ಅವರ ಹೇಳಿಕೆ. ತಮ್ಮ ಸುಖದುಃಖ ಯಾರ ಮುಂದೆಯೂ ತೋಡಿಕೊಳ್ಳದೆ, ಒಳಗೇ ಬಚ್ಚಿಟ್ಟುಕೊಳ್ಳೋದರಿಂದ ಅವರ ಅಲರ್ಜಿ ಉಲ್ಬಣಿಸುತ್ತೆ ಅಂತಾರೆ. ಯಾರ ಮುಂದಾದರೂ ಒಳ್ಳೇ ಗುದ್ದಲಿಯಿಂದ ನೆಲ ತೋಡಿದ ಹಾಗೆ ಮನಸ್ಸು ತೋಡಿಕೊಂಡರೆ, ಅಲರ್ಜಿ ಪೀಡೆ ಕಡಮೆಯಾದೀತು ಅಂತ ಅವರ ಅಭಿಪ್ರಾಯ. ಅದಕ್ಕೇ ನಾನು...

ಅಂದಹಾಗೆ ನಿಮ್ಮ ಅಲರ್ಜೆನ್—ಅಂದರೆ ಅಲರ್ಜನಕ ಯಾವುದು? ಕಾಂಗ್ರೆಸ್ ಹೂ—ಅಲ್ಲ, ಪಾರ್ಥೇನಿಯಂ ಗಿಡದ ಹೂವೇ? ಓ ಯಾವ ಹೂವಿನ ಪರಾಗದಿಂದಲೂ ನಿಮ್ಮ ಅಲರ್ಜಿ ಉಲ್ಬಣ ಆಗಬಹುದು ಅಂತೀರಾ? ಅನ್ಯಾಯ ಅನ್ಯಾಯ! ನಿಮಗೆ ಸ್ವಲ್ಪ ಕವಿಹೃದಯ ಇದ್ದರೆ ಬಲು ಕಷ್ಟ. ಆದರೆ ಈಗ ಹೂಗಳನ್ನು ಪ್ರೀತಿಸೋದು ಕವಿಗಳಲ್ಲಿ ಫ್ಯಾಶನೇಬಲ್ ಆಗಿ ಉಳಿದಿಲ್ಲ, ಬಚಾವ್. ಬಚ್ಚಲು ಗುಂಡಿ, ಕೊಳೆತ ಮೀನು—ಇಂಥಾ ವಾಸನೆಗಳನ್ನ ತಾನೆ ಈಗಿನ ಕವಿಗಳು ಮೆಚ್ಚೋದು? ನಿಮ್ಮ ಹೆಂಡತಿ "ಮಲ್ಲಿಗೆ ಸೇವಂತಿಗೇ ಸೊಂಪಾದ ಸಂಪಿಗೇ" ಅನ್ನೋವರಾಗಿದ್ದರೆ ಮಾತ್ರ ಬಂತು ಸಂಕಟ. ಗಂಡನಿಗೆ ಅಲರ್ಜನಕ ಆಗಿರೋ ಪದಾರ್ಥವನ್ನ, ಹೆಂಡತಿಗೂ ಅಲರ್ಜನಕವಾಗಿ ಮಾಡೋ ಯಾವ ಉಪಾಯಾನೂ ದುರ್ದೈವದಿಂದ ಡಾಕ್ಟರುಗಳಿಗೆ ಈವರೆಗೆ ಗೊತ್ತಿಲ್ಲ ಅಂತ ನಮ್ಮ ಡಾಕ್ಟರು ಹೇಳುತ್ತಾರೆ. ಈ ಅಲರ್ಜಿ ಅಸಾಂಗತ್ಯ ಅಥವಾ ಅಲರ್ಜಿಕ್ ಇನ್ ಕಂಪ್ಯಾಟಿಬಿಲಿಟಿಯಿಂದ ಅಮೇರಿಕದಲ್ಲಿ ಎಷ್ಟೋ ಡೈವೋರ್ಸ್ ಆಗಿವೆಯಂತೆ.

ನನ್ನ ಅಲರ್ಜನಕಗಳ ವಿಚಾರ ಕೇಳಬೇಡಿ. ಇಂಡಿಯಾ ದಟೀಸ್ ಭಾರತದಲ್ಲಿ ಈವರೆಗೆ ಗೊತ್ತುಹಚ್ಚಿರುವ ಅರುವತ್ತೂ ಚಿಲ್ಲರೆ ಬಗೆಯ, ಎಲ್ಲ ಅಲರ್ಜನಕ ರೇಣುಗಳು ನನಗೆ ಅಲರ್ಜನಕವಾಗಿವೆ. ಬರೇ ಹೂವಿನ ರೇಣುಗಳು ಅಂತ ತಿಳಿದುಕೊಳ್ಳಬೇಡಿ. ಹಳೇ ಬೂಟ್ಸಿಗೆ, ನಿನ್ನೇ ಬ್ರೆಡ್ಡಿಗೆ ಬರೋ ಬುರುಸುಗಳ ರೇಣುಗಳಿಗೂ ನಾನು ಅಲರ್ಜಿಕ್ ಆಗಿದ್ದೇನೆ. ಆದರೆ ತೆಂಗಿನಕಾಯಿಯ ಬುರುಸು ನನಗೆ ಏನೂ ಮಾಡುವುದಿಲ್ಲ. ಟೊಮ್ಯಾಟೊ ಹಣ್ಣಿಗೆ ನಾನು ಅಲರ್ಜಿಕ್, ಆದರೆ ಕಾಯಿಗಲ್ಲ. ಮೊನ್ನೆ ಪುಸ್ತಕಗಳ ಧೂಳು ಜಾಡಿಸಲಿಕ್ಕೆ ಹೋಗಿ ಅಲರ್ಜಿಗಳ ಒಂದು ಆವರ್ತ ಅನುಭವಿಸಿದೆ. ನೀವು ನಂಬಲಿಕ್ಕಿಲ್ಲ. ಹುಬ್ಬಳ್ಳಿಯ ನೃಪತುಂಗ ಬೆಟ್ಟದ ಬಿಳಿ ಶಿಲೆಯ ಧೂಳು ನನಗೆ ಅಲರ್ಜನಕ. ಅದೇ ಬೆಟ್ಟದ ಹಳದಿ ಶಿಲೆಯ ಧೂಳನ್ನು ಮೂಸಿದರೂ ಪೂಸಿದರೂ ಮುಕ್ಕಿದರೂ ನನಗೆ ಏನೂ ಆಗೋದಿಲ್ಲ.

ಉದ್ದು ಹಾಕಿದ ಇಡ್ಲಿ ಮಾಡಿದರೆ ಅದಕ್ಕೆ ನಾನು ಅಲರ್ಜಿಕ್; ಅದೇ ಉದ್ದಿನಿಂದ ತೈರೊಡೆ ಮಾಡಿದರೆ ಅರ್ಧ ಡಜನ್ ಇಳಿಸಿದರೂ ಏನೂ ಆಗೋದಿಲ್ಲ. ಹೇಗಿದೆ ತಮಾಷೆ?

ಏನು? ಅಲರ್ಜಿಗಳಿಗೆ ಈಗ ಆಂಟೀಹಿಸ್ತಮೈನ್‌ಗಳು ಬಂದಿವೆ ಅಂತ ಹೇಳುತ್ತೀರಾ? ಹೆ ಹ್ಹೆ ಹ್ಹೆ! ನಂಗೊತ್ತಿಲ್ಲದ್ದೇ? ಆದರೆ ಅವುಗಳನ್ನು ನುಂಗಿದರೆ ಮನಸ್ಸು ಮಬ್ಬಾಗಿ ತೂಕಡಿಕೆ ಬರುತ್ತೆ ಅಂತ ನಿಮಗೆ ಗೊತ್ತಿಲ್ಲವೆ? ನನಗೆ ಮೊದಲೇ ನಿದ್ದೆ ಜಾಸ್ತಿ. ಹಸಿವಾದರೂ ನಿದ್ದೆ, ಊಟ ಮಾಡಿದರೂ ನಿದ್ದೆ. ಒಂದು ಸರ್ತಿ ನೆಗಡಿಗೆ ಒಂದು ಜತೆ ಇನ್ಸಿಡಾಲ್ ಗುಳಿಗೆ ನುಂಗಿ, ಅರ್ಜೆಂಟ್ ಕೆಲಸ ಇತ್ತು ಅಂತ ಹುಬ್ಬಳ್ಳಿಯಿಂದ ಧಾರವಾಡಕ್ಕೆ ಹೋಗೋ ಲೋಕಲ್ ರೈಲಿನಲ್ಲಿ ಕೂತೆ. ಯಾವಾಗ ನಿದ್ದೆ ಬಂತೋ ಗೊತ್ತಿಲ್ಲ. ಎಚ್ಚರವಾದಾಗ ನಾನು ಹುಬ್ಬಳ್ಳಿಯಲ್ಲೇ ಇದ್ದೇನೆ. ರೈಲು ಹೊರಟು ಉಣಕಲ್ ದಾಟಿದ್ದು ನನಗೆ ಖಂಡಿತ ನೆನಪಿದೆ. ಮತ್ತೆ ನಾನು ಇಲ್ಲಿಗೇ ಹೇಗೆ ಬಂದೆ? ಕಡೆಗೆ ಹೊಳೆಯಿತು: ನನ್ನ ಹೊತ್ತುಕೊಂಡು ರೈಲು ಧಾರವಾಡಕ್ಕೆ ಹೋಗಿ ಅಲ್ಲಿಂದ ಹುಬ್ಬಳ್ಳಿಗೆ ತಿರುಗಿ ಬಂದಿರಬೇಕು. ನನ್ನ ಅರ್ಜೆಂಟ್ ಕೆಲಸವನ್ನ ಮರುದಿನದ ಅರ್ಜೆಂಟುಗಳ ಪಟ್ಟಿಯಲ್ಲಿ ದಾಖಲು ಮಾಡಿ, ಟಿಕೇಟಿಲ್ಲದೆ ಸವಾರಿ ಮಾಡಿದ್ದಕ್ಕೆ ದಂಡ ತಪ್ಪಿಸಿಕೊಳ್ಳೋಕೆ, ಗೇಟಿನಿಂದ ಹೊರಗೆ ದಾಟೋ ಬದಲು ರೈಲು ಲೈನ್‌ಗುಂಟ ಒಂದೂವರೆ ಫರ್ಲಾಂಗು ನಡೆದು ರಸ್ತೆ ಸೇರಿ ಮನೆಗೆ ಹೋಗಿ ಮಲಗಿದೆ.

ಅಲರ್ಜಿಗಳಿಗೆ ಈಗ ಡೀಸೆನ್ಸಿಟೈಸೇಶನ್ ತಂತ್ರ ಕಂಡುಹಿಡಿದಿದ್ದಾರೆ ಅಂತಲೂ ನಂಗೊತ್ತಿದೆ ಸ್ವಾಮಿ. ಅಲರ್ಜಿಗಳ ವಿಷಯ ನಾನು ಓದದೆ ಇದ್ದದ್ದು ಏನೂ ಇಲ್ಲ. ನಿಮ್ಮ ಬೆನ್ನ ಮೇಲೆ ಕೆರೆದು ಅಲರ್ಜನಕ ಅಂತ ಗೊತ್ತಿರೋ ಒಂದೊಂದೇ ಪದಾರ್ಥದ ರೇಣುಗಳನ್ನ ಅದಕ್ಕೆ ತಾಗಿಸಿ, ಪ್ರತಿಕ್ರಿಯೆ ಆಗುತ್ತೋ ಅಂತ ನೋಡಿದರೆ ಯಾವುದಕ್ಕೆ ಪ್ರತಿಕ್ರಿಯೆ ಆಗುತ್ತೊ, ಅದಕ್ಕೆ ನೀವು ಸೆನ್ಸಿಟಿವ್ ಇದ್ದೀರಿ ಅಂತ ತಿಳಿಯುತ್ತೆ. ಅದಕ್ಕೆ ಆಮೇಲೆ ನಿಮ್ಮನ್ನ ಡೀಸೆನ್ಸಿಟೈಸ್ ಮಾಡುತ್ತಾರೆ—ಅಲ್ಲವೇ? ಆದರೆ ನನ್ನ ಅಲರ್ಜಿಗಳ ಮುಂದೆ ಇವರ ಆಟ ನಡೆಯಲ್ಲ. ಹೇಳುತ್ತೇನೆ ಕೇಳಿ:

ವಿರಹಿಗಳು ಬೆಳದಿಂಗಳಿಗೆ ಅಲರ್ಜಿಕ್ ಇರುತ್ತಾರೆ ಅಂತಲ್ಲವೇ ಕವಿಗಳು ಹೇಳೋದು? ನಾನು ಸೂರ್ಯನ ಬಿಸಿಲಿಗೆ ಅಲರ್ಜಿಕ್ ಆಗಿದ್ದೇನೆ. ಗಟ್ಟಿಯಾಗಿ ಎರಡು ನಿಮಿಷ ಬಿಸಿಲಲ್ಲಿ ನಿಂತರೆ, ಹ್ಯಾಗಿದ್ದೀ ಅಂತ ವಿಚಾರಿಸಲಿಕ್ಕೆ ಶೀನಪ್ಪ ಹಾಜರಾಗುತ್ತಾನೆ. ಅಲ್ಲಿಂದ ಮೈದಡಿಕೆ, ಅದರಿಂದ ಆಸ್ಮಾ, ಅನಂತರ ಉಲ್ಬಣಿತ ಎಗ್ಜಿಮಾ—ಹೀಗೆ ಒಂದು ಚೈನ್ ಮುಗಿಸಿ ವಾಪಸ್ಸು ನಾರ್ಮಲ್ಲಿಗೆ ಬರಬೇಕಾಗುತ್ತೆ. ಈಗ ಬಿಸಿಲಿಗೆ ಡೀ—ಸೆನ್ಸಿಟೈಸ್ ಮಾಡೋದು ಹೇಗೆ? ಸ್ವಲ್ಪ ಹೇಳಿ. ಅದೂ ಹೋಗಲಿ, ಪರೀಕ್ಷೇಲಿ ನಾಪಾಸ್ ಆಗೋದಕ್ಕೆ ಡೀಸೆನ್ಸಿಟೈಸ್ ಮಾಡೋಕೆ ಬರುತ್ತಾ? ಒಂದು ಸಲ, ನನ್ನ ಸ್ನೇಹಿತನ ಒಬ್ಬ ಮಗನ ನಂಬರು ಪರೀಕ್ಷೇಲಿ ಪಾಸಾದವರ ಪಟ್ಟಿಯಲ್ಲಿ ಇರಲಿಲ್ಲ. ನೋಡಲಿಕ್ಕೆ ಹುಡುಗ ನಿರಾಶೆಯನ್ನು ತುಂಬಾ ಧೈರ್ಯದಿಂದಲೇ ಎದುರಿಸಿದ. ಆದರೆ ಅರ್ಧ ಗಂಟೇಲಿ ಅವನ ಮೈಲಿ ತುರಿಕೆ

ಆರಂಭವಾಯಿತು. ಐದು ನಿಮಿಷದಲ್ಲಿ ಮೈಯೆಲ್ಲ ದಡಿಕೆ. ಹುಡುಗ ಕಂಗಾಲಾದ. ನನಗೆ ನೋಡಿ, ನೆರೆಯವರ ಮನೇಲಿ ಹೊಸ ಸೀರೆ ಬಂದರೆ, ನನ್ನ ಉಬ್ಬಸ ಅಥವಾ ಎಗ್ಜಿಮಾ ಉಲ್ಬಣಿಸುತ್ತೆ. ಪರೀಕ್ಷೇಲಿ ಯಾವನೋ ಮಂಗ ನನ್ನ ಪೇಪರಿಗೆ ಕಮ್ಮಿ ಮಾರ್ಕು ಹಾಕೋದರ ವಿರುದ್ಧ, ನೆರಮನೆಯವನಿಗೆ ಸಿಗೋ ಲಂಚದ ಹಣದಿಂದ ಅವನು ಹೆಂಡತಿಗೆ ಸೀರೆ ತರೋ ವಿರುದ್ಧ ನನ್ನನ್ನು ಡೀ—ಸೆನ್ಸಿಟೈಸ್ ಮಾಡೋ ಎಕ್ಸ್‌ಪರ್ಟುಗಳನ್ನ ನನಗೆ ತೋರಿಸಿಕೊಡಿ.

ಆದರೂ ನಾನೇ ಪುಣ್ಯ—ಅಲ್ಲ—ವಾಸಿ ಸ್ವಾಮಿ. ನನ್ನ ಗೆಳೆಯ ಒಬ್ಬ ಒಂದು ಹುಡುಗಿ ನೋಡಿ ಮೆಚ್ಚಿ ಮದುವೆ ಮಾಡಿಕೊಂಡ. ನಾಲ್ಕೈದು ರಾತ್ರಿಗಳ ನಂತರ ಅವನಿಗೆ ಎಂದೂ ಇಲ್ಲದಿದ್ದ ಉಬ್ಬಸ ಪ್ರಾಪ್ತವಾಯಿತು. ಬಡಪಾಯಿ ವರ್ಷಗಟ್ಟಳೆ ಒದ್ದಾಡಿದ. ಆಮೇಲೆ ಅವನ ಹೆಂಡತಿಗೆ ಅಪರೂಪಕ್ಕೆ ಬಸುರು ಬಂದು ಹಡೆಯಲಿಕ್ಕೆ ತವರಿಗೆ ಹೋದಳು. ಆ ಅವಧೀಲಿ ಅವನ ಆಸ್ತ್ಮಾ ಸ್ವಲ್ಪ ವಾಸಿಯಾಯಿತು. ಆದರೂ ಇವನಿಗೆ ಏನೂ ಸಂಶಯ ಬರಲಿಲ್ಲ. ಯಾಕೆಂದರೆ ನನಗೆ ಬಟಾಟೆ ಪಲ್ಯದ ಮೇಲೆ ಇರೋ ಹಾಗೆ ಅವನಿಗೂ ಹೆಂಡತೀ ಮೇಲೆ ಬಲು ಆಸೆ. ಅವಳು ನಾಲ್ಕು ದಿನ ತವರಿಗೆ ಹೋದರೆ ಚಡಪಡಿಸುತ್ತಾ ಇದ್ದ. ಆಗ ಆಸ್ತ್ಮಾ ಮಾತ್ರ ಸ್ವಲ್ಪ ವಾಸಿಯಾಗುತ್ತಾ ಇತ್ತು. ನನಗೆ ಬಟಾಟೆ ಪಲ್ಯ ಅಲರ್ಜನಕ ಅಂತ ತಿಳಿಯೋಕೆ ಎಷ್ಟೋ ವರ್ಷ ಹಿಡಿದ ಹಾಗೆ ಅವನಿಗೂ ಹೆಂಡತಿ ಅಲರ್ಜನಕಳಾಗಿದ್ದಾಳೆ ಅಂತ ತಿಳಿಯೋಕೆ ಹತ್ತು ವರ್ಷ ಕಾಲವೇ ಹಿಡಿಯಿತು. ನಿಮಗೆ ಯಾವುದು ಅಲರ್ಜನಕ ಅಂತ ಅನುಭವದಿಂದ ಕಂಡುಹಿಡಿದು ಅದನ್ನು ವರ್ಜಿಸೋದು ಅಲರ್ಜಿಯಿಂದ ತಪ್ಪಿಸಿಕೊಳ್ಳೋಕೆ ಒಳ್ಳೇ ಅಥವಾ ಒಂದೇ ಉಪಾಯ ಅಂತ ಡಾಕ್ಟರುಗಳು ಹೇಳುತ್ತಾರೆ. ನಾನು ಬಟಾಟೆ ಪಲ್ಯ ಬಿಡಬಹುದು. ಆದರೆ ನನ್ನ ಸ್ನೇಹಿತ ತನ್ನ ಪ್ರಿಯಳಾದ ಹೆಂಡತೀನ ಬಿಡಬೇಕೆ? ಈ ಪ್ರಶ್ನೆಗೆ ಉತ್ತರ ಕೊಡೋ ವಿಕ್ರಮಾದಿತ್ಯನ್ನ ಆತ ಹುಡುಕುತ್ತಾ ಇದ್ದಾನೆ.

❑

# ಚಂದ್ರಲೋಕಕ್ಕೇಕೆ ಹೋಗಬೇಕು?

ನೀವು ಚಂದ್ರಲೋಕಕ್ಕೆ ಅಥವಾ ಅದರಾಚೆಗೆ ಮತ್ತ್ಯಾವುದಾದರೂ ಲೋಕಕ್ಕೆ ಹೋಗಬಯಸುತ್ತಿದ್ದರೆ ಈಗಲೇ ನಿಮ್ಮ ಟಿಕೀಟಿನ ವಿಚಾರ ಮಾಡುವುದೊಳಿತು—ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಸೇರಲು ಅಣಿಯಾಗುವುದು ಹಿತಕರ. ಚಂದ್ರಲೋಕವನ್ನು ಮೊದಲು ಮುಟ್ಟುವವರು ಅಮೇರಿಕನ್ನರಾಗುವ ಸಂಭವ ಕಡಿಮೆ, ರಶಿಯನ್ನರಾಗುವ ಸಂಭವ ಹೆಚ್ಚೆಂದು ಕಾಣುತ್ತದೆ. ನೀವು ಕೆಂಪು ಬಾವುಟವನ್ನು ಮೆಚ್ಚದಿರಬಹುದು; ಅದರೊಳಗಿರುವ ಕುಡುಗೋಲು ಕೊಡತಿಗಳು ನಿಮಗೆ ಇನ್ನೂ ಕಡಿಮೆ ಇಷ್ಟವಾಗಿರಬಹುದು. ಆದರೆ ನಿಮಗೆ ಚಂದ್ರಲೋಕಕ್ಕೆ ಹೋಗುವ ಆಸೆಯಿದ್ದರೆ ಅವುಗಳನ್ನು ಪ್ರೀತಿಸಲು ಕಲಿಯದೆ ನಿವೃತ್ತಿಯಿಲ್ಲ. ಏಕೆಂದರೆ ರಶಿಯನ್ನರು ಕಮ್ಯುನಿಸ್ಟರಲ್ಲದವರಿಗೆ ಟಿಕೀಟು ಕೊಡುವ ಸಂಭವವಿಲ್ಲ. ಅಷ್ಟೇಕೆ, ಎರಡನೇ ಸ್ಪುಟ್ನಿಕ್ ಕೃತಕ ಚಂದ್ರದಲ್ಲಿಟ್ಟು ಕಳಿಸಿದ ಲಾಯಕಾ ನಾಯಿಯನ್ನು ಕೂಡ ಸಂಪೂರ್ಣ ಕಮ್ಯುನಿಸ್ಟಾಗಿ ತರಬೇತಿಗೊಳಿಸಿಯೇ ಆಕಾಶಕ್ಕೆ ಹಾರಿಸಲಾಗಿದೆಯೆಂದು ವಿದಿತ ವರ್ಗಗಳ ಅಭಿಪ್ರಾಯವಾಗಿದೆ. ರಶಿಯನ್ನರ ಆಕಾಶ ಬಾಣದಲ್ಲಿ ಕೂತು ನೀವು ಇನ್ನು ಕೆಲವೇ ವರ್ಷಗಳಲ್ಲಿ ಚಂದ್ರಲೋಕಕ್ಕೆ ಹೋಗಬಹುದು. ದಾರಿಯಲ್ಲಿ ಏನಾದರೂ ಅವಘಡವಾದರೆ ಸ್ವರ್ಗಲೋಕವಂತೂ ಇದ್ದೇ ಇದೆ. ನೀವು ಪಂಚಮಹಾಪಾತಕ ಮಾಡಿದವರಾದರೂ ನರಕಲೋಕದ ಭಯ ಅಲ್ಲಿ ನಿಮ್ಮನ್ನು ತಟ್ಟದು. ಏಕೆಂದರೆ ಭೂಮಿಯಿಂದ ನರಕಲೋಕ ಹತ್ತಿರ—ನಮ್ಮ ಕಾಲ ಕೆಳಗೇ ಅದು ಇದೆ. ಆದರೆ ಚಂದ್ರಲೋಕ ಊರ್ಧ್ವಲೋಕ. ಅಲ್ಲಿಂದ ಸ್ವರ್ಗವೇ ಹತ್ತಿರ. ನಿಮ್ಮ ಆಕಾಶಬಾಣ ದಾರಿತಪ್ಪಿದರೆ ಅದು ವೈಕುಂಠಲೋಕದಲ್ಲಿ ಹೋಗಿ ಇಳಿದು ಬಿಡುವ ಸಂಭವವೂ ಇದೆ.

* * *

ಚಂದ್ರಲೋಕಕ್ಕೆ ಹೋಗುವುದರಿಂದ ಲಾಭವೇನು? ಎಂದು ನೀವು ಕೇಳುತ್ತೀರಿ ಇದು ಅನಾರ್ಯಪ್ರಶ್ನೆಯೆಂದು ಹೇಳಬೇಕಾಗುತ್ತದೆ. ಭಾರತೀಯರು ಈ ಭೂಮಿಯಲ್ಲಿ ಭರತವರ್ಷವೇ ಶ್ರೇಷ್ಠ ಅದು ಧರ್ಮಕ್ಷೇತ್ರ ಎಂದೆಲ್ಲ ಹೇಳಿಕೊಂಡಿರುವುದು ಸತ್ಯ. ಆದರೂ ಅವರು ಈ ಶ್ರೇಷ್ಠವಾದ ಧರ್ಮಕರ್ಮಕ್ಷೇತ್ರವನ್ನು ಕೂಡ ಎಂದೂ ಮೆಚ್ಚಿಕೊಂಡಿಲ್ಲ. ಯಾವಾಗಲೂ ಭೂಲೋಕದಿಂದ ಹೊರಟುಹೋಗುವುದೇ ಅವರ ಆತುರವಾಗಿತ್ತು. ಕೆಲವರು ಕೈಲಾಸಲೋಕಕ್ಕೆ, ಕೆಲವರು ವೈಕುಂಠ ಲೋಕಕ್ಕೆ ಮತ್ತುಳಿದವರು ಇಂದ್ರಲೋಕಕ್ಕೆ ಹೋಗುವ ಅಭೀಷ್ಟದಿಂದ

ಎಷ್ಟು ಕಾತರರಾಗಿದ್ದರೆಂದರೆ ಈ ಲೋಕದ ಅನ್ನ ಅವರಿಗೆ ಎಂದೂ ಸರಿಯಾಗಿ ಇಳಿಯುತ್ತಿರಲಿಲ್ಲ. ಭೂಮಿಯ ಬಯಕೆ, ಭೂಮಿಯ ಬಾಳು ಯಾವಾಗಲೂ ಅನಿಷ್ಟ, ಪಾಪಕರವೆಂದು ನಮ್ಮವರು ನಂಬುತ್ತ ಬಂದಿದ್ದಾರೆ. ಬ್ರಿಟಿಷ್ ಜನರು ಎಲ್ಲಿ ಹೋದರೂ ತಮ್ಮ ಬ್ರಿಟಿಷ್ ನಾಗರಿಕತ್ವವನ್ನು ನೆಚ್ಚಿಕೊಂಡು ಪ್ರತ್ಯೇಕ ವರ್ಗವಾಗಿರುವ ಹಾಗೆ ನಾವು ಕೂಡ ಇಹಲೋಕದಲ್ಲಿದ್ದರೂ ನಿಜವಾಗಿ ಪರಲೋಕದ ನಾಗರಿಕರೆಂದೇ ಬಗೆಯುತ್ತ ಬಂದಿದ್ದೇವೆ. ಆದ್ದರಿಂದ ಈ ಭೂಲೋಕ ಹೊರತು ಬೇರಾವ ಲೋಕಕ್ಕೆ ಹೋಗುವುದೇ ಭಾರತೀಯತ್ವದ ಹೆಗ್ಗುರುತು.

* * *

ನೀವು ಚಂದ್ರಲೋಕಕ್ಕೆ ಹೋಗುವುದೇ ಆದರೆ ಅಲ್ಲಿನ ಭೂಗೋಲ ಮೊದಲಾದ ಸಂಗತಿಗಳನ್ನು ಸ್ವಲ್ಪವಾದರೂ ಅರಿತಿರುವುದು ಒಳ್ಳೇದು. ನಮ್ಮ ಪುರಾಣಗಳಲ್ಲಿ ಇಂದ್ರಲೋಕ, ವೈಕುಂಠ, ಕೈಲಾಸಾದಿಗಳ ತಕ್ಕಮಟ್ಟಿನ ಭೌಗೋಲಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ವಿವರಗಳಿವೆ. ಉದಾಹರಣೆಗೆ ಇಂದ್ರಲೋಕದಲ್ಲಿ ಒಂದು ನಂದನವನವಿದೆ. ಅದರಲ್ಲಿ ಕಲ್ಪವೃಕ್ಷ, ಮಂದಾರ, ಪಾರಿಜಾತ, ಮೊದಲಾದ ತರುಲತಾಗುಲ್ಮಾದಿಗಳೂ ಸುರನದಿಯೂ ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿಯೊಬ್ಬನಿಗೆ ಕನಿಷ್ಠ ಒಬ್ಬಳಾದರೂ ಅಪ್ಸರೆಯೂ ಇರುವರು. ಈ ಕೊನೆಯ ಸಂಗತಿಯು ಅನೇಕರನ್ನು ಸ್ವರ್ಗಕ್ಕೆ ಆಕರ್ಷಿಸಿದ ಮುಖ್ಯ ಆಶೆಯಾಗಿತ್ತು. ಆದರೆ ಇಂದ್ರಲೋಕದ ನೈತಿಕ ಆಚಾರಗಳು ಮಾತ್ರ ಅಷ್ಟು ಪರಿಶುದ್ಧವಾಗಿಲ್ಲವೆಂದೂ ಅಲ್ಲಿ ಒಬ್ಬನಿಗೆ ಹಲವು ಹೆಂಡಂದಿರೂ ಹಲವರಿಗೆ ಒಬ್ಬ ಹೆಂಡತಿಯೂ ಇರುವ ಜಘನ್ಯವಾದ ಸಾಮಾಜಿಕ ವ್ಯವಸ್ಥೆ ಇದೆಯೆಂದೂ ಪಂಡಿತ ಸಾತವಳೇಕರರು ನಮಗೆ ಹೇಳುತ್ತಾರೆ. ಅಲ್ಲಿಯ ಆಹಾರಪರಿಸ್ಥಿತಿ ಇದಕ್ಕಿಂತಲೂ ನಿಕೃಷ್ಟವಾಗಿದೆಯೆಂದು ಅದೇ ವಿದ್ವಾಂಸರ ಅಭಿಪ್ರಾಯ. ಲಾಂಗೂಲಾಚಾರ್ಯರಿಗೆ ಇದು ನಂಬಲರ್ಹವಾದುದೆಂದು ಅನಿಸಿದೆ. ಯಾಕೆಂದರೆ ಯಜ್ಞಮೂಲಕವಾಗಿ ಇಂದ್ರಾದಿ ದೇವತೆಗಳಿಗೂ ಪಿಂಡೋದಕಾದಿಗಳ ಮೂಲಕ ಇಲ್ಲಿಂದ ಹೋಗುವವರಿಗೂ ನಾವು ಆಹಾರ ಪೂರೈಕೆ ಮಾಡುವ ಅಗತ್ಯವನ್ನು ಸ್ಮೃತಿಗಳು ನಮಗೆ ಒತ್ತಾಯದಿಂದ ತಿಳಿಸಿವೆ. ಈ ಕಾರಣದಿಂದ ಉತ್ಸಾಹಗೆಟ್ಟವರೂ ಸ್ತ್ರೀಯರ ವಿಷಯದಲ್ಲಿ ವಿಶೇಷ ಸಾಫಲ್ಯ ಪಡೆಯದವರೂ ಸೇರಿ ಸ್ವರ್ಗಹೀಗಳೆದು ಆಹಾರ ಪರಿಸ್ಥಿತಿ ಚೆನ್ನಾಗಿರುವ ಮತ್ತು ಹೆಚ್ಚು ಪಾತಿವ್ರತ್ಯ ಪ್ರಚುರವಾಗಿರುವಂಥ ಇತರ ಪರಲೋಕಗಳ ಪರವಾಗಿ ಪ್ರಚಾರಮಾಡಿದುದರಿಂದ ಇಂದ್ರಲೋಕವು ಜನಪ್ರಿಯತೆಯನ್ನು ಕಳೆದುಕೊಂಡಿತೆಂದೂ ತಿಳಿದುಬರುತ್ತದೆ.

ಇಂದ್ರಾದಿ ಲೋಕಗಳ ವಿಷಯದಲ್ಲಿ ಇಷ್ಟು ವಿವರಗಳು ನಮ್ಮ ಪುರಾತನ ಗ್ರಂಥಗಳಲ್ಲಿದ್ದರೂ ಚಂದ್ರಲೋಕವನ್ನು ಕುರಿತು ವಿಶೇಷ ಮಾಹಿತಿ ಅವುಗಳಲ್ಲಿಲ್ಲದಿರುವುದು ವಿಷಾದಕರ. ಆದರೆ ಅದರಿಂದ ನಾವು ನಿರಾಶರಾಗಬೇಕಾಗಿಲ್ಲ. ವಿಜ್ಞಾನಪುರಾಣವು ಚಂದ್ರಲೋಕದ ಭೂಗೋಲ ಹವಾಮಾನಾದಿಗಳನ್ನು ಕುರಿತು ನಮಗೆ ಸಾಕಷ್ಟು ವಿವರಗಳನ್ನು

ಒದಗಿಸುತ್ತದೆ ಆ ಲೋಕವು ನಮ್ಮ ಭೂಮಿಯಿಂದ ಸುಮಾರು ೨,೪೦,೦೦೦ ಮೈಲು ದೂರವಾಗಿದೆ. ನಿಮ್ಮ ಆಕಾಶಬಾಣವು ತಾಸಿಗೆ ೨೫,೦೦೦ ಮೈಲು ವೇಗದಿಂದ ಹಾರುತ್ತಿರುವ ಮೂಲಕ ಸುಮಾರು ೧೦ ತಾಸುಗಳಲ್ಲಿ ನೀವು ಇಲ್ಲಿಂದ ಚಂದ್ರಲೋಕಕ್ಕೆ ಹೋಗಬಲ್ಲಿರಿ. ಅಂದರೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ ನಮ್ಮ ಲಟಿಪಟಿ ದಕ್ಷಿಣ ರೈಲ್ವೆ ಗಾಡಿಯಿಂದ ಹೋಗುವುದಕ್ಕಿಂತಲೂ ಚಂದ್ರಲೋಕಕ್ಕೆ ಹೋಗುವುದು ಸುಲಭವೆಂದಾಯಿತು.

* * *

ಚಂದ್ರಲೋಕಕ್ಕೆ ಹೋದಾಗ ನಿಮಗೆ ಮೊದಲು ಮನಸೆಳೆಯುವ ಸಂಗತಿಯೆಂದರೆ ಅಲ್ಲಿ ಅರಣ್ಯಗಳಾಗಲಿ, ಸಸ್ಯಗಳಾಗಲಿ ಇಲ್ಲದಿರುವುದು. ಇದರಿಂದ ಅಲ್ಲಿನ ಆಹಾರ ಪರಿಸ್ಥಿತಿ ಸಾತವಳೇಕರರು ಹೇಳುವ ಇಂದ್ರಲೋಕದ ಪರಿಸ್ಥಿತಿಗಿಂತ ಉತ್ತಮವಾಗಿಲ್ಲೆಂದು ಸ್ವಯಂ ವ್ಯಕ್ತವಾಗುವುದು. ಆದರೆ ಇದರಿಂದ ಅವಗುಣ ಮಾತ್ರ ಇದೆಯೆಂದು ತಿಳಿಯಬಾರದು. ಭೂಮಿಯಲ್ಲಿ ಮಾಡಿದಂತೆ ನಾವು ಅರಣ್ಯಗಳನ್ನು ಕಡಿದು ಹೊಸದಾಗಿ ಬಂಜರು ಭೂಮಿಗಳನ್ನುತ್ಪಾದಿಸುವ ಶ್ರಮ ಅಲ್ಲಿಲ್ಲ. ನಿಮಗೆ ಬೇಕಾದ ಆಹಾರವನ್ನು ನೀವು ಭೂಲೋಕದಿಂದ ಆಯಾತ ಮಾಡಿಕೊಳ್ಳಬಹುದು. ಆಹಾರವನ್ನಷ್ಟೇ ಅಲ್ಲ, ನೀರು ಗಾಳಿಗಳನ್ನೂ ನೀವು ಒಯ್ಯಬೇಕಾಗುವುದು. ಯಾಕೆಂದರೆ ಚಂದ್ರಲೋಕದಲ್ಲಿ ಗಾಳಿಯೇ ಇಲ್ಲ. ಇದು ಚಂದ್ರಲೋಕದ ಒಂದು ಆಕರ್ಷಕ ಅಂಶವೆಂದು ಲಾಂಗೂಲಾಚಾರ್ಯರ ಮತ. ಗಾಳಿಯಿಲ್ಲವೆಂದ ಮೇಲೆ ಶಬ್ದವಿಲ್ಲ. ಅಂದರೆ ರಾಜಕಾರಣಿಗಳು ದಿನನಿತ್ಯ, ಭಾಷಣ ಮಾಡಿ ನಿಮ್ಮ ತಲೆಚಿಟ್ಟೇರಿಸುವ ಭಯ ಅಲ್ಲಿಲ್ಲ. ಇಷ್ಟೇ ಅಲ್ಲ, ದಾಂಪತ್ಯ ಜೀವನಕ್ಕೆ ಅದು ಆದರ್ಶ ಸ್ಥಾನವೆಂದು ಹೇಳಲಡ್ಡಿಯಿಲ್ಲ. ಏಕೆಂದರೆ ನಿಮ್ಮ ಶ್ರೀಮತಿಯವರು ನಿಮ್ಮನ್ನಷ್ಟೇ ವಾಗ್ಬಾಣಗಳಿಂದ ನೋಯಿಸಲು ಯತ್ನಿಸಿದರೂ ಅದು ನಿರರ್ಥಕವಾಗುವುದು. ನೀವು ಅವರ ತುಟಿಗಳು ಚಲಿಸುವುದನ್ನಷ್ಟೇ ಕಾಣುವಿರಿ ಮತ್ತು ನಿಶ್ಶಬ್ದವಾಗಿ ಚಲಿಸುವ ನಾರಿಯ ಅಧರಗಳು ಅತ್ಯಂತ ಮನೋಹರವಾಗಿರಬಲ್ಲವು.

* * *

ಚಂದ್ರಲೋಕದ ಇನ್ನೊಂದು ವೈಶಿಷ್ಟ್ಯವೆಂದರೆ ಅಲ್ಲಿ ನಿಮಗೆ ನೀವು ಬಲು ಹಗುರವಾಗಿ ಕಾಣುವಿರಿ ವಾಸ್ತವಿಕವಾಗಿ ಅದು ಹೈಜಂಪ್ ಆಟಕ್ಕೆ ಆದರ್ಶ ಸ್ಥಳ ಭೂಮಿಯಲ್ಲಿ ಏಳು ಫೂಟೆತ್ತರಕ್ಕೆ ಹಾರಬಲ್ಲ ಹೈಜಂಪ್ ಚಾಂಪಿಯನ್ ಅಲ್ಲಿ ನಲವತ್ತಡಿ ಹಾರಬಲ್ಲ. ತಮ್ಮ ಮೈಯೆ ತಮಗೆ ಭಾರವಾದವರು ಚಂದ್ರಲೋಕದಲ್ಲಿ ಅತಿ ಸುಖವಾಗಿ ವಾಸಿಸಬಹುದು. "ನೀ ಹಾರಬಲ್ಲೆಯಾ ನಾನೇರುವೆತ್ತರಕೆ?" ಎಂದು ಕುವೆಂಪುಕೊಟ್ಟ ಚಾಲೇಂಜನ್ನು ನೀವು ಚಂದ್ರಲೋಕಕ್ಕೆ ಹೋಗಿ ಖಂಡಿತವಾಗಿ ಸ್ವೀಕರಿಸಬಲ್ಲಿರಿ. ಅಲ್ಲಿ ಪ್ರತಿಯೊಬ್ಬನೂ ಫುಟ್‌ಬಾಲಿನಂತೆ ಪುಟನೆಗೆಯುತ್ತ ಸಾಗಬಹುದಾಗಿದೆ. ಇಂಥ ಲೋಕದಲ್ಲಿ ಸುಖವಾಗಿ ಬಾಳಲು ಏನು ಆತಂಕ ಹೇಳಿ?

❑

# ಸಂತೋಷ ಘಾತಕರು

ಮಾನವ ಸಂತೋಷದ ಪರಮಶತ್ರುಗಳೆಂದರೆ ವಿಜ್ಞಾನಿಗಳೆಂದು ಲಾಂಗೂಲಾಚಾರ್ಯರ ಮತ. ಪರಮಾಣುಬಾಂಬು ಮತ್ತು ಹೈಡ್ರೋಜಿನ ಬಾಂಬಿನಂಥ ಶಸ್ತ್ರಾಸ್ತ್ರಗಳನ್ನು ನಿರ್ಮಿಸಿದರೆಂದಲ್ಲ. ಬಹುಶಃ ಇವು ಅವರ ಅತ್ಯಂತ ಕಡಿಮೆ ಹಾನಿಕರ ಕೃತ್ಯಗಳೆಂದು ಹೇಳಬಹುದು. ಯಾಕೆಂದರೆ ಅವು ವಿಜ್ಞಾನಿಗಳ ಈವರೆಗಿನ ಎಲ್ಲ ತಪ್ಪುಗಳನ್ನು ಅಳಿಸಿಬಿಡಬಹುದಾದ್ದರಿಂದ ಅವು ಸ್ವಾಗತಾರ್ಹವೆನಿಸಲೂಬಹುದು. ಅವರ ಮೇಲೆ ಲಾಂಗೂಲಾಚಾರ್ಯರ ಮುಖ್ಯ ಆರೋಪವೆಂದರೆ, ಬಡ ಮನುಷ್ಯ ಪ್ರಾಣಿಯ ಚಿಕ್ಕಪುಟ್ಟ ಸಂತೋಷಗಳನ್ನು ದಿನಬೆಳಗಾದರೆ ವಿಜ್ಞಾನಿಗಳು ಕಸಿದುಕೊಳ್ಳುತ್ತಾರೆ; ಅವನ ಮೋಹದ ಕಲ್ಪನೆ ನಂಬಿಕೆಗಳ ಸಾಬೂನುಗುಳ್ಳೆಗಳಿಗೆ ಸೂಜಿ ಚುಚ್ಚುತ್ತಾರೆ. ನಾವು ನಮ್ಮ ಜೀವನದ ಏಕಮಾತ್ರ ಶೇಷ ಮನೋರಂಜನೆಯಾದ ಸಿಗರೇಟನ್ನು ಸೇದುತ್ತ ಆನಂದತುಂದಿಲರಾಗಿ ಕುಳಿತಿರುವುದನ್ನು ಕಂಡನೋ, ಸತ್ತ ಇಲಿಯೊಂದನ್ನು ನಮ್ಮ ಮೇಲೆ ಎಸೆಯುತ್ತಾನೆ ವಿಜ್ಞಾನಿ. ನಾವು ಬೆಚ್ಚಿ ಬಿದ್ದು ನೋಡುತ್ತಿರುವಂತೆಯೇ ಅವನು ಆ ಮೂಷಿಕ ಶವವನ್ನು ಬಾಲದಿಂದೆತ್ತಿ "ನೋಡು ಸಿಗರೇಟಿನ ಫಲ!" ಎನ್ನುತ್ತಾನೆ. ನಾವು ಏನೂ ತಿಳಿಯದೆ ಮಿಕಿಮಿಕಿ ನೋಡುತ್ತಿರುವಾಗ ಅವನು ಅದರ ತಾರುಬಳಿದ ಮೈಯನ್ನು ತೋರಿಸಿ, "ನೋಡು, ಒಂದು ವರ್ಷದಿಂದ ಈ ಇಲಿಯ ಮೈಗೆ ಸಿಗರೇಟ್ ಹೊಗೆಯತಾರು ಬಳಿಯುತ್ತ ಬಂದಿದ್ದೇನೆ. ಹನ್ನೊಂದು ತಿಂಗಳು ಹದಿಮೂರು ದಿನ ಎಂಟು ತಾಸು ಹದಿನೈದೂ ಕಾಲು ನಿಮಿಷಗಳಷ್ಟು ಹೊತ್ತಿಗೆ ಇದರ ಮೈಯಲ್ಲಿ ಕ್ಯಾನ್ಸರ್ ಹುಣ್ಣು ಎದ್ದಿತು. ಮೂರುನೂರ ಅರುವತ್ತೈದನೇ ದಿನ ಸರಿಯಾಗಿ ರಾತ್ರಿ ಹನ್ನೆರಡು ಹೊಡೆಯುವಾಗ ಈ ಮೂಷಕೇಶ್ವರನು ಗಣೇಶನ ಪಾದ ಸೇರಿದನು" ಎಂದು ಹೇಳುತ್ತಾನೆ. ಮತ್ತೆ ನಮ್ಮನ್ನು ಸಮಾಧಾನಪಡಿಸಲೋ ಎಂಬಂತೆ, ತನ್ನ ವೈಜ್ಞಾನಿಕ ನಿರ್ಲಿಪ್ತಿಯಿಂದ, "ನೂರಕ್ಕೆ ತೊಂಭತ್ತೇಳೂವರೆ ಇಲಿಗಳಲ್ಲಿ ಸಿಗರೇಟು ತಾರಿನಿಂದ ಕ್ಯಾನ್ಸರ್ ರೋಗ ಉಂಟಾಗುತ್ತದೆ. ಎರಡೂವರೆ ಇಲಿಗಳು ನಿರ್ಲಿಪ್ತವಾಗಿದ್ದವು. ಮೇಲಾಗಿ ನಾವಿನ್ನೂ ಯಾವ ಮನುಷ್ಯನ ಗಂಟಲಿಗೂ ಈ ತಾರನ್ನು ಸತತ ಬಳಿದು ನೋಡಿಲ್ಲ. ಇಲಿಗಳಿಗೆ ಆದದ್ದು ಮನುಷ್ಯನಿಗಾಗಬೇಕೆಂಬ ನಿಯಮವಿಲ್ಲ. ಆದರೂ—" ಎಂದು ಹೇಳಿ ವಿಜ್ಞಾನಿ ಕೈತೊಳೆದುಕೊಂಡವನಂತೆ ಅಲ್ಲಿಂದ ಅಂತರ್ಧಾನನಾಗುತ್ತಾನೆ.

* * *

ವಿಜ್ಞಾನಿಯ ಮಾತಿಗೆ ಅಂಜಿ ನಾವು ಸಿಗರೇಟು ಬಿಡುತ್ತೇವೆಂದಲ್ಲ. ನಾವು ನಮ್ಮ ಚೈನ್ ಸ್ಮೋಕಿಂಗನ್ನು ಯಥಾಪ್ರಕಾರ ನಡೆಸುತ್ತಲೇ ಹೋಗಿ ನಾವು ಕ್ಯಾನ್ಸರಿಗಾಗಲಿ ಯಮಧರ್ಮನಿಗಾಗಲಿ ಸೊಪ್ಪು ಹಾಕುವವರಲ್ಲೆಂದು ತೋರಿಸುತ್ತೇವೆ. ಆದರೆ ಸಿಗರೇಟು ಸೇದುವದರಲ್ಲಿ ನಮಗಿದ್ದ ಆನಂದ ಮಾತ್ರ ಅಲ್ಲಿಗೆ ಮುಕ್ತಾಯವಾಗುವುದು. ಪ್ರತಿಯೊಂದು ಸಿಗರೇಟು ಹೊತ್ತಿಸಿ ತುಟಿಯ ಹತ್ತಿರ ತರುವಾಗಲೂ ನಮ್ಮ ಕಣ್ಮುಂದೆ ಆ ಸತ್ತ ಇಲಿ; ಅದರ ಮೈಮೇಲಿನ ಕೃಷ್ಣಲೇಪ; ಅದರೊಳಗಿನ ಹುಣ್ಣು; ಅದರ ಹಿನ್ನೆಲೆಯಲ್ಲಿ ನಮ್ಮ ಸ್ವಂತ ಹೆಣ ಮತ್ತು ನಮ್ಮ ಹೆಂಡತಿ ಮಕ್ಕಳು ಭಿಕ್ಷೆಬೇಡುವ ಅಸ್ಪಷ್ಟ ದೃಶ್ಯ ದಿಗ್ಗೆಂದು ಪ್ರತ್ಯಕ್ಷವಾಗುವುದು ಮತ್ತು ನಾವು ಅವಡುಕಚ್ಚಿ ಇನ್ನಷ್ಟು ರಭಸದಿಂದ ಸಿಗರೇಟಿನ ಹೊಗೆಯನ್ನೆಳೆದುಕೊಳ್ಳುತ್ತೇವೆ. ಅದೇ ರೀತಿ, ಕಾಲಿದಾಸ ಹೇಳಿದಂತೆ ನಮ್ಮ ಪ್ರಿಯತಮೆಯನ್ನೂ ಪ್ರಜಾಪತಿಯು ಚಂದ್ರನ ಕಾಂತಿಯೇ ಮೊದಲಾದ ಉದಾತ್ತ ವಸ್ತುಗಳನ್ನು ಜೋಡಿಸಿ ಎಕರಹೊಯ್ದಿದ್ದಾನೆಂದು ನಾವು ಹಿಗ್ಗುತ್ತಿರುವಾಗ ವಿಜ್ಞಾನಿ ನಮಗೆ ಈ ಸುಂದರ ಮನುಷ್ಯ ರೂಪವು ಮರ್ಕಟೇಂದ್ರ ರಮಣಿಯ ಶರೀರವನ್ನೆ ಕೆಲಭಾಗ ಕಳೆದು ಕೆಲ ಪ್ರದೇಶವನ್ನು ಹಿಗ್ಗಿಸಿ ಉಂಟು ಮಾಡಿದ್ದೆಂದು ಹೇಳಿಬಿಡುತ್ತಾನೆ. ಅಂದಾಕ್ಷಣ ನಾವು ಮುಂದೆ ನಮ್ಮ ಪ್ರಿಯತಮೆಯನ್ನು ಕಿರಿಬೆರಳಿಂದಲೂ ಮುಟ್ಟುವುದಿಲ್ಲೆಂದಲ್ಲ! ಆದರೆ ಮುಂದೆ ಅವಳ ಚೆಲುವನ್ನು ನೆನೆದಾಗೆಲ್ಲ ಹಿನ್ನೆಲೆಯಲ್ಲಿ ಹೊಟ್ಟೆಗೆ ಮರಿಯನ್ನವಚಿಕೊಂಡು ಅಂತರ್‌ವೃಕ್ಷ ಸಂಪರ್ಕ ಬೆಳೆಸುತ್ತಿರುವ ಆ ನಮ್ಮ ಮುತ್ತಜ್ಜಿಯ ಚಿತ್ರ ಮಿಂಚಿ ಹೋಗತೊಡಗುತ್ತದೆ. ಮತ್ತು ಕಾಳಿದಾಸನ "ಅಸ್ಯಾಃ ಸರ್ಗವಿಧೌಪ್ರಜಾಪತಿ" ಶ್ಲೋಕವನ್ನೋದಿದಾಗಲೆಲ್ಲ ಮುಗ್ಧರಾಗುವ ಬದಲು ನಾವು ತಿರಸ್ಕಾರಭಾವವನ್ನು ತಾಳತೊಡಗುತ್ತೇವೆ.

* * *

ಯಾಕೆ ಬಂತೂ ಅಂತ ಕೇಳಿದರೆ, ನಮ್ಮ ಫ್ಯಾಶನ್ ರಮಣಿಯರು ಹಚ್ಚಿಕೊಳ್ಳುವ ಪೌಡರ್, ತಗಲಿಸುವ ಲಿಪ್‌ಸ್ಟಿಕ್, ಧರಿಸುವ ಪಳಪಳ ಕೃತಕ ರೇಶ್ಮೆ ಇವೆಲ್ಲವೂ ಚರ್ಮರೋಗಗಳ ಮತ್ತು ಉಬ್ಬಸ ರೋಗದಾಗರಗಳೆಂದು ಇದೀಗ ಒಬ್ಬಳು ಜರ್ಮನ್ ಆರೋಗ್ಯ ವಿಜ್ಞಾನಿ ಕಂಡು ಹಿಡಿದು ಮಹಿಳಾಲೋಕಕ್ಕೆ ಎಚ್ಚರಿಕೆ ಕೊಟ್ಟಿದ್ದಾಳೆ. ಈವರೆಗೆ ಲಾಂಗೂಲಾಚಾರ್ಯರಿಗೆ ತಿಳಿದಿದ್ದ ಮಟ್ಟಿಗೆ ನಲ್ಲೆಯರು ಹಚ್ಚಿಕೊಳ್ಳುತ್ತಿರುವ ತುಟಿಗೆಂಪು ಇಲ್ಲವೆ ಲಿಪ್‌ಸ್ಟಿಕ್ಕಿನಲ್ಲಿ ಒಂದೇ ದೋಷವಿತ್ತು. ಅದೆಂದರೆ ಆ ತುಟಿಗಳನ್ನು, ಅವುಗಳ ಏಕಮಾತ್ರ ಸಾರ್ಥಕಕಾರ್ಯದಲ್ಲಿ ಉಪಯೋಗಿಸಿದರೆ, ಉಪಯೋಗಿಸಿದವನ ಮೇಲೆ ಲಿಪ್‌ಸ್ಟಿಕ್ ತನ್ನ ಗಾಢವಾದ ಮಾತ್ರವಲ್ಲ ಪ್ರತ್ಯತ್ರವಾದ ಮುದ್ರೆಯೊತ್ತಿ ಸಾಕ್ಷಿ ಹೇಳುತ್ತದೆ. ಆದರೆ ಇದು ಅಷ್ಟು ಅನಿಷ್ಟವಾಗಲಿ ಗಂಭೀರವಾಗಲಿ ಆದ ದೋಷವಾಗಿದ್ದಿಲ್ಲ. ಆದರೆ ಜರ್ಮನ್ ವಿಜ್ಞಾನಿ ಮಹಿಳೆಯ ಶೋಧ ಹೊರಬಿದ್ದ ಮೇಲೆ ಮಾತು ಬೇರೆಯೇ ಆಗುವುದು. ಲಿಪ್‌ಸ್ಟಿಕ್ ಪೌಡರುಗಳು ಅವುಗಳನ್ನು ಉಪಯೋಗಿಸುವ ಪಾತರಗಿತ್ತಿಗಳಿಗೆ

ಮಾತ್ರವಲ್ಲ, ಆ ಪಾತರಗಿತ್ತಿಗಳು ಇಳಿಯುವನಿರಪರಾಧಿ ಹೊಗಳಿಗೂ ಅಪಾಯಕರವೆನಿಸುತ್ತವೆ. ನಾವು ಒಂದು ಕ್ಯಾನ್ಸರ್ ಹುಣ್ಣನ್ನು ನಿರ್ಭಯವಾಗಿ ಆಮಂತ್ರಿಸುವ ಧೀರ-ಧೀರೆಯರಾಗಿರ ಬಹುದು; ಆದರೆ ತುಟಿಯ ಮೇಲೊಂದು ಚರ್ಮರೋಗಕ್ಕೋ ಗಂಟಲಿಗೊಂದು ಉಬ್ಬಸಕ್ಕೋ ಆಶ್ರಯವೀಯಲಣಿಯಾದ ದಿಟ್ಟ-ದಿಟ್ಟೆಯರು ಯಾರೂ ಇರಲಾರರು. ತುಟಿಯ ಚರ್ಮವಿಕಾರವನ್ನು ಹೆಚ್ಚು ತುಟಿಗೆಂಪಿನಿಂದಲೂ ಮುಖದ್ದನ್ನು ಇನ್ನೊಂದು ಪದರು ಪೌಡರಿನಿಂದಲೂ ಮುಚ್ಚಿಕೊಳ್ಳಬಹುದೆಂಬ ಒಂದು ಆಶಾದಾಯಕ ಮಾರ್ಗವಿದೆ ಯೆಂಬುದು ನಿಜವಾದರೂ ಜರ್ಮನ್ ಮಹಿಳೆಯ ಸಂಶೋಧನೆಯ ಫಲಿತಾಂಶವು ತುಸು ಗಾಬರಿಯುಂಟು ಮಾಡುವಂತೆಯೇ ಇದೆಯೆಂದೊಪ್ಪಬೇಕು. ಯಾಕೆಂದರೆ ಪೌಡರು ಬಡಿದುಕೊಂಡು ಲಿಪ್‌ಸ್ಟಿಕ್ ತೊಡೆದುಕೊಂಡ ಯಾವ ಮಾಟಗಾತಿಯನ್ನು ನೋಡಿದಾಗಲೂ ಪುರುಷರು ಅದರ ಆಚೆಗೆ ಯಾವ ಚರ್ಮರೋಗ ಅಡಗಿರಬಹುದೆಂಬ ಅಪವಿತ್ರ ಕೌತುಕ ತಾಳುವ ಭಯವಿದೆ. ಆದರೆ ಸ್ತ್ರೀ ಸೌಂದರ್ಯವರ್ಧಕ ಸಾಧನಗಳ ತಯಾರಕರು ತಮ್ಮ ಬಂಡವಾಳ ಮುಳುಗುವದೆಂದು ಅಂಜುವ ಕಾರಣವೇನೂ ಇಲ್ಲವೆಂದು ಲಾಂಗೂಲಾ ಚಾರ್ಯರು ಭರವಸೆ ಕೊಡಬಯಸುತ್ತಾರೆ. ನಮ್ಮ ನಾರೀಮಣಿಯರು ಎಂದಿನಂತೆಯೆ, ಅಥವಾ ಅದಕ್ಕೂ ಹೆಚ್ಚಾಗಿ ಪೌಡರ್, ಸ್ನೋ ಲಿಪ್‌ಸ್ಟಿಕ್ಕಾದಿ ಲೇಪನಗಳನ್ನು ಉಪಯೋಗಿಸುತ್ತಲೇ ಹೋಗುವರು. ಮತ್ತು ಅವುಗಳ ಉಪಯೋಗದಿಂದಾಗುವ ಚರ್ಮ ರೋಗಾದಿಗಳ ನಿವಾರಣೆಗೆ ಹೊಸ ಹೊಸ ಬಾಮು, ಲೇಪ, ಔಷಧಗಳನ್ನು ತಯಾರಿಸಲು ಔಷಧ ಕಾರಖಾನೆಗಳೂ, ಗುಣಪಡಿಸಲು ಸೌಂದರ್ಯಸಾಧನ ರೋಗಗಳ ತಜ್ಞರಾದ ಹೊಸ ಡಾಕ್ಟರರೂ ಬೇಕಾಗುವುದರಿಂದ ಔದ್ಯೋಗಿಕ ಅಭಿವೃದ್ಧಿ ಮತ್ತು ನಿರುದ್ಯೋಗ ನಿವೃತ್ತಿಗೆ ಇದು ಸಹಾಯಕವಾಗಿ Out of the Evil cometh good (ಕೇಡಿನಿಂದ ಒಳಿತು ಹುಟ್ಟುತ್ತದೆ) ಎಂಬ ವಾಕ್ಯವನ್ನು ಸಾರ್ಥಕಪಡಿಸಬಹುದು.

❑

# ಶ್ರೀಮನ್ನಾರಾಯಣನ ನಿವೃತ್ತಿ....

ಶ್ರೀಮನ್ನಾರಾಯಣನು ಜಗತ್ತಿನ ಮೇಲೆ ಹಠಾತ್ತಾಗಿ ಒಂದು ಬಾಂಬನ್ನು ಎಸೆದು ಬಿಟ್ಟಿದ್ದನು. "ನಾನು ನಿವೃತ್ತನಾಗಬಯಸುತ್ತೇನೆ," ಎಂದು ಆತ ದೇವ-ಋಷಿ—ಗಂಧರ್ವರ ಮಹಾಸಭೆಯ ಕಾರ್ಯಕಾರಿ ಸಮಿತಿಯಲ್ಲಿ ಸಾರಿದ್ದನು. ಅಷ್ಟಕ್ಕೆ ಆತ ಬಿಟ್ಟಿದ್ದರೆ ಕಾರ್ಯಕಾರಿ ಸಮಿತಿ ಅವನೊಡನೆ ಗದುಮುರಿಗೆ ಹಾಕಿ ಗಪ್—ಚಿಪ್ಪಾಗಿ ಆ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ಮಾಡಬಹುದಾಗಿತ್ತು. ಆದರೆ ಕಾರ್ಯಕಾರಿಣಿಗೆ ಅದನ್ನು ತಿಳಿಸುವ ಮೊದಲೇ ಆತ ಅದನ್ನು "ತ್ರಿಲೋಕನ್ಯೂಸ್" ಪತ್ರಿಕೆಯ ವಿಶೇಷ ಸುದ್ದಿಗಾರನಿಗೆ ಹೇಳಿಬಿಟ್ಟಿದ್ದರಿಂದ ಕಾರ್ಯಕಾರಿಣಿ ಸಮಿತಿಗೆ ತಿಳಿಯುವ ಮೊದಲೇ ಅದು ಜಗಜಾಹೀರಾಗಿ ಹೋಗಿತ್ತು. ವಾಸ್ತವಿಕವಾಗಿ ವಾಯುದೇವನಿಗೆ "ತ್ರಿಲೋಕ ನ್ಯೂಸಿ" ನಿಂದಲೇ ಈ ಸುದ್ದಿ ಮೊದಲು ತಿಳಿದದ್ದು. ಕಾರ್ಯಕಾರಿ ಸಮಿತಿಯ ಅನೇಕ ಸದಸ್ಯರು ತಮ್ಮ ಸ್ವಂತದ ವಿಷಯವಾಗಿ ಏನಾದರೂ ಬಂದಿದ್ದರೆ ಮಾತ್ರ ಪತ್ರಿಕೆಗಳನ್ನು, ಅದೂ ಅಷ್ಟುಮಟ್ಟಿಗೆ ಮಾತ್ರ, ಓದುವ ಅಭ್ಯಾಸವಿಟ್ಟುಕೊಂಡಿದ್ದರು. ಅವರ ಸ್ತೋತ್ರಗಳು, ಅವರ ಪ್ರೀತ್ಯರ್ಥವಾಗಿ ನಡೆದ ಯಜ್ಞಯಾಗ ದಾನ ದಕ್ಷಿಣಾದಿಗಳು, ಅವರಿಗಾಗಿ ಕಟ್ಟಿದ ಗುಡಿಗಳ ಉದ್ಘಾಟನ ಭಾಷಣಗಳು ಇತ್ಯಾದಿ ಅಂಶಗಳನ್ನು ಪತ್ರಿಕೆಗಳಿಂದ ಕತ್ತರಿಸಿ ವ್ಯವಸ್ಥಿತವಾಗಿ ಒಂದು ಕಾಗದದ ಮೇಲೆ ಹಚ್ಚಿ ಅವರ ಕಾರ್ಯದರ್ಶಿಗಳು ಅವರ ಅವಹಾಗನೆಗಾಗಿ ಬೆಳಗಿನ ಅಮೃತಪಾನದ ಸಮಯದಲ್ಲಿ ಅವರ ಮುಂದೆ ತಂದಿಡುವುದು ಸಂಪ್ರದಾಯವಾಗಿತ್ತು. ಪ್ರಾರಂಭದಲ್ಲಿ ಒಂದೆರಡು ಸಲ ಹುರುಪಿನ ಹೊಸ ಕಾರ್ಯದರ್ಶಿಗಳು ಈ ದೇವೋತ್ತಮರನ್ನು ಕುರಿತು ಪತ್ರಿಕೆಗಳಲ್ಲಿ ಬಂದ ಟೀಕೆಗಳ ಕಟಿಂಗುಗಳನ್ನು ಕೂಡ ಅವರ ಲಕ್ಷ್ಯಕ್ಕೆ ತರಲು ಯತ್ನಿಸಿದ್ದುಂಟು. ಆದರೆ ಅದಕ್ಕಾಗಿ ವರಿಷ್ಠ ಮಹನೀಯರು ಅವರ ಮೇಲೆ ಎಗರಾಡಿ, ತಮ್ಮ ಮೇಲಿನ ಟೀಕೆಗಳಲ್ಲಿ ತಮಗೆ ಆಸ್ಥೆಯಿಲ್ಲವೆಂದು ತೋರಿಸಿದ್ದರಿಂದ ಅನಂತರ ಆ ಬಗೆಯ ಅಧಿಕಪ್ರಸಂಗ ಮಾಡುವ ಧೈರ್ಯ ಯಾವ ಕಾರ್ಯದರ್ಶಿಗೂ ಬರಲಿಲ್ಲ. ದುರ್ದೈವದಿಂದ ಶ್ರೀಮನ್ನಾರಾಯಣನ ಪ್ರಕಟನೆ ಯಾವ ದಿನದ ಪತ್ರಿಕೆಯಲ್ಲಿ ಪ್ರಕಟವಾಗಿತ್ತೋ ಆ ಹಿಂದಿನ ದಿನ ಯಾವ ಕಾರ್ಯಕಾರಿ ಸದಸ್ಯನ ಯಾವ ಪ್ರೋಗ್ರಾಮೂ ಇದ್ದಿಲ್ಲವಾದ್ದರಿಂದ ಅವರಿಗೆ ಅಂದಿನ ಪತ್ರಿಕೆಯನ್ನೋದುವ ಪ್ರಸಂಗ ಬಂದಿರಲಿಲ್ಲ. ವಾಯುದೇವನು ಮಾತ್ರ ಇದಕ್ಕೆ ಅಪವಾದವಾಗಿದ್ದನು. ಅವನು ಹಿಂದಿನ ದಿನ ನಡೆಸಿದ ಒಂದು ಉದ್ಘಾಟನ ಸಮಾರಂಭದ ವರದಿ ಪತ್ರಿಕೆಯಲ್ಲಿ ಬರಬೇಕಾಗಿತ್ತು. ಅವನು ಅದಕ್ಕಾಗಿ "ತ್ರಿಲೋಕನ್ಯೂಸ್"

ಪತ್ರಿಕೆಯನ್ನು ತೆರೆದು ಮುಖಪುಟದಲ್ಲಿ ಹುಡುಕಾಡಿದನು. ಸುದ್ದಿ—ಸಂಪಾದಕನು ತನ್ನ ಸುದ್ದಿಯನ್ನು "ಕೊಂದು" ಬಿಟ್ಟಿದ್ದನ್ನು ಕಂಡು ವಾಯುದೇವನು ಕ್ರೋಧಾವಿಷ್ಟನಾಗುವಷ್ಟರಲ್ಲೇ ಮುಖಪುಟದ ಮೇಲೆ ಒಂದು ಗೇಣೆತ್ತರದ ಅಕ್ಷರಗಳಲ್ಲಿ "ನಾರಾಯಣನ ನಿವೃತ್ತಿ!" ಎಂಬ ತಲೆಬರಹ ಅವನನ್ನು ಆಕರ್ಷಿಸಿತು. ಹೀಗಾಗಿ ಸುದ್ದಿಯನ್ನು ಮೊದಲೇ ತಿಳಿದು ಕಾರ್ಯಕಾರಿಣಿಯ ಸಭೆಗೆ ಬಂದ ಏಕಮಾತ್ರ ಸದಸ್ಯನೆಂದರೆ ವಾಯುದೇವನಾಗಿದ್ದನು.

ಶ್ರೀಮನ್ನಾರಾಯಣನ ಈ ಗಂಭೀರವಾದ ಹೇಳಿಕೆಯು ತ್ರಿಲೋಕಗಳಲ್ಲಿ ಕೋಲಾಹಲವೆಬ್ಬಿಸಿತು. ಕಾರ್ಯಸಮಿತಿಯು ಅದನ್ನು ಸ್ವತಃ ದೇವದೇವನ ಮುಖದಿಂದಲೇ ಕೇಳಿದಾಗ ಕೆಲ ಕ್ಷಣಗಳ ಕಾಲ ಸದಸ್ಯರ ಬಾಯಿ ಹೊಲಿದಂತಾಗಿ ಬಿಟ್ಟಿತು. ಅವರಾರೂ ಇಂಥ ಪ್ರಸಂಗವನ್ನು ಕನಸಿನಲ್ಲಿಯೂ ಊಹಿಸಿರಲಿಲ್ಲ. ಕಾರಣ ಸರಳವಾಗಿತ್ತು—ದೇವತೆಗಳಿಗೆ ಕನಸುಗಳೇ ಬೀಳುವುದಿಲ್ಲ. "ಈ ಲೋಕರಕ್ಷಣೆಯ ಭಾರವನ್ನು ಅನಂತ ಕಾಲದಿಂದ ಹೊತ್ತು ನಾನು ಬೇಸತ್ತು ಹೋಗಿದ್ದೇನೆ" ಎಂದು ಶ್ರೀಮನ್ನಾರಾಯಣ ಹೇಳಿದನು. "ನಾನು ಸಪ್ಪಗಾದಂತೆ ನನಗೆ ಭಾಸವಾಗುತ್ತಿದೆ", ಎಂದಾತ ದೂರಿಕೊಂಡನು. "ಹದಿನಾಲ್ಕು ಲೋಕಗಳಲ್ಲಿ ಎಲ್ಲವೂ ಸರಿಯಾಗಿಲ್ಲ. ಇದೇ ಪ್ರಕಾರ ಸಾಗಿದರೆ ಬ್ರಹ್ಮಾಂಡಕ್ಕೆ ಭವಿಷ್ಯವೇ ಇಲ್ಲವೆಂದು ನನಗೆ ಭಯವಾಗುತ್ತಿದೆ." ಎಂದು ದೇವದೇವನು ತನ್ನ ಹೃದಯವನ್ನು ತೋಡಿಕೊಂಡನು. ಆ ಮೇಲೆ ಅವನು ಇಂಥವರನ್ನೇ ಎಂದು ಕುರಿತಾಗಿ ಹೇಳದೆ ದೇವತಾಪ್ರಪಂಚವನ್ನು ತೀವ್ರವಾಗಿ ಟೀಕಿಸಿದನು.

"ದೇವತೆಗಳಲ್ಲಿ ಅಧಿಕಾರದಾಹ ಹೆಚ್ಚಾಗಿದೆ. ನಾವು ಸ್ವಾರ್ಥಸಾಧಕರಾಗುತ್ತಿದ್ದೇವೆ. ಸೃಷ್ಟಿಯ ಆದಿಕಾಲದಲ್ಲಿ ನಮ್ಮಲ್ಲಿದ್ದ ಹೊಸತನ್ನು ಕಟ್ಟುವ ಹುಮ್ಮಸ್ಸು ಅಳಿದುಹೋಗಿದೆ. ಲೋಕಸೇವೆಯ ಇಚ್ಛೆ ಹೊರಟುಹೋಗಿದೆ. ನಾವು ಟೊಳ್ಳು ಘೋಷಣೆಗಳನ್ನು ಕೂಗಿ ಅದೇ ಮಹಾಕಾರ್ಯ ಎಂದು ಭಾವಿಸುತ್ತಿದ್ದೇವೆ. ಒಂದು ಮಾತಿನಲ್ಲಿ ಹೇಳುವುದಾದರೆ ಅಮರರಾದ ನಾವು ಕೊಳೆಯದ ಹೆಣಗಳಾಗುತ್ತಿದ್ದೇವೆ. (ಈ ಕೊನೆಯ ಮಾತನ್ನು ಎಲ್ಲೋ ಓದಿದ್ದಂತೆ ನಾರದರಿಗೆ ಅನಿಸಿತು. ಕೊನೆಗೆ ಬಹಳ ಯೋಚಿಸಿದ ನಂತರ ಅದು ಬೇಂದ್ರೆಯವರ ಕವಿತೆಯ ಒಂದು ಪಂಕ್ತಿಯೆಂದು ಜ್ಞಾಪಕಕ್ಕೆ ಬಂದಾಗ ಶ್ರೀಮನ್ನಾರಾಯಣನ ಈ ಕೃತಿಚೌರ್ಯವನ್ನು ನೆನೆದು ನಾರದರಿಗೆ ಆ ಗಂಭೀರ ಪ್ರಸಂಗದಲ್ಲಿಯೂ ತುಟಿಗಳ ಎಡ ಮೂಲೆಯಲ್ಲೊಂದು ವ್ಯಂಗ್ಯಹಾಸ್ಯ ಮಿಂಚಿ ಮಾಯವಾಯಿತು. ಪುಣ್ಯಕ್ಕೆ ಶ್ರೀಮನ್ನಾರಾಯಣ ಅದನ್ನು ನೋಡಲಿಲ್ಲ.) ಶ್ರೀರಾಮನ್ನಾರಾಯಣನು ಮತ್ತೂ ಏನೇನೋ ಹೇಳಿದನು. ದೇವರ್ಷಿ-ಗಂಧರ್ವರ ಪ್ರಮುಖರಿಗೆ ಅದರಲ್ಲಿ ಯಾವುದೂ ಸಿಹಿಯೆನಿಸುವಂತಿರಲಿಲ್ಲ. ಕೊನೆಗೆ ಶ್ರೀಮನ್ನಾರಾಯಣ ಹೇಳಿದ: "ನಾನು ಮುದುಕನಾಗಿದ್ದೀನೆಂದಲ್ಲ, ನನ್ನ ಕರ್ತೃತ್ವಶಕ್ತಿಯೂ ಹ್ರಾಸಹೊಂದಿಲ್ಲ. ನಿಮಗೆ ಗೊತ್ತಿರುವಂತೆ ನಾನು ಎಂದೂ ಸುಮ್ಮನೆ ಬಿದ್ದಿರಲಾರೆ. ನನಗೆ ಈಗ ವಿಶ್ರಾಂತಿಯಲ್ಲ, ಅವಕಾಶ ಬೇಕು. ಈ ಪ್ರಪಂಚದ ಹಗರಣವನ್ನು ಕುರಿತು ತುಸು ಹೊರಗೆ ನಿಂತು ನಿರ್ವಿಕಾರದಿಂದ ಯೋಚಿಸಬೇಕೆಂದು

ನನಗಿಸಿದೆ. ಆದ್ದರಿಂದ ಕೆಲ ತಿಂಗಳವರೆಗಾದರೂ ನಾನು ನಿವೃತ್ತಿ ಹೊಂದಿ ದೈನಿಕ ವ್ಯವಹಾರದಿಂದ ಮುಕ್ತನಾಗಬೇಕೆಂಬ ದೃಢನಿರ್ಧಾರಕ್ಕೆ ಬಂದಿದ್ದೇನೆ. ನನಗೆ ಯೋಚಿಸ ಬೇಕಾಗಿದೆ. ಯೋಚನೆ! ಯೋಚನೆ! ಯೋಚನೆ! ಅದೀಗ ನನಗೆ ಬೇಕು."

ಶ್ರೀಮನ್ನಾರಾಯಣ ನಿವೃತ್ತನಾಗಲಿರುವನೆಂಬ ಸುದ್ದಿಯಿಂದ ಇಡೀ ಲೋಕದಲ್ಲಿ ಗಂಭೀರವಾದ ವಾತಾವರಣವುಂಟಾಯಿತು, ದೇವತೆಗಳ ಮಹಾಸಭೆ ಕರೆಯಲ್ಪಟ್ಟಿತು. ದೇವತಾವೃಂದ ಗಾಬರಿಯಾಯಿತು. ಶ್ರೀಮನ್ನಾರಾಯಣನು ಅನಂತ ಕಾಲದವರೆಗೆ ತಮ್ಮ ನೇತೃತ್ವ ವಹಿಸುವನೆಂಬ ನಂಬಿಕೆಯಿಂದ ನಿಶ್ಚಿಂತರಾಗಿ ತಂತಮ್ಮ ಪ್ರಸ್ಥ ಬೆಳೆಸಿಕೊಳ್ಳುತ್ತಿದ್ದ ದೇವತೆಗಳಿಗೆ ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟಂತಾಯಿತು. ಪ್ರತಿಯೊಬ್ಬರೂ ತಮ್ಮ ಗತಿ ಏನೆಂದು ಯೋಚನೆಯಲ್ಲಿ ಬಿದ್ದರು. ಶ್ರೀಮನ್ನಾರಾಯಣನು ನಿವೃತ್ತನಾದರೆ ತಮ್ಮಲ್ಲಿ ಹೆಚ್ಚಿನವರನ್ನು ನಾಳೆಯಿಂದ ಯಾರೂ ಪೂಜಿಸಲಾರರೆಂದು ಅವರಿಗೆ ಗೊತ್ತೇ ಇತ್ತು. ನಾರಾಯಣನ ನಿವೃತ್ತಿಗಿಂತಲೂ ಅವರನ್ನು ಗಾಬರಿಗೊಳಿಸಿದ ವಿಷಯ ಇನ್ನೊಂದಿತ್ತು. ಶ್ರೀಮನ್ನಾರಾಯಣನಿಗೆ ಯೋಚಿಸಲು ಸಮಯಬೇಕಾಗಿದೆ ಎಂಬುದನ್ನು ಕೇಳಿ ಅವರು ನಡುಗಿದ್ದರು. ದೇವದೇವನು ಬೇರೇನು ಮಾಡಿದರೂ ಅಡ್ಡಿಯಿಲ್ಲ—ಯೋಚನೆ ಮಾತ್ರ ಮಾಡಬಾರದು ಎಂದು ಅವರು ಅಪೇಕ್ಷಿಸುತ್ತಿದ್ದರು. ನಿಜವಾಗಿ ಅವರು ಇಷ್ಟೆಲ್ಲ ದಿನಗಳಿಂದ ಆತನಿಗೆ ಯೋಚನೆಗೆ ಸ್ವಲ್ಪವೂ ಅವಕಾಶ ದೊರೆಯದಂತೆ ವಿಶ್ವಪ್ರಯತ್ನ ಮಾಡುತ್ತ ಬಂದಿದ್ದರು. ಯೋಚನೆಯಿಲ್ಲದ ಗಳಿಗೆಗಳಲ್ಲಿ ಶ್ರೀಮನ್ನಾರಾಯಣನು ತನ್ನ ಹತ್ತಿರ ಸೇರಿಸಿಕೊಂಡಿದ್ದ ಅನೇಕ ದೇವತೆಗಳಿಗೆ ಅವನ ಯೋಚನೆಯ ಸಂಭವವು ಗಲ್ಲಿನ ಉರುಲಿನಂತೆ ಕಾಣಿಸತೊಡಗಿತು. ಅವರು ತಮ್ಮ ಎರಡೆಳೆ ನಾಲಗೆಗಳಿಂದ ಆ ದೇವೋತ್ತಮನನ್ನು ನಿರಂತರವಾಗಿ ಹೊಗಳುತ್ತ ಅವನ ಮುಂದೆ ಕುಣಿದಾಡುತ್ತಿದ್ದರು. ಯೋಚನೆಯಿಲ್ಲದಾಗ ಶ್ರೀಮನ್ನಾರಾಯಣನಿಗೆ ಇದೆಲ್ಲ ತನ್ನ ಅನಂತಗುಣಗಳಿಗೆ ಮುಗ್ಧರಾದ ಸಜ್ಜನರ ಸಂಕೀರ್ತನವೆಂದು ಅನಿಸಿತ್ತು. ಅವನಲ್ಲಾದರೂ ಯೋಚನೆಯ ಹವ್ಯಾಸಕ್ಕೆ ಬಿದ್ದನೆಂದರೆ ಈ ಗುಣಗಾನದ ಒಳ ಉದ್ದೇಶ ಅವನಿಗೆ ಹೊಳೆದು ತಮ್ಮ ಅವಸ್ಥೆ ಮುಗಿದೇಹೋಗುವುದು ಎಂದು ಅವರು ಅಂಜಿದರು.

ದೇವತಾ ಮಹಾಸಭೆ ಸೇರಿದಾಗ ಕಾರ್ಯಸಮಿತಿಯ ಸದಸ್ಯರೆಲ್ಲರೂ ಶ್ರೀಮನ್ನಾರಾಯಣನನ್ನು ಮನವೊಲಿಸಲು ಯತ್ನಿಸಿ ವಿಫಲರಾಗಿದ್ದರು. ನಾರಾಯಣನ ಇಚ್ಛೆ ವಜ್ರಕಠೋರವಾಗಿತ್ತು. ಅವನು ಆಗಲೇ ಹಿಮಾಲಯದ ಒಂದು ದುರ್ಗಮ ಪ್ರದೇಶದಲ್ಲಿ ವಸತಿಯನ್ನು ನೋಡಿಟ್ಟಿದ್ದನು. ಮಹಾಸಭೆ ವೈಕುಂಠದಲ್ಲಿ ಸೇರಿದಾಗ ದೇವತೆಗಳು ನಿರ್ವಿಣ್ಣರಾಗಿದ್ದರು. ಉಚ್ಚ ದೇವತೆಗಳು ಲೋಕಗಳಲ್ಲಿ ಉಂಟಾಗಿರುವ ಅವ್ಯವಸ್ಥೆಗಳ ಹೊಣೆಯನ್ನು ಕ್ಷುದ್ರದೇವತೆಗಳ ಸೆರಗಿಗೆ ಗಂಟುಹಾಕಲು ಹವಣಿಸಿದರು. ಕ್ಷುದ್ರದೇವತೆಗಳು ತಿರುಗಿ ಇದೆಲ್ಲದಕ್ಕೂ ನೀವೇ ಕಾರಣ ಎಂದು ತಮ್ಮ ಸೆರಗುಗಳನ್ನು ಕೊಡವಿಕೊಂಡರು. ಪರಸ್ಪರ ಶಬ್ದವಿನಿಯಮವಾದ ಮೇಲೆ ಎಲ್ಲರೂ ಸೇರಿ ನಾರಾಯಣನ ಮೇಲೆ ತಿರುಗಿಬಿದ್ದರು. "ಇದು ಅಣುಬಾಂಬು" ಎಂದು ಒಬ್ಬರು ಹೇಳಿದರು. "ಈ ರೀತಿ ನಮ್ಮನ್ನು ನಡುನೀರಿನಲ್ಲಿ

ಕೈಬಿಟ್ಟು ಹೋಗುವುದು ಕೇವಲ ಅನ್ಯಾಯ" ಎಂದು ಇನ್ನೊಬ್ಬರು ನಾರಾಯಣನನ್ನು ದೂರಿದರು. ಒಬ್ಬ ದೇವರಂತೂ "ನಿಮ್ಮ ಭಕ್ತರು ಬೇಕು ಬೇಕಾದ್ದು ಮಾಡಿದರೂ ಅದನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳುವ ನಿಮ್ಮ ಪ್ರವೃತ್ತಿಯಿಂದಲೇ ಲೋಕದಲ್ಲಿ ಇಂದು ದುರವಸ್ಥೆ ಉಂಟಾಗಿದೆ. ಈಗ ಎಚ್ಚರಗೊಂಡು ನೀವು ಮಾತ್ರ ಪಾರಾಗಿ ಹಿಮಾಲಯದಲ್ಲಿ ಕೂಡ್ರುವೆವೆಂದರೆ ನಾವು ಕೇಳುವವರಲ್ಲ" ಎಂದು ನೇರವಾಗಿ ನಾರಾಯಣನನ್ನೇ ಆರೋಪಿಸಿದಾಗ ಇಡಿ ಸಭೆಯೇ—ನಾರಾಯಣ ಸಹಿತವಾಗಿ—ಚಪ್ಪಾಳೆ ತಟ್ಟಿತು. ಆದರೆ ದೇವದೇವನು ತನ್ನ ದೃಢನಿರ್ಧಾರದಿಂದ ಲವಮಾತ್ರವೂ ಕದಲಲಿಲ್ಲ.

ಎರಡನೇ ದಿವಸ ದೇವತಾ ಮಹಾಸಭೆ ಸೇರಿದಾಗ ಕಾರ್ಯಸಮಿತಿಯ ಕೆಲ ಪ್ರಮುಖ ಸದಸ್ಯರು ಹಾಜರಿಲ್ಲದಿರುವುದು ಅರ್ಥವತ್ತಾಗಿತ್ತು. ಇವರಲ್ಲಿ ಬ್ರಹ್ಮ ಮತ್ತು ವಾಯುದೇವರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಅವರಿಬ್ಬರೂ ಏನು ಮಾಡುತ್ತಿದ್ದಾರೆಂಬ ಬಗ್ಗೆ 'ತ್ರಿಲೋಕ ನ್ಯೂಸಿ'ನಲ್ಲಿ ಒಂದು ಊಹಾಪೋಹ ಪ್ರಕಟವಾಗಿ ರಾಜಕೀಯ ಕೋಲಾಹಲದಲ್ಲಿ ಇನ್ನೊಂದು ತುಮುಲುವನ್ನೆಬ್ಬಿಸಿತು. ಶ್ರೀಮನ್ನಾರಾಯಣನ ನಿವೃತ್ತಿಯ ನಂತರ ಜಗತ್ತಿನ ಅಧಿಪತ್ಯ ಯಾರಿಗೆ ಸೇರಬೇಕೆಂಬ ಬಗ್ಗೆ ಇವರಿಬ್ಬರಲ್ಲಿ ತೀವ್ರ ಸ್ಪರ್ಧೆಯುಂಟಾಗಿದೆಯೆಂದೂ ವಿವಿಧ ಲೋಕಗಳ ಪ್ರತಿನಿಧಿಗಳಲ್ಲಿ ಪ್ರತಿಷ್ಠಿತರನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಇಬ್ಬರೂ ತೆರಮರೆಯಲ್ಲಿ ಸೂತ್ರಚಾಲನೆ ನಡೆಸಿದ್ದಾರೆಂದೂ ಆ ಪತ್ರಿಕೆಯ ವೈಕುಂಠಸುದ್ದಿಗಾರ ಬರೆದಿದ್ದನು. ಅವರಿಬ್ಬರಲ್ಲಿ ನೇರವಾದ ಮಾತಿನ ಚಕಮಕಿ ಕೂಡ ಆಗಿತ್ತೆಂದು ವದಂತಿ ಹಬ್ಬಿತ್ತು. "ಈ ಲೋಕಗಳನ್ನೆಲ್ಲ ನಾರಾಯಣನ ಆಜ್ಞೆಯಂತೆ ೨೮ ಸಲ ಸೃಷ್ಟಿಸಿದವನು ನಾನು. ಆದ್ದರಿಂದ ನಾನು ನಾರಾಯಣನ ಸ್ವಾಭಾವಿಕ ಉತ್ತರಾಧಿಕಾರ" ಎಂದು ಬ್ರಹ್ಮದೇವ ತನ್ನ ನಾಲ್ಕೂ ಮುಖಗಳಿಂದ ಸಾರಿದ್ದರೆ, ವಾಯುವು ಕೆರಳಿ "ದೇವತಾ ಗಣದಲ್ಲಿ ನೀನೂ ನಾನೂ ಸಮಾನರು. ವೇದಾಭ್ಯಾಸ ಜಡನಾದ ನೀನು ಸೃಷ್ಟಿ ಮಾಡಿ ಸುಮ್ಮನೆ ಮಲಗಿಬಿಟ್ಟೆ. ನಾನಾದರೋ ಶ್ರೀಮನ್ನಾರಾಯಣನ ಪ್ರತಿ ಅವತಾರದೊಡನೆ ಅವತರಿಸಿ ಅನಂತ ಕಷ್ಟಗಳನ್ನು ಸಹಿಸಿ ಅವನ ಕಾರ್ಯವನ್ನು ಸಾಧಿಸಲು ಎಡೆಬಿಡದೆ ಹೆಣಗಿದ್ದೇನೆ. ಅವನಿಗಾಗಿ ನಾನು ಮಂಗನೆನಿಸಿದ್ದೇನೆ. ಅವನಿಗಾಗಿ ಹೆಂಡತಿಯಿಲ್ಲದೆ ನವೆದಿದ್ದೇನೆ. ನನ್ನ ಹಕ್ಕು ಸೇವೆಯಿಂದ ಬಂದದ್ದು. ನೀನು ಹೇಗೆ ಆಳುವಿಯೋ ನೋಡಿಬಿಡುತ್ತೇನೆ" ಎಂದು ಗುಡುಗು ಹಾಕಿದ್ದನಂತೆ. "ಶ್ರೀಮನ್ನಾರಾಯಣನು ದೃಶ್ಯದಿಂದ ಮರೆಯಾದೊಡನೆ ಈ ಇಬ್ಬರು ಪ್ರಬಲ ದೇವತೆಗಳಲ್ಲಿ ಶಕ್ತಿಪರೀಕ್ಷೆಯಾಗುವುದು ಖಂಡಿತ" ಎಂದು ಆ ವರದಿಗಾರ ಭವಿಷ್ಯ ನುಡಿದಿದ್ದನು. ಎರಡೂ ಪಕ್ಷಗಳ ಬೆಂಬಲಿಗರು ಪರಸ್ಪರರ ವಿರುದ್ಧ ಸಹಿಸಂಗ್ರಹವನ್ನು ಕೂಡಾ ಪ್ರಾರಂಭಿಸಿದ್ದರೆಂದು ಸಣ್ಣಾಗಿ ಒಂದು ಸುದ್ದಿ ಹೊರಟಿತ್ತು. ಅನೇಕ ಪ್ರತಿನಿಧಿಗಳು ತಾವು ಯಾವ ಗುಂಪನ್ನು ಸೇರಿಕೊಳ್ಳಬೇಕೆಂದರಿಯದೆ ಎರಡೂ ಪಕ್ಷಗಳ ಪರವಾಗಿ ಸಹಿ ಹಾಕಿದ್ದರಂತೆ.

ದೇವತಾಮಹಾಸಭೆಯಲ್ಲಿ ಎರಡನೇ ದಿನದ ಭಾಷಣಗಳು ಬೇರೆಯೇ ರೂಪ

ಧರಿಸಿದ್ದವು. ಶ್ರೀಮನ್ನಾರಾಯಣನ ವಿಚಾರವನ್ನು ಎಲ್ಲರೂ ಬಿಟ್ಟಂತೆ ಕಾಣಿಸುತ್ತಿತ್ತು. ಭಾಷಣಗಳಲ್ಲಿ ಕೆಲವು ಬ್ರಹ್ಮನ ಕಡೆ ಇರುವ ಖಾತೆಗಳ ಮೇಲೆ ಪ್ರತ್ಯಾಕ್ಷಾಪ್ರತ್ಯಕ್ಷ ಟೀಕೆಗಳನ್ನೊಳಗೊಂಡಿದ್ದರೆ ಬೇರೆ ಕೆಲವು ವಾಯುವಿನ ಖಾತೆಗಳನ್ನು ಗಾಳಿಗೆ ಹಿಡಿಯುವ ಪ್ರಯತ್ನಗಳಂತೆ ಕಾಣಿಸುತ್ತಿದ್ದವು. ಬ್ರಹ್ಮನ ಮೇಲೆ ಪ್ರತಿಗಾಮಿ ಎಂಬ ಆಕ್ಷೇಪಗಳು ಕೇಳಿಬಂದರೆ ವಾಯುವನ್ನು ಫ್ಯಾಸಿಸ್ಟ್ ಎಂದು ಟೀಕಿಸಲಾಯಿತು. ಈ ನಡುವೆ ಕ್ಷುದ್ರ ದೇವತೆಗಳ ಒಂದು ಗುಂಪು ಸಂಪೂರ್ಣ ಪ್ರಜಾಸತ್ತಾತ್ಮಕ ಆಡಳಿತೆಗಾಗಿ ಕೂಗೆಬ್ಬಿಸತೊಡಗಿತ್ತು. ಈ ಗುಂಪಿನ ಹಿಂದೆ ಅಗ್ನಿಯ ಕೈವಾಡ ಇದೆಯೆಂದು ಭಾವಿಸಲಾಗಿತ್ತು. ಅಗ್ನಿಯ ಕಮ್ಯುನಿಸ್ಟ್‌ಮನೋಭಾವ ಸರ್ವವಿದಿತರಾಗಿದ್ದುದರಿಂದ ಈ ನಂಬಿಕೆ ಉಂಟಾಗಿತ್ತು. ಬ್ರಹ್ಮ ವಾಯು ಇಬ್ಬರೂ ಈ ಒಂದು ವಿಷಯದಲ್ಲಿ ಒಮ್ಮತವಾದುದು ಒಂದು ಸೋಜಿಗದ ಸಂಗತಿಯಾಗಿತ್ತು. "ಪ್ರಜಾಸತ್ತೆಯ ಹೆಸರಿನಲ್ಲಿ ಕಮ್ಯುನಿಸ್ಟರ ಆಕ್ರಮಣ ನಡೆದಿದೆ" ಎಂದು ಬ್ರಹ್ಮ ಎಚ್ಚರಿಕೆ ಕೊಟ್ಟರೆ ಸ್ಪಷ್ಟವಾದಿಯಾದ ವಾಯುದೇವನು "ನೀನು ಬೆಂಕಿಯೊಡನೆ ಚೆನ್ನಾಟವಾಡುತ್ತಿದ್ದೀರಿ" ಎಂದು ಅಗ್ನಿಯ ಕಡೆ ನೋಡುತ್ತ ಹೇಳಿದನು. ಎರಡನೇ ದಿನದ ಸಭೆಯು ಹೀಗೆ ತ್ರಿಪಕ್ಷೀಯ ಕಚ್ಚಾಟದಲ್ಲಿ ತುಮುಲದೊಡನೆ ಮುಕ್ತಾಯವಾಯಿತು. ಬ್ರಹ್ಮ ವಾಯು, ಅಗ್ನಿ ಮೂವರೂ ಸಮಬಲರಾಗಿ ಕಾಣಿಸುತ್ತಿದ್ದರು. ಆ ರಾತ್ರಿಯೆಲ್ಲ ತೆರಮರೆಯಲ್ಲಿ ರಭಸದ ಚಟುವಟಿಕೆಗಳು ನಡೆದಿದ್ದವು. ನಡುರಾತ್ರಿ ಕಳೆದ ಮೇಲೆ ಬ್ರಹ್ಮನು ವಿಶ್ರಮಿಸಿದ್ದ ಡೇರೆಯ ಬಳಿ ಜೇಬಿನಲ್ಲಿ ರಿವಾಲ್ವರ್ ಧರಿಸಿದ ವ್ಯಕ್ತಿಯೊಬ್ಬನು ಹಿಡಿಯಲ್ಪಟ್ಟನು. ಅಗ್ನಿಯು ವಾಯು ಮತ್ತು ಬ್ರಹ್ಮ ಇಬ್ಬರೊಡನೆಯೂ ಏಕಕಾಲದಲ್ಲಿ ಸಂಧಾನ ನಡೆಸುತ್ತಿದ್ದನು.

ಮೂರನೇ ದಿನ ಮುಂಜಾನೆ ಸಭೆಯು ವ್ಯಗ್ರ ವಾತಾವರಣದಲ್ಲಿ ಪ್ರಾರಂಭವಾಯಿತು. ಪರಿಸ್ಥಿತಿ ಗಂಭೀರವಾಗಿತ್ತು. ಅಗ್ನಿಯು ಕಡೆಗೂ ವಾಯುವಿನ ಪಕ್ಷಕ್ಕೆ ಸೇರಿದ್ದನು. ಶ್ರೀಮನ್ನಾರಾಯಣನ ನಂತರ ಯಾರು ಲೋಕನಾಯಕನಾಗಬೇಕೆಂದು ನಿರ್ಧರಿಸುವ ಮತದಾನ ಅಂದು ಆಗಬೇಕಿತ್ತು. ಅಗ್ನಿ-ವಾಯು-ಆ್ಯಕ್ಸಿಸ್ಸು ಬಲಾತ್ಕಾರದಿಂದ ಅಧಿಕಾರ ಕಸಿದುಕೊಳ್ಳಲು ಯೋಜನೆ ಮಾಡಿತ್ತೆಂಬ ಸುದ್ದಿಯಿಂದ ಎಲ್ಲರೂ ಕಂಗೆಟ್ಟರು. ಮತದಾನ ಮುಗಿದೊಡನೆ ಬ್ರಹ್ಮನನ್ನು ಬಂಧಿಸಲು ಸಿದ್ಧತೆಗಳಾಗಿದ್ದವೆಂದು ವಿಶ್ವಸನೀಯವಾಗಿ ತಿಳಿದು ಬಂದಿತ್ತು.

ಬ್ರಹ್ಮನು ಉತ್ತರಾಧಿಕಾರಿಯಾಗಬೇಕು, ಮತ್ತು ವಾಯು ಆಗಬೇಕು ಎಂಬ ಎರಡು ಪರಸ್ಪರ ವಿರುದ್ಧ ಗೊತ್ತುವಳಿಗಳು ಮಂಡಿಸಲ್ಪಟ್ಟವು. ಚರ್ಚೆ ಪೈಶಾಚಿಕ ರಭಸದಿಂದ ಸಾಗಿತ್ತು. ಮತದಾನ ನಡೆಯಲು ಇನ್ನೇನು ಒಂದು ನಿಮಿಷ ಉಳಿದಿತ್ತು—ಅಷ್ಟರಲ್ಲಿ ಎರಡನೇ ದಿನದಿಂದ ಸಭೆಯಲ್ಲಿ ಕಾಣಿಸಿಕೊಳ್ಳದಿದ್ದ ಶ್ರೀಮನ್ನಾರಾಯಣನು ಮಂದಗತಿಯಿಂದ ಸಭಾಮಂಟಪವನ್ನು ಪ್ರವೇಶಿಸಿದನು. ಅವನು ಸಾವಕಾಶವಾಗಿ ವೇದಿಕೆಯನ್ನೇರಿ ಬಂದನು. "ಮಿತ್ರರೇ, ನಾನು ನಿವೃತ್ತನಾಗಬಾರದೆಂದು ನಿರ್ಧರಿಸಿದ್ದೇನೆ" ಎಂದು ಹೇಳಿ ಕುಳಿತುಕೊಂಡನು. ❑

## ಆನೆಚರ್ಮ

ರಾಜಕಾರಣದ ಕುಸ್ತಿಕಣಕ್ಕಿಳಿಯುವವರಿಗೆ ದಪ್ಪ ಚರ್ಮ ಬೇಕು. ದಪ್ಪ ಅಂದರೆ ಖಡ್ಗಮೃಗ, ಜಿರಾಫೆ ಅಥವಾ ಆನೆಯ ಚರ್ಮದಷ್ಟು. ಗುಂಡುಬಡಿದರೆ ಅದು ಹಿಂದೆ ಪುಟಿಯಬೇಕು, ಇಲ್ಲವೆ ಚಪ್ಪಟೆಯಾಗಿ ಹೋಗಬೇಕು—ಹೊರತು ನಾಟತಕ್ಕದ್ದಲ್ಲ ಆದರೆ ನಮ್ಮ ದುರ್ದೈವದಿಂದ ಈ ದೇಶದಲ್ಲಿ ರಾಜಕಾರಣಿಗಳು ಮುಟ್ಟಿದರೆ ಮುನಿಗಿಡದ ಜಾತಿಯವರಾಗಿದ್ದಾರೆ. ಅದರಿಂದ ನಮ್ಮ ರಾಜಕಾರಣದ ಆಟದಲ್ಲಿರಬೇಕಾದ ಎಷ್ಟೋ ಸ್ವಾರಸ್ಯ ಹೋಗಿಬಿಡುತ್ತದೆ. ಮೊನ್ನೆ ಮೈಸೂರು ವಿಧಾನಸಭೆಯಲ್ಲಿ ಮಾನ್ಯ ಸಭಾಪತಿಗಳು ಕಮ್ಯುನಿಸ್ಟ್ ಸದಸ್ಯರೊಬ್ಬರನ್ನು ಅತ್ಯಂತ ಸದ್ವರ್ತನೆಯುಳ್ಳ ಸದಸ್ಯರಲ್ಲೊಬ್ಬರು ಎಂದು ಪ್ರಶಂಸಿಸಿದರು. ಅದನ್ನು ಕೇಳಿ ಹಳೇ ಹುಲಿ ಸುಬ್ರಹ್ಮಣ್ಯರು ದಬಕ್ಕನೆ ಎದ್ದು ನಿಂತರು. ಆ ಸದಸ್ಯರನ್ನು ಹಾಗೆ ಪ್ರಶಂಸಿಸಿದ್ದರಿಂದ ಸಭಾಪತಿಗಳು ಉಳಿದ ಸದಸ್ಯರು ಸದ್ವರ್ತನೆ ಯಿಲ್ಲದವರೆಂದು ಅಪ್ರತ್ಯಕ್ಷವಾಗಿ ಆರೋಪ ಹೊರಿಸಿದಂತಾಯಿತು ಎಂದು ಆಕ್ಷೇಪವೆತ್ತಿದರು. ಇದರ ತರ್ಕಶಾಸ್ತ್ರ ತುಸುಗಹನವಾಗಿ ಕಾಣಿಸುವುದಿಲ್ಲವೆ? ಆದರೆ ರಾಜಕಾರಣಿಗಳ ತರ್ಕಶಾಸ್ತ್ರ ಯಾವಾಗಲೂ ತುಸು ವಿಲಕ್ಷಣವೇ ಆಗಿರುತ್ತದೆನ್ನಿರಿ. ಹೀಗಾಗಿ ಸಭೆಯಲ್ಲಿ ಕೂಗಾಟ ಪ್ರಾರಂಭವಾಯಿತು. ಸಭಾಪತಿಗಳು ನಮ್ರರಾಗಿ ತಮ್ಮ ಮಾತುಗಳನ್ನು ಸಭಾಸದರು ಅಪಾರ್ಥ ಮಾಡಿಕೊಳ್ಳಬಾರದೆಂದು ಬಿನ್ನವಿಸಿಕೊಂಡರು. ಆದರೆ ಈ ಪ್ರಸಂಗದಿಂದ ಎಲ್ಲರಿಗಿಂತ ಹೆಚ್ಚು ನೋವು ಪ್ರಶಂಸಾಪಾತ್ರರಾದವರಿಗೇ ಆಗಿರಬೇಕು. ಸದ್ವರ್ತನೆ ಯುಳ್ಳವನೆಂಬುದು ಕಮ್ಯುನಿಸ್ಟ್ ಪಕ್ಷದ ಜನರಿಗೆ ನೀವು ಕೊಡಬಹುದಾದ ಒಳ್ಳೇ ಪ್ರಶಂಸೆಯಲ್ಲ. ಸಭಾಪತಿಗಳಿಂದ ಸದ್ವರ್ತನೆಗಾಗಿ ಶಾಲುಜೋಡಿ ಪಡೆದ ಕಮ್ಯುನಿಸ್ಟನನ್ನು ಸಭೆಯ ಹೊರಗಿನ ಕಮ್ಯುನಿಸ್ಟರು ಸಂಶಯದೃಷ್ಟಿಯಿಂದ ನೋಡುವ ಭಯವಿದೆ. ಯಾಕೆಂದರೆ ಸದ್ವರ್ತನೆಯೆಂಬುದು ಬೂರ್ಜುವಾ ಮೂರ್ಖತನವೆಂದು ಕಮ್ಯುನಿಸ್ಟ್ ಶಾಸ್ತ್ರದಲ್ಲಿ ಹೇಳಿದೆ. ವಿಧಾನಸಭೆಯೆಂಬ ಬೂರ್ಜವಾ ಪ್ರಪಂಚದಲ್ಲಿರುವುದರಿಂದ ಈ ಸದಸ್ಯ ಮಹಾಶಯರಲ್ಲಿಯೂ ಬೂರ್ಜುವಾ ಮನೋವೃತ್ತಿಯುಂಟಾಗುತ್ತಿದೆಯೆಂದು ನಾಳೆ ಪಾಲಿಟ್ ಬ್ಯುರೋದವರು ಅವರ ಮೇಲೆ ಕ್ರಮಕೈಕೊಳ್ಳಬಹುದು.

* * *

ಮೈಸೂರು ವಿಧಾನಸಭೆಯ ಈ ಪ್ರಸಂಗವು ಹಿಂದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇನ್ನೊಂದು ಘಟನೆಯನ್ನು ನೆನಪಿಗೆ ತರುತ್ತದೆ. ಕಾಮನ್ಸ್ ಸಭೆಯಲ್ಲಿ ಸದಸ್ಯರೊಬ್ಬರು, "ಈ ಸಭೆಯ ಅರವಾಸಿ ಸದಸ್ಯರು ಮೂರ್ಖರು" ಎಂದೊಂದು ಟೀಕಾಸ್ತ್ರವನ್ನು ಎಸೆದರು. ಸರಿ, ಕೋಲಾಹಲವೇ ಪ್ರಾರಂಭವಾಯಿತು. ಸ್ಪೀಕರರು ನಡುವೆ ಬಂದು ಸದಸ್ಯ ಮಹಾಶಯರು ತಮ್ಮ ಈ ಅಯೋಗ್ಯ ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಆಜ್ಞಾಪಿಸಿದರು. ಸದಸ್ಯರು ನಮ್ರರಾಗಿ ಅದಕ್ಕೆ ಒಪ್ಪಿಕೊಂಡು ಹೀಗೆಂದರು: "ನಾನು ನನ್ನ ಹೇಳಿಕೆಯನ್ನು ಹಿಂತೆಗೆದುಕೊಳ್ಳುತ್ತೇನೆ ಈ ಸಭೆಯ ಅರೆವಾಸಿ ಸದಸ್ಯರು ಮೂರ್ಖರಲ್ಲ" ಎಂದರು!

* * *

ಮೈಸೂರು ವಿಧಾನಸಭೆಯಲ್ಲಿ ಮತ್ತೊಂದು ಪ್ರಕರಣವಾಗಿ ಹೋಯಿತು. ಈ ವಾರ ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರ ದೀರ್ಘಭಾಷಣವನ್ನು ಕೇಳಿದ ಮೇಲೆ ಬಹುಶಃ ಬೇಸರ ತಾಳಲಾರದೆ ಇರಬೇಕು, ಒಬ್ಬ ಕಾಂಗ್ರೆಸ್ ಸದಸ್ಯರು "ಮಾನ್ಯ ಸದಸ್ಯರ ಸುದೀರ್ಘ ಭಾಷಣ ಕೇಳಿದ ಮೇಲೆ ಅವರು ಲೋಕ ವ್ಯವಹಾರ ಜ್ಞಾನವನ್ನೆಲ್ಲ ಕಳೆದುಕೊಂಡಿದ್ದಾರೋ ಎನಿಸುತ್ತದೆ" ಎಂದರು. ಇದು ಸಂಬಂಧಪಟ್ಟ ಸದಸ್ಯರ ಮೆತ್ತನ್ನ ಚರ್ಮವನ್ನು ಕೊರೆದು ಒಳಗೆ ನಟ್ಟು ಬಿಟ್ಟಿತು "ಲೋಕ ವ್ಯವಹಾರಜ್ಞಾನ ಕಳೆದುಕೊಂಡಿದ್ದಾರೆ" ಎಂಬುದು "ಸಭ್ಯವಾಕ್ಯವೆ?" ಎಂದವರು ಅಧ್ಯಕ್ಷರನ್ನು ಪ್ರಶ್ನಿಸಿದರು. ಅಧ್ಯಕ್ಷರು ಇದು ಸಭ್ಯವಲ್ಲ ಎಂದು ಹೇಳಲು ಬರುವುದಿಲ್ಲವಾದರೂ ಸದಸ್ಯರು ಇತರ ಸದಸ್ಯರ ಮನನೋಯಿಸುವ ಪದ ಪ್ರಯೋಗಗಳನ್ನು ಮಾಡಬಾರದು ಎಂದು ಬಿನ್ನವಿಸಿಕೊಂಡರು. ಆದರೆ ನೊಂದ ಸದಸ್ಯರಿಗೆ ಇದರಿಂದ ಸಮಾಧಾನವಾಗಲಿಲ್ಲ. ಅವರೂ ಅವರ ಹಿಂದೆ ಕೆಲ ವಿರೋಧಿ ಸದಸ್ಯರೂ ಸಭೆಯಿಂದೆದ್ದು ಹೊರಬಿದ್ದು ಹೋಗಿ ಬಹುಶಃ ತಮಗಾದ ಮನಃಕ್ಲೇಶವನ್ನು, ವಿಧಾನಸಭಾ ಕ್ಯಾಂಟೀನಿನಲ್ಲಿ ಒಂದು ಕಪ್ ಕಾಫಿಯಿಂದ ತೊಳೆದುಕೊಂಡರು. ಆದರೆ ಮೈಸೂರು ವಿಧಾನಸಭೆಯ ಈ ಸದಸ್ಯರು ಸುದೈವಿಗಳೆಂದೇ ಹೇಳಬೇಕು. ಅವರು ವ್ಯವಹಾರ ಜ್ಞಾನವನ್ನು ಕಳೆದುಕೊಂಡಿದ್ದಾರೆ ಎಂಬುದರಿಂದ ಮೊದಲಾದವರೂ ಅವರಲ್ಲಿ ಅದಾ ಇತ್ತು ಎಂಬ ಧ್ವನಿತ ಪ್ರಶಂಸೆ ಹೊರಡುತ್ತದೆ. ಚುನಾವಣಾ ಸಮರದಲ್ಲಿ ಧನ ಮೊದಲಾದ ಎಷ್ಟೋ ಪದಾರ್ಥಗಳ ಸಂಗಡ ಲೋಕವ್ಯವಹಾರ ಜ್ಞಾನವನ್ನೂ ಅವರು ಕಳೆದು ಕೊಂಡಿದ್ದಾರೆಂದು ಅರ್ಥಮಾಡಿಕೊಳ್ಳಬಹುದು. ಇದರಲ್ಲಿ ಅವಮಾನವೇನಿದೆ? ಮಾನ್ಯ ಸದಸ್ಯರು ಒಂದು ತರಹದ "ದರಿದ್ರ ಚಾರುದತ್ತ" ಅಂದಂತಾಯಿತು. ಅಥವಾ ಯುದ್ಧದಲ್ಲಿ ಕೈಯನ್ನೋ ಕಾಲನ್ನೋ ಕಣ್ಣನ್ನೋ ಕಳೆದುಕೊಂಡ ಯೋಧನಂತೆ ಎಂದರೆ ಇನ್ನೂ ಸಮಂಜಸ—ಕಾಳಗದಲ್ಲಾದ ಗಾಯ ಯೋಧನಿಗೊಂದು ಅಲಂಕಾರ ತಾನೆ? ದುರ್ದೈವದಿಂದ

ಸದಸ್ಯ ಮಹಾಶಯರಿಗೆ ಮೇಲ್ಕಂಡ ವಾಕ್ಯದ ರಹಸ್ಯಾರ್ಥವನ್ನು ವಿವರಿಸಲು ಸಭೆಯಲ್ಲಾರೂ ಇಲ್ಲದ್ದರಿಂದ ಅವರು ಸಭಾತ್ಯಾಗ ಮಾಡುವಂತಾಗಿರಬೇಕು.

* * *

ಆದರೆ ಉತ್ತರಪ್ರದೇಶ ವಿಧಾನಸಭೆಯಲ್ಲಿ ಇದಕ್ಕಿಂತಲೂ ಗಂಭೀರವಾದ ಆರೋಪಗಳು ಕೇಳಿಬಂದವು. ಒಬ್ಬ ಸದಸ್ಯರು "ಈ ಸಭೆಯಲ್ಲಿರುವವರಲ್ಲಿ ಹಲವರು ಮರ್ಕಟಗಳಂತಿದ್ದಾರೆ" ಎಂದರು. ಹಲವರು ಎಂದ ಮೇಲೆ ತಾನು ಮಾರ್ಕಟಗಳಲ್ಲದ ಕೆಲವರಲ್ಲಿ ಸೇರಿದವನೆಂದು ಪ್ರತಿಯೊಬ್ಬ ಸದಸ್ಯನೂ ಸುಮ್ಮನಿದ್ದು ಬುದ್ಧಿವಂತನಾಗಿ ಬಿಡಬಹುದಿತ್ತು. ಅವರಿಗೆ ಅಷ್ಟು ಆತ್ಮವಿಶ್ವಾಸವಿದ್ದಿಲ್ಲವೋ ಏನೋ. ಅವರು ಎದ್ದು ಪ್ರತಿಭಟನಾ ಸಮಾರಂಭವನ್ನು ನೆರವೇರಿಸಿದರು. ಆದರೆ ಆರೋಪ ಮಾಡಿದ ಸದಸ್ಯ ಮಣಿಯಲಿಲ್ಲ. ಸಹ ಸಭಾಸದರನ್ನು ಮರ್ಕಟಗಳೆಂದು ಹೇಳುವುದು ಅಸಭ್ಯವಲ್ಲೆಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ತೀರ್ಮಾನ ವಾಗಿದೆಯೆಂದು ಮೇಲ್ಪಂಕಿಯನ್ನು ತೋರಿಸಿ ಅವನು ಪಟ್ಟು ಹಿಡಿದುಬಿಟ್ಟ. ಪಾರ್ಲಿಮೆಂಟಿ ನವರು ಮಂಗಗಳಾದರೆ ನಾವೂ ಆಗಬೇಕೆ? ಎಂದು ಉಳಿದವರು ಕೂಗಾಡಿದರು. ಆದರೆ ಮಂಗಗಳೆಂದಾಕ್ಷಣ ಇವರೇಕೆ ಇಷ್ಟು ರೇಗಾಡಬೇಕು? ಮರ್ಕಟಗಳು ಮನುಷ್ಯರ ಅಜ್ಜಂದಿರೆಂದು ಡಾರ್ವಿನ್ ಹೇಳಿದ್ದಾನೆ. ತಮ್ಮ ಅವಿದ್ಯಾವಂತ ತಂದೆಯನ್ನು ತಂದೆಯೆಂದೊಪ್ಪಲು ನಾಚುತ್ತಿದ್ದ ಈ ಪ್ರಸಿದ್ಧ ವಕೀಲರಂತೆ ವಿಧಾನಸಭಾ ಸದಸ್ಯರೂ ಮಾನವನ ಪಿತಾಮಹನ ಬಗ್ಗೆ ತಿರಸ್ಕಾರ ತಾಳುವುದು ಸರಿಯೆ? ಪ್ರಾಣಿಗಳ ಬಗ್ಗೆ ಮನುಷ್ಯರ ವಿಚಾರಗಳು ನಿಜವಾಗಿ ಚೋದ್ಯಕರವಾಗಿವೆ. ಇದೇ ಸದಸ್ಯನು "ಈ ಸಭೆಯಲ್ಲಿ ಅನೇಕರು ಸಿಂಹಗಳಂತಿದ್ದಾರೆ" ಎಂದೋ ಇವರು "ದಿಗ್ಗಜಗಳು" ಎಂದೋ ಹೇಳಿದ್ದರೆ ಪ್ರತಿಭಟನಾ ಪರಾಕ್ರಮಿಗಳು ಸಂತೋಷದಿಂದ ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದರು. ಆದರೆ ವಿಜ್ಞಾನಿಗಳನ್ನು ಕೇಳಿದರೆ ಸಿಂಹಗಳಾಗಲಿ ಆನೆಗಳಾಗಲಿ ಬುದ್ಧಿಯಲ್ಲಿ ಮರ್ಕಟಗಳಿಗೆ ಸರಿಯಾಗಲಾರವು ಎನ್ನುತ್ತಾರೆ. ಮತ್ತೇಕೆ ಮರ್ಕಟಗಳೆನ್ನಿಸಿಕೊಳ್ಳಲು ನಮಗೆ ನಾಚಿಕೆ?

* * *

ಭಾರತದಲ್ಲಿ ಯಾಕೋ ಏನೋ ನಾವೆಲ್ಲ ಬಲು ನಾಜೂಕಾಗಿ ಹೋಗಿದ್ದೇವೆ. ರಾಜಕಾರಣಿಗಳಾಗಲು ನಾವು ಶುದ್ಧ ಅಯೋಗ್ಯರು. ರಾಜಕಾರಣಿ ಹತ್ತು ಕೊಡಲು ಹತ್ತು ತಿನ್ನಲು ಸಿದ್ಧನಾಗಿರಬೇಕು. ಫ್ರೆಂಚ್ ಪಾರ್ಲಿಮೆಂಟನ್ನು ನೋಡಿರಿ. ಅಲ್ಲಿ ವರ್ಷಕ್ಕೆ ಹತ್ತೆಂಟು ಸಲವಾದರೂ ಇಂಥ ಕೂಗಾಟಗಳು ನಡೆಯುತ್ತವೆ. ಆದರೂ ಯಾರಾದರೂ ಸಭಾತ್ಯಾಗ ಮಾಡುತ್ತಾರೆಯೆ? ಇಲ್ಲ. ಅವರು ಮುಷ್ಟಾ ಮುಷ್ಟಿ ಕೇಶಾಕೇಶಿಯಿಂದ ತಮ್ಮ ಪಕ್ಷವನ್ನು ಸಮರ್ಥಿಸಿಕೊಳ್ಳುತ್ತಾರೆ. ಕುರ್ಚಿಗಳು ಲಾಗಹಾರುತ್ತವೆ, ಮಸಿ ದವತಿಗಳು ಹಾರಾಡುತ್ತವೆ, ಡೆಸ್ಕುಗಳು ಉರುಳುತ್ತವೆ. ವೀರಪಂಥಕ್ಕೆ ಸರಿಯೆನಿಸುವಂತೆ ಮಹಿಳಾ ಸದಸ್ಯರೂ ಇದರಲ್ಲಿ ಹುರುಪಿನಿಂದ ಭಾಗವಹಿಸುತ್ತಾರೆ. ಅನೇಕರಿಗೆ ಗಾಯಗಳಾಗುತ್ತವೆ. ಆದರೆ ಅವರೆಂದೂ

ರಣಸಂನ್ಯಾಸ ತೆಗೆದುಕೊಂಡು ಸಭಾತ್ಯಾಗ ಮಾಡುವುದಿಲ್ಲ. ಇದಕ್ಕೆನ್ನಬೇಕು ರಾಜಕಾರಣವೆಂದು. ಅಷ್ಟು ದೂರವೇಕೆ, ನಮ್ಮ ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ ಕೂಡ ಪಾರ್ಲಿಮೆಂಟಿನ ಕಲಹ ಮಾತಿನಿಂದ ಬಲುಬೇಗ ಕೃತಿಗಿಳಿಯುತ್ತದೆ. ಇದಕ್ಕಾಗಿ ಅವರು ನಮಗಿಂತ ಕಡಿಮೆ "ಪ್ರಜಾಸತ್ತಾತ್ಮಕ"ರೆನಿಸಿದ್ದಾರೆಯ? ಪಕ್ಕಾ ಖಿಲಾಡಿಗಳವರು. ಈ ಬಗೆಯ ಶೌರ್ಯವಿರುವುದ ರಿಂದಲೇ ಅವರ ವಿದೇಶನೀತಿ ನಮ್ಮದಕ್ಕಿಂತ ಯಶಸ್ವಿಯಾಗುತ್ತಿದೆ!

* * *

ರಾಜಕಾರಣಿಗಳ ಚರ್ಮ ದಪ್ಪವಿರಬೇಕೆಂದು ಇಂಗ್ಲೆಂಡಿನಲ್ಲಿ ನ್ಯಾಯಸ್ಥಾನದಲ್ಲಿಯೇ ತೀರ್ಮಾನವಾಗಿಹೋಗಿದೆ. ಕೂಲಿಕಾರಪಕ್ಷದ ಅಧ್ಯಕ್ಷರಾದ ದಿವಂಗತ ಹೆರಾಲ್ಡ್ ಲಾಸ್ಕಿಯವರು ವಿನ್‌ಸ್ಟನ್ ಚರ್ಚಿಲ್ಲರ ಮೇಲೆ ಮಾನಹಾನಿ ಮೊಕದ್ದಮೆ ಹೂಡಿದರು. ಲಾಸ್ಕಿಯವರ ವಿಷಯಕ್ಕೆ ಚರ್ಚಿಲ್ಲರು ಒಂದು ಭಾಷಣದಲ್ಲಿ ಅವಮಾನಕರ ಮಾತುಗಳನ್ನಾಡಿದ್ದರಂತೆ. ವಿಚಾರಣೆ ದೀರ್ಘವಾಗಿ ನಡೆಯಿತು. ಕೊನೆಗೆ ನ್ಯಾಯಾಧೀಶರು ಲಾಸ್ಕಿಯವರ ದಾವೆಯನ್ನು ಕಿತ್ತು ಹಾಕಿ ರಾಜಕಾರಣಿಯಾಗತಕ್ಕವನು ಒಂದು ಸ್ವಲ್ಪ ದಪ್ಪ ಚರ್ಮ ಬೆಳಸಿಕೊಳ್ಳಬೇಕು. ಖಾಸಗಿ ನಾಗರಿಕರಿಗೆ ಮಾನಹಾನಿಕರವಾದ ಹೇಳಿಕೆಗಳೆಲ್ಲ ರಾಜಕಾರಣಿಗೆ ಮಾನಹಾನಿಕರ ವೆನಿಸಲಾರವು ಎಂದು ತೀರ್ಪಿತ್ತರು. ಬಡ ಲಾಸ್ಕಿಯವರ ಇದ್ದಬಿದ್ದ ಹಣವೆಲ್ಲ ಈ ದಾವೆ ಯಲ್ಲಿ ವಕೀಲರ ಪಾಲಾಯಿತು. ಕೊನೆಗೆ ಅವರಿಗೆ ಅವರ ಅಭಿಮಾನಿಗಳು ಫಂಡು ಕೂಡಿಸಿ ಕೊಟ್ಟು ಬಡತನದಿಂದ ಅವರನ್ನು ಪಾರುಮಾಡಿರು.

❑

# ಮೂಷಕ ಪುರಾಣ

**ಮೂ**ಷಕಗಳು ನಮ್ಮ ಲೋಕಸಭೆಯಲ್ಲಿ ಈ ಚಳಿಗಾಲದ ಅಧಿವೇಶನಲ್ಲಿ ಪ್ರಾಧಾನ್ಯ ಪಡೆದವು. ಕೃಷಿಸಚಿವ ಶಿಂದೆಯವರು ಈ ದೇಶದ ಇಲಿ ಹೆಗ್ಗಣಗಳ ಸಂಖ್ಯೆಯನ್ನು ಸುಮಾರು ೨೪೦ ಕೋಟಿ ಎಂದು ಅಂದಾಜು ಮಾಡಿದರು. ಈ ಅಂದರೆ ನಾಲ್ಕು ಕಾಲಿನ, ಹೆಗ್ಗಣಗಳು ಬಹಳ ಆಹಾರವನ್ನು ಹಾರಿಸುವವೆಂದು ಶಿಂದೆಯವರು ಒಪ್ಪಿದರು. ಆದರೆ ಎಂದಿನಂತೆ ಈ ಮೂಷಕೋಪದ್ರವದ ವಿಷಯದಲ್ಲಿ ಶಿಂದೆಯವರು ಏನು ಮಾಡುವುದಕ್ಕೂ ಅಸಮರ್ಥರಾಗಿದ್ದಾರೆ. ಏಕೆಂದರೆ ಮೂಷಕಗಳು ಕೇಂದ್ರ ಸರಕಾರದ ಅಧಿಕಾರದಲ್ಲಿ ಬರುವುದಿಲ್ಲ; ಅವು ಪೂರ್ತಿಯಾಗಿ ರಾಜ್ಯಸರ್ಕಾರಗಳ ಜವಾಬ್ದಾರಿಯಾಗಿವೆ.

ಶಿಂದೆಯವರದು ಪೂರ್ಣ ಸತ್ಯವಲ್ಲ ಎಂದು ವಿನಯದಿಂದ ನಿವೇದಿಸಿಕೊಳ್ಳುತ್ತೇನೆ. ನಾಲ್ಕು ಕಾಲಿನ ಇಲಿಗಳು ಹೇಗೇ ಇರಲಿ, ಎರಡು ಕಾಲಿನವುಗಳಿಗೆ ಮುಖ್ಯ ಆಶ್ರಯದಾತರು ಕೇಂದ್ರದವರೇ ಎಂದು ನನಗೆ ತೋರುತ್ತದೆ. ಶಿಂದೆಯವರು ಇವುಗಳ ಉಪಟಳದ ಜವಾಬ್ದಾರಿಯನ್ನು ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲಾರರು. ಇವುಗಳಲ್ಲಿ ಕೆಲವು ನಮ್ಮ ಗಣನಾಯಕರಾದ ಮಂತ್ರಿಗಳ ವಾಹನಗಳಾಗಿಯೇ ಅವರ ಸಂಗಡ ಇವೆ. ಅವು ದೇಶದಲ್ಲಿನ ನ್ಯಾಯನೀತಿಯ ಗೋಡೆಗಳ ಬುಡವನ್ನೇ ಕೊರೆದು ಬಿಲತೋಡಿಕೊಂಡು ವಾಸಿಸುತ್ತವೆ. ಯಾರಾದರೂ ಬಲೆಹಾಕಿ ಅವುಗಳನ್ನು ಹಿಡಿದರೆ ಅವು ಮಂತ್ರಿಗಳನ್ನು ದೈನ್ಯದ ನೋಟದಿಂದ ನೋಡಿ ಪಂಜೆಯವರ ಇಲಿಯ ಹಾಗೆ "ಗೋಡೆ ಸಂದಿನ ಬಿಲದಿ ಜೋಡುಮಕ್ಕಳ ಹಡೆದು ಕೂಡಿ ಸಂಸಾರವನು ಹೂಡಿರುವೆನಮ್ಮಾ" ಎಂದು ಹಾಡಲಾರಂಭಿಸುತ್ತವೆ. ಗಣನಾಯಕರು ಕರುಣೆಯಿಂದ ಅವುಗಳನ್ನು ಬಿಡಿಸುತ್ತಾರೆ. ಕೆಲವೊಂದು ಹೆಗ್ಗಣಗಳು ತಮ್ಮ ವಿರುದ್ಧ ಗುಪ್ತ ಪೋಲೀಸ್ ಮತ್ತು ವಿಚಾರಣಾ ಆಯೋಗಗಳು ಒಪ್ಪಿಸಿದ ವರದಿಗಳನ್ನೇ ತಿಂದು ಕೊಬ್ಬುತ್ತಿವೆ.

ಈ ದ್ವಿಪಾದ ಮೂಷಕಗಳ ಕಡೆಯಿಂದ ಲಕ್ಷ್ಯವನ್ನು ಬೇರೆ ಕಡೆ ಹರಿಸಲೆಂದೇ ಆಗಾಗ್ಗ ಚತುಷ್ಪಾದ ಇಲಿ ಹೆಗ್ಗಣಗಳ ಪ್ರಶ್ನೆಯನ್ನು ಮುಂದೆ ತರಲಾಗುತ್ತಿದೆಯೋ ಎಂಬುದಾಗಿ ನನಗೆ ಸಂಶಯ. ಸಚಿವ ಶಿಂದೆಯವರ ಲೆಕ್ಕದಂತೆ ಈ ದೇಶದಲ್ಲಿ ಪ್ರತಿ ಒಬ್ಬ ಮನುಷ್ಯನಿಗೆ ಐದು ಮೂಷಕಗಳಿವೆಯೆಂದು ಅರ್ಥವಾಗುತ್ತದೆ. ಒಬ್ಬ ಮನುಷ್ಯ ಐದು ಇಲಿಗಳನ್ನು ಸಾಕಲಾರನೇ? ಎರಡು ಬೇಕು ಮೂರು ಸಾಕಿನ ಯುಗದಲ್ಲಿ ಕೆಲವರಿಗೆ ಇದಕ್ಕೂ ಹೆಚ್ಚು ಇಲಿಗಳನ್ನು ಸಾಕುವುದಕ್ಕೆ ಸಾಧ್ಯವಾಗಬೇಕು. ನೀವು ಇಲಿಗಳನ್ನೆಲ್ಲಾ ಕೊಂದರೆ ಹಾವುಗಳು

ಉಪವಾಸ ಬೀಳಬೇಕಾಗುತ್ತದೆ. ಅವು ನಿಮ್ಮ ಮನೆಗಳಿಗೆ ಚಿತ್ತೈಸಿ ಶಿಬಿಚಕ್ರವರ್ತಿಗೆ ಡೇಗೆ ಸವಾಲು ಹಾಕಿದ ಹಾಗೆ ತಮ್ಮ ಅನ್ನವನ್ನು ತೆಗೆದದ್ದಕ್ಕಾಗಿ ಪರಿಹಾರ ಕೇಳಬಹುದು. ನಮ್ಮ ಮಂತ್ರಿಗಳಿಗೆ ಜನ ಹೆದರಬೇಕಾದರೆ ಹಾವುಗಳು ಬೇಕೇ ಬೇಕು. ಅವು ಉಪವಾಸ ಬಿದ್ದರೆ ಮಂತ್ರಿಗಳಿಗೇ ಗಂಡಾಂತರ.

ಕೆಲ ಸದಸ್ಯರು ಇಲಿಗಳ ಹಾವಳಿಯನ್ನು ಎದುರಿಸುವುದಕ್ಕೆ ಸಲಹೆಗಳನ್ನು ಮಾಡಿದರು. ಹಿಂದೊಬ್ಬ ಮಂತ್ರಿಗಳು ಇಲಿ ಹೆಗ್ಗಣಗಳಿಂದ ರುಚಿರುಚಿಯಾದ ಅಡಿಗೆ ಮಾಡಬಹುದೆಂದು ಸೂಚಿಸಿದರು ಮತ್ತು ಮಂತ್ರಿಗಳ ಎಲ್ಲಾ ಮಂತ್ರೋಪದೇಶಗಳ ಹಾಗೆ ತಾವು ಅದನ್ನು ಪಾಲಿಸಿ ತೋರಿಸಲಿಲ್ಲ. ಈಗಿನ ಮಂತ್ರಿಗಳು ಮೂಷಕ ರಿಸಿಪೆಗಳನ್ನು ತಯಾರಿಸಬೇಕೆಂದೂ ತಾವೇ ಮೊದಲು ತಿಂದು ತೋರಿಸಬೇಕೆಂದೂ ಒಬ್ಬರು ಸೂಚಿಸಿದ್ದರು. ಇದರಿಂದ ಹೆಚ್ಚು ವೋಟುಗಳು ಸಿಗುವುದಾದರೆ ಮಂತ್ರಿಗಳು ಇದಕ್ಕೆ ಸಿದ್ಧರಾಗಲೂಬಹುದು. ಆದರೆ ಅವರಿಗೆ ವೋಟು ಕಳೆದುಕೊಳ್ಳುವ ಹೆದರಿಕೆ. ಮೂಷಕಗಳು ವಿನಾಯಕನ ವಾಹನ. ಪವಿತ್ರ ಪ್ರಾಣಿಗಳು. ಅವುಗಳನ್ನು ತಿಂದರೆ ಹಿಂದುಗಳು ಮುನಿಯಬಹುದು. ವಿನಾಯಕನು ಮುಂದಿನ ಚುನಾವಣೆಗಳಲ್ಲಿ ವಿಘ್ನ ತರಬಹುದು. ಈಗಿನ ರಾಜಕೀಯ ಸ್ಥಿತಿಯಲ್ಲಿ ಮಂತ್ರಿಗಳು ಇಲಿಗಳನ್ನು ಕೂಡ ಎದುರು ಹಾಕಿಕೊಳ್ಳಲು ತಯಾರಿಲ್ಲ.

ಇಲಿಗಳನ್ನು ರಫ್ತುಮಾಡಿಬಿಡಬಾರದೇಕೆ? ಎನ್ನುವುದು ಇನ್ನೊಬ್ಬರ ಪ್ರಶ್ನೆ. ಚೀನಿಯರು ಅವುಗಳನ್ನು ತಿನ್ನುತ್ತಾರಂತೆ. ಅಲ್ಲಿಗೆ ಅವುಗಳನ್ನು ಸಾಗಹಾಕಿದರೆ ಹೇಗೆ? ಬಹಳ ಅಪಾಯಕರ ಸೂಚನೆ. ನಾವು ಕಳಿಸಿದ ಇಲಿಗಳನ್ನು ಅವರು ತಿನ್ನದೆ ಕಮ್ಯುನಿಜಂಗೆ ಪರಿವರ್ತಿಸಿ ತಿರುಗಿ ಗಡಿಗಳಲ್ಲಿ ಗುಟ್ಟಾಗಿ ಕಳಿಸಿದರೆ ಏನು ಗತಿ? ಅವು ಭಾರತದ ೨೪೦ ಕೋಟಿ ಇಲಿಗಳಿಗೆ ಕಮ್ಯುನಿಜಂ ದೀಕ್ಷೆ ಕೊಟ್ಟುಬಿಡಬಹುದು. ಚೀನಿ ಕಮ್ಯುನಿಸ್ಟರಿಗೆ ಈಗ ಭಾರತೀಯ ಕಮ್ಯುನಿಸ್ಟ್ ಮನುಷ್ಯರ ಮೇಲೆ ವಿಶ್ವಾಸ ಹಾರಿಹೋಗಿದೆ. ಇವರು ತೀರ ಭೋಗಲೋಲುಪರಾಗಿಬಿಟ್ಟಿದ್ದಾರೆಂದು ಮಾವೊತ್ಸೆ ತುಂಗರಿಗೆ ಖಚಿತವಾಗಿದೆ. ನಕ್ಸಲೀಯರು ಕೂಡ ನಾಲಾಯಖ್ ಕಮ್ಯುನಿಸ್ಟರೆಂದೇ ಅವರ ತೀರ್ಮಾನವಾಗಿದೆ. ಧೈರ್ಯವಾಗಿ ಭೂಗತ ಕೆಲಸ ಮಾಡಿ ಭಾರತೀಯ ಬೂರ್ಜುವಾ ರಾಜ್ಯದ ಕಟ್ಟಡ ಮನುಷ್ಯರಿಗಿಂತ ಸಮರ್ಥರೆಂದು ಮಾವೋ ನಿರ್ಣಯಿಸಿದ್ದಾರೆ. ನೀವು ಅವರಿಗೆ ಕಪ್ಪು ಅಥವಾ ಬಿಳಿ ಇಲಿಗಳನ್ನು ಕಳಿಸಿದರೆ ಅವುಗಳನ್ನು ಕೆಂಪು ಇಲಿಗಳಾಗಿ ಮಾಡಿ ಗುಟ್ಟಾಗಿ ಇಲ್ಲಿ ಕಳಿಸಿಬಿಡಬಹುದು. ಇಂದಿರಾ ಗಾಂಧಿಯವರು ಕೂಡ ಇದನ್ನು ಮೆಚ್ಚಲಿಕ್ಕಿಲ್ಲ. ಅವರಿಗೆ ಕಮ್ಯುನಿಸ್ಟ್ ಮತಗಳು ಬೇಕೇ ಹೊರತು ಕಮ್ಯುನಿಸ್ಟ್ ಭೂಗತ ಚಟುವಟಿಕೆಗಳಲ್ಲ.

* * *

❑

# ಯಾರೂ ಕೆಮ್ಮಬಾರದು

ಸೃಷ್ಟಿಯಲ್ಲಿರುವ ಜೀವಿಗಳಲ್ಲಿ ಮನುಷ್ಯನೇ ಅತಿ ಬುದ್ಧಿವಂತನೆನ್ನುವದರಲ್ಲಿ ಸಂಶಯವೇ ಇಲ್ಲ. ತಾನಿತ್ತ ಬುದ್ಧಿಯ ಉಪಯೋಗವನ್ನು ಮಾಡಿ ಮನುಷ್ಯ ಸಾಧಿಸಿರುವ ಸಾಹಸ ಚಮತ್ಕೃತಿಗಳನ್ನು ಕಂಡು ಆ ದೇವರು ಕೂಡ ಆಶ್ಚರ್ಯಚಕಿತನಾಗಿರಲಿಕ್ಕೇ ಬೇಕು. ಲಯಕಾರ್ಯಕ್ಕಾಗಿ ದೇವರು ನಿಯೋಜಿಸಿರುವ ನಾನಾ ವಿಧದ ರೋಗಾದಿಗಳು, ಭೂಕಂಪ—ನೆರೆ ಮುಂತಾದವುಗಳು ಸಾಲದೇನೋ ಅನ್ನುವಂತೆ, ಸಾವಿರಾರು ರೋಗ—ಭೂಕಂಪ ನೆರೆಗಳು ಕೊಲ್ಲಬಹುದಾದ ಜನರ ನೂರ್ಮಡಿ ಜನರನ್ನು ನಿಮಿಷಾರ್ಧದಲ್ಲಿ ಕೊಲ್ಲುವಂಥ ಆ್ಯಟಂ ಹೈಡ್ರೋಜನ್ ಮುಂತಾದ ಬಾಂಬುಗಳನ್ನು ಮನುಷ್ಯ ತಯಾರಿಸಿದ್ದಾನೆ. ಬದುಕುವದಕ್ಕೆ ನಿಸರ್ಗದತ್ತ ಆಹಾರಾದಿಗಳು ಸಾಕು ಎಂದು ದೇವರು ಯೋಜಿಸಿದ್ದರೆ ಸಾಲದು ಎಂದು ಮನುಷ್ಯ ಆಹಾರ ವಿಚಾರದಲ್ಲಿ ತನ್ನ ಕೈ ಚಮತ್ಕೃತಿ ತೋರಿಸಿದ್ದಾನೆ. ಮೃತ್ಯುವನ್ನು ಕೂಡ ಗೆದ್ದು ಸೃಷ್ಟಿಕರ್ತನೆಂಬ ಬಿರುದನ್ನು ದೇವರಿಂದ ಕಸಿದುಕೊಳ್ಳುವ ಅಟ್ಟಹಾಸವನ್ನೂ ನಡೆಸಿದ್ದಾನೆ.

* * *

ಆದರೆ ಇಷ್ಟು ಬುದ್ಧಿವಂತನಾದ ಮನುಷ್ಯ, ದಿನ ದಿನವೂ ತನ್ನ ಬುದ್ಧಿಶಕ್ತಿಯನ್ನು ದ್ವಿಗುಣಿತಗೊಳಿಸಿಕೊಳ್ಳುತ್ತಿರುವ ಮನುಷ್ಯ, ತೀರ ಸಾಮಾನ್ಯವಾದ ಕೆಲ ವಿಚಾರಗಳಿಗೆ ಇನ್ನೂ ಗುಲಾಮನಾಗಿಯೇ ಇದ್ದಾನೆ. ಅಸಾಧ್ಯವಾದ ರೋಗಗಳನ್ನು ಗುಣಪಡಿಸುವ ಔಷಧಗಳನ್ನು ಕಂಡುಹಿಡಿದಿದ್ದರೂ ದೇಹದಲ್ಲಿನ ನಿಸರ್ಗದತ್ತ ಅವಯವವೊಂದನ್ನು ಕಿತ್ತೆಸೆದು ಕೃತಕ ಅವಯವವನ್ನು ಜೋಡಿಸಿ ಕಾರ್ಯಮಾಡಿಸಿಕೊಳ್ಳಲು ಸಮರ್ಥನಾಗಿದ್ದರೂ ಮನುಷ್ಯನಿಗೆ ತೀರ ಸಾಮಾನ್ಯವಾಗಿ ಬರುವ ನೆಗಡಿ, ಕೆಮ್ಮು, ಸೀನು ಮುಂತಾದವುಗಳನ್ನು ನಿಗ್ರಹಿಸುವದಾಗಿಲ್ಲ. ಒಂಟಿ ಸೀನು ಸೀನುವದು ಅವಲಕ್ಷಣವೆಂದು ಭಾವನೆ—ಏಕೆ, ನಂಬಿಗೆ ಇದ್ದರೂ ಶುಭಕಾರ್ಯದ ಮಾತು ಮನೆಯಲ್ಲಿ ನಡೆದಾಗ ಕೂಡ ಒಂಟಿ ಸೀನುವದನ್ನು ಮನುಷ್ಯ ತಡೆದುಕೊಳ್ಳಲಾರದವನಾಗಿದ್ದಾನೆ. ತುತ್ತು ಬಾಯಲ್ಲಿದ್ದಾಗ ಕೆಮ್ಮಿದರೆ ಸುತ್ತಲಿದ್ದವರ ಎಲೆಯಲ್ಲಿ ಎಂಜಲನ್ನ ಬಿದ್ದು ಆಭಾಸವಾಗುವದೆಂಬ ಅರಿವಿದ್ದರೂ ಬರುವ ಕೆಮ್ಮನ್ನು ತಡೆದುಕೊಳ್ಳಲಾರದವನಾಗಿದ್ದಾನೆ.

* * *

ಇಂಥ ಸಾಮಾನ್ಯವಾದ ಚಿಕ್ಕ ಪುಟ್ಟ ವಿಷಯಗಳಲ್ಲಿ ಮನುಷ್ಯ ಇನ್ನೂ ಪರತಂತ್ರನಾಗಿಯೇ

ಉಳಿದಿದ್ದಾನೆ. ಅವನ ಕುಶಾಗ್ರಬುದ್ಧಿಯ ಶಕ್ತಿಗೆ ಇವಿನ್ನೂ ತಲೆ ಬಾಗಿಲ್ಲವಾದ್ದರಿಂದ ಅವನಿಂದು ಅನೇಕ ಸಲ ಪೇಚಿಗೆ ಸಿಲುಕಿಕೊಳ್ಳುತ್ತಿದ್ದಾನೆ. ಮೊನ್ನೆ ಮೊನ್ನೆ ಭಾರತದ ಲೋಕಸಭೆಯಲ್ಲಿ ಓರ್ವ ಸದಸ್ಯರು ಹೀಗೆಯೇ ಫಜೀತಿಗೊಳಗಾದರು. ಅವರ ಪ್ರಯತ್ನ, ಮನೋನಿರ್ಧಾರಗಳನ್ನು ಲೆಕ್ಕಿಸದೆ ಅವರಿಗೆ ಕೆಮ್ಮು ಬಂತು. ಸಭೆಯ ಉಪಾಧ್ಯಕ್ಷರು ತಡೆಯಲಾರದೆ "ಸಭೆಯಲ್ಲಿ ಯಾರೂ ಕೆಮ್ಮ ತಕ್ಕದ್ದಲ್ಲ" ಎಂದು ವಿಧಿಸಬೇಕಾಗಿ ಬರುವಂಥ ಪ್ರಸಂಗವುದ್ಭವಿಸುವ ಮಟ್ಟಿಗೆ ಈ ಸದಸ್ಯರು ಒಂದೇ ಸವನೆ ಕೆಮ್ಮಿದರು. ಕೆಮ್ಮಿನ ಧ್ವನಿಯಿಂದ ಸಭಾಕಾರ್ಯಕ್ಕೆ ವ್ಯತ್ಯಯವುಂಟಾಗಲು ಉಪಾಧ್ಯಕ್ಷರು "ಸಭೆಯಲ್ಲಿ ಯಾರೂ ಕೆಮ್ಮಲಾಗದು. ಒಂದು ವೇಳೆ ಕೆಮ್ಮದಿರುವುದು ಅಸಾಧ್ಯವಾದರೆ ಕೆಮ್ಮು ಬಂದ ಸದಸ್ಯರು ಕೆಮ್ಮಿ ಸುಧಾರಿಸಿಕೊಳ್ಳುವ ಮಟ್ಟಿಗೆ ಸಭಾಭವನದಿಂದ ಹೊರಗೆ ಹೋಗಬಹುದು" ಎಂದು ಹೇಳಿದರು.

* * *

ಸದಸ್ಯರು ಕೆಮ್ಮಿದ್ದೂ ಸರಿ; ಉಪಾಧ್ಯಕ್ಷರು ಹೇಳಿದ್ದೂ ಸರಿ ಎಂದು ಸುಮ್ಮನಿರೋಣ ವೆಂದರೆ ಎರಡು ವಿಧದಲ್ಲಿ ಸೋತಂತೆ ಎಂದು ಲಾಂಗೂಲಾಚಾರ್ಯರ ಅಭಿಪ್ರಾಯ. ಕೆಮ್ಮುವದು ಬಿಡುವದು ನಮ್ಮ ಕೈಯೊಳಗಿನ ಮಾತಲ್ಲವೆಂಬುದು ನಿಚ್ಚಳ ವಾಗಿರುವಾಗ, ಅದು ಇಂಥಲ್ಲಿ ಬರಬಹುದು ಇಂಥಲ್ಲಿ ಬರಲಾಗದು ಎಂದು ವಿಧಿಸುವದು ಸಾಧ್ಯವೇ? ಕೆಮ್ಮಿನ ವಿಚಾರದಲ್ಲಿ ನಮ್ಮ ಬುದ್ಧಿ ಶಕ್ತಿಗಳೆರಡೂ ಶರಣು ಎಂದಾಗ ಸೋಲನ್ನೊಪ್ಪಿಕೊಂಡು ಕೆಮ್ಮದೆ ಇನ್ನೇನು ಮಾಡಲಾದೀತು! ಬಹಳ ಕೆಮ್ಮಿದರೆ ಸಭೆಯ ಕಾರ್ಯಕ್ಕೆ ವ್ಯತ್ಯಯ ಬರಬಹುದು ಎಂಬ ಮಾತು ನಿಜವಾದರೂ ತನ್ನಾಧೀನವಲ್ಲದ ವಿಚಾರಗಳಲ್ಲೂ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲದೆ ಹೋದರೆ ಆಗ ಉಳಿಯುವದಾದರೂ ಎಂತು? ಉಪಾಧ್ಯಕ್ಷರ ಮಾತಿಗೆ ಹೂಂ ಎಂದರೆ ಸ್ವಾತಂತ್ರ್ಯ ಹರಣಕ್ಕವಕಾಶ ಕೊಟ್ಟು ಎರಡನೆಯ ಸೋಲನ್ನು ಅನುಭವಿಸಿ ದಂತಾಗುವದಿಲ್ಲವೇ?

* * *

ಉಪಾಧ್ಯಕ್ಷರು ಈ ರೀತಿ ವಿಧಿಸಿದ ಮಾರನೆಯ ದಿನ ಈ ತರ್ಕದ ಆಧಾರದಿಂದಲೇ ಆಚಾರ್ಯರು ಮುಂದಿನ ಸುದ್ದಿಯನ್ನು ಪೇಪರಿನಲ್ಲಿ ಹುಡುಕಾಡಿದರು. ವ್ಯಕ್ತಿ ಸ್ವಾತಂತ್ರ್ಯ ಮಹಿಮೆಯ ಈ ಕಾಲದಲ್ಲಿ ಕೆಮ್ಮುವದು ಮನುಷ್ಯನ ನಿಸರ್ಗ ಸಿದ್ಧ ಹಕ್ಕು ಎಂದು ಲೋಕಸಭಾಸದಸ್ಯರು ಪ್ರತಿಭಟಿಸಿ ಹೇಳಿಕೆ ಕೊಟ್ಟಿರಬೇಕು ಎಂದು ಆಚಾರ್ಯರು ಊಹಿಸಿದ್ದರು ಆದರೆ ಮರುದಿನವಾಗಲಿ, ಮುಂದಿನ ದಿನಗಳಲ್ಲಿಯಾಗಲಿ ಇಂಥ ಪ್ರತಿಭಟನೆ ಯಾದದರ ಸಮಾಚಾರವೇ ಬಾರದ್ದನ್ನು ಕಂಡು ಮೊದಲು ಆಶ್ಚರ್ಯವೆನಿಸಿದರೂ ನಂತರ ಆಚಾರ್ಯರಿಗೆ ಅದರ ಗುಟ್ಟು ಹೊಳೆಯಿತು.

ಲೋಕಸಭೆ, ವಿಧಾನಸಭೆ ಮುಂತಾದವುಗಳ ಸದಸ್ಯರಾಗಲು ಅನೇಕರು ಬಯಸಿ ಅದಕ್ಕಾಗಿ ನಾನಾ ವಿಧವಾದ ಪರಿಶ್ರಮ ಪಟ್ಟು ಸದಸ್ಯರಾಗುತ್ತಾರೆ. ಏನೋ ಒಂದು ಗೌರವ,

ಒಂದು ಲಾಭದಾಸೆ ಈ ಪ್ರಯತ್ನದ ಮೂಲದಲ್ಲಿರುತ್ತದೆ. ಈ ಸಭೆಗಳಿಗೆ ಹೋಗಿ ತಮಗೆ ತಿಳಿಯದ ಅಥವಾ ಸ್ವಲ್ಪ ಸ್ವಲ್ಪ ತಿಳಿದರೂ ಅಭಿರುಚಿಯಿಲ್ಲದ ವಿಷಯಗಳಲ್ಲಿ ಯಾರು ಯಾರೋ ತಾಸುಗಟ್ಟಲೆ ತವಡು ಕುಟ್ಟುವದನ್ನು ಕೇಳುತ್ತ ಕುಳಿತುಕೊಳ್ಳುವುದೇನು ಸಾಮಾನ್ಯವಲ್ಲ. ಮನುಷ್ಯ ಎಂದ ಮೇಲೆ ಚಹದ್ದೋ, ಸಿಗರೇಟಿನದೋ, ನಸ್ಯದ್ದೋ, ಎಲೆ ಅಡಿಕೆಯದೋ ಯಾವುದಾದರೊಂದು ಚಟ ಇದ್ದೇ ಇರುತ್ತದೆ. ಈ ಚಾಪಲ್ಯದ ತೃಪ್ತಿಗೆ ಅವಕಾಶವಿಲ್ಲದೆ ತಾಸೆರಡುತಾಸು ತಪಸ್ವಿಯಂತೆ ಕುಳಿತಿರುವದೆಂದರೆ ಸಶ್ರಮ ಶಿಕ್ಷೆಗಿಂತಲೂ ಕಠಿಣವಾದ ಮಾತು ಎಂಬುದನ್ನು ಚಟವಿದ್ದವರು ಹೇಳಬಲ್ಲರು. ಇಂಥ ಕಷ್ಟವನ್ನು ಸಹಿಸಿ ಯಾವ ಕೆಲಸವಿಲ್ಲದೆ ತಟಸ್ಥರಾಗಿ ಕುಳಿತಾಗ ತೂಕಡಿಕೆ, ಆಕಳಿಕೆ, ಕೆಮ್ಮು (ನೆಗಡಿಯಾಗಿದ್ದರೆ) ಸೀನುಬಾರದೆ ಬಿಟ್ಟೀತೇ? ಒಂದು ವೇಳೆ ಬಾರದಿದ್ದರೂ ಅವುಗಳಲ್ಲೊಂದನ್ನು ಬರಿಸಿಕೊಳ್ಳುವದು ಮನಸ್ಸಿನ ಆಲಸ್ಯವನ್ನು ನಿವಾರಿಸಿಕೊಳ್ಳಲು ಅಗತ್ಯವಾಗುವದು.

* * *

ಸಭೆಯಲ್ಲಿ ಯಾರೂ ಕೆಮ್ಮಬಾರದು ಎಂದಿಷ್ಟೇ ಉಪಾಧ್ಯಕ್ಷರು ಹೇಳಿದ್ದರೆ ಅದರ ವಿರೋಧ ಒಂದು ಚಳುವಳಿಯನ್ನು ಕನಿಷ್ಠ ವಿರೋಧಿ ಪಕ್ಷದವರಾದರೂ ಹೂಡುತ್ತಿದ್ದರು. ಎಲ್ಲರೂ ಏಕಕಾಲಕ್ಕೆ ಇಲ್ಲವೆ ಒಬ್ಬರ ನಂತರ ಒಬ್ಬರು ಸಭೆಯಲ್ಲಿ ಕೆಮ್ಮಿ ಸಭೆಯಲ್ಲಿ ಕೋಲಾಹಲವನ್ನೆಬ್ಬಿಸುತ್ತಿದ್ದರು. ಆದರೆ ಹಾಗಾಗದಿರಲಿ ಎಂಬ ಮುಂಜಾಗ್ರತೆಯಿಂದ ಉಪಾಧ್ಯಕ್ಷರು ಕೆಮ್ಮು ಬಂದವರು ಹೊರಗೆ ಹೋಗಬಹುದು ಎಂದು ಹೇಳಿದ್ದರಿಂದ ಈ ಚಳವಳಿಯ ವಿಚಾರಕ್ಕೆ ಅವಕಾಶ ಸಿಗಲಿಲ್ಲ. ಹಾಗೆ ಹೇಳಿದ್ದು ಸದಸ್ಯರಿಗೆ ಒಂದು ಉಪಕಾರದ ಮಾತೇ ಆಯಿತೆ.

* * *

ಏಕೆಂದರೆ ಹೊರಗೆ ಹೋಗಬೇಕೆಂಬ ಬಯಕೆಯಾದೊಡನೆ ಒಂದೆರಡು ಸಲ ಕೆಮ್ಮಿದರೆ ಆಯಿತಲ್ಲ! ಹೊರಗೆ ಬಂದ ಬಳಿಕ ಒಳಗಿಲ್ಲದ ಸ್ವಾತಂತ್ರ್ಯ ಸಿಕ್ಕು ಅಷ್ಟು ಹೊತ್ತು ಸಂತೋಷದಿಂದಿರಬಹುದಲ್ಲ! ಉಪಾಧ್ಯಕ್ಷರ ಈ ಹೇಳಿಕೆ ಲೋಕಸಭಾಸದಸ್ಯರಲ್ಲಿ ಅನೇಕರಿಗೆ ಅಪರಿಮಿತ ಆನಂದವನ್ನುಂಟುಮಾಡಿದೆಯೆಂದು ಆಚಾರ್ಯರಿಗೆ ತಿಳಿದುಬಂದಿದೆ. ಅದಕ್ಕಾಗಿ ಉಪಾಧ್ಯಕ್ಷರನ್ನು ಬಹಿರಂಗವಾಗಿ ಅಭಿನಂದಿಸಬೇಕೆಂಬ ವಿಚಾರ ಈ ಸದಸ್ಯರಿಗೆ ಬಂದಿತ್ತೆಂದೂ ಆದರೆ ಹಾಗೆ ಮಾಡಿದಲ್ಲಿ ಉಪಾಧ್ಯಕ್ಷರಿಗೆ ತಮ್ಮ ತಪ್ಪಿನ ಅರಿವಾಗಿ ಅವರು "ಕೆಮ್ಮಲೂ ಬಾರದು, ಹೊರಗೆ ಹೋಗಲೂ ಬಾರದು" ಎಂದು ಪುನಃ ವಿಧಿಸಿ ಪೇಚಿಗೆ ಹಾಕಬಹುದೆಂಬ ವಿಚಾರದಿಂದ ಅಭಿನಂದನೆಯ ವಿಚಾರ ಬಿಟ್ಟು ಕೊಡಲ್ಪಟ್ಟಿತೆಂದೂ ತಿಳಿದಿದೆ.

* * *

ಆದ್ದರಿಂದಲೇ "ಆದದ್ದೆಲ್ಲ ಒಳಿತೇ ಆಯಿತು" ಎನ್ನುವ ಮಾತಿಗೆ ಬೆಲೆ ಕೊಡಬೇಕೆನ್ನುವದು. ಮನುಷ್ಯನ ಬುದ್ಧಿಶಕ್ತಿ ಕೆಮ್ಮಿನ ಮೇಲೂ ಪ್ರಭುತ್ವ ಸ್ಥಾಪಿಸಿದ್ದರೆ ಲೋಕಸಭೆಯ ಸದಸ್ಯರಿಗೆ ಉಳಿಗಾಲವಿತ್ತೆ, ಹೇಳಿ.

❑

# ಅಡಿಗಲ್ಲು ಸಮಾರಂಭ

ಎಲ್ಲಾ ಮದುವೆಗಳು ಗಂಡು ಮಕ್ಕಳಲ್ಲಿ—ಅದೂ "ಭಾರತ ರತ್ನ"ದಲ್ಲಿ ಕೊನೆಗೊಳ್ಳುವದಿಲ್ಲೆಂದು ಯಾರಿಗೆ ಗೊತ್ತಿಲ್ಲ? ಆದರೆ ಅದಕ್ಕಾಗಿ ಮದುವೆ ಮಾಡಿಕೊಳ್ಳುವುದನ್ನು ಯಾರಾದರೂ ಬಿಡುತ್ತಾರೆಯೆ? ಬದಲಿಗೆ ಎಷ್ಟು ಹೆಚ್ಚು ಮಕ್ಕಳನ್ನು ಹಡದೆವೋ ಅಷ್ಟು ಮಟ್ಟಿಗೆ ತಮ್ಮ ಮಕ್ಕಳಲ್ಲಿ ಒಬ್ಬರಾದರೂ "ಭಾರತರತ್ನ" ಅಲ್ಲದಿದ್ದರೂ "ಪದ್ಮವಿಭೂಷಣ ತೀಸರಾ ವರ್ಗ" ಆಗುವ ಸಂಭವ ಹೆಚ್ಚಾಗುವದೆಂದು ಯೋಗಾಯೋಗ ನಿಯಮದ Law of chance— ಮೇಲೆ ವಿಶ್ವಾಸವಿಟ್ಟು ನಾವು ಕಾರ್ಯಪ್ರವೃತ್ತರಾಗುತ್ತೇವೆ. ಆದರೆ ನಮ್ಮ ಪ್ರಧಾನ ಮಂತ್ರಿಗಳು ದಿನ ಹೋದಂತೆ ಹೆಚ್ಚು ದುರಾರಾಧ್ಯರಾಗುತ್ತಿದ್ದಾರೆ. ಮೊನ್ನೆ ಒಂದು ಸಂಕಲ್ಪಿತ ಕಟ್ಟಡಕ್ಕೆ ಅಡಿಗಲ್ಲನ್ನಿಕ್ಕಲು ಕರೆದರೆ ಅವರು ಒಲ್ಲೆನೆಂದರು. ಮದುವೆಗೆ ಬಾ ಅಂದರೆ ಮಗುವಿನ ನಾಮಕರಣಕ್ಕೆ ಬರುತ್ತೇವೆ ಅಂದವನ ಹಾಗೆ ಅವರು ಕಟ್ಟಡ ಮುಗಿದ ಮೇಲೆ ಉದ್ಘಾಟನೆಗೆ ಬರುತ್ತೇನೆ ಅಂದರು. ಅಡಿಗಲ್ಲನ್ನು ಇಕ್ಕಿದ್ದೆಲ್ಲ ಕಟ್ಟಡಗಳಲ್ಲಿ ಪರ್ಯವಸಾನ ಹೊಂದುತ್ತದೆಂದು ಅವರಿಗೆ ವಿಶ್ವಾಸವಿಲ್ಲವಾಗಿದೆಯಂತೆ, ಅನೇಕ ಅಡಿಗಲ್ಲಗಳನ್ನು ಇಕ್ಕಿದ್ದ ಸ್ಥಳಗಳಲ್ಲಿ ಕಟ್ಟಡಗಳು ಮಾತ್ರ ಯಾಕೆ ಅಡಿಗಲ್ಲುಗಳು ಕೂಡ ಉಳಿಯದಿರುವುದು ಅವರ ಗಮನಕ್ಕೆ ಬಂದಿದೆಯಂತೆ. ಇದಕ್ಕೆ ಪ್ರಧಾನ ಮಂತ್ರಿಗಳು ಇಷ್ಟೇಕೆ ಕಳವಳಗೊಳ್ಳಬೇಕೋ ತಿಳಿಯದಾಗಿದೆ. ಎಲ್ಲ ಅಡಿಗಲ್ಲುಗಳೂ ಕಟ್ಟಡದಲ್ಲಿ ಪರ್ಯವಸಾನ ಹೊಂದಬೇಕೆಂದು ಹೇಳುವುದೂ ಪೊಲೀಸು ಗೋಳೀಬಾರಿನಲ್ಲಿ ಪ್ರತಿಯೊಂದು ಗುಂಡಿಗೂ ಒಬ್ಬನು ಸಾಯ ಬೇಕೆಂದು ಹೇಳುವುದೂ ಒಂದೇ. ಮಂತ್ರಿಗಳು—ಪ್ರಧಾನ ಮಂತ್ರಿಗಳು ಕೂಡ—ತಾವಿಕ್ಕಿದ ಎಲ್ಲ ಅಡಿಗಲ್ಲುಗಳ ಲೆಕ್ಕವಿಟ್ಟುಕೊಳ್ಳುವುದು ಶಿಷ್ಟಾಚಾರವಲ್ಲ. ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಅಲ್ಲಲ್ಲಿ ಒಲಿದುಬಂದ ಹೆಣ್ಣುಗಳನ್ನು ಗಾಂಧರ್ವ ಅಥವಾ ಬೇರೆ ಯಾವುದೊಂದು ವಿಧಿಯಿಂದ ಮದುವೆಯಾಗಿ ಆ ಮೇಲೆ ಅವರ ನೆನಪನ್ನು ಅಲ್ಲಲ್ಲಿಯೇ ಬಿಟ್ಟು ಹೋದಂತೆ ಮಂತ್ರಿಗಳೂ ತಮ್ಮ ಸಂಚಾರಗಳಲ್ಲಿ ಕರೆದಲ್ಲಿ ಕಲ್ಲು ಹಾಕಿ ಆ ಮೇಲೆ ಎಲ್ಲವನ್ನೂ ಮರೆತು ಬಿಡುವುದು ಶಿಷ್ಟ ಸಮ್ಮತವಾದದ್ದು. ಮಂತ್ರಿಗಳ ನೆನಪು ಬಹಳ ಉದ್ದವಾಗಿರುವುದು ಅವರಿಗೂ ಹಿತವಲ್ಲ. ತಾವಿಕ್ಕಿದ ಕಲ್ಲಗಳನ್ನೇ ಮರೆಯಲಾರದವರು ತಾವು ಕೊಟ್ಟ ಚುನಾವಣೆ ವಚನಗಳನ್ನು ಹೇಗೆ ಮರೆಯಬಲ್ಲರು? ಚುನಾವಣೆ ವಾಗ್ದಾನಗಳನ್ನೆಲ್ಲ ಅವರು ಪೂರೈಸಿದರೆ ಮುಂದಿನ ಚುನಾವಣೆಗಳಿಗೆ ಅವರು ಏನು ವಾಗ್ದಾನ ಕೊಡುವದು?

ಈ ಎಲ್ಲ ಗೊಂದಲ ಎದ್ದದ್ದು ಮಂತ್ರಿಯೊಬ್ಬರು ಇಟ್ಟ ಅಡಿಗಲ್ಲಿನ ದೆಸೆಯಿಂದ.

ಅವರು ಎಷ್ಟೋ ವರ್ಷಗಳ ಹಿಂದೆ ಇಕ್ಕಿದ ಅಡಿಗಲ್ಲುಗಳಲ್ಲಿ ಒಂದು ಇನ್ನೂ ಸಂಕಲ್ಪರೂಪದಲ್ಲೇ ಉಳಿದಿದೆಯಂತೆ. ಅದು ಯಾವ ಕಟ್ಟಡದ್ದೆಂದು ಮಾತ್ರ ಯಾರೂ ಹೇಳದಾಗಿದ್ದಾರೆ. ಅದು ಬಹುಶಃ ಮಂತ್ರಿಗಳು ಹಿಂದಿನ ಖಾತೆಯಲ್ಲಿದ್ದಾಗ ಇಕ್ಕಿದ ಕಲ್ಲಾಗಿರಬಹುದೆ? ಅವರು ಆ ಶಾಖೆ ಬಿಟ್ಟು ಮತ್ತೊಂದು ಶಾಖೆಗೆ ಹೋದ ಮೇಲೆ, ಅಡಿಗಲ್ಲಿಕ್ಕಿಸಿದವರು ತಾವಿನ್ನು ತಮ್ಮ ಸಂಕಲ್ಪದಿಂದ ಮುಕ್ತರಾದೆವೆಂದು ತಿಳಿದುಕೊಂಡಿರಬಹುದೆ? ಆದರೆ ಅಡಿಗಲ್ಲು ಕಲ್ಲಾಗಿಯೇ ಉಳಿದ ಸಂದರ್ಭ ಇದೊಂದೇ ಅಲ್ಲವಂತೆ. ರಾಜಧಾನಿಯಲ್ಲೇ ಒಬ್ಬ ಮಂತ್ರಿ ಒಂದು ವಿಜ್ಞಾನ ಸಂಸ್ಥೆಗಾಗಿ ಇಕ್ಕಿದ್ದ ಕಲ್ಲು ಕೆಲಕಾಲದ ಮೇಲೆ ಅವನ ಮನೆಗೇ ವರ್ಗಾಯಿಸಲ್ಪಟ್ಟಿತಂತೆ. ಸಂಸ್ಥೆಯ ಯೋಜನೆ ಗಾಳಿಗೆ ಹಾರಿದ್ದರಿಂದ ಅದನ್ನು ಮಂತ್ರಿಯ ಮನೆಗೆ ಸಾಗಿಸಬೇಕಾಯಿತಂತೆ ಇದು ಮಾತ್ರ ಸ್ವಲ್ಪ ಅನ್ಯಾಯವೇ. ಹೆಂಡತಿ ಬಂಜೆಯಾದಳೆಂದು ಅವಳನ್ನು ಮದುವೆ ಮಾಡಿದ ಪುರೋಹಿತನ ಮನೆಗೆ ಹೊತ್ತುಹಾಕುವುದೇನು ನ್ಯಾಯ? ಪುರೋಹಿತನ ಕರ್ತವ್ಯ ಮದುವೆ ಮಾಡಿಸಿ ಅರುಂಧತಿಯನ್ನು ತೋರಿಸುವುದರೊಡನೆ ಮುಗಿಯುತ್ತದೆ ತಾನೆ? ಧಾರವಾಡದ ಭೋಟಾನಾಗಪುರದಲ್ಲಿ ಈ ಶತಮಾನದ ಆರಂಭದಲ್ಲೇ ಕರ್ನಾಟಕ ಕಾಲೇಜಿನ ಕಟ್ಟಡಕ್ಕಾಗಿ ಹಾಕಿದ ಅಡಿಗಲ್ಲು ಇನ್ನೂ ಗವರ್ನರ್ ಜಾರ್ಜ್‌ಲಾಯ್ಡರ ಹೆಸರು ಹೇಳುತ್ತ ಬಿಸಿಲು ಮಳೆಗಳನ್ನು ದಿಟ್ಟತನದಿಂದ ಎದುರಿಸುತ್ತ ಬಿದ್ದಿದೆ. ಆದರೆ ಅದನ್ನು ಯಾರೂ ಆ ಅಪಶಕುನ ಹಸ್ತದ ಗವರ್ನರ್ರ ಮನೆಗೆ ಕಳಿಸುವ ಯತ್ನ ಮಾಡಿಲ್ಲ. ಹುಬ್ಬಳ್ಳಿಯ ಮಾರ್ಕೀಟಿಗಾಗಿ ಇನ್ನೊಬ್ಬ ಗವರ್ನರನು ಇಕ್ಕಿದ ಅಡಿಗಲ್ಲೇ ಈಗ ಅದೃಶ್ಯವಾಗಿದೆ. ಆದರೂ ಅದನ್ನು ಲುಮ್ಲೇ ಸಾಹೇಬರಿಗೆ ಕಳಿಸುವ ಮೂಢತನವನ್ನು ಮಾತ್ರ ಯಾರೂ ಮಾಡಿಲ್ಲ. ಆದರೆ ದಿಲ್ಲಿಯ ಕಲ್ಲು ಮಂತ್ರಿಯ ಮನೆಗೆ ಬಂದ ಒಂದು ಅಪವಾದಾತ್ಮಕ ಉದಾಹರಣೆಗಂಜಿ ಮಂತ್ರಿಗಳು ಅಡಿಗಲ್ಲನ್ನಿಕ್ಕುವ ಸಮಾರಂಭದಲ್ಲಿ ಶಾಮೀಲಾಗಲು ನಿರಾಕರಿಸುವದು ಜಾಣತನವಲ್ಲ. ಹೀಗೆ ಮಾಡಿದರೆ ಮಂತ್ರಿಗಳಿಗೆ ಸಂಚಾರ ಹೂಡಲು ಕಡೆಗೆ ನೆವವೇ ಸಿಗದಂಥ ಪ್ರಸಂಗ ಬರಬಹುದು. ಮಂತ್ರಿಗಳಿಗೆ ಸಂಶಯವಿದ್ದರೆ ಅಡಿಗಲ್ಲನ್ನು ತಮ್ಮ ಮನೆಗೆ ಕಳಿಸಬಾರದೆಂಬ ಕರಾರಿನಿಂದಲೇ ಅವರು ಶಂಕುಸ್ಥಾಪನೆ ಮಾಡಬಹುದು.

* * *

ಮೇಲಾಗಿ ಶಂಕುಸ್ಥಾಪನೆಯ ವಿಷಯದಲ್ಲಿ ಇಷ್ಟೆಲ್ಲ ಯಾಕಪ್ಪಾ ಕಾಳಜಿ? ಶಂಕುಗಳು ಏನೆಂದರೂ ಕಲ್ಲುಗಳೇ ತಾನೆ? ಕಲ್ಲುಗಳು ಮನುಷ್ಯನಿಗಿಂತ ಯಾವಾಗಲೂ ಮೇಲೆಂಬುದು ಇಪ್ಪತ್ತನೇ ಶತಮಾನದಲ್ಲಾದರೂ ನಮಗೆ ತಿಳಿಯಬಾರದೆ? ಕಟ್ಟಡಗಳು ಮನುಷ್ಯನಿಗಾಗಿ ಇವೆ ಹೊರತು (ಕೆಲ ವೇಳೆ ಅವುಗಳಲ್ಲಿ ವಾಸಿಸುವುದು ಮನುಷ್ಯರಿಗೆ ಅಸಾಧ್ಯವೆನಿಸಿದರೂ) ಕಟ್ಟಡಗಳಿಗಾಗಿ ಮನುಷ್ಯನಿಲ್ಲ. ಶಂಕುಸ್ಥಾಪನೆಯಲ್ಲಿ ಭಾವೀ ಕಟ್ಟಡಕ್ಕಿಂತಲೂ ಆ ಸಮಾರಂಭದಲ್ಲಿ ಅಡಕವಾದ ಮಾನವೀಯ ಅಂಶಕ್ಕೆ ಪ್ರಾಧಾನ್ಯವಿದೆ. ಒಂದು ತುಡುಗು ದನಗಳ ದೊಡ್ಡಿಗೆ

ಶಂಕುಸ್ಥಾಪನೆ ಮಾಡಲು ಒಬ್ಬ ಮಂತ್ರಿಯನ್ನು ನೀವು ಕರೆಯುತ್ತೀರೆಂದುಕೊಳ್ಳಿರಿ ಕೂಡಲೆ ಮಾನವೀಯ ನಾಟಕದ ಗ್ರೀನ್‌ರೂಮು ಜಗಿದು ಚಲಿಸತೊಡಗುತ್ತದೆ. ನಿಮ್ಮೂರಿನ ದೊಡ್ಡ ಮನುಷ್ಯರು ದೊಡ್ಡಿಸ್ತನವು ಒಮ್ಮಿಂದೊಮ್ಮೆ ಅವರ ಪೆಟ್ಟಿಗೆಯೊಳಗೆ ಸುಖನಿದ್ರೆ ಮಾಡಿದ ಖಾದಿಪೋಷಾಕಿನ ಸಂಗಡ ಜಾಗ್ರತವಾಗಿ ಮಂತ್ರಿಗಳ ಸ್ವಾಗತಕ್ಕಾಗಿ ಸಿದ್ಧತೆ ಮಾಡುತ್ತದೆ. ಪಾಂಜರಪೋಳದ ಬಗ್ಗೆ ಅವರ ಅಭಿಪ್ರಾಯವೇನೇ ಇರಲಿ, ಅವರು ಹೇಗಾದರೂ ಮಾಡಿ ಆ ಕಾರ್ಯದಲ್ಲಿ ಸಹಭಾಗಿಗಳಾಗುತ್ತಾರೆ. ಮಂತ್ರಿಗಳು ಅಡಿಗಲ್ಲು ಹಾಕಿದೊಡನೆ ಫೋಟೊಕೆಮರಾದ ಕ್ಲಿಕ್ ಶಬ್ದಕ್ಕೆ ಫ್ಲೇಶ್ ಬಲ್ಬಿನ ಚಮತ್ಕಾರವಾಗುವಾಗ ಮಂತ್ರಿವರ್ಯರ ಎಡಬಲ ಪಕ್ಕದಲ್ಲಿರುವುದರಿಂದ ಈ ದೊಡ್ಡವರು ಧನ್ಯರಾಗುತ್ತಾರೆ. ಅಡಿಗಲ್ಲಿನ ಸಮಾರಂಭ ನಾಟಕದ ಕಥೆಯ ರಸೋತ್ಕರ್ಷ ಸ್ಥಾನ, ಅದರ ಚರಮ ಸಾರ್ಥಕತೆ ಈ ಫೋಟೋ ಗ್ರಹಣದ ಕ್ಷಣದಲ್ಲಿದೆ ಹೊರತು, ಆ ಅಡಿಗಲ್ಲಿನ ಮೇಲೆ ನಿಲ್ಲಲಿರುವ ಕಟ್ಟಡದಲಿಲ್ಲ. ಒಂದು ವೇಳೆ ಆ ಕಟ್ಟಡ ನಿಜವಾಗಿ ತಲೆಯೆತ್ತುವುದಾದಲ್ಲಿ ಅದರ ಉದ್ಘಾಟನೆಗಾಗಿ ಇನ್ನೊಬ್ಬ ಮಂತ್ರಿಯ ಆಗಮನ; ಇನ್ನೊಂದು ಮಾನವೀಯ ನಾಟಕ, ಇನ್ನೊಂದು ಫೋಟೋ ಗ್ರಹಣ ಇವುಗಳಿಗೆ ನೆವವನ್ನು ಒದಗಿಸುತ್ತದೆಯೆಂದಲ್ಲದೆ ಅದರಲ್ಲಿ ಬೇರೆ ಸಾರ್ಥಕತೆ ಇಲ್ಲ. ದೊಡ್ಡ ಮನುಷ್ಯರ ಸ್ವಂತ ಖರ್ಚಿನಿಂದ ತಯಾರಿಸಲ್ಪಡಬಹುದಾದ ಈ ಫೋಟೋದ ಬ್ಲಾಕು ಯಾವುದಾದರೊಂದು ಪತ್ರಿಕೆಯಲ್ಲಿ ಮೂಡಿತೆಂದರೆ ಆ ಸಾರ್ಥಕತೆ ಚರಮ ಸೀಮೆಗೇರುತ್ತದೆ (ಆದರೆ ನೀವು ಸಾಕಷ್ಟು ದೊಡ್ಡ ಮನುಷ್ಯರೆಂದೊಪ್ಪದ ಸಂಪಾದಕರಿದ್ದೇ ಇರುವುದರಿಂದ ಪತ್ರಿಕೆಗಳವರೆಗೆ ಅದು ಹೋಗುವುದು ಯಾವಾಗಲೂ ಕಠಿನವಾಗುತ್ತದೆ). ಈ ಫೋಟೋ ಗ್ರಹಣದ ಮಾನವೀಯ ಮಹತ್ವವನ್ನು ಅರಿಯಬೇಕಾದರೆ ಅದರಲ್ಲಿ ಜನರು ಮಾಡುವ ನಾನಾಮುಖ ಭಂಗಿಗಳನ್ನು ನೋಡಿದರೆ ಸಾಕು. ಇದನ್ನೆಲ್ಲ ನೋಡಿದರೆ ಅಡಿಗಲ್ಲು ಅಥವಾ ಉದ್ಘಾಟನೆಯಿಲ್ಲದೆ ಫೋಟೋ ತೆಗೆಸಿದರೆ ಸಾಲದೇ? ಎಂದು ಆಚಾರ್ಯರಿಗೆ ಎಷ್ಟೋ ವೇಳೆ ಅನಿಸುತ್ತದೆ. ಫೋಟೋವೇ ಪರಮೋದ್ದೇಶವಿರುವಾಗ ಈ ಕೋನಶಿಲೆ, ಈ ಕಟ್ಟಡ ರಚನೆ ಮೊದಲಾದದ್ದು ಅನವಶ್ಯಕ ಶ್ರಮವ್ಯಯವಲ್ಲವೆ? ಹೌದೆಂದು ಒಬ್ಬ ದೊಡ್ಡ ಮನುಷ್ಯರು ಆಚಾರ್ಯರ ಮುಂದೆ ಒಪ್ಪಿಕೊಂಡರು. ಆದರೆ ಮಂತ್ರಿಗಳು ಇನ್ನೂ ಸಾಕಷ್ಟು ಪ್ರಗತಿಪರರಲ್ಲ. ಅವರು ಬರಿ ಫೋಟೋ ಸಮಾರಂಭಕ್ಕಾಗಿ ರಾಜಧಾನಿಯಿಂದ ಇಷ್ಟು ದೂರ ಬರಲು ಹಿಂಜರಿಯುತ್ತಾರೆ. ಆದ್ದರಿಂದ ಹಂದಿಯನ್ನು ಬೇಯಿಸಲು ಗುಡಿಸಲನ್ನೇ ಸುಡುತ್ತಿದ್ದ ಲ್ಯಾಂಬನ ಆದಿ ಚೀನೀಯನಂತೆ ಈ ಅಪವ್ಯಯದ ಶಂಕುಸ್ಥಾಪನಾಮಾರ್ಗ ಅನುಸರಿಸಬೇಕಾಗಿದೆ. ಆದರೆ ಮಂತ್ರಿಗಳಿಗಾದರೂ ಈ ಒಂದು ಕ್ಷಣದ ಸಮಾರಂಭಕ್ಕಾಗಿ ಆಗುವ ಈ ಸುದೀರ್ಘ ಸಿದ್ಧತೆ, ಕೋನಶಿಲೆ, ಉದ್ಘಾಟನೆಗಾಗಿ ಕಟ್ಟಡ ಮುಂತಾದ್ದು ಅನವಶ್ಯಕ. ರಾಷ್ಟ್ರೀಯ ಅಪವ್ಯಯವೆಂದು ಮನವರಿಕೆಯಾಗುವ ದಿನ ಇಂದಲ್ಲ ನಾಳೆ ಬಂದೇ ತೀರುವದೆಂದು ಆ ದೊಡ್ಡ ಮನುಷ್ಯರಿಗೆ ವಿಶ್ವಾಸವಿದೆ.

❑

# ದೇವರ ಕೆಲಸ

ಸರ್ಕಾರದ ಕೆಲಸ ಯಾರ ಕೆಲಸ? ಹಿಂದಿನ ಮೈಸೂರು ಮುಖ್ಯ ಮಂತ್ರಿ ಕೆಂಗಲ್ಲು ಹನುಮಂತಯ್ಯನವರಿಗೆ ಅದು ದೇವರ ಕೆಲಸವೆಂದು ತೋರಿತ್ತಾದ್ದರಿಂದ ತಮ್ಮ ರಾಜಕೀಯ ಜೀವನಕ್ಕೆ ಶಿಖರರೆಂದು ಬಗೆದು ಅವರು ಕಟ್ಟಿಸಿದ ವಿಧಾನಸೌಧದ ಒಂದು ಸಿಂಹದ್ವಾರದ ಮೇಲೆ ಆ ವಾಕ್ಯವನ್ನು ಅವರು ಕೆತ್ತಿಸಿದರು. ಮೈಸೂರಿನ ಸಂಸ್ಕೃತಿಯಲ್ಲಿ ಪಳಗಿದ ಹನುಮಂತಯ್ಯನವರಿಗೆ ಸರಕಾರದ ಕೆಲಸ ದೇವರ ಕೆಲಸ ಎನಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಮೈಸೂರು ಸರಕಾರದ ಸೆಕ್ರೆಟೇರಿಯಟಿನಲ್ಲಿ ಯಾರೊಬ್ಬರೂ ಸರಕಾರದ ಕೆಲಸವನ್ನು ತಮ್ಮ ಸ್ವಂತ ಕೆಲಸದಂತೆ ಹುರುಪಿನಿಂದ ಮಾಡುತ್ತಿದ್ದುದನ್ನು ಅವರು ನೋಡಿರಲಿಲ್ಲ. ಸರಕಾರದ ಕೆಲಸ ಯಾವ ಮನುಷ್ಯನ ಕೆಲಸದ ಹಾಗೆಯೂ ಅವರಿಗೆ ಕಾಣಿಸಿರಲಿಲ್ಲ. ಮನುಷ್ಯರ ಕೆಲಸವಾಗಿದ್ದರೆ ಸಂಬಂಧಪಟ್ಟ ಮನುಷ್ಯರು ಎಂದೂ ಹೀಗೆ ಮದಗಜಗಮನವನ್ನು ಸಹಿಸುತ್ತಿರಲಿಲ್ಲ. ಅಂದ ಮೇಲೆ ಇದು ದೇವರ ಕೆಲಸವೇ ಇರಬೇಕೆಂದು ಸಹಜವಾಗಿ ಹನುಮಂತಯ್ಯನವರಿಗೆ ಮನವರಿಕೆಯಾಗಿರಬೇಕು. ದೈವಭಕ್ತರಾದ ಹನುಮಂತಯ್ಯನವರು ಅನೇಕ ದೇವಸ್ಥಾನಗಳನ್ನು ಖಂಡಿತವಾಗಿ ಕಂಡಿದ್ದರು. ಅಲ್ಲಿ ದೇವರ ಪುಜಾದಿ ವಿನಿಯೋಗಗಳು ಹೇಗೆ ನಡೆಯುತ್ತವೆಂದು ಅವರಿಗೆ ಗೊತ್ತಿತ್ತು. ದಕ್ಷಿಣೆ ಕೊಡುವ ಭಕ್ತರು ಸೇರಿರದಿದ್ದರೆ ದೇವರಿಗೆ ಒಂದು ತಂಬಿಗೆ ನೀರು "ಹೊಯ್ದು" ನೈವೇದ್ಯ "ತೋರಿಸಿ" ಆರತಿ ದರ್ಶನ ಮಾಡಿಸುವುದರಿಂದ ಪೂಜೆ ಮುಗಿಯುವುದೆಂದು ಯಾರು ಅರಿಯರು? ಎರಡರಲ್ಲಿರುವ ಸಾಮ್ಯ ಅವರ ಮನಸ್ಸಿಗೆ ಖಚಿತವಾಗಿ ಆ ಸ್ಫೂರ್ತಿಯಿಂದ ಸರಕಾರದ ಕೆಲಸ ದೇವರ ಕೆಲಸ ಎಂದು ವಿಧಾನಸೌಧದ ಮುಂದೆ ಶಾಸನ ಕೆತ್ತಿಸಿದರು.

* * *

ಆದರೆ ಕೆಂಗಲ್ಲು ಹನುಮಂತಯ್ಯನವರ ಈ ವಾಕ್ಯದ ಅರ್ಥವನ್ನು ಗ್ರಹಿಸಲಾರದೆ ಅವರ ವಿರೋಧಿಗಳು ಅದರ ವಿರುದ್ಧ ಹುಯಿಲೆಬ್ಬಿಸಿದರಿಂದ ಈಗ ನಿಜಲಿಂಗಪ್ಪ ಮಂತ್ರಿಮಂಡಲವು ಅದನ್ನು ಬಿಳಿ ಸಿಮೆಂಟಿನಿಂದ ಅಳಿಸಿ ಹಾಕಲು ನಿರ್ಧರಿಸಿದೆ. ಅದರ ಸ್ಥಳದಲ್ಲಿ 'ಸತ್ಯಮೇವ ಜಯತೇ ಎಂಬ ವಾಕ್ಯವನ್ನು ಕೆತ್ತಿಸಲಾಗುವುದಂತೆ. ಲಾಂಗೂಲಾ ಚಾರ್ಯರ ಅಭಿಪ್ರಾಯದಲ್ಲಿ ಇದು ಕೇವಲ ಅನ್ಯಾಯ. "ಸರಕಾರದ ಕೆಲಸ ದೇವರ

ಕೆಲಸ" ಎಂಬ ವಾಕ್ಯವು ಯಾವುದೊಂದು ಕೆಲಸಕ್ಕಾಗಿ ಈ ಸೌಧವನ್ನು ಪ್ರವೇಶಿಸಬೇಕಾದವರಿಗೆ ಚಪ್ಪಲಿ ಕಳಚಿಟ್ಟು ಒಳಗೆ ಪ್ರವೇಶಿಸಿರಿ" ಎಂಬಿತ್ಯಾದಿ ಹಲಗೆಗಳಂತೆ ತಕ್ಕ ಮುನ್ನೆಚ್ಚರಿಕೆಯನ್ನು ಕೊಡುತ್ತಿತ್ತು. "ಸರಕಾರದ ಕೆಲಸ ದೇವರ ಕೆಲಸ" ಎಂದೊಡನೆ ನಮಗೆ ಏನು ತಿಳಿಯುತ್ತದೆ? ದೇವರ ಹತ್ತಿರ ಹೋಗುವಾಗ ನಾವೇನು ಮಾಡುತ್ತೇವೆ? ಕಾಣಿಕೆ ಒಯ್ಯುತ್ತೇವೆ. ದಕ್ಷಿಣೆಗಾಗಿ ಹಣ ಒಯ್ಯುತ್ತೇವೆ. ದಕ್ಷಿಣೆ ಕೊಡದಿದ್ದರೆ ಪೂಜಾರಿ ನಮ್ಮ ತೆಂಗಿನಕಾಯಿಯನ್ನು ನೈವೇದ್ಯಮಾಡಿ ಕೊಡಲಾರ. ಮಾಡಿಕೊಟ್ಟರೂ ಅದರ ಒಂದು ಹೋಳನ್ನು ತಾನೇ ಜಪ್ತಿ ಮಾಡಿಬಿಡುತ್ತಾನೆ. ಸರಕಾರದ ಕೆಲಸವಾಗಬೇಕಾದರೂ ದಕ್ಷಿಣೆ ಅಗತ್ಯ, ಎಂದು ವಿಧಾನಸೌಧದ ಬಾಗಿಲ ಶಾಸನವು ನಿಮಗೆ ಹೇಳುವುದು. ಈ ದಕ್ಷಿಣೆಗೆ ಮಾಮೂಲು something ಎಂಬ ನಾಮಾಂತರಗಳು ತಿರುಳು ಮೈಸೂರಲ್ಲಿಯೂ 'ಗೋಪಾಳ' ಎಂಬ ಹೆಸರು ಉತ್ತರ ಕರ್ನಾಟಕದಲ್ಲಿಯೂ ಪ್ರಚಲಿತವಾಗಿದೆ. ಇದಲ್ಲದೆ ದೇವಸ್ಥಾನಕ್ಕೆ ನಾವು ಹೋದಾಗ ಪ್ರದಕ್ಷಿಣೆ ಹಾಕುತ್ತೇವೆ. ಸರಕಾರಿ ಕಚೇರಿಗಳಲ್ಲಿಯೂ ನಾವು ಪ್ರದಕ್ಷಿಣೆ ಹಾಕಿದ ಹೊರತು ಕೆಲಸವಾಗುವಂತಿಲ್ಲ. ಈ ಸೂಕ್ತ ಮುನ್ನೆಚ್ಚರಿಕೆ ವಿಧಾನ ಸೌಧದಲ್ಲಷ್ಟೇ ಅಲ್ಲ, ಎಲ್ಲ ಕಚೇರಿಗಳಲ್ಲಿಯೂ ಬೇಕಾಗಿತ್ತು. ಬದಲಿಗೆ 'ಸತ್ಯಮೇವ ಜಯತೇ' ಎಂದು ಬಾಗಿಲಿನ ಶಾಸನ ಓದಿ, ಇದರೊಳಗೆ ಸತ್ಯಕ್ಕೇ ಜಯವಾಗುತ್ತದೆ ಎಂಬ ಭ್ರಮೆಯಿಂದ ಪ್ರಜೆಗಳು ಒಳ ಹೊಕ್ಕರೆ ಗತಿಯೇನು? ಅಥವಾ ಇಲ್ಲಿ ಜಯಹೊಂದಿದ್ದೇ ಸತ್ಯ ಎಂದು ನಾವು ಭಾವಿಸಬೇಕೆ?

❑

# ಕಳೆದುಹೋದ ಚಪ್ಪಲಿ

ಸುಂದರ ನಾರಿಯರಿಗೆ ಸಂಬಂಧಿಸಿದ್ದೆಲ್ಲವೂ ವೀರ ಪುರುಷರಿಗೆ ಪವಿತ್ರವಾದದ್ದು. ವಿಶೇಷವಾಗಿ ಅವರ ಮೃದುಚರಣಗಳಿಗೆ ಸಂಬಂಧಿಸಿದ್ದು. ಜಯದೇವನ ಶ್ರೀಕೃಷ್ಣ, ಕುಪಿತಳಾದ ರಾಧೆಗೆ ಹೇಳುತ್ತಾನೆ. "ನಿಜವಾಗಿ ನನ್ನಲ್ಲಿ ಕೋಪಿಸಿರುವಿಯಾದರೆ ನಿನ್ನ ಉದಾರವಾದ ಪಾದಗಳನ್ನು ಕೊಡು" ಎಂದು. ರವೀಂದ್ರನಾಥ ಠಾಕೂರರ ತೋಟಿಗನು ಅರಮನೆಯ ಉದ್ಯಾನದ ಪುಷ್ಪಗಳ ರಕ್ಷಕನು—ರಾಣಿಯನ್ನೇ ಪ್ರೀತಿಸುತ್ತಾನೆ. ಪ್ರೇಮಕ್ಕೆ ಕಣ್ಣಿಲ್ಲ, ಬುದ್ಧಿಯಂತೂ ಇನ್ನೂ ಕಡಿಮೆ ತಾನೇ. ಅವನು ತನ್ನ ಹೃದಯವನ್ನು ಅಪಹರಿಸಿದ ರಾಣಿಯಿಂದ ಮತ್ತಾವ ಔದಾರ್ಯವನ್ನೂ ಅಪೇಕ್ಷಿಸುವುದಿಲ್ಲ—ಉದ್ಯಾನದಲ್ಲಿ ರಾಣಿ ನಡೆದು ಹೋಗುವಾಗ ಅವಳ ಮೃದು ಚರಣಕ್ಕೆ ಅಂಟಿಕೊಳ್ಳಬಹುದಾದ ಒಂದು ಧೂಳಿಕಣವನ್ನು ತನ್ನ ತುಟಿ ಹಚ್ಚಿ ನಿವಾರಿಸುವುದಕ್ಕೆ ಅನುಮತಿಯನ್ನು ಕೋರುತ್ತಾನೆ. ರಾಣಿ ಅವನ ಈ ಕಿರುಬಯಕೆಯನ್ನು ಪೂರೈಸಲು ಒಪ್ಪಿದಳೋ ಇಲ್ಲವೋ ನಮಗೆ ಗೊತ್ತಿಲ್ಲ. ರವೀಂದ್ರರು ಅದನ್ನು ನಮ್ಮ ಕಲ್ಪನೆಗೇ ಬಿಟ್ಟಿದ್ದಾರೆ. ಆದರೆ ಅಂಥ ಸ್ತ್ರೀದಾಕ್ಷಿಣ್ಯದ ಯುಗ ಇಂದು ಉಳಿದಿಲ್ಲ. ಇಂದಿನ ರಮಣಿಯರು ಪಾದಕ್ಕಿಂತಲೂ ಹೆಚ್ಚು ಅನುಕೂಲವಾದ ಸ್ಥಳದಲ್ಲಿರಬಹುದಾದ ಧೂಳಿಯನ್ನು ತುಟಿಗಳಿಂದ ನಿವಾರಿಸಲು ಅನುಮತಿ ಕೊಟ್ಟಾರು. ಆದರೆ ಪುರುಷರೇ ಶೆಲ್ಲಿ ಕವಿ ಅಂದ ಹಾಗೆ "I fear thy kisses, gentle maiden" (ನಾ ನಿನ್ನ ಚುಂಬನಕ್ಕೆ ಅಂಜುವೆನು ಎಲೆ ಹೆಣ್ಣೆ) ಎಂದು ಹೇಳುವ ಹೇಡಿಗಳಾಗಿದ್ದಾರೆ ಎಂದು ನೀವು ಈ ಅವಿವಾಹಿತೆಯರ ಸಮಸ್ಯೆಯ ಯುಗದಲ್ಲಿ ಹೇಳಬಹುದು. ನೀವು ತಪ್ಪು ತಿಳಿದಿದ್ದೀರಿ. ಸ್ತ್ರೀ ದಾಕ್ಷಿಣ್ಯವನ್ನು ಮರೆಯದ ಒಬ್ಬ ಮನುಷ್ಯನಾದರೂ ಇಂದು ಭಾರತದಲ್ಲಿದ್ದಾನೆ. ಒಮ್ಮೆ ವಿದೇಶೀ ಪ್ರಧಾನಮಂತ್ರಿಗಳು ಪತ್ನೀಸಮೇತರಾಗಿ ಭಾರತಕ್ಕೆ ಬಂದಾಗ ವಿಮಾನದಿಂದ ಹೊರಬರುತ್ತಿದ್ದ ಶ್ರೀಮತಿ  ಯವರ ಒಂದು ಪಾದದ ಎತ್ತರ ಹಿಮ್ಮಡದ ಬೂಟು ಜಾರಿ ಬಿದ್ದುಬಿಟ್ಟಿತಂತೆ. ಅವರ ಹಿಂದಿದ್ದ ಆಗಿನ ಪ್ರಧಾನಮಂತ್ರಿ ನೆಹರು ಅವರು ಮೆಲ್ಲಗೆ ಆ ಕಳ್ಳ ಪಾದತ್ರಾಣವನ್ನು ಎತ್ತಿಕೊಂಡು ಬಂದು ಸಿಂಡರೆಲ್ಲಾ ಗಮನದಿಂದ ಮುಂದುವರಿಯುತ್ತಿದ್ದ ಆಕೆಗೆ ಕೊಟ್ಟರು.

* * *

ಪತ್ರಿಕಾ ಪ್ರಪಂಚವು ಆ ಘಟನೆಗೆ ಯಾವ ಪ್ರತಿಕ್ರಿಯೆಯನ್ನು ತೋರಿಸಿತೋ ಲಾಂಗೂಲಾಚಾರ್ಯರಿಗೆ ವರದಿ ಬಂದಿಲ್ಲ. ಆದರೆ ಮಹಿಳೆಯರ ಪಾದತ್ರಾಣಗಳು ಯಾವಾಗಲೂ ಪುರುಷರನ್ನು ಮೋಹಗೊಳಿಸಿದಂತೆ ಕಾಣುತ್ತದೆ. ಆಚಾರ್ಯರು ಚಿಕ್ಕವರಿದ್ದಾಗ ಅವರ ಪಠ್ಯಪುಸ್ತಕದಲ್ಲಿ ಒಂದು ಕಥೆಯಿತ್ತು. ರಾಜನೊಬ್ಬನ ಮುಂದೆ ಒಂದು ದಿನ ಒಂದು ಪುಟ್ಟ ಚಪ್ಪಲಿ ಆಕಾಶದಿಂದ ಬಂದು ಬಿತ್ತಂತೆ. ಅಂದಿನ ಕಾಲದ ಅರಸರ ಸಾಮಾನ್ಯ ಸ್ವಭಾವದಂತೆ ಈ ತರುಣ ರಾಜ ಒಡನೆ ಆ ಪುಟ್ಟ ಚಪ್ಪಲಿಯ ಒಡತಿಯಲ್ಲಿ ಪ್ರೇಮಾಸಕ್ತನಾದನಂತೆ. ಆ ಚಪ್ಪಲಿ ಯಾರ ಕಾಲಿಗೆ ಹೊಂದುವುದೋ ಅಂಥ ತರುಣಿಯನ್ನೇ ಮದುವೆಯಾಗುವುದಾಗಿ ಆತ ತತ್‌ಕ್ಷಣ ನಿರ್ಧರಿಸಿದ. ಆದರೆ ಯಾರಾರಮಣಿ? ಎಲ್ಲಿದ್ದಾಳೆ? ಯಾರಿಗೂ ಗೊತ್ತಿರಲಿಲ್ಲ. ಸರಿ. ಸೇವಕರು ಆ ಚಪ್ಪಲಿಯನ್ನು ತೆಗೆದುಕೊಂಡು ಅದಕ್ಕೆ ಸರಿ ಹೊಂದುವ ಪಾದವುಳ್ಳ ಹುಡುಗಿಯನ್ನು ಹುಡುಕಿಕೊಂಡು ಹೊರಟರು. ಅರಸರ ಪ್ರತಿಜ್ಞೆಯನ್ನು ಕೇಳಿದ ಅಸಂಖ್ಯ ತರುಣಿಯರು ಆ ಚಪ್ಪಲಿಯೊಳಗೆ ಕಾಲು ತುರುಕಲು ಪ್ರಯತ್ನಿಸಿದರು. ಆದರೆ ಇಲ್ಲ, ಯಾರ ಪಾದವೂ ಅದನ್ನು ಪ್ರವೇಶಿಸಲು ಸಮರ್ಥವಾಗಲಿಲ್ಲ. ಕೊನೆಗೊಂದು ದಿನ ಅವರು ಒಂದು ಮನೆಗೆ ಬಂದರು. ಅಲ್ಲಿ ಮಲತಾಯಿ ರಾಜ್ಯ ನಡೆದಿತ್ತು. ಅವಳ ಕೈಯಲ್ಲಿ ಪೆಟ್ಟು ತಿಂದು ಹುಡುಗಿಯೊಬ್ಬಳು ಸಣ್ಣಾಗಿ ಹೋಗಿದ್ದಳು. ರಾಜಾಜ್ಞೆಯನ್ನು ಹೊತ್ತು ಬಂದ ದೂತರು ಚಪ್ಪಲಿಯನ್ನು ನೆಲದ ಮೇಲಿಟ್ಟೊಡನೆ ಮಲತಾಯಿಯ ಇಬ್ಬರು ದಿಂಡೆ ಮಗಳಂದಿರು ಬಂದು ಅದರಲ್ಲಿ ಕಾಲು ಸಿಕ್ಕಿಸಲು ನೋಡಿದರು. ಆದರೆ ಅವರ ದೊಡ್ಡ ಪಾದಗಳು ಅದರೊಳಗೆ ಸೇರಲೇ ಇಲ್ಲ. ಒಂದು ಬದಿಗೆ ಹೆದರಿ ನಿಂತುಕೊಂಡಿದ್ದ ಮಲಮಗಳ ಸರದಿ ಬಂತು. ತಕೋ! ಅವಳ ಪಾದಕ್ಕೆ ಆ ಚಪ್ಪಲಿ ಸರಿಹೋಯಿತು. ನಿಜ ಕೇಳಿದರೆ ಅದು ಅವಳದೇ ಚಪ್ಪಲಿಯಾಗಿತ್ತು. ಗಿಡುಗವೊಂದು ಅದನ್ನು ಕಚ್ಚಿಕೊಂಡು ಹೋಗಿ ನಿರುಪಯುಕ್ತ ಪದಾರ್ಥವೆಂದರಿತು ಅದನ್ನು ಚೆಲ್ಲಿ ಹೋಗಿತ್ತು. ಮಲಮಗಳ ಸುದೈವದಿಂದ ಅದು ಅರಸನ ಮುಂದೆ ಬಿತ್ತು. ಅವಳನ್ನು ರಾಜ ಮದುವೆಯಾದ. ಮಲಮಗಳು ರಾಣಿಯಾದಳು.

* * *

ಅಂತೂ ಶ್ರೀಮತಿ ಫಿರೋಜಖಾನರ ಪಾದತ್ರಾಣ ಚರಿತ್ರಾರ್ಹವಾಯಿತು. ಇತಿಹಾಸದಲ್ಲಿ ಚರಿತ್ರಾರ್ಹವಾದ ಪಾದತ್ರಾಣ ಇದೊಂದೇ ಇಲ್ಲ. ೨೦ ವರ್ಷಗಳು ಹಿಂದೆ ಇನ್ನೊಂದು ಚಪ್ಪಲಿ ಜಗತ್ಪ್ರಸಿದ್ಧವಾಯಿತು. ಅದು ಫಿಲ್ಮಿಂಡಿಯದ ಬಾಬೂರಾವ್ ಪಟೇಲರ ಕೆನ್ನೆಯೊಡನೆ ಸ್ವಲ್ಪ ಮಿತಿಮೀರಿದ ರಭಸದಿಂದ ಮುದ್ದಾಡಿದ ಶಾಂತಾ ಆಪಟೆಯ ವಾಮಪಾದದ್ದು. ಆದರೆ ಶಾಂತಿ ಆಪಟೆ ಅದನ್ನು ಅಲ್ಲಿ ಬಿಟ್ಟು ಹೋಗದಿದ್ದುದರಿಂದ ಬಾಬೂರಾಯರು ಅದನ್ನು ತಮ್ಮ ವೀರಪುರುಷತ್ವದ ಕುರುಹಾಗಿ ಕಾಪಾಡಿಡಲು ಸಾಧ್ಯವಾಗದ್ದು ದುರ್ದೈವ. ಇದಕ್ಕಿಂತಲೂ ಮಹತಿ ಪಡೆದ ಪಾದತ್ರಾಣಗಳಿವೆ. ಭರತನು ಅರಣ್ಯಕ್ಕೆ ಬಂದು ರಾಮನಿಂದ

ಇಸಿದುಕೊಂಡೊಯ್ದ ಆ ಪಾದುಕೆಗಳನ್ನು ಅರಿಯದವರಾರು? ಹದಿನಾಲ್ಕು ವರ್ಷ ಕಾಲ ಆ ಜೋಡು ಪಾದುಕೆ ಕೋಸಲ ರಾಜ್ಯವನ್ನಾಳಿತು. ಇದಕ್ಕಿಂತ ಉದಾತ್ತವಾದ ಪಾದುಕೆ ಇತಿಹಾಸದಲ್ಲಿ ಬೇರೊಂದಿರಲಾರದು. ಅನಂತರ ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಸೆರೆಮನೆಯಲ್ಲಿದ್ದಾಗ ಸ್ವಹಸ್ತದಿಂದ ಹೊಲಿದು ಪ್ರಧಾನಮಂತ್ರಿ ಜನರಲ್ ಸ್ಮಟ್ಸರಿಗೆ ಕಾಣಿಕೆ ಅರ್ಪಿಸಿದ ಚಪ್ಪಲಿ ಜೋಡಿಯೂ ಹೆಸರಿಸಬೇಕಾದ್ದು. ಗಾಂಧೀಜಿಯ ಸಾತ್ವಿಕವಾದ ಈ ಚರ್ಯೆಯಿಂದ ಅವರನ್ನು ಸೆರೆಮನೆಗೆ ಕಳಿಸಿದ ಸ್ಮಟ್ಸರಿಗೆ ಎಷ್ಟು ಹೃದಯ ತುಂಬಿ ಬಂತೆಂದರೆ ಅವರು ಆಜೀವ ಆ ಚಪ್ಪಲಿ ಜೋಡಿಯನ್ನು ಅಮೂಲ್ಯ ವಸ್ತುವೆಂದು ಕಾಪಾಡಿಟ್ಟಿದ್ದರು.

❑

# "ಕಥಕ್ಕಳಿ"ಗೊಂದು ಅವಕಾಶ

ತನ್ನನ್ನು ಹುಟ್ಟಿಸಿ, ಬದುಕಿಸಿ ಇಹಪರಗಳೆಡರ ಸಾಧನೆಗೆ ಅವಶ್ಯವಾದ ಬುದ್ಧಿಶಕ್ತಿಯನ್ನು ಕೊಡುತ್ತಿರುವ ದೇವರಿಗೆ ಮನುಷ್ಯ ಕೃತಜ್ಞತೆಯಿಂದ ಸಲ್ಲಿಸುವ ಅನೇಕ ವಿಧದ ಸೇವೆಗಳಲ್ಲಿ ಸಂಗೀತ ಸೇವೆಯೂ ಒಂದು. ಪರಮಾತ್ಮನ ಸ್ತುತಿ ರೂಪದ ಪದ್ಯಗಳನ್ನು ಹಾಡಿ, ಸಹಸ್ರಾರು ನಾಮಗಳಿಂದ, ವಿಶೇಷಣಗಳಿಂದ ಆತನನ್ನು ಹೊಗಳಿ ಪ್ರೀತಿಯನ್ನು ಸಂಪಾದಿಸಿ ಕೊಳ್ಳುವುದು ಮನುಷ್ಯ ಜಾತಿಯು ಕಲಿತುಕೊಂಡ ಗುಟ್ಟಾಗಿದೆ. ಹಿಂದುಗಳ ಮಂತ್ರ, ಮುಸಲ್ಮಾನರ ಕುರಾನ. ಕ್ರಿಶ್ಚಯನ್ನರ ಬೈಬಲ್ ಶ್ಲೋಕಗಳ ಪಠಣೆಯಾಗುವಾಗ ಕಿವಿಗೆ ಬೀಳುವ ಸ್ವರಾಲಾಪಗಳ ಮೇಲಿಂದ ಸಂಗೀತಕ್ಕೂ ಭಕ್ತಿಗೂ ಇರುವ ಸಂಬಂಧ ಸಹಜವಾಗಿ ಗೋಚರಿಸುವದು. ಕೈಲಾಸನಾಥನಾದ ಶಿವನನ್ನು ಕೆಣಕಿ ಪರ್ವತದಡಿಯಲ್ಲಿ ಕೈಗಳು ಸಿಕ್ಕು ಒದ್ದಾಡುತ್ತಿದ್ದಾಗ ರಾವಣ ಆತನನ್ನು ಕುರಿತು ಹಾಡಿದ ಹಾಡುಗಳು ಸಾಮವೇದವೆಂದು ಪ್ರತೀತಿ ಹೊಂದಿದೆ. ಹಾಡಲು ಬರುತ್ತಿರದಿದ್ದರೆ ರಾವಣ ಇನ್ನೂ ಪರ್ವತದಡಿ ಕೈ ಸಿಲುಕಿಕೊಂಡು ಒದ್ದಾಡುತ್ತಲೇ ಇರಬೇಕಾಗುತ್ತಿತ್ತೇನೋ? ತನ್ನನ್ನು ಕೆಣಕಿದವನನ್ನು ಕೂಡ ಕ್ಷಮಿಸುವಷ್ಟು ಮಟ್ಟಿಗೆ ಈಶ್ವರನ ಹೃದಯ ಕರಗಿಹೋಗಬೇಕಾದರೆ ಸಂಗೀತದಲ್ಲಿ ಅದ್ಭುತಶಕ್ತಿಯಿದೆ ಎಂದೇ ಅರ್ಥವಾಗುವದಿಲ್ಲವೇ?

* * *

ಸಂಗೀತದ ಶಕ್ತಿಯನ್ನು ನಾವು ನಾನಾರೂಪಗಳಲ್ಲಿ ಕಾಣಬಹುದು. ಯಾವುದೊಂದು ಹುಡುಗಿಯನ್ನು ಕಂಡು ಮೋಹಿಸಿದ ತರುಣನು ಕವಿಯಾಗಿದ್ದರೆ ಮೊದಲು ಆಕೆಯ ರೂಪವನ್ನು ವರ್ಣಿಸಿ ಕವಿತೆ ಬರೆದು ಹಾಡಿ ಆಕೆಯನ್ನು ಒಲಿಸಿಕೊಳ್ಳಲೆತ್ನಿಸುತ್ತಾನೆ. ದೃಶ್ಯ ಕಾವ್ಯವೆಂದು ಖ್ಯಾತಿಯಿರುವ ನಾಟಕವನ್ನು ನೋಡಿ. ನಾಟಕದ ಪಾತ್ರಗಳಿಗೆ ಸಂತೋಷವಾಗಲಿ, ದುಃಖವಾಗಲಿ, ಸಿಟ್ಟು ಬರಲಿ—ಯಾವ ಭಾವನೆಯೇ ಉಂಟಾಗಲಿ! ಒಂದು ಹಾಡು ಹಾಡಿ ನಟ ಅದನ್ನು ಸುಲಭವಾಗಿ ಪ್ರದರ್ಶಿಸುತ್ತಾನೆ. ಅಭಿನಯ ಬಾರದ ನಟರಿಗೆ ಸಂಗೀತ ಈ ದೃಷ್ಟಿಯಲ್ಲಿ ಮಾಡುತ್ತಿರುವ ಉಪಕಾರ ಅಷ್ಟಿಷ್ಟಲ್ಲ. ಬೇಡಾದವರು ನೆರಮನೆಯಲ್ಲಿದ್ದರೆ ತನ್ನ ಹೆಂಡತಿಗೂ ಮಗಳಿಗೂ ಸಂಗೀತ ಕಲಿಸಲು ಪ್ರಾರಂಭಿಸಿದರೆ ಯಾವ ಕಷ್ಟವೂ ಇಲ್ಲದೆ ಅವರನ್ನು ಓಡಿಸಬಹುದೆಂಬ ಮಾತು ಅನೇಕರಿಗೆ ಗೊತ್ತಿದೆ. ಇದ್ದವರಿಗೆ ಪೂಮಾಲೆ ಅರ್ಪಿಸುವಾಗ, ಸತ್ತವರಿಗೆ ಶ್ರದ್ಧಾಂಜಲಿ ಅರ್ಪಿಸುವಾಗ, ವೀರರನ್ನು ಹೊಗಳುವಾಗ,

ಸಂಗೀತದ ಸಹಾಯವಿಲ್ಲದಿದ್ದರೆ ನಡೆಯುವಂತೆಯೇ ಇಲ್ಲ. ಆಧುನಿಕ ಪದ್ಧತಿಯಂತೆ ನಡೆಯುತ್ತಿರುವ ವಧು ಪರೀಕ್ಷೆಗಳಲ್ಲಿ ಪರೀಕ್ಷೆಗೆ ಕೂಡ್ರುವ ಹುಡುಗಿ ಬಗಲಲ್ಲಿ ಹಾರ್ಮೋನಿಯಂ ಪೆಟ್ಟಿಗೆ ಇಟ್ಟುಕೊಂಡೇ ಪರೀಕ್ಷಕರ ಎದುರು ಬರಬೇಕಾಗುವದು. ಹಾಗೆಯೇ ಬಂದರೆ ಪರೀಕ್ಷಕ ವರ ಕಣ್ಣು ಮುಚ್ಚಿಕೊಂಡೇ "ನಾಪಾಸ" ಎಂದು ಬಿಡುತ್ತಾನೆ.

* * *

ಸಂಗೀತದ ಮಾಧುರ್ಯ, ಸ್ವಾರಸ್ಯ, ಸಾಮರ್ಥ್ಯಗಳನ್ನು ವರ್ಣಿಸುವದು ಸಹಸ್ರ ನಾಲಿಗೆಗಳುಳ್ಳ ಶೇಷನಿಗೂ ಸಾಧ್ಯವಾಗದು. ಅಂದ ಮೇಲೆ ಯಾರೂ ಇಲ್ಲದ ಸಮಯ ನೋಡಿಕೊಂಡೇ ಆಲಾಪ ಮಾಡಿದರೆ ಮಾತ್ರ ಮೈಯೆಲುಬುಗಳನ್ನು ರಕ್ಷಿಸಿಕೊಳ್ಳಬಲ್ಲ ಲಾಂಗೂಲಾಚಾರ್ಯರು ಅವನ್ನು ವರ್ಣಿಸ ಹೋದರೆ ಅಪಹಾಸ್ಯವಾದೀತು. ಲಾಂಗೂಲಾಚಾರ್ಯರು ಕವಿಗಳೂ ಜೊತೆಗೆ ಸಂಗೀತಗಾರರೂ ಆಗಿದ್ದರೆ ನಾಲ್ಕು ಸಾಲಿನ ಪದ್ಯ ಬರೆದು, ಮೂರು ಗಂಟೆಕಾಲ ಹಾಡಿ "ಸಂಗೀತದ ವಿಚಾರವಾಗಿ ಎಲ್ಲವನ್ನೂ ಹೇಳಿದ್ದೇನೆ. ಕೇಳುವವರಲ್ಲಿರುವ ಬುದ್ಧಿಶಕ್ತಿಯ ಪ್ರಮಾಣಕ್ಕನುಸರಿಸಿ ಅದು ಅವರಿವರಿಗೆ ಅರ್ಥವಾಗಬಹುದು" ಎಂದು ಪಾರಾಗುತ್ತಿದ್ದರು. ಆ ಶಕ್ತಿ ಇಲ್ಲದ್ದರಿಂದ ಅವರು ಸಂಗೀತದ ಮಾಧುರ್ಯ-ಸ್ವಾರಸ್ಯ-ಸಾಮರ್ಥ್ಯಗಳು ಅಪಾರ, ಅನಂತ, ಅಗಣಿತ ಎಂದು ಮುಂತಾಗಿ ಹೇಳಿ ಸುಮ್ಮನಾಗುತ್ತಿದ್ದಾರೆ.

* * *

ಪ್ರಜಾರಾಜ್ಯಗಳಲ್ಲಿ ಲೋಕಸಭೆ, ವಿಧಾನಸಭೆ ಮುಂತಾದ ಸಭೆಗಳಿರುತ್ತವೆ ಜನರ ಪ್ರತಿನಿಧಿಗಳು ಅಲ್ಲಿಗೆ ಹೋಗಿ ಜನರಿಗೆ ಬೇಕಾದ, ಬೇಡಾದ, ಸಕಲ ವಿಚಾರಗಳನ್ನೂ ಚರ್ಚಿಸಿ ಕಾದಾಡಿ, ನಯ, ಅನುನಯ ವಿನಯಕೋಪಾದಿ ಮಾರ್ಗಗಳನ್ನು ಸ್ವೀಕರಿಸಿ ಕೊನೆಗೆ ಜನರಿಗಾಗಿ ಒಂದು ತೀರ್ಮಾನ ಮಾಡಿಕೊಡುತ್ತಾರೆ. ತಂತಮ್ಮ ವಾದವನ್ನು ಮಂಡಿಸುವಾಗ ಅದು ಪ್ರಭಾವಶಾಲಿಯಾಗಲೆಂದು ಈ ಸದಸ್ಯರಲ್ಲಿ ಕೆಲವರು ಅಂಕಿ ಸಂಖ್ಯೆಗಳ ಜಾಲವನ್ನು ಬೀಸುತ್ತಾರೆ. ಹಲವರು ನೂರೆಂಟು ಪುಸ್ತಕಗಳಲ್ಲಿನ ಸಹಸ್ರಾರು ವಾಕ್ಯಗಳನ್ನೆತ್ತಿ ತೋರಿಸುತ್ತಾರೆ. ಮತ್ತಿತರರು ಬೇರೆ ರಾಜ್ಯಗಳಲ್ಲಿಯ ಉದಾಹರಣೆಯನ್ನು ಮುಂದಿಡುತ್ತಾರೆ. ಹೀಗೆ ತಮತಮಗೆ ಅವಗತವಾದ ರೀತಿಯಲ್ಲಿ ತಮ್ಮ ವಾದವನ್ನು ಮಂಡಿಸಿ ಪ್ರತಿಪಕ್ಷಗಳನ್ನು ಹಣ್ಣು ಮಾಡುವದರಲ್ಲಿ ಮಗ್ನರಾಗುತ್ತಾರೆ.

* * *

ಸದಾ ನಡೆಯುವ ಈ ವಿಚಾರಗಳಿಗಾಗಿ ಯಾರೂ ಅಷ್ಟೇನೂ ಕುತೂಹಲಿಗಳಾಗ ಬೇಕಾಗಿಲ್ಲ. ಆದರೆ ಕಳೆದ ವಾರ ದಿಲ್ಲಿಯಲ್ಲಿ ಲೋಕಸಭೆಯ ಅಧಿವೇಶನದಲ್ಲಿ ಆಂಧ್ರರಾಜ್ಯ ವಿಧೇಯಕದ ಚರ್ಚೆ ನಡೆದಿದ್ದಾಗ ಬಹುಶಃ ಮೇಲಿನ ಯಾವ ರೀತಿಯಲ್ಲೂ ಪ್ರವೀಣರಾಗಿರದ

ಪ್ರಜಾಸಮಾಜವಾದಿ ಪಕ್ಷದ ಓರ್ವ ಸದಸ್ಯರು ರಾಯಲ ಸೀಮೆಯ ಕಷ್ಟಕಾರ್ಪಣ್ಯಗಳನ್ನು ಕುರಿತು ಒಂದುಹಾಡನ್ನು ಹಾಡಿದರು. ಸಂಗೀತಕ್ಕೆ ದೇವರೇ ಮರುಳಾಗಿ ಇಷ್ಟಾರ್ಥವನ್ನು ಕೈಗೂಡಿಸಿ ಕೊಡುವಾಗ ಹಾಡು ಕೇಳಿ ಕರಗದಿರಲು ಇವರೇನು ರಕ್ತ ಮಾಂಸದ ಮನುಷ್ಯರಲ್ಲವೇ? ಕಲ್ಲಿನ ಪ್ರತಿಮೆಗಳೇ ಎಂದು ಭಾವಿಸಿ ಅವರು ಹಾಡಿದರು ಎಂದೇ ಲಾಂಗೂಲಾಚಾರ್ಯರ ಪ್ರಾಮಾಣಿಕ ಮತವಿದೆ. ಆದರೆ ಲೋಕಸಭೆಯ ಸದಸ್ಯರಲ್ಲದ, ಲೋಕ ಸಭಾಭವನದಿಂದ ನೂರಾರು ಮೈಲು ದೂರದಲ್ಲಿರುವ ಲಾಂಗೂಲಾ ಚಾರ್ಯರ ಮತ ಅಭಿಪ್ರಾಯಗಳಿಂದೇನಾಗಬೇಕು! ಹಾಗೇ ಆಯಿತು. ಸಂಸತ್ ಸದಸ್ಯರು ಹಾಡಿದ್ದೇ ತಡ; ಸದಸ್ಯರೊಬ್ಬರು "ಸಭೆಯಲ್ಲಿ ಹಾಡಬಹುದೇ" ಎಂದು ಕೇಳಿದುದು ಮಾತ್ರವಲ್ಲದೆ ತುಸು ಮುಂದಕ್ಕೆ ಹೋಗಿ "ಜೊತೆಗೆ ಕುಣಿಯಬಹುದೇ"—ಎಂದು ಕೇಳಿದರು. ಸಂಗೀತಕ್ಕೂ ಕುಣಿತಕ್ಕೂ ನಿಕಟಸಂಬಂಧವಿದೆ. ಸಂಗೀತ ಪ್ರಿಯರಾದ ಪ್ರ.ಸ.ವಾ. ಸದಸ್ಯರಂತೆ ಈ ಕಾಂಗ್ರೆಸ್ ಸದಸ್ಯರು ನೃತ್ಯ ಪ್ರಿಯರಾಗಿರಬಹುದು. ಸಂಗೀತದಿಂದ ಎದುರಾಳಿ ಸಾಧಿಸಿದ್ದನ್ನು ನೃತ್ಯದಿಂದ ತೊಡೆದು ಹಾಕಬಹುದು ಎಂಬ ವಿಚಾರ ಈ ಪ್ರಶ್ನೆಯ ಮೂಲದಲ್ಲಿದ್ದಿರಲೂಬಹುದು.

* * *

ಲೋಕಸಭೆಯ ಅಧ್ಯಕ್ಷರು ಮಾತ್ರ ಮುಂದಾಲೋಚನೆಯಿಂದಲೇ ಇರಬೇಕು ಹುಂ ಅನ್ನಲಿಲ್ಲ. ಹಾಂ ಅನ್ನಲಿಲ್ಲ. ಬರೇ ಮುಗುಳ್ನಗೆ ನಕ್ಕರು. ಇದಕ್ಕೆ "ಕುಣಿಯುತ್ತೀರಾ, ಸರಿ" ಎಂದರ್ಥವಾಗಲೂಬಹುದು. ಅಥವಾ "ನಿಮಗೂ ಹುಚ್ಚು ಲಹರಿ ಬಂದಿದೆಯೇ?'" ಎಂದೂ ಆಗಬಹುದು. ತನಗೆ ಬೇಕಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವದು ಮನುಷ್ಯನ ಸ್ವಭಾವವಾದುದರಿಂದ ಮೊದಲಿನ ಅರ್ಥವನ್ನೇ ಗ್ರಹಿಸಿಕೊಂಡ ಪ್ರ.ಸ.ವಾ. ಸದಸ್ಯರು ಕಾಂಗ್ರೆಸ ಸದಸ್ಯರಿಗೆ "ಹಾಡನ್ನಂತೂ ಹಾಡಿದ್ದೇನೆ. ಕುಣಿಯುವದು ನಿಮ್ಮ ಕೆಲಸ" ಎಂದರು. ಮುಂದೆ ಸಭೆಯಲ್ಲಿ ನೃತ್ಯ ಪ್ರದರ್ಶನವಾಯಿತೇ ಇಲ್ಲವೇ ಎಂಬುದನ್ನು ಯಾವ ಸ್ವಂತ, ಪ್ರೇಷಿತ, ವಿಶೇಷ ಇತ್ಯಾದಿ ಸುದ್ದಿಗಾರನೂ ತಿಳಿಸಿಲ್ಲ. ಇದು ದುರ್ದೈವದ ಮಾತು.

* * *

ಸಂಗೀತವು ನಾನಾ ಭಾವನೆಗಳನ್ನು ಪ್ರದರ್ಶಿಸುವಂತೆ ನೃತ್ಯವೂ ಪ್ರದರ್ಶಿಸಬಲ್ಲದು. ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಕಥಕ್ಕಳಿ ನೃತ್ಯವು ಈ ಮಾದರಿಯದಾಗಿದೆ. ಮಹಾಭಾರತ, ರಾಮಾಯಣಗಳ ಕಥೆಗಳನ್ನು ವೇಷಧಾರಿಗಳು ಕುಣಿದು ತೋರಿಸುತ್ತಾರೆ. ಮಾತುಗಳನ್ನಾಡದೆ ಅಂಗಾಂಗಗಳ ಅಭಿನಯದಿಂದ ಕಥೆ ಜನರಿಗೆ ತಿಳಿಯುವಂತೆ ಮಾಡುತ್ತಾರೆ. ಅಂದಮೇಲೆ ಲೋಕಸಭೆಯಲ್ಲಿ ಒಬ್ಬರು ರಾಯಲ್ ಸೀಮೆಯ ಸಂಕಟವನ್ನು ಪದಹಾಡಿ ತೋಡಿಕೊಳ್ಳಬಹುದಾದರೆ ಇನ್ನೊಬ್ಬರು ಮತ್ತೊಂದು ಸೀಮೆಯ ಸುಖವನ್ನು ಕುಣಿದು ಏಕೆ ಮನದಟ್ಟು ಮಾಡಿಕೊಡಬಾರದು?

* * *

ಅಂಥ ಅವಕಾಶ ಲೋಕಸಭೆಯಲ್ಲಿ ಖಂಡಿತವಾಗಿಯೂ ಇರಬೇಕು ಎಂದು ಲಾಂಗೂಲಾಚಾರ್ಯರ ಅಭಿಪ್ರಾಯವಿದೆ. ಇದರಿಂದ ಅನೇಕ ಕಾರ್ಯಗಳನ್ನು ಸಾಧಿಸಬಹುದು. ನಮ್ಮ ಸಂಸ್ಕೃತಿ ಪರಂಪರೆಯ ರಕ್ಷಣೆಗೆ ಕಲಾಭಿವೃದ್ಧಿಯ ಅಗತ್ಯವಿರುವದರಿಂದ, ಭಾರತೀಯ ನೃತ್ಯ ಸಂಪ್ರದಾಯವನ್ನು ಉಳಿಸಿ ಬೆಳೆಸುವದಕ್ಕೆ ಇದರಿಂದಲಿನುಕೂಲವಾಗುವದು. ಕುಣಿದರೆ ಜನರೇನೆಂದಾರೋ ಎಂದು ಹೆದರಿಕೊಳ್ಳುವ ಸದ್ಗೃಹಸ್ಥರಿಗೆ ಲೋಕಸಭಾ ಸದಸ್ಯರೇ ಕುಣಿಯುತ್ತಾರೆನ್ನುವದು ಧೈರ್ಯವನ್ನು ತಂದುಕೊಟ್ಟೀತು. ನೀರಸ ವಿಷಯದ ಚರ್ಚೆ ನಡೆದಾಗ ಎಷ್ಟೋ ಸದಸ್ಯರಿಗೆ ನಿದ್ದೆ ಪೀಡಿಸುತ್ತಿರುತ್ತದೆ. ಆಗ ಯಾವನೊಬ್ಬ ಸದಸ್ಯ "ಥಕ ಥಕ ತಾ, ಥೈ ಥಕ ಥಾ" ಎಂದು ಗೆಜ್ಜೆಯ ಸ್ವರ ಹೊರಡಿಸಿದರೆ ನಿದ್ದೆಯು ಹಾರಿ ಹೋದೀತು; ವಿಷಯ ಗ್ರಹಣವೂ ಸದಸ್ಯರಿಗಾಗಿ ಮತದಾನಕ್ಕಾಗಿ ಗಂಟೆಯಾದಾಗ ನಿದ್ದೆಯಿಂದ ಗಡಬಡಿಸಿ ಎಚ್ಚೆತ್ತು ವಿರೋಧಿಗಳ ಪರವಾಗಿ ಮತಕೊಡುವದೂ ತಪ್ಪೀತು. ಭಾಷಣವೆಂದರೆ ಮೈಮುಳ್ಳೇಳುವ ಸದಸ್ಯರು ಬದುಕಿಕೊಂಡಾರು. ಕಥಕ್ಕಳಿಯ ಪ್ರಚಾರಕರು ಈ ಮಾತನ್ನು ಪಟ್ಟಾಗಿ ಹಿಡಿದು ಗಾಳಿಬಂದಿರುವಾಗಲೇ ತೂರಿಕೊಂಡಾರು ಎಂದು ಆಚಾರ್ಯರು ನಂಬಿದ್ದಾರೆ.

❑

# ಏಕ ಬತ್ತಿ - ಏಕ ರಾಸ್ತಾ

ಅನೇಕ ಸಂಸ್ಕೃತಿ ಮತ್ತು ಭಾಷೆಗಳಲ್ಲಿ ಐಕ್ಯವನ್ನು ಸಾಧಿಸುವ ಉಪಾಯವೊಂದನ್ನು ಚಲಚ್ಚಿತ್ರ ನಿರ್ದೇಶಕ ವ್ಹಿ. ಶಾಂತಾರಾಮರು 'ತೀನ ಬತ್ತಿ ಚಾರ ರಾಸ್ತಾ' ಎಂಬ ಚಿತ್ರದಲ್ಲಿ ಸೂಚಿಸಿದ್ದಾರೆ. ಅವರ ಉಪಾಯದಂತೆ, ಮನೆಯ ಯಜಮಾನನಾದವನು ತನ್ನ ಮಕ್ಕಳಲ್ಲಿ ಒಬ್ಬೊಬ್ಬನಿಗೆ ಒಂದೊಂದು ಸಂಸ್ಕೃತಿ ಮತ್ತು ಭಾಷೆಯ ಹುಡುಗಿಯನ್ನು ತಂದು ಲಗ್ನ ಮಾಡಬೇಕು; ಈ ಎಲ್ಲ ಸೊಸೆಯರ ಭಾಷೆಯನ್ನು ಬಲ್ಲ, ಸಂಸ್ಕೃತಿ ಮತ್ತು ಪದ್ಧತಿಗಳನ್ನರಿತ ಕೆಲಸದಾಕೆಯನ್ನು ನೇಮಿಸಿಕೊಳ್ಳಬೇಕು; ಯಜಮಾನನ ಅವಿವಾಹಿತ ಕಿರಿಯ ಮಗ ಈ ಕೆಲಸದಾಕೆಯನ್ನು ಪ್ರೀತಿಸಿ ಲಗ್ನವಾಗಲೇಬೇಕು; ಇಚ್ಛಿತ ಐಕ್ಯ ತಾನಾಗಿ ಬಂದು ನೆಲೆಸುತ್ತದೆ.

* * *

ಮೇಲೆ ಮೇಲೆ ನೋಡಿದಲ್ಲಿ ಇದರಷ್ಟು ಸುಲಭ ಉಪಾಯ ಇನ್ನೊಂದಿಲ್ಲವೆನಿಸಬಹುದು. ಆದರೆ ಒಂದು ಮನೆಯಲ್ಲಿ ವಿವಿಧ ಸಂಸ್ಕೃತಿ ಮತ್ತು ಭಾಷೆಗಳು ಕೂಡಿ ನಡೆದ ಮಾತ್ರಕ್ಕೆ ದೇಶದ ಪ್ರತಿಯೊಂದು ಮನೆಯಲ್ಲೂ ಆದೀತೇ? ಎಲ್ಲ ಮನೆಗಳಲ್ಲೂ ಈ ಯೋಜನೆಯನ್ನು ಜಾರಿಯಲ್ಲಿ ತರೋಣವೆಂದರೆ ಪ್ರತಿ ಯಜಮಾನನೂ ಇಷ್ಟೊಂದು ಗಂಡು ಮಕ್ಕಳನ್ನು ಎಲ್ಲಿಂದ ತರಬೇಕು? ಭಾರತದಲ್ಲಿ ನೂರಾರು ಭಾಷೆಗಳಿದ್ದು ಪ್ರತಿಯೊಂದು ಭಾಷೆಗೂ ಒಂದೊಂದು ಸಂಸ್ಕೃತಿ, ಪರಂಪರೆ ಇತ್ಯಾದಿ ಇತ್ಯಾದಿ ಇವೆ. ಇವುಗಳಲ್ಲಿ ಅತಿ ಮುಖ್ಯವಾದದ್ದನ್ನೇ ಶಾಂತಾರಾಮರಂತೆ ಲೆಕ್ಕಕ್ಕೆ ಹಿಡಿದರೂ ಹಿಂದಿ, ಬಂಗಾಲಿ, ಪಂಜಾಬಿ, ಮರಾಠಿ, ಕನ್ನಡ, ತೆಲುಗು, ತಮಿಳು, ಮಲೆಯಾಳಿ, ಗುಜರಾತಿ, ಉರ್ದು ಹೀಗೆ ಹತ್ತು—ಹನ್ನೆರಡು ಭಾಷೆಗಳು ಹೊರಡುವವು. ಅಂದರೆ ಪ್ರತಿಮನೆಗೆ ಕನಿಷ್ಠ ಹತ್ತು-ಹನ್ನೆರಡು ಗಂಡು ಮಕ್ಕಳಾದರೂ ಇರಬೇಕಾಯಿತಲ್ಲ; ಮೇಲೊಬ್ಬ ಅವಿವಾಹಿತ ಕುವರನೂ ಬೇಕಲ್ಲ! ಪ್ರತಿ ಮನೆಗೂ ಬಹುಭಾಷಾ ಪಂಡಿತೆ ಕೆಲಸದಾಕೆ ದೊರಕಬೇಕಲ್ಲ! ನೂರಕ್ಕೆ ೧೬.೬ ರಷ್ಟು ಸಾಕ್ಷರಿರುವ ಈ ದೇಶದಲ್ಲಿ ಮನೆಗೋರ್ವ ಬಹುಭಾಷಾ ಪಂಡಿತೆ ಸಿಗುವ ಮಾತು ಹಗಲುಗನಸೇ ಸರಿ. ಮತ್ತೆ, ಭಾರತದ ಜನಸಂಖ್ಯೆ ವಿಪರೀತವಾಗಿ ಹೆಚ್ಚುತ್ತಿರುವದೇ ಆಹಾರ ಸಮಸ್ಯೆ ಉದ್ಭವಿಸಲು ಮುಖ್ಯ ಕಾರಣವೆಂದು ಕುಟುಂಬ ನಿಯಂತ್ರಣ ಯೋಜನೆಯ ವಿಚಾರವನ್ನು ದೇಶದ ಹಿತಚಿಂತಕರು ನಡೆಸಿರುವಾಗ ಕೇವಲ ಸಂಸ್ಕೃತಿ ಮತ್ತು ಭಾಷೆಗಳಲ್ಲಿ ಅನ್ಯೋನ್ಯತೆ ಸಾಧಿಸಲೆಂದು ಕುಟುಂಬವನ್ನು ಬೆಳೆಸಿಕೊಂಡಲ್ಲಿ

ಅನ್ನಕ್ಕಾಗಿ ಬಾಯಿಬಿಡಬೇಕಾದೀತಲ್ಲ! ತಂತಮ್ಮ ಪಕ್ಷಕ್ಕೆ ಭಾರತವನ್ನು ಸೇರಿಸಿಕೊಳ್ಳಬೇಕೆಂದು ರಶಿಯ ಮತ್ತು ಅಮೇರಿಕೆಗಳು ಸ್ಪರ್ಧೆಯಿಂದ ಸಹಾಯ ನೀಡಿದರೂ ಪೂರೈಸಲಿಕ್ಕಿಲ್ಲ. ಚಿತ್ರಪಟಗಳಲ್ಲೇನು? ಚಿತ್ರಪ್ರಪಂಚ ಬಹ್ವಂಶದಲ್ಲಿ ಕಲ್ಪನಾಸೃಷ್ಟಿಯಾಗಿರುವದರಿಂದ ಒಬ್ಬನಿಗೆ ಹತ್ತೇಕೆ, ನೂರು ಮಂದಿ ಮಕ್ಕಳಿದ್ದರೂ ನಡೆಯುತ್ತದೆ. ತಂದೆ ಒಬ್ಬೊಬ್ಬ ಮಗನಿಗಾಗಿಯೂ ಒಂದೊಂದು ಮೋಟರ್ ಕಾರ್ ಇಡಬಲ್ಲ ಶ್ರೀಮಂತನಾಗಿರುವದರಿಂದ, ಒಂದೊಂದು ಭಾಷೆಯ ಒಂದೊಂದು ವಾಕ್ಯವನ್ನು ಕಲಿಸಿ ಬಹುಭಾಷಾ ಪಂಡಿತೆಯರನ್ನು ಸೃಷ್ಟಿಸಿಕೊಳ್ಳ ಬಹುದಾದ್ದರಿಂದ ಇತರ ವ್ಯಾವಹಾರಿಕರಿಗೆ ಬರುವ ತೊಂದರೆ ಬರುವುದಿಲ್ಲ.

* * *

ಸಂಸ್ಕೃತಿ, ಭಾಷೆ, ಜಾತಿ ಇತ್ಯಾದಿಗಳ ಅತಿರೇಕ ಅಭಿಮಾನದಿಂದ ಕೇವಲ ಬಾಯಿ ಜಗಳದಲ್ಲೇ ತೃಪ್ತರಾಗದೆ ಜನ ಪರಸ್ಪರರ ತಲೆ ಕೂಡ ಒಡೆದು ಕೊಳ್ಳುವುದು ನಡೆದೇ ಇದೆ. ತತ್ವತಃ ಎಲ್ಲ ಒಂದೇ ಎಂದು ಯಾರು ಹೇಳಿದರೂ ಪ್ರಯೋಜನವಾಗಿಲ್ಲ. ಮನುಷ್ಯಜಾತಿಗೆ ಅಂಟಿಕೊಂಡಿರುವ ಈ ರೋಗನಿವಾರಣೆಗಾಗಿ ಹುಡುಕಿ ತೆಗೆದ ಭಾಷಣ. ಲೇಖನ, ವಿನಂತಿ, ಪ್ರಚಾರ, ವೇದಾಂತ ಮೊದಲಾದ ಉಪಾಯಗಳು ವ್ಯರ್ಥವಾಗಿ ಹೋಗಿವೆ. ಈ ರೋಗ ನಿವಾರಣೆಗಾಗಿ ಔಷಧ ಹುಡುಕಲೆತ್ನಿಸುವವರು ಹುಚ್ಚರಾಗುವ ಪ್ರಸಂಗ ಬಂದಿದೆ. ರಕ್ತಗತವಾದ ಈ ಮಹತ್ವದ ಸಮಸ್ಯೆಯನ್ನು ಚಿತ್ರಪಟ ನಿರ್ಮಾಣ ಬುದ್ಧಿಮಟ್ಟದಿಂದ ಬಿಡಿಸ ಹೋದಲ್ಲಿ ನಾಲ್ಕು ರಸ್ತೆಗಳನ್ನು ಮೂರು ದೀಪಗಳಿಂದ ಬೆಳಗಿಸ ಹೋದಷ್ಟೇ ಜಾಣತನದ್ದಾದೀತು. ಪ್ರತಿಯೊಂದು ಸಮಸ್ಯೆಯನ್ನೂ ಶಾಸ್ತ್ರೀಯ ದೃಷ್ಟಿಯಿಂದ ಬಿಡಿಸುವ ಪ್ರಯತ್ನ ನಡೆದಿರುವ ಈ ವಿಜ್ಞಾನ ಯುಗದಲ್ಲಿ ಇಂಥ ಉಪಾಯ ಬಹಳ ಹಳೆಯ ಮಾದರಿಯದೆಂದು ಸ್ವೀಕೃತವಾಗಲಿಕ್ಕೂ ಇಲ್ಲ. ತನ್ನದೇ ಜಾತಿ, ಸಂಸ್ಕೃತಿ ಮತ್ತು ಭಾಷೆಯ ಒಬ್ಬ ಸೊಸೆಯೊಂದಿಗೇ ಸೌಹಾರ್ದದಿಂದ ಬಾಳುವದು ಕಠಿಣವಾಗುವ ಅತ್ತೆಗೆ ಇಷ್ಟೊಂದು ವಿವಿಧ ಸಂಸ್ಕೃತಿ ಇತ್ಯಾದಿಗಳ ಸೊಸೆಯಂದಿರ ಕಲ್ಪನೆ ಕೂಡ ಸಿಂಹಸ್ವಪ್ನವಾದೀತು.

* * *

ಯುದ್ಧ, ಅಪಘಾತ ಮುಂತಾದವುಗಳಲ್ಲಿ ಆದ ವಿಪರೀತಗಾಯಗಳಿಂದ ಅತಿರಕ್ತಸ್ರಾವವಾಗಿ ಸಾಯುವ ಸ್ಥಿತಿಯಲ್ಲಿರುವವರಿಗೂ ಯಾವುದೊಂದು ಕಾಯಿಲೆಯ ಮೂಲಕ ರಕ್ತ ಒಣಗಿ ಹೋಗಿ ಬದುಕಲಾರದ ಸ್ಥಿತಿಯಲ್ಲಿರುವವರಿಗೂ ಎರಡನೆಯವರ ದೇಹದಲ್ಲಿನ ರಕ್ತವನ್ನು ತುಂಬಿ ಬದುಕಿಸುವದನ್ನು ಈಗ ವೈದ್ಯಶಾಸ್ತ್ರ ಸಾಧಿಸಿದೆ. ರಕ್ತದಾನವೆಂದರೆ ಜೀವದಾನ ಎಂದಿಷ್ಟೇ ಈಗ ಜನರು ಕಲ್ಪನೆ ಮಾಡಿದ್ದಾರೆ. ಆದರೆ ಈ ರಕ್ತದಾನದಿಂದ ಜಗತ್ತಿನ ಜನರ ಜೀವನದಲ್ಲಿ, ಬುದ್ಧಿಯಲ್ಲಿ, ವಿಚಾರ ಸರಣಿಯಲ್ಲಿ ಎಂಥ ಕ್ರಾಂತಿ ಸಾಧಿಸಬಹುದು ಎಂಬುದು ಇನ್ನೂ ಯಾರ ತಲೆಯಲ್ಲಿಯೂ ಹೊಳೆಯದಿರುವದು ವಿಷಾದಕರ.

* * *

ಯಾವ ಮಾತೇ ಆಗಲಿ, ಪ್ರಯತ್ನ ಮಾಡಿತೆಂದು ಹೊಳೆಯುವದಿಲ್ಲ. ಮರದ ಮೇಲಿಂದ ಬಿದ್ದ ಯಃಕಶ್ಚಿತ ಹಣ್ಣೊಂದು ನ್ಯೂಟನ್ನನಿಗೆ ಗುರುತ್ವಾಕರ್ಷಣ ತತ್ವವನ್ನು ಹೇಳಿಕೊಟ್ಟಂತೆ ಯಾವುದಾದರೊಂದು ಘಟನೆಯ ಮೂಲಕವೇ ಮನುಷ್ಯನಿಗೆ ಅಕಸ್ಮಾತ್ತಾಗಿ ಒಂದು ವಿಷಯದ ರಹಸ್ಯ ಗೋಚರವಾಗುತ್ತದೆ. ಹೀಗೆ ಹೊಳೆದ ವಿಚಾರವೇ ಮುಂದೆ ಶೋಧವೆಂದೆನಿಸಿಕೊಳ್ಳುತ್ತದೆ. ರಕ್ತದಾನದಲ್ಲಿರುವ ಮಹತ್ವ ಲಾಂಗೂಲಾಚಾರ್ಯರಿಗೆ ಕೂಡ ಅವರು ಊಟಕ್ಕೆ ಕುಳಿತಾಗಲೇ ಅಕಸ್ಮಾತ್ತಾಗಿ ಹೊಳೆಯಿತು. ಮಾವಿನ ಹಣ್ಣಿನ ಶೀಕರಣೆಗೆ ಉಪಯೋಗಿಸಿದ್ದ ಮಾವಿನ ಹಣ್ಣು ಒಳ್ಳೆಯ ಜಾತಿಯದಲ್ಲ ಎಂದು ಅನಿಸಿತು. ಅಂಗಡಿಯವನೇನೋ ಒಳ್ಳೆ ಕಸಿಕಟ್ಟಿದ ಗಿಡದ ಹಣ್ಣು ಎಂದಿದ್ದ. ಆದರೆ ಆತ ಕೊಟ್ಟಿದ್ದು ಕಚ್ಚಾ ಹಣ್ಣೇ ಆಗಿತ್ತು.

* * *

ಹುಳಿ ಹಣ್ಣಿನ ಗಿಡವನ್ನು ಕಸಿಕಟ್ಟಿ ಸಿಹಿ ಹಣ್ಣಿನ ಗಿಡವನ್ನಾಗಿ ಮಾರ್ಪಡಿಸುತ್ತಾರಲ್ಲ! ಜಾತಿಯ ಗುಣ, ಹುಟ್ಟು ಗುಣವನ್ನೇ ಬದಲಾಯಿಸುತ್ತಾರಲ್ಲ! ಇದೇ ತತ್ವ, ಇದೇ ಮಾತು ಮನುಷ್ಯ ಜಾತಿಗೂ ಏಕೆ ಅನ್ವಯಿಸಬಾರದು? ಗುಣವೆಂಬುದು ರಕ್ತಗತವಾದುದು. ತಂದೆಯ ಗುಣ ಮಗನಿಗೆ, ಮಗನ ಗುಣ ಮೊಮ್ಮಗನಿಗೆ; ಹೀಗೆ ಗುಣವೆಂಬುದು ವಂಶಪರಂಪರಾಗತವಾಗಿ ನಡೆದುಕೊಂಡು ಬರುವಂತಹದು. ಕಸಿಕಟ್ಟುವದೆಂದರೇನು? ಒಂದು ಜಾತಿಯ ಗಿಡದ ಸತ್ವವನ್ನು—ಅರ್ಥಾತ್ ರಕ್ತವನ್ನು ಇನ್ನೊಂದು ಜಾತಿಯ ಗಿಡಕ್ಕೆ ಸೇರಿಸುವದು. ಹಾಗೆಯೇ ಒಬ್ಬನ ರಕ್ತವನ್ನು ಇನ್ನೊಬ್ಬನ ದೇಹಕ್ಕೆ ಸೇರಿಸಿ ಅವನ ಗುಣವನ್ನ ಬದಲಿಸುವದಾಗಲಿಕ್ಕಿಲ್ಲವೇ?

* * *

ಇದು ಸಾಧ್ಯ ಎಂದೇ ಲಾಂಗೂಲಾಚಾರ್ಯರ ವಾದ. ಯುದ್ಧ, ಅಪಘಾತಾದಿಗಳು ನಿತ್ಯದ ಮಾತಾಗಿರುವ ಈ ಯುಗದಲ್ಲಿ ರಕ್ತ ಕಳಕೊಳ್ಳುವವರಿಗೇನೂ ಕಡಿಮೆಯಿಲ್ಲ. ಸಾಯುವ ಸ್ಥಿತಿಗೆ ಒಬ್ಬ ಮುಟ್ಟಿದಾಗ ರಕ್ತ ಸಂಗ್ರಹಕ್ಕಾಗಿ ಅಲೆದಾಡುವದು ಮನೆಗೆ ಬೆಂಕಿ ಹತ್ತಿದಾಗ ಬಾವಿ ತೋಡಲು ಉಪಕ್ರಮಿಸಿದಂತೆ. ಅದಕ್ಕಾಗಿಈಗ ಎಲ್ಲೆಲ್ಲೂ "ಬ್ಲಡ್‌ಬ್ಯಾಂಕ್" ಸ್ಥಾಪಿಸಲ್ಪಡತೊಡಗಿದೆ. ಈ ಬ್ಲಡ್ ಬ್ಯಾಂಕಿನ ಇತಿಮಿತಿಯನ್ನು ಈಗಿನಂತೆ ಮರ್ಯಾದಿತ ವಾಗಿಡದೆ ವಿಸ್ತರಿಸಬೇಕು. ಸಹನೆ, ಸಹಾನುಭೂತಿ, ಶಾಂತಿ, ಪ್ರೇಮ ಮೊದಲಾದ ಸದ್ಗುಣಗಳುಳ್ಳ ಜನರನ್ನು ಹುಡುಕಿ ಪ್ರತಿ ರಾಷ್ಟ್ರವೂ ಅವಶ್ಯವಾದರೆ ಅಂಥವರಿಗೆ ಇದುವರೆಗೆ ಶೋಧಿಸಲ್ಪಟ್ಟಿರುವ ಎಲ್ಲ ವಿಟಮಿನ್ನುಗಳನ್ನು ಪುಕ್ಕಟೆಯಾಗಿ ಒದಗಿಸಿ ಅವರನ್ನು ಸದೃಢರನ್ನಾಗಿ ಮಾಡಿ ಅವರ ರಕ್ತವನ್ನು ಸಂಗ್ರಹಿಸಬೇಕು. ಈ ಸಂಗ್ರಹವನ್ನು ಪರಸ್ಪರ ವಿನಿಮಯ

ಮಾಡಿಕೊಂಡು ಆ ದೇಶದ ಜನರ ರಕ್ತ ಈ ದೇಶದ ಜನರಿಗೆ, ಈ ದೇಶದ ಜನರ ರಕ್ತ ಆ ದೇಶದ ಜನರಿಗೆ ತುಂಬಬೇಕು.

* * *

ಛೆ? ಇದೆಲ್ಲಾದರೂ ಸಾಧ್ಯವೇ? ಬೆಳೆದ ಮನುಷ್ಯನ ಗುಣ ಬದಲಾದೀತೇ? ಎಂಬ ಪ್ರಶ್ನೆ ಯಾರಲ್ಲಿಯಾದರೂ ಮೂಡಿದರೆ ಅದು ವೃಥಾ ಶಂಕೆ ಎನ್ನುವದಕ್ಕೆ ಆಧಾರಗಳೂ ಕಂಡುಬಂದಿವೆ. ಕೊರಿಯಾ ರಣರಂಗದಲ್ಲಿ ಗಾಯಹೊಂದಿ ಸೆರೆ ಸಿಕ್ಕಿರುವ ಸೈನಿಕರಲ್ಲನೇಕರು, ಈಗ ಅಂಥವರನ್ನು ಅವರವರ ಸ್ವಸ್ಥಾನಕ್ಕೆ ಮುಟ್ಟಿಸಬೇಕೆಂಬ ಒಪ್ಪಂದವಾಗಿದ್ದರೂ ಹೋಗಲು ತಯಾರಿಲ್ಲವಂತೆ! ಬಹುಶಃ ಈ ಸೈನಿಕರಿಗೆ ಕಸಿ ಕಟ್ಟಿರಬೇಕು. ಅಂದರೆ ಅವರೀಗ ಎಲ್ಲಿರಬೇಕೆನ್ನುತ್ತಾರೋ ಅಲ್ಲಿಯ ಜನರ ರಕ್ತವನ್ನು ಅವರ ದೇಹದಲ್ಲಿ ತುಂಬಿರಬೇಕು. ಇಲ್ಲವಾದಲ್ಲಿ ಯಾವ ದೇಶದ ಧ್ಯೇಯ ಸಾಧನೆಗಾಗಿ ಜೀವದ ಹಂಗು ದೊರೆದು ಬಂದು ರಣರಂಗದಲ್ಲಿ ಗಾಯ ಹೊಂದಿದರೋ ಅಂಥ ತಮ್ಮ ದೇಶಕ್ಕೆ ತಿರುಗಿ ಹೋಗಲು ನಿರಾಕರಿಸುವದೆಂದರೇನು?

* * *

ಇನ್ನು ಇದಕ್ಕೂ ಮೀರಿ ಸಂದೇಹ ತಾಳುವವರು ಹಟ ಹಿಡಿದದ್ದೇ ಆದರೆ, ಸಮಾಜ ವಿಕಾಸ ಯೋಜನೆಗಳನ್ನು ಮರ್ಯಾದಿತ ಕ್ಷೇತ್ರಗಳಲ್ಲಿ ಪ್ರಯೋಗಿಸಿ ನೋಡುತ್ತಿರುವಂತೆ ಈ ಯೋಜನೆಯನ್ನು ಕೂಡ ಪ್ರಯೋಗಿಸಿ ನೋಡಬಹುದಲ್ಲ! ಈ ಯೋಜನೆಯ ರೂಪರೇಷೆ, ಕಾರ್ಯಗತ ಮಾಡುವ ರೀತಿ, ವಿಸ್ತರಿಸುವ ಪ್ರಕಾರ ಮುಂತಾದವುಗಳನ್ನು ಚರ್ಚಿಸಿ ನಿರ್ಧಾರಕ್ಕೆ ಬರಲು ಸರ್ವರಾಷ್ಟ್ರಗಳ ಪ್ರತಿನಿಧಿಗಳುಳ್ಳ ಒಂದು ಉಚ್ಚಮಟ್ಟದ ಸಮಿತಿಯನ್ನು ನೇಮಿಸಬೇಕು. ಇಂಥ ಸಮಿತಿಯ ನಿರ್ಮಾಣಕ್ಕೆ ಸಂಧಾನ ಮನೋವೃತ್ತಿಯನ್ನು ಇದೀಗ ನೋಡುತ್ತಿರುವ ರಶಿಯವು ಕೂಡ ಒಪ್ಪೀತು. ಯೋಜನೆಯ ವಿಚಾರದ ಜನಕರಾಗಿರುವ ಲಾಂಗೂಲಾಚಾರ್ಯರು ಈ ಸಮಿತಿಯ ಆನರರಿ ಅಧ್ಯಕ್ಷರಾಗಿ ಕಾರ್ಯ ನಡೆಸಿಕೊಡಲು ಸದಾ ಸಿದ್ಧರಿದ್ದಾರೆ.

❑

# ಐದು ಸಾಲದು, ಏಳು ಬೇಕು

"ಅಧಿಕಸ್ಯ ಅಧಿಕಂ ಫಲಂ" ಎಂಬ ತತ್ವದಲ್ಲಿ ಅವಿಚಲ ಶ್ರದ್ಧೆಯಿರುವವರಲ್ಲಿ ಪಾಕ ಪ್ರಧಾನ ಮಂತ್ರಿಯಾಗಿದ್ದ ಮಹಮದಲಿಯವರೇ ಎಲ್ಲರಿಗಿಂತ ಪ್ರಸಿದ್ಧರೆಂದು ಕಾಣುತ್ತದೆ. ಒಬ್ಬಳು ಹೆಂಡತಿಯಿರುವುದೇ ಇಷ್ಟು ಸುಖಕರವಾಗಿರುವಾಗ ಇಬ್ಬರಿದ್ದರೆ ಇಮ್ಮಡಿ ಸುಖವಾದೀತೆಂದು ಗುಣಕಾರ ಹಾಕಿ ಅವರು ಎರಡನೇ ಮದುವೆಯಾದರು. ಅವರು ಬಾಂಡುಂಗ ಪರಿಷತ್ತಿಗೆ "ಪಂಚಶೀಲ" ತತ್ವದ ಬದಲು "ಸಪ್ತಶೀಲ" ತತ್ವವನ್ನು ಅಂಗೀಕರಿಸಬೇಕೆಂದು ಸೂಚಿಸಿದ್ದಾರೆ. ಪಂಚಶೀಲಗಳು ಒಳ್ಳೆಯವಾಗಿದ್ದರೆ ಸಪ್ತಶೀಲಗಳು ಇನ್ನಷ್ಟು ಒಳ್ಳೆಯವಾಗಿರಬೇಕು ತಾನೆ? ಅವರ ವಿಚಾರ ಸರಣಿಯು ಪಂಚಗವ್ಯಕ್ಕಿಂತ ಷಡ್ಗವ್ಯ ಶ್ರೇಷ್ಠವಾಗಿರಬೇಕೆಂದು ತರ್ಕಿಸಿದ ಆ ಬುದ್ಧಿಶಾಲಿ ಬ್ರಾಹ್ಮಣನ ಮಾದರಿಗಿಂತ ಇನ್ನೂ ಒಂದು ಹೆಜ್ಜೆ ಮುಂದುವರಿದದ್ದು. ಷಡ್ಗವ್ಯ ಬ್ರಾಹ್ಮಣನ ಕಥೆಯನ್ನು ಲಾಂಗೂಲಾ ಚಾರ್ಯರು ನಿಮಗೆ ಹೇಳಿದ್ದಾರೋ ಇಲ್ಲವೋ ಈಗ ನೆನಪಿಲ್ಲ. ಅವನು ಯಾವುದೋ ಅಪವಿತ್ರ ಕಾರ್ಯದ ಪ್ರಾಯಶ್ಚಿತ್ತಕ್ಕಾಗಿ ಪಂಚಗವ್ಯ ತೆಗೆದುಕೊಳ್ಳಬೇಕೆಂದು ಸ್ವಾಮಿಗಳಿಂದ ಆಜ್ಞಪ್ತನಾದನಂತೆ. ಗೋಮಯ, ಗೋಮೂತ್ರ, ಹಾಲು, ಮೊಸರು, ತುಪ್ಪಗಳೆಂಬ ಐದು "ಗವ್ಯ"ಗಳ ಸಂಗಡ ಪವಿತ್ರವೆಂದು ಕೀರ್ತಿತವಾದ ಗೋ-ಕರ್ಣವನ್ನೂ ಸೇರಿಸಿದರೆ ಅದು ಇನ್ನಷ್ಟು ಪವಿತ್ರವಾಗುವುದೆಂದು ಬಗೆದು ಅವನು ಮನೆಯ ದನದ ಕಿವಿಯನ್ನು ಕತ್ತರಿಸಿ ಪಂಚಗವ್ಯದಲ್ಲಿ ಹಾಕಿ "ಷಡ್ಗವ್ಯ" ಮಾಡಿ ತೆಗೆದುಕೊಂಡನು. ಸ್ವಾಮಿಗಳ ಮುಂದೆ ಅವನು ತನ್ನ ಸವಾಯಿ ಪಂಚಗವ್ಯವಾದ ಷಡ್ಗವ್ಯದ ಸಮಾಚಾರ ತಿಳಿಸಿದಾಗ ಅವರು ಗೋಮಾಂಸ ಭಕ್ಷಣಕ್ಕಾಗಿ ಅವನಿಗೆ ಬಹಿಷ್ಕಾರ ಹಾಕಿದರಂತೆ.

* * *

ಅಥವಾ "ಪಂಚ" ಎಂಬುದು ತೀರ ಹಿಂದೂತ್ವದ ದ್ಯೋತಕವೆಂದು ಪಾಕಪ್ರಧಾನಿಗಳು ಭಾವಿಸಿದರೇನೋ. ಪಂಚವು ಹಿಂದುಗಳಿಗೇ ವಿಶಿಷ್ಟವಾದ ಮಂತ್ರಶಕ್ತಿಯ ಅಂಕಿಯೊಂದು ಅವರಿಗೆ ಅನಿಸಿರಬಹುದು. ಪಂಚಗವ್ಯದ ಮಾತಿರಲಿ, ಪಂಚಾಂಗ, ಪಂಚಭೂತ, ಪ್ರಪಂಚ, ಪಂಚಕನ್ಯೆಯರು, ಪಂಚಮಸ್ವರದ ಕೋಗಿಲೆ, ಪಂಚಾಚಾರ್ಯರು, ಪಂಚ ಪಾಂಡವರು, ಪಂಚಲೋಹ, ಪಂಚಾಯತಿ, ಪಂಚಾಗ್ನಿ, ಪಂಚರಾತ್ರ, ಪಂಚಾಮೃತ, ಪಂಚೇಂದ್ರಿಯ ಇನ್ನೆಷ್ಟು ಬೇಕು ನಿಮಗೆ? ಹಿಂದುಗಳ ದೇವರು ಶಂಖವಾದ್ಯ ಮಾಡಬೇಕಾದರೂ

ಪಾಂಚಜನ್ಯವೇ ಬೇಕು. ನಾಲ್ಕು ವರ್ಣಗಳು ಸಾಲದೆಂದು ಪಂಚಮರನ್ನು ಹಿಂದುಗಳು ಸೃಷ್ಟಿಸಿದರು. ಅವರು ವಿಷ್ಣುಪಂಚಕ, ಭೀಷ್ಮಪಂಚಕ ಉಪವಾಸಗಳನ್ನು ಮಾಡುತ್ತಾರೆ. ಅವರ ಮನ್ಮಥನ ಕೈಯಲ್ಲಿರುವ ಪಂಚಬಾಣಗಳೇ ಬಹುಶಃ ಮಹಮದಲಿಯವರ ಎರಡನೇ ಸಂಬಂಧಕ್ಕೆ ಕಾರಣವಿರಬೇಕು. ಹಿಂದುಗಳ ಆತ್ಮವು ಪಂಚಕೋಶಗಳೊಳಗೆ ಹುದುಗಿದೆಯಂತೆ. ವಾಮಾಚಾರಿಗಳು ಪಂಚಮಕಾರ ಪ್ರಿಯರು. ಹಿಂದುಗಳು ಐದು ಜನ ಮಹಾನಿದ್ರಾಪ್ರಿಯರನ್ನು ಪಡೆದಿದ್ದಾರೆ. ಪಂಚಮಹಾಪಾತಕಗಳು ಹಿಂದುಗಳನ್ನು ನಡುಗಿಸುತ್ತವೆ. ಬೆಕ್ಕುಗಳಿಗೆ ಒಂಭತ್ತು ಪ್ರಾಣಗಳಿದ್ದರೆ, ಹಿಂದುಗಳಿಗೆ ಪಂಚಪ್ರಾಣಗಳಿರುತ್ತವೆ. ಅವರ ಬ್ರಹ್ಮನಿಗೆ ಐದು ತಲೆಗಳಿದ್ದವಂತೆ ಮತ್ತು ಯಾಕೋ ಏನೋ ಐದನೇ ತಲೆಯನ್ನು ಶಿವನು ಕತ್ತರಿಸಿದನಂತೆ. ಪಂಚ ಮುದ್ರೆಗಳನ್ನು ಮಾಡಿ ತೋರಿಸದೆ ಅವರ ದೇವರು ಏನನ್ನೂ ಸ್ವೀಕರಿಸುವುದಿಲ್ಲವಂತೆ. ಪಂಚತಂತ್ರಗಳಿಂದ ಹಿಂದುಗಳು ರಾಜಕಾರಣವನ್ನು ಆಡುತ್ತಾರೆ. ಇದೀಗ ಅವರು ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುತ್ತಿರುವುದೂ ಕೇವಲ ಆಕಸ್ಮಿಕವಾಗಿರಲಿಕ್ಕಿಲ್ಲ. ಆದ್ದರಿಂದ ಪಂಚಶೀಲಗಳು ಪಾಕ್ತಿಸ್ತಾನಕ್ಕೆ ಹಿತಕರವಾಗಲಿಕ್ಕಿಲ್ಲ ಮಾತ್ರವಲ್ಲ, ಘಾತಕವಾಗಬಹುದು. ಪಂಜಾಬವೆಂಬ ಪಂಚನದೀ ಪ್ರದೇಶವು ಪಾಕಿಸ್ತಾನ ದಲ್ಲಿದ್ದರೆ ಉಳಿಗಾಲವಿಲ್ಲೆಂದು ಪಶ್ಚಿಮ ಪಾಕಿಸ್ತಾನವನ್ನು ರಚಿಸಲಾಗುತ್ತಿದೆ. ಮನುಷ್ಯನ ಕೈಕಾಲುಗಳಿಗೆ ಐದೈದು ಬೆರಳುಗಳನ್ನು ಕೊಟ್ಟು, ದೇವರು ಕೂಡ ಹಿಂದೂ ಪಕ್ಷಪಾತವನ್ನೇ ತೋರಿಸಿದ್ದಾನೋ ಅನಿಸುತ್ತದೆ.

* * *

ಆದರೆ ಏಳು ಹಾಗಲ್ಲ. ಹಿಂದುಗಳಿಗೂ ಸಪ್ತಲೋಕ, ಸಪ್ತಾಶ್ವ, ಸಪ್ತಕಿರಣ, ಸಪ್ತಾರ್ಚಿ, ಸಪ್ತರ್ಷಿಗಳು, ಸಪ್ತದೀಪ ಮೊದಲಾದವು ಇರುವುದು ನಿಜ. ಮದುವೆಯ ದಿನ ಮದುವಣಿಗನು ಸಪ್ತಪದಿ—ಏಳು ಹೆಜ್ಜೆ ನಡೆಯುವ ಸಂಪ್ರದಾಯವೂ ಅವರಲ್ಲಿದೆ. ಆದರೆ ಏಳು ಹಿಂದುಗಳ ಸಂಖ್ಯೆಯಲ್ಲ. Seven heaven—ಏಳನೇ ಸ್ವರ್ಗವೊಂದು ಪಾಶ್ಚಾತ್ಯ ರಲ್ಲಿರುವುದರಿಂದ ಅದನ್ನೇ ಹಿಂದುಗಳು ಕದ್ದಿರುವ ಸಂಭವವಿದೆ. ಕೆಲ ಸಂಶೋಧಕರ ಅಭಿಪ್ರಾಯದಲ್ಲಿ ಹಿಂದುಗಳಿಗೆ ಏಳು ಗೊತ್ತೇ ಇದ್ದಿದ್ದಿಲ್ಲ. ಅವರು ಏಳು ದಿನಗಳ ವಾರವನ್ನು ಇಜಿಪ್ತನರಿಂದಲೇ ತೆಗೆದುಕೊಂಡರಂತೆ. ಸಂಗೀತದಲ್ಲಿ ಹಿಂದುಗಳು ಏಳು ಸ್ವರಗಳನ್ನು ಉಪಯೋಗಿಸುತ್ತಿದ್ದರೂ ಅದು ಕೂಡ ಪಶ್ಚಿಮದಿಂದಲೇ ತೆಗೆದುಕೊಂಡದ್ದಿರ ಬಾರದೇಕೆ? ಕಾಮನಬಿಲ್ಲಿನಲ್ಲಿ ಏಳು ಬಣ್ಣಗಳಿವೆಯೆಂದು ನ್ಯೂಟನ್ನನು ಹೇಳಿದ್ದು ಏಳು ಎಂಬುದು ಪಾಶ್ಚಾತ್ಯರಲ್ಲಿ ಮಂತ್ರ ಸಂಖ್ಯೆಯಾಗಿರುವುದರಿಂದಲೇ ಅಂತೆ. ಏಳನೇ ಮಗನ ಏಳನೇ ಮಗನಿಗೆ ಡಾಕ್ಟರನೆಂದು ಹೆಸರಿಡಬೇಕೆಂದು ಪಾಶ್ಚಾತ್ಯರು ನಂಬುತ್ತಾರೆ.ಯಾಕಂದರೆ ಈ ಇಮ್ಮಡಿ ಏಳುಗಳು ಅಂಥ ಮಗುವಿಗೆ ತಾವೇ ಅದ್ಭುತ ವೈದ್ಯಕೀಯ ಶಕ್ತಿಯನ್ನು ಕೊಡುತ್ತವೆಯೆಂಬಷ್ಟು ಏಳು ಮಂತ್ರಶಕ್ತಿಯುಕ್ತವಾಗಿವೆ. ಹಿಂದುಗಳಿಗೆ ಪಂಚ ಮಹಾಪಾತಕ

ಗಳಿದ್ದರೆ ಪಾಶ್ಚಾತ್ಯರಿಗೆ ಸಪ್ತಮಹಾಪಾತಕಗಳಿವೆ. ಪವಿತ್ರಾತ್ಮಕ್ಕೆ ಸಪ್ತಗುಣಗಳಿವೆಯಂತೆ. ಹಿಂದುಗಳಿಗೆ ಅಗಸ್ತಿ, ಮಾಧವ, ಮುಚುಕುಂದ, ಕಪಿಲ, ಆಸ್ತಿಕ್ಯರೆಂಬ ಪಂಚ ಮಹಾನಿದ್ರಕರಿದ್ದರೆ ಪಾಶ್ಚಾತ್ಯರಿಗೆ ಸಪ್ತಮಹಾನಿದ್ರಕರಿದ್ದಾರೆ. ಜಗತ್ತಿನ ಏಳು ಅದ್ಭುತಗಳ ಸಂಗತಿ ನೀವು ಕೇಳಿದ್ದೀರಿ. ಸಪ್ತವಾರ್ಷಿಕ ಯುದ್ಧವನ್ನು ಗೆದ್ದೇ ಬ್ರಿಟಿಷರು ಭಾರತದ ಮೇಲೆ ಪ್ರಭುತ್ವ ಗಳಿಸಿದರು. ಕ್ರೈಸ್ತ ಜಗತ್ತಿಗೆ ಸಪ್ತ ಆಧಾರಸ್ತಂಭಗಳಿದ್ದರಂತೆ. ಈ ಪ್ರಕಾರ ಏಳೆಂಬುದು ಪಾಶ್ಚಾತ್ಯ ಸಂಖ್ಯೆಯಾಗಿದೆ. ಪಾಕಿಸ್ತಾನವೀಗ ಪಾಶ್ಚಾತ್ಯ ಗುಂಪಿಗೆ ಸೇರಿದ್ದರಿಂದ ಅದು ಸಪ್ತಶೀಲವನ್ನು ಪ್ರತಿಪಾದಿಸಿದ್ದು ಸ್ವಾಭಾವಿಕವಾಗಿದೆ.

❑

# ಪಾದುಕಾ ಉಪಚಾರ

ಶಾಂತಾ ಆಪ್ಟೆಯ ಆ ಧೀರೋದ್ಧಾತ ಸತ್ಯವು ನಾಗಪುರದ ವೀರರಣಿಯರಿಗೂ ತಗಲಿದ್ದು ಸಂತೋಷದ ಸಂಗತಿ. ಶಾಂತಾ ಆಪ್ಟೆ ಈಗ ಅಸ್ತಂಗತ ತಾರೆಯಾಗಿರಬಹುದು. ಆದರೆ ಐವತ್ತು ವರ್ಷಗಳ ಹಿಂದೆ ಅವಳು ಚಲಚ್ಚಿತ್ರ ಪತ್ರಿಕೋದ್ಯಮದ ಉದ್ದತಾಗ್ರಣಿಯೆನಿಸಿದ 'ಫಿಲ್ಮಿಂಡಿಯ'ದ ಬಾಬುರಾವ್ ಪಟೇಲರ ಕಚೇರಿಗೆ ನೇರವಾಗಿ ಹೊಕ್ಕು ಪಟೇಲ ಮಹಾಶಯರಿಗೆ ಏನು ಎಂತು ಎಂದು ತಿಳಿಯುವ ಮೊದಲೇ ಅವರ ಎಡ ಕಪಾಳದ ಮೇಲೆ ತನ್ನ ಬಲಗೈಯ ನಾಲ್ಕು ಬೆರಳುಗಳ ಪ್ರತೀಕವನ್ನು ಉಬ್ಬಿಸಿ "ನನ್ನ ಬಗ್ಗೆ ಮಾನಹಾನಿಕರ ಲೇಖನ ಬರೆದದ್ದಕ್ಕೆ ಇದು ಪ್ರತೀಕಾರ" ಎಂದು ಹೇಳಿದಾಗ ಅವಳು ನಾರಿಯರಿಗೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಳೆಂದೇ ಲಾಂಗೂಲಾಚಾರ್ಯರ ಅಭಿಪ್ರಾಯ. ಅಂದಿನಿಂದ ಮಹಾರಾಷ್ಟ್ರದ ಗಂಡುಮೆಟ್ಟಾದ ಪುಣೆಯಲ್ಲಿ ಆಗಿಂದಾಗ್ಗೆ ಬೀದಿಯ ಕಾಮಣ್ಣರಿಗೆ ವೀರನಾರಿಯರು ಬಹಿರಂಗವಾಗಿ ತೋರಿಸುತ್ತ ಬಂದಿದ್ದಾರೆ. ಈಗ ಈ ಮಹಾರಾಷ್ಟ್ರದ ಧೀರೋದ್ಧಾತ ನಾರೀಪ್ರಕೋಪವು ನಾಗಪುರದವರೆಗೂ ಹಬ್ಬಿದ್ದಾಗಿ ತಿಳಿದಿದೆ. ಮೊನ್ನೆ ಅಕ್ಟೋಬರ್ ೩೦ ರಂದು (ಈ ತಾರೀಖೇ ಏಕೆ ಎಂದು ಯಾರಿಗೂ ಗೊತ್ತಿಲ್ಲ). ಮೂವರು ನಾಗಪುರಿ ಹುಡುಗಿಯರು ಇಬ್ಬರು ಬೀದಿಯ ಕಾಮಣ್ಣರಿಗೆ ಯೋಗ್ಯ ಬಹುಮಾನ ಕೊಟ್ಟು ಬೀದಿಯಲ್ಲಿ ಹುಡುಗಿಯರನ್ನು ಛೇಡಿಸುವವರಿಗೆ ಇನ್ನು ನಾಗಪುರವು ಸುರಕ್ಷಿತ ಸ್ಥಳವಲ್ಲವೆಂದು ತೋರಿಸಿಕೊಟ್ಟರೆಂದು ವರದಿಯಾಗಿದೆ.

* * *

ಕಥೆ ಬಲು ಸರಳವಾಗಿದೆ. ಮೂವರು ನವ ತರುಣಿಯರು ನಾಗಪುರದ ಘಾಟಿ ರಸ್ತೆಯಲ್ಲಿ ಮದಗಜ ಗಮನೆಯರಾಗಿ ಸಾಗಿದರು. ಇಬ್ಬರು ಸೈಕಲ್ ಸವಾರರಾದ ತರುಣರು ಅವರನ್ನು ನೋಡಿದರು. ತಕ್ಷಣ ಆ ಸ್ವಾರರ ತಲೆಯಲ್ಲಿ ಒಂದು ದೃಶ್ಯಪಲ್ಲಟ ತಲೆದೋರಿತು. ಅವರಿಗೆ ನಾಗಪುರವು ಒಮ್ಮೆಲೇ ನಂದಗೋಕುಲವಾಗಿ ಕಾಣಿಸಿತು; ಈ ತರುಣಿಯರು ಗೋಪಿಯರಾಗಿ ತೋರಿದರು. ತಾವು ಸ್ವತಃ ಕೃಷ್ಣರೆನಿಸಿತು. ಅವರು ಈ ನವೀನ ಗೋಪಿಯರನ್ನು ಬೆನ್ನಟ್ಟಿ ಆಧುನಿಕ ಗೋಪೀ ಮನೋವಲ್ಲಭರಿಗೊಪ್ಪುವಂತೆ ಅಮೇರಿಕನ್ ಫಿಲ್ಮ್ ಗೀತೆಗಳ ಭಾರತೀಯ ಅವತಾರವಾದ ಲಾಲ ಲಾಲ ಲಾಲ..." ವನ್ನು ಹಾಡತೊಡಗಿದರು. ಆದರೆ ಇದರಲ್ಲಿ ಒಂದು ಕಷ್ಟವೆಂದರೆ, ಮೂವರು ಹುಡುಗಿಯರಿಗೆ

ಈ ಇಬ್ಬರು ತರುಣರು ಕೃಷ್ಣರೆಂದೂ ತಾವು ಗೋಪಿಯರೆಂದೂ ಗೊತ್ತಿಲ್ಲದ್ದು. ಅವರು ತಾವು ಕೇವಲ ಭಾರತದ ವೀರ ರಮಣಿಯರೆಂದೂ ಈ ಇಬ್ಬರು ಶುದ್ಧ ಪೋಕರಿಗಳೆಂದೂ ತೀರ್ಮಾನಿಸಿ ಒಮ್ಮೆಲೇ ತಿರುಗಿ ಬಿದ್ದರು. ಅವರಲ್ಲೊಬ್ಬಳು ಕಾಲಲ್ಲಿದ್ದ ಚಪ್ಪಲಿಯನ್ನು ತೆಗೆದು ಒಬ್ಬನ ಕೆನ್ನೆಯ ಮೇಲೆ ಪ್ರಹಾರ ಮಾಡಿದಳು. ಇನ್ನಿಬ್ಬರು ತರುಣಿಯರೂ ಅವಳನ್ನು ಅನುಸರಿಸಿದರು. ಇಂಥ ಸಂದರ್ಭಗಳಲ್ಲಿ ಯಾವಾಗಲೂ ಎಲ್ಲಿಂದಲೋ ಬಂದು ಸೇರುವ ಜನಜಂಗುಳಿ ಅಲ್ಲಿಯೂ ಬಂದು ಸೇರಿತು. ಅಭಿನವಕೃಷ್ಣರಿಗೆ ತಾವು ನಿಜವಾಗಿ ಕೃಷ್ಣರು ಹೌದೋ ಅಲ್ಲವೊ ಎಂದು ಸಹಸಾ ಸಂಶಯ ಮೂಡಿರಬೇಕು. ಅವರ ಕೈಯಲ್ಲಿ ಸೈಕಲ್ ಇದ್ದುದು ಅವರ ಪುಣ್ಯ. ಅವರು ಅದರ ಉಪಯೋಗ ಮಾಡಿಕೊಂಡು ಅಲ್ಲಿಂದ ಅಂತರ್ಧಾನ ಹೊಂದಿದರು.

* * *

ನಾಗಪುರದಿಂದ ಬಂದ ಈ ಕಥೆ ನಿಮಗೆ ವಿನೋದಾಂತವೆನಿಸಿದರೂ ತುಸು ವಿಷಾದಾಂತವಾಗಿದೆಯೆಂದು ಲಾಂಗೂಲಾಚಾರ್ಯರ ಮತ ಈ ಹೋರಾಟ ಅಸಮ ವಾಗಿತ್ತೆಂದು ನಿಮಗನಿಸುವುದಿಲ್ಲವೆ? ತರುಣರು ಇಬ್ಬರೇ ಇದ್ದರು. ತರುಣಿಯರು ಮೂವರು. ಆದ್ದರಿಂದಲೇ ತಾವು ಪಲಾಯನ ಮಾಡಬೇಕಾಯಿತೆಂದು ಅವರು ಸಾಧಿಸ ಬಹುದು. ಮತ್ತೆ ತರುಣಿಯರು ತಮ್ಮ ವಿರೋಧಿಗಳ ಮೇಲೆ ಏನೂ ಔದಾರ್ಯ ತೋರಿಸಲಿಲ್ಲ, "ಲಾಲ ಲಾಲ..." ಎಂದು ಹಾಡುತ್ತಿದ್ದ ಅವರ ಗಾಲ (ಗಲ್ಲವನ್ನು) ಲಾಲ (ಕೆಂಪು) ಮಾಡುವುದಂತೂ ಮಾಡಿದರು. ಆದರೆ ಶಾಂತಾ ಆಪ್ಟೆಯಂತೆ ತಮ್ಮ ಮೃದುವಾದ ಹಸ್ತಗಳಿಂದ ಮಾಡಿದರೆ ಅವರ ಗಂಟೇನು ಹೋಗುತ್ತಿತ್ತು? "ನಲಿನ ಮುಖಿಯರ ತರಳ ಹಸ್ತದ ಕಠಿನ ಸ್ಪರ್ಶದ ಸ್ಥಳವಿದು" ಎಂದು ಜೀವಮಾನವೆಲ್ಲ ತಮ್ಮ ಎಡಗಲ್ಲಗಳನ್ನು ಮುಟ್ಟಿ ತಮ್ಮೀಕಟುಮಧುರ ಅನುಭವವನ್ನು ಅವರು ಸವಿಯಬಹುದಾಗಿತ್ತು. ಅದು ಹೋಗಲಿ, ತಮ್ಮ ಚಪ್ಪಲಿಗಳಿಂದ ಕಠಿಣಸ್ಪರ್ಶವನ್ನು ಮಾಡುವ ಬದಲು ದೂರದಿಂದ ಆ ವಾಮಪಾದತ್ರಾಣವನ್ನು ಇವರ ಮೇಲೆ ಒಗೆದು ಹೋಗಿಬಿಡಬಹುದಾಗಿತ್ತು. ಅಂದರೆ ಭರತನು ರಾಮನ ಪಾದುಕೆಗಳನ್ನೊಯ್ದು ಪೂಜಿಸಿದಂತೆ ಇವರಾದರೂ ನಾರಿಯರ ಪಾದಗಳನ್ನು ಸ್ಪರ್ಶಿಸಿ ಧನ್ಯವಾದ ಮತ್ತು ತಮ್ಮನ್ನು ಸ್ಮರಗಳ ಪೀಡೆಯಿಂದ ಮುಕ್ತಗೊಳಿಸಿದ ಆ ಪಾದುಕೆಗಳನ್ನು ಗುಪ್ತವಾಗಿ ಪೂಜಿಸಿ ಧನ್ಯರಾಗಬಹುದಿತ್ತು. ಆಗ ನಾಗಪುರದ ನಾಗಿಣಿಯರು ಕಲಿಸಿದ ಪಾಠ ಅವರ ಮುಂದೆ ಸದಾ ಪ್ರತ್ಯಕ್ಷವಾಗಿರುತ್ತಿತ್ತು.

* * *

ನಾಗಪುರದ ಈ ಅಭಿನವ ಕೃಷ್ಣರು ಈಗ, ದ್ವಾಪರಯುಗದ ಆ ಕೃಷ್ಣ ತನ್ನ ಮಂಗಾಟಗಳನ್ನೆಲ್ಲ ಹೇಗೆ ಯಶಸ್ವಿಯಾಗಿ ದಕ್ಕಿಸಿಕೊಂಡ? ತಮಗೆ ಇದೇಕೆ ದಕ್ಕಲಿಲ್ಲ? ಎಂದು ಗಹನವಾಗಿ ವಿಚಾರಿಸುತ್ತಿರಬಹುದು. ಲಾಂಗೂಲಾಚಾರ್ಯರು ಅವರಿಗೆ ಉತ್ತರ

ಹೇಳಬಲ್ಲರು; ಮೊದಲನೆಯದಾಗಿ, ಕೃಷ್ಣನಿಗೆ ತಾನು ಕೃಷ್ಣ ಎಂದು ಖಂಡಿತವಾಗಿ ಗೊತ್ತಿತ್ತು. ಮತ್ತು ತಾನೊಬ್ಬನೇ ಕೃಷ್ಣನಾಗಿರಬೇಕೆಂದು ಅವನು ಯಾವಾಗಲೂ ನೋಡಿಕೊಳ್ಳುತ್ತಿದ್ದ. ಬೆಣ್ಣೆ, ಮೊಸರುಗಳ ಅಪಹಾರಕ್ಕಾಗಿ ಅವನು ಇತರ ಹುಡುಗರ ಸಹಾಯ ಪಡೆದಿರಬಹುದು. ಆದರೆ ಈ ಗೋಪಿಯರ ವಿಷಯದಲ್ಲಿ ಅವನೆಂದೂ ಯಾರ ಸಹಕಾರವನ್ನು ಕೋರಲಿಲ್ಲ. ಆದರೆ ಈ ಅಭಿನವ ಕೃಷ್ಣರು ಹಾಗಲ್ಲ ಅವರು ಇಬ್ಬರಿಬ್ಬರು ಮೂವರು ಮೂವರು ಸೇರಿ ತೋಳಗಳಂತೆ ಬೇಟೆಯಾಡುವ ಹೇಡಿಗಳು. ಮೇಲಾಗಿ ಮುಳಿಯ ತಿಮ್ಮಪ್ಪಯ್ಯನವರ ಚಂದಾವಳಿ ವಿಳಾಸವನ್ನು ನಂಬಬಹುದಾದರೆ ಕೃಷ್ಣನೂ ಗೋಪಿಯರ ಕೈಯಲ್ಲಿ ಈ ನಾಗಪುರಿ ತರುಣರ ಅನುಭವಕ್ಕೆ ಸಮಾನವಾದ ಅನುಭವವನ್ನು ಪಡೆದನಂತೆ. ಆದರೆ ಅವನು ಅದನ್ನು ಅವಮಾನವೆಂದು ಪರಿಗಣಿಸಿಲೇ ಇಲ್ಲ. ತನ್ನ ಶತ್ರುಗಳ ವಿಚಾರದಲ್ಲಿ ಅವನು ಪೆಟ್ಟಿಗೆ ಪೆಟ್ಟು ಎಂಬ ನಿಯಮವನ್ನಿಟ್ಟುಕೊಂಡಿದ್ದರೂ ಗೋಪಿಯರ ಮಟ್ಟಿಗೆ ಕ್ರಿಸ್ತನು ಬೋಧಿಸಿದ "ಬಲಗೆನ್ನೆ ಹೊಡೆದರೆ ಎಡಗೆನ್ನೆಯನ್ನೂ ಒಡ್ಡು" ಎಂಬ ನಿಯಮವನ್ನು ಇಟ್ಟುಕೊಂಡಿದ್ದ, ಗೋಪಿ ಅವನ ಕಪಾಳಕ್ಕೇಟು ಕೊಟ್ಟರೆ ಆತ, "ಅಯ್ಯೋ ನಿನ್ನ ಮೃದುವಾದ ಹಸ್ತಕ್ಕೆ ನನ್ನೀ ಕಠಿನ ಕಪೋಲದ ಸಂಘಟನೆಯಿಂದ ಎಷ್ಟು ನೋವಾಯಿತೋ" ಎಂದು ಸಹಾನುಭೂತಿ ಪ್ರದರ್ಶಿಸುತ್ತಿದ್ದನೇ ಹೊರತು ಸೈಕಲ್ ಹತ್ತಿ ಓಡಿ ಹೋಗುತ್ತಿರಲಿಲ್ಲ. ಕೊನೆಯದಾಗಿ ಮತ್ತು ಎಲ್ಲಕ್ಕೂ ಮಹತ್ವದೆಂದರೆ, ಗೋಕುಲದ ನಾರಿಯರ ಕಾಲದಲ್ಲಿ ನಾಗಪುರದ ನಾರಿಯರಂತೆ ಚಪ್ಪಲಿಗಳು ಇದ್ದಿಲ್ಲ.

* * *

ಆದರೆ ನಾಗಪುರದಿಂದ ಬಂದೀ ಸುದ್ದಿ ಇನ್ನೊಂದು ರೀತಿಯಿಂದ ತುಂಬ ವಿಷಾದಕರವಾಗಿದೆ. ರಮಣಿಯರು ಈ ಬಗೆಯಾಗಿ ತಮ್ಮ ಚಪ್ಪಲಾಸ್ತ್ರಗಳಿಂದ ಆಧುನಿಕ ಕೃಷ್ಣರನ್ನು ಹೊಡೆದೋಡಿಸಲು ಪ್ರಾರಂಭಿಸಿದರೆ ಸಂಭಾವಿತ ವೀರರ ಗತಿಯೇನು? ಇಕ್ಕಟ್ಟಿನ ಸ್ಥಳದಲ್ಲಿ ಅಬಲೆಯರನ್ನು ಅಡ್ಡ ಹಾಯ್ದು ಪೀಡಿಸುವ ಅಸುರರನ್ನು ನಿಗ್ರಹಿಸಿ ನಾರಿಯರ ಮಾನವನ್ನು ಕಾಯುವ ಪುರೂರವರಿಗೆ ಇನ್ನೇನು ಕೆಲಸ? ಅಬಲೆಯರು ಸಬಲೆಯರಾದ ಮೇಲೆ ಪುರೂರವರಿಗೆ ಊರ್ವಶಿಯವರೊಡನೆ ರೊಮಾನ್ಸ್ ಹೇಗೆ ಪ್ರಾರಂಭವಾಗಬೇಕು? ನಿರುದ್ಯೋಗಿಗಳಾದ ಪುರೂರವರಲ್ಲಿ ಮನೋರಥ ಭಂಗದ ಭಾವನೆ ಮೂಡಿ ಅವರೂ ಅಸುರರ ಮಾರ್ಗವನ್ನು ಹಿಡಿಯಬೇಕಾಗುವ ಅವಸ್ಥೆಯಿದೆ. ಪುರೂರವರಿಗೂ ಅಸುರರಿಗೂ ನಡುವೆ ಇರುವ ಗಡಿರೇಖೆ ಬಲು ಸೀರಾದುದು. ಅಸುರರೂ ಅವರನ್ನು ಎದುರಿಸಲಾರದ ಊರ್ವಶಿಯರೂ ಇರುವುದರಿಂದಲೇ ಪುರೂರವರ ಅಸ್ತಿತ್ವಕ್ಕೆ ತಾತ್ಪರ್ಯ ಬಂದಿದೆ. ಊರ್ವಶಿಯೇ ಅಸುರರನ್ನು ಓಡಿಸಬಲ್ಲಳಾದರೆ ಸಂಭಾವಿತ ಪುರೂರವರಿಗೆ ಊರ್ವಶಿಯರನ್ನು ಪಡೆಯುವ ಉಪಾಯವೇನು?

❑

# ಮಾವು ಎಂಬ ಹಣ್ಣು

ಇದು ನಡೆದದ್ದು ಅನೇಕ ದಿನಗಳ ಕೆಳಗೆ ಪಾಟ್ನಾದಲ್ಲಿ ದಿ. ಪ್ರಧಾನಮಂತ್ರಿ ಪಂಡಿತ ನೆಹರು ನೇಪಾಳದಲ್ಲಿ ತಮ್ಮ ದಿಗ್ವಿಜಯ ಮುಗಿಸಿ ಪಾಟ್ನಾಕ್ಕೆ ಬಂದು ಕೃಪಲಾನಿಯವರು ಅಲ್ಲಿ ಚೆಲ್ಲಿಕೊಟ್ಟಿದ್ದ ಕಾಂಗ್ರೆಸ್ ವಿರೋಧಿ ಭಾಷಣಗಳೆಂಬ ಬಾಳೇಹಣ್ಣಿನ ಸಿಪ್ಪೆಗಳನ್ನು ಉಡುಗಿ (ಅರಿಸಿಯಲ್ಲ!) ಕೃಪಲಾನಿಯವರನ್ನು ವಿಫಲಾನೀಕೃತರನ್ನಾಗಿ ಮಾಡಿ ದಿಲ್ಲಿಗೆ ಹೊರಟು ನಿಂತಿದ್ದರು. ಕೊನೆಯ ಗಳಿಗೆಯಲ್ಲಿ ಅವರಿಗೆ ಯಾರೋ ಒಂದು ಬುಟ್ಟಿ ಮಾವಿನಹಣ್ಣುಗಳನ್ನು ಅರ್ಪಿಸಿದರು. ಅವರು ಈ ಕಪ್ಪವನ್ನು ತಮ್ಮ ವಿಮಾನದೊಳಗೆ ತುರುಕಿಸಿ ಇನ್ನೇನು ಹಾರುವವರಿದ್ದರು—ಅಕೋ, ಬಂದನೊಬ್ಬ ಅಧಿಕಾರಿ. ಬಿಹಾರದಲ್ಲಿ ಬರಗಾಲ ಬಿದ್ದು ಜನರಿಗೆ ಮಾವಿನ ಹಣ್ಣಿನ ಸಿಪ್ಪೆಗಳು ಕೂಡ ಅಮೂಲ್ಯವಾಗಿರುವಾಗ ಇಡೀ ಬುಟ್ಟಿ ಹಣ್ಣನ್ನೇ ದಿಲ್ಲೀಶ್ವರನು ಅಪಹರಿಸುವದನ್ನು ಸಹಿಸದೆ ಅವನು ಅದನ್ನು ಕಸಿದುಕೊಂಡು, ಪಾಟಲೀಪುತ್ರದ ತುಚ್ಛ ಅಧಿಕಾರಿಗಳು ಕೂಡ ದೆಹಲಿಯ ಸಮ್ರಾಟರಿಗೆ ಅಂಜುವದಿಲ್ಲೆಂದು ತೋರಿಸಿಕೊಟ್ಟ. ದೇವರು ಕೊಟ್ಟರೂ ಪೂಜಾರಿ ಬಿಟ್ಟಾನೇ? ಅಂತೂ ಪ್ರಧಾನ ಮಂತ್ರಿಗಳು ಕೈಗೆ ಬಂದ ಹಣ್ಣು ಬಾಯಿಗೆ ಬಾರದಂತಾಗಿ ವಿಫಲರಾಗಿಯೇ ದಿಲ್ಲಿಗೆ ಮರಳಿದರು. ಈ ಸುದ್ದಿ ಮೇಲಧಿಕಾರಿಗಳಿಗೆ ಮುಟ್ಟಿ ೫೦ ಹಣ್ಣುಗಳವರೆಗೆ ಪಾಟ್ನಾದಿಂದ ಹೊರಗೊಯ್ಯಬಹುದೆಂದು ಸರಕಾರಿ ಆಜ್ಞೆಯಲ್ಲಿ ತಿದ್ದುಪಡಿ ಮಾಡಿದರು. ಆದರೆ ಅಷ್ಟರವರೆಗೆ ಪಂಡಿತರ ವಿಮಾನ ಕಾಯಲಿಲ್ಲ.

* * *

ಕನೂಜಿನ ಹೆಣ್ಣನ್ನು ದೆಹಲಿಯ ಪೃಥ್ವೀರಾಜ ಓಡಿಸಿಕೊಂಡು ಹೋದಂತೆ ಪ್ರಧಾನಮಂತ್ರಿಗಳು ಅಪಹರಿಸಿಕೊಂಡು ಹೋಗಲೆಳಸಿದ ಈ ಹಣ್ಣು ನಿಜವಾಗಿ ಭಾಗ್ಯಶಾಲಿ. ಆದರೆ ಮಾವಿನಹಣ್ಣು ಅಷ್ಟು ಮನೋಹರವಾದ ಫಲವೇ ನಿಜ. "ಮಾವಿನ ಹಣ್ಣು" ಎಂಬುದನ್ನು "ಮಾವನ ಹೆಣ್ಣು" ಎಂದು ತಪ್ಪು ಮುದ್ರಿಸುವ ಕಂಪೋಜಿಟರಿದ್ದಾರೆ. ನನಗೆ ಅವರ ಬಗ್ಗೆ ಸಹಾನುಭೂತಿಯಿದೆ. ಮೊರಟುತನ ಇದ್ದರೂ ಮಾವನ ಹೆಣ್ಣು ನಿಮಗೆ ಮೆಚ್ಚಿಗೆಯಾಗಿರುವಂತೆ ಗೊರಟು ಇದ್ದರೂ ಮಾವಿನ ಹಣ್ಣು ಪ್ರಿಯವೇ. ಮಾವಿನಹಣ್ಣು ಸೇರದಿದ್ದವರನ್ನು ನಾನಿನ್ನೂ ಕಾಣಬೇಕಾಗಿದೆ. ಅಡವಿಯಲ್ಲಿ ಬೆಳೆಯುವ ಕಾಡುಹಣ್ಣುಗಳಿಂದ

ಹಿಡಿದು ಅಪ್ಪಟ ಧಾರವಾಡ ಕಲಮಿಯವರೆಗಿನ ನಾನಾ ಯೋಗ್ಯತೆಯ ಹಣ್ಣುಗಳಿರಬಹುದು. ಅವುಗಳಲ್ಲಿ ರುಚಿಯ ತರಗತಿಯಲ್ಲಿ ವ್ಯತ್ಯಾಸ ಕಾಣಬಹುದಷ್ಟೇ. ಇಂಥ ಜಾತಿಯೊಂದು ರುಚಿಯೇ ಇಲ್ಲ ಎಂದು ಹೆಸರಿಡಲು ಸಾಧ್ಯವಿಲ್ಲ. ಮೆಣಸಿನ ಕಾಳಿನ ವಾಸನೆಯುಳ್ಳ ಕಾಡುಹಣ್ಣು ಪ್ರಣಯ ಕಲಹಪ್ರಿಯೆಯಾದ ಹೆಣ್ಣಿನಂತೆ ನಿಮಗೆ ಮೆಚ್ಚಿಕೆಯಾದರೆ ನಿತಾಂತ ಮಧುರವಾದ ಧಾರವಾಡ ಕಲಮಿ ಸದಾ ಅನುಕೂಲೆಯಾದ ಗರತಿಯಂತೆ ನಿಮ್ಮ ಮನಸು ಹಿಡಿಯುತ್ತದೆ. ಕೆಲ ಮಾವಿನ ಹಣ್ಣುಗಳಂತೂ ಎಷ್ಟು ಸುಂದರ ಸುಗಂಧವಾಗಿರುತ್ತವೆಯೆಂದರೆ, ಅಯ್ಯೋ, ಇವನ್ನು ತಿನ್ನಬೇಕಲ್ಲಾ ಎಂದು ನಿಮ್ಮ ಮನಸ್ಸಿನಲ್ಲಿ ಕರುಣರಸೋತ್ಪಾದನೆ ಮಾಡುತ್ತವೆ.

* * *

ಮಾವಿನ ಹಣ್ಣು ತಿನ್ನುವುದರಲ್ಲಿ ಒಬ್ಬೊಬ್ಬರು ಒಂದೊಂದು ತರದ ಸವಿಗಾರಿಕೆ ತೋರಿಸುತ್ತಾರೆ. ಎಲ್ಲಕ್ಕೂ ಜನಪ್ರಿಯವಾದುದೆಂದರೆ, ಸಮಸ್ಯೆಯನ್ನು ನೇರವಾಗಿ ತಡಕವುದು. ಮಾವಿನ ಹಣ್ಣನ್ನ ಕೈಗೆ ತೆಗೆದುಕೊಳ್ಳಬೇಕು, ಅದರ ತೊಟ್ಟಿನ ಸ್ಥಳವನ್ನು ಚಿವುಟಬೇಕು, ಆ ರಂಧ್ರವನ್ನು ನಿಮ್ಮ ತೋರುಬೆರಳಿಂದ ಮುಚ್ಚಿ ಹಣ್ಣಿನ ಚೂಪಾದ ತುದಿಯನ್ನು ಕಡಿದು ಈಗಿನ ಬಿಲ್ಲಿಗಳ ನಡುವೆ ಇರುವಷ್ಟು ದೊಡ್ಡ ರಂಧ್ರಮಾಡಬೇಕು, ಆ ಮೇಲೆ ಅದರ ಆಸುಪಾಸಿನಲ್ಲಿನ ರಸವನ್ನು ಹೀರಬೇಕು. ನಿಮ್ಮ ಬಾಯಿಯಲ್ಲಿ ತುರುಕಬಹುದಾದಷ್ಟು ಪ್ರದೇಶದ ರಸವನ್ನು ಹೀರಿದ ನಂತರ ಸಿಪ್ಪೆಯನ್ನು ಅಷ್ಟಷ್ಟೇ ಸಿಗಿದು ಉಳಿದ ಪ್ರದೇಶದ ಸಮಾಚಾರ ತೆಗೆದುಕೊಳ್ಳಬೇಕು. ಈ ಪದ್ಧತಿಯಲ್ಲಿ ನಿಮ್ಮ ಕೈ ತುಸು ಕೊಳೆಯಾಗಿ ಮೊಣಕೈವರೆಗೂ ರಸಧಾರೆ ಇಳಿಯಬಹುದಾದರೂ ಸಮಸ್ಯೆಯನ್ನು ಆಮೂಲಾಗ್ರವಾಗಿ ಏನೂ ಶೇಷವುಳಿಯದಂತೆ ತೀರಿಸಲು ಇದೊಂದೆ ಹಾದಿ. ಆದರೆ "ಪ್ರತ್ಯಕ್ಷ ಕಾರ್ಯಾಚರಣೆ"ಯ ಎಲ್ಲ ಪದ್ಧತಿಗಳಂತೆ ಇದೂ ತುಸು ಪಾಶವಿಕವಾಗಿ ಕಾಣುವುದು ನಿಜ. ಒರಟುತನವನ್ನು ಮೆಚ್ಚದ ಸೊಗಸುಗಾರರು ಈ ಪದ್ಧತಿಯನ್ನು ನೋಡಿದರೆ ಮೂಗು ಮುರಿಯುವರು. ಅವರು ಹರಿತವಾದ ಚೂರಿ ತೆಗೆದುಕೊಂಡು ಸಿಪ್ಪೆಯನ್ನು ತೆಳ್ಳಗೆ,ಒಳಗಿನ ಅಡಗಿನ ದರ್ಶನ ಮಾತ್ರ ಆಗುವಂತೆ, ಕೆತ್ತುತ್ತಾರೆ. (ಇದಕ್ಕೆ ಸ್ವಲ್ಪ ಹೊತ್ತು ಹಿಡಿಯುತ್ತದೆ. ಆವರೆಗೆ ನಾಲಿಗೆಯ ಚಪಲ ತಡೆದುಕೊಳ್ಳುವುದು ಸೊಗಸುಗಾರರಿಗೆ ಮಾತ್ರ ಸಾಧ್ಯ.) ಆಮೇಲೆ ಚೂರಿಯಿಂದ ಗೊರಟುನಾಟುವವರಗೆ ಸುತ್ತಲೂ (ಗ್ಲೋಬಿನಲ್ಲಿ ರೇಖಾಂಶ ತೋರಿಸಿದಂತೆ) ಸೀಳಿ, ಬಳಿಕ ಭೂಮಧ್ಯ ರೇಖೆ, ಮಕರ ಸಂಕ್ರಾಂತಿ ಮತ್ತು ಕರ್ಕ ಸಂಕ್ರಾಂತಿ ರೇಖೆಗಳ ಮಾಸಲೆಗೂ ಅಡ್ಡಲಾಗಿ ಸೀಳಿ, ಕೊನೆಗೆ ಉತ್ತರ ಧ್ರುವದಿಂದ ಕೆಳ ಮುಖವಾಗಿ ಗೊರಟು ಹತ್ತುವಂತೆ ಚತುರ್ದಿಕ್ಕುಗಳಲ್ಲಿ ಕೊಯ್ಯುತ್ತಾರೆ. ಮಾವಿನ ಅಡಗು ಹೋಳು ಹೋಳುಗಳಾಗಿ ತಾಟಿನಲ್ಲಿ ಬೀಳುತ್ತದೆ. ಇವನ್ನು ಹೆಬ್ಬೆರಳು ತೋರು ಬೆರಳೆರಡನ್ನೇ ಉಪಯೋಗಿಸಿ ಒಂದೊಂದಾಗಿ ಎತ್ತಿ ಬಾಯಲ್ಲಿಕ್ಕಿ ಮೆಲ್ಲಗೆ ತಿಂದರೆ ನೀವು ಪ್ರಥಮ ವರ್ಗದ ರಸಿಕರು. ಆದರೆ ನಾರುಳ್ಳ

ಅಥವಾ ಅಡಗು ಕಡಿಮೆಯುಳ್ಳ ಹಣ್ಣುಗಳಿಗೆ ಈ ಪ್ರಯೋಗನಾಟುವುದಿಲ್ಲ. ಅವಕ್ಕೆ ಪ್ರತ್ಯಕ್ಷ ಕ್ರಮವೊಂದೇ ಉಪಾಯ.

* * *

ನಾವು ಚಿಕ್ಕವರಿದ್ದಾಗ ಮಾವಿನ ಹಣ್ಣು ತಿಂದು ಗೊರಟನ್ನು ಬೀಸಿ ಒಗೆದು ಹತ್ತಿರ ಇದ್ದವರಿಗೆ "ಗೊರಟಿನ ಬೆನ್ನು ಹತ್ತಿ ಹೋಗು" ಎಂದು ಛೇಡಿಸುತ್ತಿದ್ದೆವು. ಗೊರಟು ಆಗ ನಿರುಪಯುಕ್ತ ಪದಾರ್ಥವೆನಿಸಿತ್ತು. ಆದರೆ ಗಾಂಧೀಜಿಯವರು ಗೊರಟಿನೊಳಗಿನ ತಿಳಲಿನ ಗುಣಗಳನ್ನು ಕೊಂಡಾಡಿ ಕೊಂಡಾಡಿ ಬರೆದ ಮೇಲೆ ತಜ್ಞರು ಇದರಲ್ಲಿನ ಆಹಾರ ಸತ್ವಗಳ ಬಗ್ಗೆ ಸಂಶೋಧನೆ ನಡೆಸಿ ಅವುಗಳನ್ನು ಸ್ತುತಿಸುತ್ತಿದ್ದಾರೆ. ಈಚಿಗೆ ಗೊರಟಿನ ಗುಣಗಳನ್ನು ವಿವರಿಸುವ ಒಂದು ಸರಕಾರಿ ಪುಸ್ತಿಕೆಯೇ ಪ್ರಕಟವಾಗಿದೆ. ಶ್ರೀಮತಿ ಲೀಲಾವತಿ ಮುನಶಿಯವರು ತಮ್ಮ "ಅನ್ನಪೂರ್ಣ" ಉಪಹಾರಗೃಹಗಳಲ್ಲಿ ಇದರಿಂದ ತಯಾರಿಸಿದ ಪಕ್ವಾನ್ನಗಳನ್ನು ಬಡಿಸುತ್ತಿದ್ದಾರೋ ಇಲ್ಲವೊ ಗೊತ್ತಿಲ್ಲ. ಈವರೆಗೆ ಇಲ್ಲದಿದ್ದರೇನ್ನು ಬಡಿಸಬಹುದು.

* * *

ಗೊರಟಿನ ಮಾತೆತ್ತಿದಾಗ ಒಂದು ಕತೆ ನೆನಪಾಗುತ್ತದೆ. ಹಾರುವನೊಬ್ಬ ನದಿಯಲ್ಲಿ ಸ್ನಾನಮುಗಿಸಿ ಸಂಧ್ಯಾವಂದನೆ ಮಾಡುತ್ತಿದ್ದಾಗ ತೇಲುತ್ತ ಬಂದ ಗೊರಟೊಂದು ಅವನ ಕಾಲಿಗೆ ತಾಗಿತು. ಅಯ್ಯೋ, ಎಂಜಲು ಗೊರಟೋ ಏನೋ ಎಂದು ಸಂಶಯ ಬಂದು ಎಂಜಲಾಗಿದ್ದರೆ ಹೆಚ್ಚಾಗಿ ಬೇಯಿಸಿದ ಕಾಯಾಗಿರುತ್ತದೆ. ಬೇಯಿಸಿದ್ದರೆ ಉಪ್ಪಿನ ರುಚಿಯಿರುತ್ತದೆ, ಎಂದು ತರ್ಕಿಸಿ ನಿಶ್ಚಯಿಸುವುದಕ್ಕಾಗಿ ಗೊರಟನ್ನೆತ್ತಿ ಕಚ್ಚಿದ. ಅವನ ದುರ್ದೈವಕ್ಕೆ ಅದು ಉಪ್ಪೇ ಹತ್ತಿತು. ಎಂಜಲು ಗೊರಟು ಮುಟ್ಟಿದ್ದು ಸಾಲದೆ ಕಚ್ಚಿದೆನಲ್ಲಾ ಎಂದು ಗಾಬರಿಯಾದ. ಇನ್ನೇನು ಬ್ರಾಹ್ಮಣರದೋ ಅನ್ಯಜಾತಿಯವರದೋ ನೋಡಿ ಬಿಡೋಣವೆಂದು ದಂಡೆಗುಂಟ ಮೇಲೆ ಸಾಗಿ ನೋಡುತ್ತಾನೆ, ಏನು ಹೇಳಬೇಕು, ಹೊಲೆಯರ ವಸತಿ. ಹೊಲೆಯರ ಎಂಜಲು ತಿಂದೆನೇ ಎಂದು ತಲೆ ಚಚ್ಚಿಕೊಂಡು ಮಠಕ್ಕೆ ಬಂದು ಸ್ವಾಮಿಗಳ ಮುಂದೆ ಹೇಳಿಕೊಂಡ. ಹೋಗಿ ಪಂಚಗವ್ಯ ತೆಗೆದುಕೊಂಡು ಜನಿವಾರ ಬದಲಿಸು, ಎಂದು ಅಪ್ಪಣೆಯಾಯಿತು. ಮರುದಿವಸ ಮಠಕ್ಕೆ ಬಂದಾಗ ಪಂಚಗವ್ಯ ತೆಗೆದುಕೊಂಡೆಯೇನೋ ಎಂದು ವಿಚಾರಿಸಿದರೆ, "ಓಹೋ ಪಂಚಗವ್ಯವೇಕೆ, ಷಡ್ಗವ್ಯ ತೆಗೆದುಕೊಂಡಿದ್ದೇನೆ" ಎಂದನಾತ. ಷಡ್ಗವ್ಯ ಎಂದರೇನೆಂದು ಪೆಚ್ಚಾದ ಸ್ವಾಮಿಗಳಿಗೆ ಆತ ಕೊಟ್ಟ ವಿವರಣೆ: "ದನದ ಕಿವಿ ಪವಿತ್ರವೆಂದು ಕೇಳಿದ್ದೆ. ಅದಕ್ಕೇ ಪಂಚಗವ್ಯದ ೫ ಅಂಗಗಳಲ್ಲದೆ ದನದ ಕಿವಿಯ ಒಂದು ಚೂರನ್ನು ಕತ್ತರಿಸಿ ಹಾಕಿದೆ. ಪಂಚಗವ್ಯಕ್ಕಿಂತ ಷಡ್ಗವ್ಯ ಮೇಲಲ್ಲವೇ?" "ಅಯ್ಯೋ ಪಾಷಂಡೀ, ಪಂಚಮರ ಎಂಜಲು ತಿಂದದ್ದು ಸಾಲದೆ ಗೋಮಾಂಸವನ್ನೂ ತಿಂದೆಯಾ?" ಎಂದು ಸ್ವಾಮಿಗಳು ಹಣೆಗಟ್ಟಿಸಿಕೊಂಡರು!

❑

# ಗದ್ದಲ ಮಾಡಿ

ನಿಶ್ಶಬ್ದ ಸಂಘದ ವಿಚಾರವಾಗಿ ಲಾಂಗೂಲಾಚಾರ್ಯರು ಹೋದ ವಾರ ಹರಟುವಾಗ ಆ ವಿಚಾರವೇ ಹಾಸ್ಯಾಸ್ಪದವೆಂದೂ ಅಕಸ್ಮಾತ್ತಾಗಿ ಆ ಸಂಘವೇನಾದರೂ ಯಶಸ್ವಿಯಾದಲ್ಲಿ ಈಗಾಗಲೇ ಮಾನವನಿಗಿರುವ ನೂರಾರು ಚಿಂತೆಗಳ ಜೊತೆಗೆ ಇನ್ನೂ ಇಷ್ಟು ಚಿಂತೆಗಳು ಬಂದು ಕೂಡಿಕೊಳ್ಳುವವು ಎಂದು ಹೇಳಿದ್ದನ್ನೂ ವಾಚಕರು ಮರೆತಿರಲಿಕ್ಕಿಲ್ಲ. ಎಂಥ ಮರೆವಿನ ಸ್ವಭಾವದವರಿಗೂ ಮರೆಯಲು ಅವಕಾಶ ಸಿಗದಂಥ ಕೆಲವು ವಿಚಾರಗಳಿವೆ. ಅವುಗಳಲ್ಲಿ ಸಂಘಸಂಸ್ಥೆಗಳ ವಿಚಾರವೂ ಒಂದು.

ಸಂಘ-ಸಂಸ್ಥೆಗಳು ಹಲವಾರು ವ್ಯಕ್ತಿಗಳು ಕೂಡಿಕೊಂಡಾಗಲೇ ಹುಟ್ಟುವವು ಈ ಹಲವಾರು ವ್ಯಕ್ತಿಗಳು ಇನ್ನೂ ಹಲವಾರು ವ್ಯಕ್ತಿಗಳ ಸಹಾಯ-ಪ್ರೋತ್ಸಾಹ-ಸಹಕಾರಗಳನ್ನು ಪಡೆಯುವದಕ್ಕಾಗಿ ಅಹೋರಾತ್ರಿ ಸಭೆ, ಭಾಷಣ, ಚರ್ಚೆ, ಠರಾವು, ಪ್ರಕಟಣೆಗಳ ರೂಪದಲ್ಲಿ ಗದ್ದಲ ಮಾಡುತ್ತಿರುತ್ತಾರೆ. ಸೂತ್ರವತ್ತಾಗಿ ಹೇಳುವದಾದರೆ ಗದ್ದಲವೇ ಸಂಘ-ಸಂಸ್ಥೆಗಳ ಜೀವನದ ಉಸಿರು. ಉಸಿರು ಕಟ್ಟಿದೊಡನೆ ಪ್ರಾಣಿಮಾತ್ರವು ಸಾಯುವಂತೆ ಗದ್ದಲದ ಅವಕಾಶ ತಪ್ಪಿದೊಡನೆ ಸಂಘ ಸಾಯುವದು. ಸಂಘ ಅಸ್ತಿತ್ವದಲ್ಲಿ ಬಂದಿದ್ದನ್ನು, ಕೆಲಸ ಮಾಡುತ್ತಿರುವದನ್ನು, ಯಶಸ್ಸು ಪಡೆದಿರುವದನ್ನು ಎಲ್ಲವನ್ನೂ ಜನರಿಗೆ ತಿಳಿಸಬೇಕಲ್ಲವೆ? ಭಾಷಣಗಳ ಮೂಲಕವೊ, ಪ್ರಕಟನೆಯ ಮೂಲಕವೊ ಇವನ್ನು ಜಾಹೀರ ಮಾಡಬೇಕಷ್ಟೆ? ಪ್ರಕಟನೆ ಕೊಡುವದಕ್ಕೆ ಮುಂಚಿತವಾಗಿ ಅದು ಒಬ್ಬನ ಬಾಯಿಂದ ಬಂದಿರುವದು ಅಗತ್ಯವಷ್ಟೆ? ಒಟ್ಟಾರೆ ಏನು ಅಂದರೆ, ಭಾಷಣಗಳು ಅರ್ಥಾತ್ ಮಾತುಗಳು ಅರ್ಥಾತ್ ಗದ್ದಲವಿಲ್ಲದಿದ್ದರೆ ಏನೂ ಇಲ್ಲ.

"ಸಂಘೇ ಶಕ್ತಿ: ಕಲೌಯುಗೇ" ಕಲಿಯುಗದಲ್ಲಿ ಸಂಘದ ಶಕ್ತಿಯೇಶಕ್ತಿ. ಅಂದ ಮೇಲೆ ಸಂಘಗಳನ್ನು ಕಟ್ಟುವದೂ ಅವುಗಳನ್ನು ಜಯಪ್ರದವಾಗಿ ಮಾಡುವದೂ ಅಗತ್ಯವೂ ಕರ್ತವ್ಯವೂ ಎಂದಾಯಿತು. ಮೇಲೆ ಹೇಳಿದಂತೆ ಇದಕ್ಕೆ ಭಾಷಣ ಅಗತ್ಯ. ಒಗ್ಗಟ್ಟಾಗಿರಿ, ಸಂಘಟಿತರಾಗಿರಿ, ಸಂಘಗಳನ್ನು ಸ್ಥಾಪಿಸಿಕೊಂಡು ಸಾಮೂಹಿಕ ಸಹಕಾರ ಬೆಳೆಸಿಕೊಂಡು ಕೆಲಸ ಮಾಡಿರಿ, ಅದೇ ದೇಶವನ್ನು ಮುನ್ನಡೆಸುವ ಸಾಧನ ಎಂದು ಹೇಳುವ ಮಹಾನಾಯಕರು ಇದನ್ನು ಹೇಗೆ ಹೇಳುತ್ತಾರೆ? ಭಾಷಣಗಳ ಮೂಲಕವೇ ಅಲ್ಲವೇ!

* * *

ಜಗತ್ತು ವಿಚಿತ್ರವಾಗಿರುವಂತೆ ಮಾನವ ಸ್ವಭಾವವೂ ವಿಚಿತ್ರವಾಗಿದೆ. ಈ ಕ್ಷಣದಲ್ಲಿ ಇದೇ ಯೋಗ್ಯ ಎಂದು ಸಾರಿದ್ದನ್ನು ಇನ್ನೊಂದು ಕ್ಷಣದಲ್ಲಿ ಅದೇ ಬಾಯಿ, ಯೋಗ್ಯವಲ್ಲ ಬೇಡ ಎಂದು ಸಾರುತ್ತದೆ ಜನ ಮೊದಲಿನದಕ್ಕೂ 'ಹೂಂ' ಎನ್ನುತ್ತಾರೆ, ಎರಡನೆಯದಕ್ಕೂ "ಹೂಂ" ಎನ್ನುತ್ತಾರೆ. ಯಾವದು ಸರಿ ಎಂಬ ಇತ್ಯರ್ಥಕ್ಕೆ ಬರಲಾರದೆ ಯಾವದನ್ನೂ ಮಾಡದೆ ಮುಂದೂ ಇಲ್ಲ, ಹಿಂದೂ ಇಲ್ಲ ಎಂಬ ಸ್ಥಿತಿಗಿಳಿಯುತ್ತಾರೆ.

ಏನೊ ಸಾಮಾನ್ಯರು ಹೇಳುವ ಮಾತಾದರೆ ಸರಿ. ಆದರೆ ದೇಶದ ಏಕಮೇವಾದ್ವಿತೀಯ ನಾಯಕರಾದವರು, ಜಗತ್ತಿನ ಶ್ರೇಷ್ಠ ಪುರುಷರ ಪಾಲಿಗೆ ಸೇರಿದವರು ಇಂಥ ಮಾತು ಹೇಳಿದರೆ ಜನ ಏನು ಮಾಡಬೇಕು? ಮಹಾಪುರುಷರು, ಧುರೀಣರು ಹೇಳಿದ್ದನ್ನು ಕೇಳಿ ನಡೆಯಬೇಕು ಎಂದು ನಿರ್ಧಾರದಿಂದ ಹೇಳುವವರು ಲಾಂಗೂಲಾಚಾರ್ಯರು ಹೇಳಿದ್ದು ಸರಿಯೊ, ತಪ್ಪೊ ವಿಚಾರ ಮಾಡುವದು ಅವರ ಕೆಲಸವಲ್ಲ ತಪ್ಪು-ಒಪ್ಪುಗಳ ನಿರ್ಣಯವನ್ನು ಮಾಡಿಯೇ ಮಹಾಪುರುಷರು, ಧುರೀಣರು ಮಾತಾಡಿರುತ್ತಾರೆ ಎಂದು ಅವರ ನಂಬಿಕೆ ಅಥವಾ ಅವರು ಇದುವರೆಗೆ ಹಾಗೆ ನಂಬಿದ್ದರು ಎನ್ನಿ.

ಹೀಗನ್ನುವುದಕ್ಕೆ ಕಳೆದವಾರ ಹೊಸದಿಲ್ಲಿಯಲ್ಲಿ ಪ್ರಧಾನಮಂತ್ರಿ ನೆಹರೂರವರು ಹೇಳಿದ ಕೆಲ ಮಾತುಗಳೇ ಕಾರಣವಾಗಿವೆ. ಪ್ರತಿಯೊಂದು ಸಮಾರಂಭವನ್ನು ರಾಜಕೀಯ ಇಲ್ಲವೆ ಇತರ ವಿಷಯಗಳ ಮೇಲಿನ ಭಾಷಣ ಜಾತ್ರೆಯನ್ನಾಗಿ ಮಾಡುತ್ತಿರುವದು ಇಂದು ಚಟವಾಗಿದೆ. ಇದು ಸರಿಯಲ್ಲ ಬಹಳ ಭಾಷಣ ಮಾಡುವ ಅಪರಾಧಿಗಳಲ್ಲಿ ನಾನೂ ಎನ್ನಬಹುದು ಈ ರೀತಿ 'ಮಾತಿನೋಗರ' ಬಡಿಸುವದು ಒಳ್ಳೆಯದಲ್ಲ. ಹೇಳಿದ್ದನ್ನೇ ಹೇಳುತ್ತ ಬೇರೆಯವರಿಂದ ಏನನ್ನೂ ಕಲಿಯಲು ಪ್ರಯತ್ನಿಸದಿರುವದು ನಿಲ್ಲಬೇಕು ಎಂಬುದಾಗಿ ಪ್ರಧಾನಮಂತ್ರಿಗಳು ಹೇಳಿದರು.

* * *

ಸರಿ ಹಾಗೆಯೇ ಮಾಡೋಣ ಆದರೆ... ನೋಡಿ, ಒಂದು ಮಾತನ್ನು ಕೃತಿಗಿಳಿಸಬೇಕಾದರೆ ವಿಚಾರಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಮನುಷ್ಯ ಮತ್ತು ಪಶುವಿನಲ್ಲಿ ಭೇದ ಉಳಿಯಲಾರದು. ಭಾಷಣ ಮಾಡುವದು ಬೇಡ, ಸರಿ, ಎರಡನೆಯವರಿಂದ ಕಲಿಯಬೇಕು, ಸರಿ. ಆದರೆ ಕಲಿಯಬೇಕಾದರೆ ಎರಡನೆಯವರು ಹೇಳಿದ್ದನ್ನು ಕೇಳುವದು ಬೇಡವೆ? ಓದಲು ಬಾರದವರು ಕೇಳದೆ ಕಲಿಯುವದೆಂತು? ನಿರಕ್ಷರಿಗಳ ಪ್ರಮಾಣ ಅಧಿಕವಾಗಿರುವ ಭಾರತದಲ್ಲಂತೂ ಕೇಳಿಯೆ ಕಲಿಯಬೇಕಾದ ಪರಿಸ್ಥಿತಿಯಲ್ಲವೆ? ಭಾಷಣಗಳು ನಿಂತುಹೋದರೆ.... ಜನ ಅಜ್ಞಾನಿಗಳಾಗಿಯೆ ಉಳಿಯಬೇಕಾದೀತಲ್ಲ!

* * *

ಮತ್ತೆ, ಒಬ್ಬೊಬ್ಬರು ಒಂದೊಂದು ಕೌಶಲ್ಯದ ಮೂಲಕ ಜೀವನದಲ್ಲಿ ಮುಂದೆ ಬರುತ್ತಾರೆ. ಯಶಸ್ಸು ಪಡೆಯುತ್ತಾರೆ ಭಾಷಣ ಕೌಶಲ್ಯವನ್ನು ಪಡೆದಿರುವವರಿಗೆ ಭಾಷಣ

ಮಾಡಲು ಪ್ರತಿಬಂಧ ಹಾಕಿದರೆ ಗತಿಯೇನು? ಜೀವನದಲ್ಲಿ ಅಯಶಸ್ವಿಗಳಾಗಿರೆಂದು ಹೇಳಿದಂತಾಗುವದಲ್ಲವೆ? ಜನ ಮುಂದಕ್ಕೆ ಬರಲಿ ಎಂದೆನ್ನುವ ನಾವು ಮುಂದೆ ಹೋಗುವವರನ್ನು ಹಿಂದೆ ಜಗ್ಗುವದು ಮಹಾಪರಾಧವಾಗಲಿಕ್ಕಿಲ್ಲವೆ!

ಮನುಷ್ಯ ನೆಮ್ಮದಿಯಿಂದಿರಲು ಗದ್ದಲಬೇಕು, ಅವಶ್ಯ ಎನ್ನುವಂತೆ, ಕೆಲವರು ಮುಂದೆ ಬರಲು, ಹಾಗೆ ಮುಂದೆ ಬಂದವರು ಇತರರನ್ನು ಮುಂದೆ ತರಲು ಭಾಷಣಕಾರನೂ ಭಾಷಣಗಳೂ ಅಗತ್ಯವಾಗಿವೆ ಇನ್ನು ಜನಹಿತ ದೃಷ್ಟಿಯಿಂದ ಹೇಳಿದ್ದನ್ನೆ ಹೇಳಬಾರದು ಹೇಳಿದ್ದನ್ನೆ ಹೇಳಿದರೂ ಹೊಸತೆಂಬ ಕಲ್ಪನೆ ಬರುವಂತೆ ಮಾಡಿ ಹೇಳಬೇಕು ಎಂಬಿತ್ಯಾದಿಯಾಗಿ ಕೆಲ ನಿರ್ಬಂಧಗಳನ್ನು ಹಾಕಬಹುದು. ಆಗ ಅನಿವಾರ್ಯವಾಗಿ ಎಂಥ ಭಾಷಣಗಳನ್ನಾದರೂ ಕೇಳುವ ಪ್ರಸಂಗ ತಪ್ಪಿ ಒಳ್ಳೆಯ ಭಾಷಣಗಳನ್ನೆ ಕೇಳುವಂತಾದೀತು. ಆದರೆ ವಾಕ್ ಸ್ವಾತಂತ್ರ್ಯವಿರುವ ರಾಜ್ಯದಲ್ಲಿ ಇಂಥ ನಿರ್ಬಂಧಗಳನ್ನು ಹಾಕುವದು ಕಠಿಣವಾಗಿರುವದರಿಂದ ಅನಿವಾರ್ಯ ಅನಿಷ್ಟವೆಂದು ಜೊಳ್ಳು ಭಾಷಣಗಳನ್ನು ಕೇಳಿಕೊಳ್ಳದೆ ವಿಧಿಯಿಲ್ಲ. ಬಹುಶಃ ಪ್ರಧಾನ ಮಂತ್ರಿಗಳು ಭಾಷಣ ಬೇಡ ಎಂದಾಗ ಇಂಥ ಜೊಳ್ಳು ಭಾಷಣ ಬೇಡ ಎಂದು ಸೂಚ್ಯವಾಗಿ ಹೇಳಿದರು ಎಂದು ಸಮಾಧಾನ ಹಚ್ಚಿಕೊಳ್ಳುವದೇ ಭಾಷಣ ಮಾಡುವವರಿಗೂ ಕೇಳುವವರಿಗೂ ಮುಂದಿರುವ ಹಾದಿ ಎಂದು ಸಮಾಧಾನ ಮಾಡಿಕೊಳ್ಳುವದು ಸೂಕ್ತವಾದೀತು.

❑

# ಬೆಣ್ಣೆ ಹಾಕುವುದು

ನಮ್ಮ ಹಣಕಾಸಿನ ಮಂತ್ರಿ ಟಿ.ಟಿ. ಕೃಷ್ಣಮಾಚಾರಿಯವರು ಹೃದಯದಿಂದ ಯೋಚಿಸುವ ಬದಲು ಬುದ್ಧಿಯಿಂದ ಯೋಚಿಸುತ್ತಾರೆ. ಇದೇ ಈಗ ಬಂದಿರುವ ಕಷ್ಟ ಎಂದು ಶ್ರೀಮತಿ ಲೀಲಾವತಿ ಮುನಶಿಯವರು ಸಂಸತ್ತಿನಲ್ಲಿ ಟೀಕಿಸಿದರು. ತಮ್ಮ ಗಂಡ ದೀರ್ಘ ಕಾಲ ಮಂತ್ರಿಗಳಾಗಿದ್ದವರಿದ್ದರೂ ಶ್ರೀಮತಿ ಲೀಲಾವತಿಯವರಿಗೆ ಇನ್ನೂ ಮಂತ್ರಿಗಳಿಗೆ ಹೆಚ್ಚು ಹೃದಯವಿರುವದು (ಅವರಿಗೆ, ಅಷ್ಟು ಒಳ್ಳೇದಲ್ಲ ಎಂಬ ರಾಜಕೀಯ ತತ್ವ ತಿಳಿಯದಿರುವದು ಸೋಜಿಗದ ಮಾತು) ಒಬ್ಬ ಮಂತ್ರಿಗೆ ಅವಶ್ಯಕ್ಕಿಂತ ಹೆಚ್ಚು ಹೃದಯವಿದ್ದರೆ ಅವನನ್ನು ಹೆಚ್ಚಾಗಿ ಭೂದಾನಯಾತ್ರೆ, ಖಾದೀ ಬೋರ್ಡಿನ ಸದಸ್ಯತ್ವ, ಗಾಂಧೀನಿಧಿಯ ಅಧ್ಯಕ್ಷತೆ, ಅಥವಾ ತಿಂಬಕ್ಟೂ ದೇಶದ ರಾಯಭಾರಿ ಪದಕ್ಕೆ ವರ್ಗಾಯಿಸಲಾಗುತ್ತದೆಂಬುದು ಸರ್ವವಿದಿತವಾಗಿದೆ. ಮಂತ್ರಿಯಾದವನಿಗೆ ಇದ್ದ ಹೃದಯವೂ ಪ್ರಸಂಗಕ್ಕೆ ತಕ್ಕಂತೆ ಸ್ಥಳ ಬದಲಾಯಿಸುತ್ತಿರುವಂಥದಾಗಿರಬೇಕು. ಟಿ.ಟಿ.ಕೆ. ಯವರ ಮಟ್ಟಿಗೆ ಹೇಳುವದಾದರೆ ಅವರಿಗೆ ಎಂದೂ ಮಿತಿಮೀರುವಷ್ಟು ಹೃದಯವಿದೆಯೆಂದು ಯಾರೂ ಆರೋಪಿಸಿಲ್ಲ. ಈ ಹೃದಯವಾದರೂ ಯಾವಾಗಲೂ ತಲೆಗಿಂತ ಬಹಳ ದೂರ ಇದ್ದೆ ಇಲ್ಲವೆಂದು ನಂಬಲಾಗಿದೆ. ಹಣಕಾಸಿನ ಮಂತ್ರಿಯಾದ ಮೇಲಂತೂ ಅವರ ಹೃದಯ ತಲೆಯೊಳಗೆ ಹೋಗಿಬಿಟ್ಟಿದೆ. ಆದ್ದರಿದಲೇ ಅವರು ಬುದ್ಧಿ ಅಥವಾ ತಲೆಯಿಂದ ಯೋಚಿಸುತ್ತಿದ್ದಾರೆಂದು ಲೀಲಾವತಿಯವರಿಗೆ ಭ್ರಮೆಯಾಗಿರಬೇಕು. ವಾಸ್ತವಿಕಾಂಶವೆಂದರೆ ನಮ್ಮ ಹಣಕಾಸಿನ ಮಂತ್ರಿಗಳ ಹೃದಯವು ಯಾವಾಗಲೂ ಅವರ ತಲೆಯ ಪಕ್ಷದಲ್ಲೇ ಇರುತ್ತದೆ.

* * *

ಸ್ತ್ರೀಯರ ಆಭರಣ ಮತ್ತು ವಸತಿಯ ಮನೆಗಳನ್ನು ಕೂಡ ಸಂಸತ್ ಕರದ ಅಳವಿನಲ್ಲಿ ತಂದು ಟಿ.ಟಿ.ಕೆ.ಯವರು "ಕೌಟುಂಬಿಕ ಮತ್ತು ಖಾಸಗಿ ಜೀವನ"ವನ್ನು ಕೂಡ ಆದಾಯಕರದ ಅಧಿಕಾರಿಯ ಮಂಗಮುಷ್ಟಿಯಲ್ಲಿ ಕೊಡುತ್ತಿದ್ದಾರೆಂದು ಲೀಲಾವತಿಯವರ ದೂರು. ಆಭರಣಗಳ ಮಾತು ಬಂದಾಗ ಮಹಿಳೆಯರ ಹೃದಯ ಯಾವಾಗಲೂ ಜೋರಾಗಿ ಬಡಿದುಕೊಳ್ಳತೊಡಗುವುದು. ಈಯೊಂದು ವಿಷಯದಲ್ಲಿ ನಲ್ಲೆಯರ ಹೃದಯ ತಲೆಗೆ ಹೋಗಲು ಸಮರ್ಥವಾಗದಿದ್ದರೂ ತಲೆಯ ಒಂದಂಶ ಹೃದಯಕ್ಕಿಳಿದು ಬಂದರೆ

ಸರಕಾರಿ ಬೊಕ್ಕಸದ ಅಧಿಕಾರಿಗೂ ಗಂಡನೆಂಬ ಆ ಆಭರಣಸಂಪಾದಕ ಯಂತ್ರಕ್ಕೂ ಸೇರಿಯೇ ಹಿತವಾಗಲಿಕ್ಕಿಲ್ಲವೆ?

* * *

ಟಿ.ಟಿ.ಕೃಷ್ಣಮಾಚಾರಿಯವರು ತತ್ವನಿಷ್ಠರಷ್ಟೇ ಅಲ್ಲ, ನ್ಯಾಯಬುದ್ಧಿಯವರೂ ಹೌದು ಎಂದು ಶ್ರೀಮತಿಯವರು ಅವರಿಗೆ ಪ್ರಶಂಸಾರ್ಪಣೆ ಮಾಡಿದರು. "ಆದರೆ ಒಬ್ಬ ಮನುಷ್ಯ ಒಂದು ಪದವಿಗೇರಿದನೆಂದರೆ ಅವನಿಗೆ ಇತರ ಮಾನವ ಪ್ರಾಣಿಗಳ ಸಂಕಟಗಳು ತಿಳಿಯುವುದೇ ಇಲ್ಲ ಎಂದು ಲೀಲಾವತಿಯವರು ಗೋಗರೆದರು. ಅರ್ಥಾತ್ ಅವನ ತಲೆಯು ಹಿಗ್ಗುತ್ತ ಹೋದಂತೆ ಹೃದಯವು ಕುಗ್ಗುತ್ತ ಬಂದು ಕೊನೆಗೆ ಅವನು ಮೈತುಂಬತಲೆ, ಹೃದಯ ಮಾತ್ರ ಶೂನ್ಯ ಆಗುವುದರಿಂದ ಅವನು ಎಲ್ಲವನ್ನೂ ಬಲ್ಲವನೂ ಏನನ್ನೂ ಅರಿಯದವನೂ ಆಗುತ್ತಾನೆ. "ಒಳ್ಳೇ ಮನುಷ್ಯನು ಹಟಕ್ಕೆ ಬಿದ್ದರೆ ಅವನು ಕೊಡಬಹುದಾದ ಉಪಟಳಕ್ಕೆ ಎಲ್ಲೆಯೇ ಇಲ್ಲ" ಎಂದೂ ಶ್ರೀಮತಿಯವರು ದುಃಖಪರವಶರಾಗಿ ಹೇಳಿದರು. ಅಂದರೆ ಒಳ್ಳೇ ಮನುಷ್ಯರು ಪ್ರಪಂಚಕ್ಕೆ ಎಷ್ಟು ಅಪಾಯಕರವಾಗಿದ್ದಾರೆಂದು ಸ್ಪಷ್ಟವಾಯಿತು.

* * *

ಹಟಮಾರಿಗಳಾದ ಎಲ್ಲ ಒಳ್ಳೇ ಮನುಷ್ಯರಂತೆ ಟಿಟಿಕೆ ಅವರು ಕೂಡ ತಾವು ಹೊಸತೇನನ್ನೂ ಮಾಡುತ್ತಿಲ್ಲವೆಂದು ವಾದಿಸುತ್ತಾರೆ. ಅನೇಕರಿಗೆ ವಿಪತ್ತಿಕರವಾದ ಸಂಪತ್ತಿಕರ ವಸೂಲು ಮಾಡುವುದಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಆಧಾರವಿದೆಯೆಂದು ಅವರು ಹೇಳಿದರು. ಸೈತಾನನು ಶಾಸ್ತ್ರಾಧಾರ ತೋರಿಸಿದ ಹಾಗೆ ಎಂದು ಇಂಗ್ಲೀಷಿನಲ್ಲಿ ಒಂದು ಸಾಮತಿಯಿದೆ. ಆದರೆ ಟಿಟಿಕೆಯವರು ಕೌಟಿಲ್ಯನ ಆಧಾರ ತೋರಿಸುವುದು ಸೈತಾನನು ಶಾಸ್ತ್ರಾಧಾರ ತೋರಿಸುವ ಉದಾಹರಣೆಯಲ್ಲವೆಂದು ಖಂಡಿತವಾಗಿ ಹೇಳಬಹುದು ಹಿಂದಿನ ಜನ್ಮದಲ್ಲಿ ಬರೆದಿಟ್ಟದನ್ನೇ ಈ ಜನ್ಮದಲ್ಲಿ ಕೌಟಿಲ್ಯನು ಉದಾಹರಿಸುವ ಪ್ರಸಂಗವಿದು.

* * *

ಹೃದಯ ಮತ್ತು ಮಿದುಳಿನ ವಿಚಾರ ಹೇಳುವಾಗ ಇಂದೀಗ ಅಮೇರಿಕದಿಂದ ಬಂದ ಒಂದು ಸುದ್ದಿಯನ್ನು ಓದುಗರಿಗೆ ನೈವೇದ್ಯ ಮಾಡದಿರಲು ಸಾಧ್ಯವಿಲ್ಲ. ಅಲ್ಲಿಯ ತಜ್ಞರು ಒಬ್ಬಾನೊಬ್ಬ ಮನುಷ್ಯನ ಬುರುಡೆಯೊಳಗಿಂದ ಅರ್ಧರಾಸಿ ಮಿದುಳನ್ನು ಕೊಯ್ದು ತೆಗೆದಿದ್ದಾರಂತೆ. ಶ್ರೀಮತಿ ಲೀಲಾವತಿಯವರ ಆಕ್ಷೇಪವನ್ನೋದಿದ ಮೇಲೆ ಶ್ರೀ ಟಿ.ಟಿ.ಕೆಯವರಿಗೂ ಈ ಪ್ರಯೋಗ ಮಾಡಿದರೆ ಶ್ರೀಮತಿಯವರಂಥ ಹೃದಯಪಕ್ಷಪಾತಿಗಳಿಗೆ ಸಮಾಧಾನವಾಗಬಹುದೇ ಎಂದು ಲಾಂಗೂಲಾಚಾರ್ಯರು ಯೋಚಿಸಿದರು. ಆದರೆ ಸುದ್ದಿಯನ್ನು ಪೂರ್ತಿ ಓದಿದ ಮೇಲೆ ಇದು ಪ್ರಯೋಜನಕಾರಿಯಲ್ಲವೆಂದವರಿಗೆ ಖಂಡಿತವಾಯಿತು. ಅರ್ಧ ಮಿದುಳನ್ನು ಕೊಯ್ದು ತೆಗೆದರೂ ಆ ಮನುಷ್ಯನ ಬುದ್ಧಿ

ಬಲವೇನೂ ಕಡಿಮೆಯಾಗಿಲ್ಲೆಂದು ಡಾಕ್ಟರರು ತಿಳಿಸಿದ್ದಾರೆ. ಅಂದ ಬಳಿಕ ಟಿ.ಟಿ.ಕೆಯವರ ಬುರುಡೆಯೊಳಗಿದ್ದನ್ನೆಲ್ಲ ಹೊರಗೆ ಹಾಕಿದ ಹೊರತು ಶ್ರೀಮತಿಯವರ ಇಷ್ಟಸಿದ್ಧಿಯಾಗುವಂತಿಲ್ಲ. ಇಂಥ ಶಸ್ತ್ರಕ್ರಿಯೆ ಬಹಳ ಅಪಾಯಕಾರಿಯಾಗಬಹುದು. ಮಹಿಳೆಯರು ಬುದ್ಧಿಯಿಂದ ಯೋಚಿಸುವವರನ್ನು ಎಷ್ಟೇ ಟೀಕಿಸಿದರೂ ಸಂಪೂರ್ಣವಾಗಿ ಬುದ್ಧಿಯಿಂದ ಮುಕ್ತರಾದ ಪುರುಷರನ್ನು ಎಂದೂ ಮೆಚ್ಚಲಾರರು. ಯಾಕೆಂದರೆ ಆಗ ಸ್ತ್ರೀಪುರುಷರೊಳಗೆ ಏನು ಭೇದ ಉಳಿದಂತಾಯಿತು?

## ಬೆಣ್ಣೆ ಹಾಕುವುದು

"ಬೆಣ್ಣೆ ಹಾಕುವುದು" ಸಭ್ಯವೋ ಅಲ್ಲವೋ ಎಂಬ ಗಹನ ಪ್ರಶ್ನೆ ಉತ್ತರಪ್ರದೇಶ ವಿಧಾನಸಭೆಯಲ್ಲಿ. ಈಚೆ ಒಬ್ಬ ಸದಸ್ಯರು ಇನ್ನೊಬ್ಬರ ಮೇಲೆ ಮಂತ್ರಿಗಳಿಗೆ ಬೆಣ್ಣೆ ಹಾಕುತ್ತಿದ್ದಾರೆ" ಎಂದು ಟೀಕೆ ಮಾಡಿದಾಗ ತಲೆಯೆತ್ತಿತ್ತು. ಸಭಾಪತಿಗಳು ಬೆಣ್ಣೆ ಹಾಕುವುದು ಅಸಭ್ಯವಲ್ಲ ಎಂದು ತೀರ್ಪಿನಿತ್ತು ಮರ್ಯಾದೆ ರಾಮನ ಘನತರವಾದ ಬುದ್ಧಿಸಂಪತ್ತಿಯನ್ನು ಪ್ರದರ್ಶಿಸಿದರು. ಲಾಂಗೂಲಾಚಾರ್ಯರು ಈ ತೀರ್ಮಾನಕ್ಕೆ ಒಂದೇ ಒಂದು ಚಿಕ್ಕ ತಿದ್ದುಪಡಿಯನ್ನು ಸೂಚಿಸುತ್ತಾರೆ. ಬೆಣ್ಣೆ ಹಾಕುವುದು ಅಸಭ್ಯವಲ್ಲ; ಆದರೆ ಆ ಬೆಣ್ಣೆ ವನಸ್ಪತಿಮಿಶ್ರಿತವಾಗಿರಬಾರದು ಅಷ್ಟೇ.

* * *

ಮೇಲ್ಕಾಣಿಸಿದ ತೀರ್ಪು ಉತ್ತರಪ್ರದೇಶಕ್ಕಷ್ಟೇ ಅನ್ವಯಿಸುವುದೆಂದು ದಕ್ಷಿಣ ಭಾರತದ ವಿಧಾನಸಭೆಗಳ ಸದಸ್ಯರು ನೆನಪಿನಲ್ಲಿಡಬೇಕು. ಉತ್ತರ ಪ್ರದೇಶವು ಮಾಖನಲಾಲರ ಪ್ರದೇಶ. ಅಲ್ಲಿ ಬೆಣ್ಣೆಗೆ ದರಿದ್ರವಿಲ್ಲ. ದಕ್ಷಿಣದಲ್ಲಿ ಹಾಗಲ್ಲ ಇಲ್ಲಿ ಬೆಣ್ಣೆ ಆಗಲೇ ಮಿತಿಮೀರಿ ತುಟ್ಟಿಯಾಗಿದೆ. ಆದ್ದರಿಂದ ವಿಧಾನಸಭೆಯಲ್ಲಿ ಯಾರಾದರೂ ಬೆಣ್ಣೆ ಹಾಕುವ ಪ್ರಯತ್ನ ನಡೆಸಿದರೆ ಅದು ಅಸಭ್ಯವೆಂದೇ ತೀರ್ಮಾನಿಸಬೇಕೆಂದು ಇಲ್ಲಿ ಸೂಚಿಸಲಾಗಿದೆ. ಇಲ್ಲದಿದ್ದರೆ ಬೆಣ್ಣೆಯ ಬೆಲೆ ಗಗನಕ್ಕೆ ಹಾರಿ ಅನಾಹುತವಾಗಬಹುದು. ಇಲ್ಲಿ ಚಕ್ರಗಳು ಸರಿಯಾಗಿ ತಿರುಗದಿದ್ದರೆ, ವಿಧಾನ ಸಭೆಯ ಹೊರಗೆ ಶುದ್ಧವಾದ ಕೀಲೆಣ್ಣೆ ಹಾಕುವುದು ಅಸಭ್ಯವೆಂದು ಪರಿಗಣಿಸಲ್ಪಡಲಾಗದು.

# ರಾಜಕೀಯ ಗುಳಿಗೆಗಳು

**ಮಂ**ತ್ರಿಗಳಾದ ಮೇಲೆ ನಮ್ಮ ಉದ್ದಿಮೆ ವಾಣಿಜ್ಯಮಂತ್ರಿ ಟಿ.ಟಿ. ಕೃಷ್ಣಮಾಚಾರಿಯವರ ತಿಳಿವಳಿಕೆ ಮೊದಲಿಗಿಂತ ಇಪ್ಪತ್ತು ಪಟ್ಟು ಆಯಿತಂತೆ. ತಮಗೆ ಹಿಂದೆ ಕಡಿಮೆ ಗೊತ್ತಿತ್ತೆಂದು ಬಹಿರಂಗವಾಗಿ ಒಪ್ಪಿಕೊಳ್ಳುವ ಮಂತ್ರಿಗಳಲ್ಲಿ ಟಿಟಿಕೆಯವರೇ ಮೊದಲಿಗರೆಂದು ತೋರುತ್ತದೆ. ಮಂತ್ರಿಗಳೆಲ್ಲರೂ ಸಾಮಾನ್ಯವಾಗಿ ಸರ್ವಜ್ಞರೇ ಆಗಿ ಹುಟ್ಟಿರುವದು ಸಂಪ್ರದಾಯ. ಸರ್ವವನ್ನು ಎಷ್ಟರಿಂದ ಗುಣಿಸಿದರೂ ಅದು ಸರ್ವವೇ ಆಗುತ್ತದೆಂಬುದು ಗಣಿತ ಸಿದ್ಧಾಂತ ವಾಗಿರುವದರಿಂದ ಎಷ್ಟೋ ಮಂತ್ರಿಗಳು ಮಂತ್ರಿತ್ವದಲ್ಲಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅಸಮರ್ಥರಾಗುತ್ತಾರೆ. ಪರಿಣಾಮವಾಗಿ ಮಂತ್ರಿತ್ವದಿಂದ ಅವರಿಗೆ ಏನೇನೂ ಲಾಭವಾಗು ವದಿಲ್ಲ. ಕೃಷ್ಣಮಾಚಾರಿಯವರ ಹೆಚ್ಚಿದ ಜ್ಞಾನ ದೇಶದ ಆರ್ಥಿಕ ಸ್ಥಿತಿಯ ಸಂಬಂಧದ್ದಂತೆ. ಅವರು ಒಪ್ಪಿಕೊಳ್ಳದ ಬೇರೆ ಕೆಲ ಜ್ಞಾನವೂ ಅವರಿಗೆ ಆಗಿದೆಯೆಂದು ಲಾಂಗೂಲಾಚಾರ್ಯರಿಗೆ ಖಂಡಿತವಾಗಿದೆ. ಉದಾಹರಣೆಗೆ ರಾಜೀನಾಮೆಯ ವಿದ್ಯೆಯನ್ನು ಅವರು ಸಂಪೂರ್ಣವಾಗಿ ಸಾಧಿಸಿದ್ದಾರೆ. ನೆರೆಮಂತ್ರಿಯ ಕಿಸೆಯಿಂದ ತಮಗೆ ಬೇಕಾದ ಖಾತೆಗಳನ್ನು ಎಬ್ಬಿಸುವುದು ಹೇಗೆಂದೂ ಅವರು ಕಲಿತುಕೊಂಡಿದ್ದಾರೆ. ಇನ್ನಾರು ತಿಂಗಳಲ್ಲೋ ವರ್ಷದಲ್ಲೋ ತಾವು ನಿವೃತ್ತರಾದ ಮೇಲೆ ತಾವು ಗಳಿಸಿದ ಆರ್ಥಿಕ ಜ್ಞಾನವನ್ನು ಏನು ಮಾಡಬೇಕೆಂದು ಅವರಿಗೆ ತಿಳಿಯದಾಗಿದೆಯಂತೆ. ಮತ್ತೇತಕ್ಕಲ್ಲದಿದ್ದರೂ ಈ ಕಾರಣಕ್ಕಾಗಿ ಅವರು ಮಂತ್ರಿಯಾಗಿಯೇ ಉಳಿಯಬೇಕಾಗುವುದೆಂತು ಲಾಂಗೂಲಾಚಾರಯರಿಗೆ ಭಯವಿದೆ. ಒಮ್ಮೆ ಮಂತ್ರಿಯಾದವರು ಮತ್ತೆ ಯಾವ ಕೆಲಸಕ್ಕೂ ಬಾರರೆಂದು ನಮಗೆಲ್ಲ ಗೊತ್ತಿಲ್ಲವೆ? ತಾವು ಗಳಿಸಿದ ಆರ್ಥಿಕ ಜ್ಞಾನವನ್ನು ಬೀರಿ ಒಂದು ಪುಸ್ತಕ ಬರೆಯಬಹುದೆಂದು ಅವರು ಪೂರ್ವಸೂಚನೆ ಕೊಟ್ಟರು. ಆರ್ಥಿಕ ಜ್ಞಾನಕ್ಕೆ ಬೆಂಕಿ ಹಚ್ಚಲಿ. ಅವರು ಕಲಿತ ಇದ್ದಲ್ಲಿಂದ ಕದಲದೆ ಓಡಿಹೋಗುವ ವಿದ್ಯೆಯ ರಹಸ್ಯವನ್ನು ಕುರಿತು ಪುಸ್ತಕ ಬರೆದರೆ ಇತರ ರಾಜಕಾರಣಿಗಳಿಗೆ ತುಂಬ ಉಪಕಾರವಾದೀತು.

* * *

ಮದ್ರಾಸ್ ಮಂತ್ರಿ ಸಿ. ಸುಬ್ರಹ್ಮಣ್ಯರು ಪತ್ರಿಕೋದ್ಯೋಗಿಗಳ ಮೇಲೆ ಸಿಟ್ಟಿಗೆದ್ದಿದ್ದಾರೆ. ಅವರು ಸರಕಾರಿ ಅಧಿಕಾರಿಗಳ ಸುತ್ತ "ಸುಬ್ಬಗಾವಲು" ಇಟ್ಟು ಸುದ್ದಿಗಾರರನ್ನು ಹತ್ತಿರ ಬರಗೊಡಿಸದಂತೆ ಮಾಡಿದ್ದಾರಂತೆ. ಸುದ್ದಿಗಾರರು ಸುದ್ದಿಗಳನ್ನು ಕದ್ದು ಪ್ರಕಟಿಸುವುದನ್ನು

ಅವರು ಖಂಡಿಸಿದ್ದಾರೆ. ಸುದ್ದಿಗಾರರ ಚರೆ, ಕೇವಲ ಖಂಡನೀಯವಾಗಿದೆಯೆಂದು ಲಾಂಗೂಲಾಚಾರ್ಯರು ಸೈಗುಟ್ಟುತ್ತಾರೆ. ಸುದ್ದಿಗಾರರ ಮುಖ್ಯ ಕರ್ತವ್ಯವೆಂದರೆ ಸರಕಾರಿ ಸುದ್ದಿ ಖಾತೆಯವರು ಬರೆದು ಕೊಟ್ಟ ಅಧಿಕೃತ ಸುದ್ದಿಗಳನ್ನು ಒಯ್ದು, ಅದರಲ್ಲಿರುವ ವ್ಯಾಕರಣ ದೋಷಗಳನ್ನಷ್ಟೇ ತಿದ್ದಿ ಪ್ರಕಟಿಸುವುದು, ಮಂತ್ರಿಗಳ ಭಾಷಣಗಳನ್ನು (ಆವೇಶದ ಭರದಲ್ಲಿ ಮಾಡಿರಬಹುದಾದ ತಾಳಗೆಟ್ಟ ಉದ್ಗಾರಗಳನ್ನು ಜೋಕೆಯಿಂದ ಕಾಟು ಹಾಕಿದ ನಂತರ) ವರದಿ ಮಾಡುವುದು, ಮಂತ್ರಿಗಳ ಪತ್ರಿಕಾ ಪರಿಷತ್ತುಗಳಲ್ಲಿ ಹಾಜರಿದ್ದು ಅವರಿಗೆ ಪೇಚು ಬೀಳುವಂಥ ಪ್ರಶ್ನೆಗಳನ್ನು ಕೇಳದಿರುವುದು ಇವೇ ಎಂಬುದು ಚೆನ್ನಾಗಿ ತಿಳಿದಿರಬೇಕು. ಸರಕಾರದ ಒಳಗುಟ್ಟುಗಳನ್ನು, ಮಂತ್ರಿಗಳ ಒಳಜಗಳಗಳಿಂದ ಹೊಲಸಾಗುವಳಿ ವಿಧೇಯಕವು ಸರಕಾರಿ ಪಾರಿವಾಳ ಗೂಡುಗಳಲ್ಲಿ ತತ್ತಿಯಿಡುತ್ತ ಕುಳಿತಿರುವುದನ್ನು ಇತ್ಯಾದಿ ಅಬ್ರಹ್ಮಣ್ಯ ಸುದ್ದಿಗಳನ್ನು ಹೊರಗೆಡವಲು ಸುದ್ದಿಗಾರರಿಗೆ ಏನೇನೂ ಹಕ್ಕಿಲ್ಲ. ಆದರೆ ಮಂತ್ರಿಗಳೂ ಪುಢಾರಿಗಳೂ ಬೇಕೆಂದೇ ಜನರ ನಾಡಿ ತಿಳಿಯಲು ಹೊರಗೆಡಹಿದ "ಗೋಪ್ಯ" ಸುದ್ದಿಗಳನ್ನು ಮಾತ್ರ ಅವರು ತಪ್ಪದೆ ವರದಿ ಮಾಡಬೇಕು. ಮರುದಿನ ಅದೇ ದೊಡ್ಡ ಮನುಷ್ಯನು ಅದೇ ಸುದ್ದಿಯನ್ನು ನಿರಾಕರಿಸಿದರೆ ತೆಪ್ಪಗೆ ಬಾಲ ಮಡಚಿಕೊಂಡು ಕೂಡ್ರಬೇಕು ಇದು ಪತ್ರಿಕಾಧರ್ಮ.

* * *

ಅನನುಕರಣೀಯ ಎಚ್.ವಿ. ಕಾಮತರು ಕಳೆದ ವಾರ ಸಂಸತ್ತಿನಲ್ಲಿ ಇಂಗ್ಲೀಷ್ ಭಾಷೆಗೆ "ಚೋರ್ ಪೋರೇಶನ್" ಎಂಬ ಹೊಸ ಶಬ್ದವನ್ನು ಕೂಡ ಮಾಡಿದರು. ಭಾರತದ ಹಣಕಾಸಿನ ಕಾರ್ಪೊರೇಶನನ್ನು ಚೋರ್ ಪೋರೇಶನ್ ಎನ್ನುವುದೇ ನ್ಯಾಯವೆಂದು ಅವರ ಮತ. ಹಣಕಾಸಿನ ಕಾರ್ಪೊರೇಷನ್ ಮಾತ್ರ ಯಾಕೆ, ಮುನಸಿಪಲ್ ಕಾರ್ಪೊರೇಶನುಗಳೂ ಚೋರ್ ಪೊರೇಶನುಗಳೇ. ಅವುಗಳಲ್ಲಿ ಕೆಲವುಗಳ ಸಭೆಗಳನ್ನು ನೋಡಿದರೆ ಅವುಗಳನ್ನು ಶೋರ್ (ಗೊಂದಲ) ಪೊರೇಶನುಗಳೆಂದೂ ಕರೆಯಬಹುದು. ಹುಬ್ಬಳ್ಳಿ ಮುನಸಿಪಾಲಿಟಿಯು ಒಂದು ಬಗೆಯ ಗೊರ್ (=ಗೊರಕೆ ಹೊಡೆಯುವ) ಪೊರೇಶನ್. ಆದರೆ ಧಾರವಾಡದ್ದು ಹೋರ್ (=ಹೋರಾಟದ) ಪೊರೇಶನ್ ಎಂದು ಧಾರಾಳವಾಗಿ ಹೇಳಬಹುದು. ಆ ಮುನಿಸಿಪಾಲಿಟಿಯ ಮೇಲೆ ಸರಕಾರವು ನೋಟೀಸು ಹೊರಡಿಸಿದ್ದನ್ನು ನೋಡಿದರೆ ಅದು "ಮುನಿಸಿ (ಸರಕಾರವನ್ನು ಸಿಟ್ಟಿಗೆಬ್ಬಿಸಿ) ಪಲ್ಟಿ" ಯಾಗಬಹುದೆಂದು ತೋರುತ್ತದೆ.

* * *

ಈಚೆಗೆ ಪ್ರಾಂತಿಕ ಮುಂದಾಳುಗಳೊಬ್ಬರು ಮಾಡಿದ ಭಾಷಣವನ್ನು ಸಟೀಕ ಸಟಿಪ್ಪಣವಾಗಿ ಕೆಳಗೆ ಕೊಡಲಾಗಿದೆ.

"ಪಂಡಿತ ನೆಹರೂರವರು ದೇಶಕ್ಕೆ, ವಿಶ್ವಕ್ಕೆ, ಸಲ್ಲಿಸುತ್ತಿರುವ ಸೇವೆಯನ್ನು ನೋಡಿರಿ. ಅವರ ಕೆಲಸವೇ ನಮ್ಮ ಹೆಮ್ಮೆ. (ತಮಗಷ್ಟೇ ಅಲ್ಲದೆ ನಮಗೆ ಕೂಡ ಹೆಮ್ಮೆಪಡಲು ಸಾಲುವಷ್ಟು ಕೆಲಸವನ್ನು ಅವರು ಮಾಡುತ್ತಿರುವುದರಿಂದ ನಾವೇನೂ ಕೆಲಸಮಾಡುವ ಅಗತ್ಯವಿಲ್ಲ) ಈ ಸಮಯದಲ್ಲಿ ನಮ್ಮ ಪಕ್ಷದ ಜವಾಬ್ದಾರಿ ಹಿರಿದು. ಸರಕಾರವನ್ನು ಹಿಯ್ಯಾಳಿಸುವುದೇ ಕಾರ್ಯ ಎಂಬ ಮನೋಭಾವ ಹೋಗಬೇಕು. (ಯಾಕೆಂದರೆ ಈ ಕೆಲಸವನ್ನು ಇತರ ಪಕ್ಷಗಳು ನಮಗಿಂತಲೂ ಚೆನ್ನಾಗಿ ಮಾಡುತ್ತಿವೆ. ಇಬ್ಬರು ಒಂದೇ ಕೆಲಸವನ್ನು ಮಾಡುವುದು ವ್ಯರ್ಥ ಶ್ರಮವೆಂಬುದನ್ನು ನಾವು ಗಮನಿಸುವುದು ಅಗತ್ಯ. ಕಾಂಗ್ರೆಸ್ಸಿಗರೇ ಕಾಂಗ್ರೆಸ್ಸನ್ನು ಟೀಕಿಸುತ್ತಿರುವುದರಿಂದ ಬುದ್ಧಿಗಲಿತು, ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷ ಕಟ್ಟಿದ ಪ್ರಜಾ ಸಮಾಜವಾದಿಗಳು ಒಬ್ಬೊಬ್ಬರಾಗಿ ತಿರುಗಿ ಕಾಂಗ್ರೆಸ್ಸಿನಲ್ಲಿ ಸೇರ ತೊಡಗಿದ್ದಾರೆ. ಬಯ್ಯಬೇಕಾದರೆ ಸ್ವಪಕ್ಷ ಬಿಡಬೇಕಾಗಿಲ್ಲೆಂದು ಅವರಿಗೀಗ ಖಚಿತವಾಗಿದೆ.) ಇಲ್ಲಿ ಬೇರೆ ಪಕ್ಷದ ಭಯವಿಲ್ಲದಿದ್ದರೂ ಸ್ವತಂತ್ರರು ಪ್ರಬಲರಾಗುವ ಅಪಾಯವಿದೆ. ನಾವು ಒಗ್ಗಟ್ಟಿನಿಂದಿರಬೇಕು. ನಮ್ಮ ಸಮಿತಿಗಳ ಚುನಾವಣೆಯನ್ನು ಮೇಲ್ಮಟ್ಟದಲ್ಲಿ ನಡೆಸಬೇಕು (ಅಂದರೆ ಮೇಲಿನವರು ಹೇಳುವ ಹುರಿಯಾಳುಗಳನ್ನೇ ಆರಿಸಬೇಕು) ಇತ್ಯಾದಿ.

# ಬುದ್ಧಿವಂತರು ಯಾರು?

ಸದೋಬಾ ಪಾಟೀಲರು ಬಾಯಿ ತೆರೆದಾಗೆಲ್ಲ ಏನಾದರೊಂದು ಹೊಸವಿಚಾರ ಹೊಸ ತರದಲ್ಲಿ ಪ್ರಕಟವಾಗುವುದೆಂದು ನಿರೀಕ್ಷಿಸಬಹುದು. ಕಾಂಗ್ರೆಸ್ ಸಂಸ್ಥೆಯ ಸತ್ವಹ್ರಾಸವಾಗುತ್ತಿರುವುದು ಕಳೆದ ಹದಿನೈದು ವರ್ಷಗಳಿಂದ ಅವರ ಚಿಂತೆಗೆ ಕಾರಣವಾಗಿದೆ. ೧೯೪೨ರ ಚಳವಳಿಯ ನಂತರ ಸೆರೆಮನೆಯಿಂದ ಹೊರಗೆ ಬಂದ ಮೇಲೆ ಅವರು ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವ ವಿಚಾರದಲ್ಲಿ ಕೆಲ ಮೌಲಿಕ ಸೂಚನೆಗಳನ್ನು ಮಾಡಿದರು. ಕಮ್ಯುನಿಸ್ಟರ ಸಂಘಟನಾಶಕ್ತಿಯನ್ನು ತುಂಬ ಈರ್ಷ್ಯೆಯಿಂದ ನೋಡುತ್ತ ಅವರು ಕಾಂಗ್ರೆಸ್ಸನ್ನೂ ಅದೇ ರೀತಿ ಶಿಸ್ತಿನ ಸಂಸ್ಥೆಯಾಗಿ ಕಟ್ಟಬೇಕೆಂದು ಹೇಳಿದರು. ವೈದ್ಯ ಪಾಟೀಲರ ಈ ಚಿಕಿತ್ಸೆಯು ಆಯುರ್ವೇದ ವೈದ್ಯರಿಗೆ ಆಲೋಪಥಿ ಚಿಕಿತ್ಸಾಕ್ರಮವನ್ನು ಅನುಸರಿಸಲು ಕೇಳಿಕೊಂಡಂತಿತ್ತು. ಅವರ ಸಾಲಿನ ಇತರ ವೈದ್ಯರು ಈ ಸೂಚನೆಯನ್ನು ಮೂಸಿ ನೋಡಿ ಅತ್ಯಂತ ಅಸಹ್ಯವನ್ನು ಪ್ರದರ್ಶಿಸಿದರು. ಈ ಔಷಧದಲ್ಲಿ ಕಷಾಯ, ಆಸವ, ಅರಿಷ್ಟ, ಲೇಹ್ಯ, ಭಸ್ಮ ಅಥವಾ ತೈಲ ಇದಾವುದರ ವಾಸನೆಯೂ ಇದ್ದಿಲ್ಲ. ರೋಗಿಯನ್ನು ಇಂಥ ಔಷಧಕೊಟ್ಟು ಉಳಿಸುವುದರಿಂದ ಏನು ಹಿತವಾಗಬಲ್ಲದು? ಬಿಗಿಯಾದ ಶಿಸ್ತನ್ನು ಹೇರುವುದೆಂದರೆ, ಪ್ರತಿಯೊಬ್ಬ ಕಾಂಗ್ರೆಸ್ಸಿನೂ ಸಾರ್ವಜನಿಕ ಕಾರ್ಯಗಳನ್ನು ಸತತವಾಗಿ ಮಾಡಬೇಕೆಂದು ವಿಧಿಸುವುದೆಂದರೆ ಕಾಂಗ್ರೆಸ್ಸಿಗೂ ಕಮ್ಯುನಿಸ್ಟರಿಗೂ ಏನು ಅಂತರ ಉಳಿದಂತಾಯಿತು? ಅರ್ಧ ಶತಮಾನ ಕಾಲ ಅಶಿಸ್ತಿನಿಂದಲೇ ಬೆಳೆದು ಗಟ್ಟಿಯಾಗಿಲ್ಲವೇ ಈ ಸಂಸ್ಥೆ? ಈಗೇಕೆ ಶಿಸ್ತು? ಎಸ್.ಕೆ. ಪಾಟೀಲರು ತಮ್ಮ ಶತ್ರುವಿನ ಆಯುಧಗಳಿಂದಲೇ ಅವನೊಡನೆ ಹೋರಾಡಲು ಸಿದ್ಧರಿರುವ ಸಂದರ್ಭಸಾಧಕರು. ಆದರೆ ನಾವು ವೀರ ರಜಪೂತರು ನಾವು ಮ್ಲೇಚ್ಛ ಶತ್ರುಗಳ ಅಬ್ರಹ್ಮಣ್ಯ ಆಯುಧಗಳನ್ನು ಎಂದೂ ಕೋಲಿನಿಂದ ಕೂಡ ಮುಟ್ಟಲಾರೆವು. ಆದ್ದರಿಂದ ಬಡಪಾಟೀಲ ವೈದ್ಯರ ಸೂಚನೆಗಳು ಗರ್ಭದಲ್ಲೇ ಸತ್ತು ಹೋದವು.

* * *

ಅಂದಿನಿಂದ ಇಂದಿನವರೆಗೆ ವೈತರಣೀನದಿಯಲ್ಲಿ ಎಷ್ಟೋ ನೀರು ಹರಿದು ಹೋಗಿದೆ. ಮುಂಬಯಿಯ ಸಂಯುಕ್ತ ಮಹಾರಾಷ್ಟ್ರ ಚಳವಳಿ ಪಾಟೀಲರನ್ನು ಮುಂಬಯಿ ನಗರದ ಅನಭಿಷಿಕ್ತ ರಾಜಪದದಿಂದ ಕೊಚ್ಚಿಕೊಂಡು ಹೋಗಿ ದಿಲ್ಲಿಯಲ್ಲಿ ಮಂತ್ರಿಪದದ ಮಳಲು

ದಿಬ್ಬದ ಮೇಲೆ ಚೆಲ್ಲಿ ಕೊಟ್ಟಿದೆ. ಈ ನಡುವೆ ಪಾಟೀಲ ವೈದ್ಯರು ರೋಗಿಯ ನಾಡಿಯನ್ನು ಇನ್ನೊಮ್ಮೆ ಹಿಡಿದು ನೋಡಿದ್ದಾರೆ. ನಾಡಿಯ ಗತಿ ಅವರಿಗೇನೂ ಮೆಚ್ಚಿಕೆಯಾಗಲಿಲ್ಲ. ನಿಜವಾಗಿ ಅದು ೧೯ ಳಳರಲ್ಲಿದ್ದಷ್ಟೂ ಚೆನ್ನಾಗಿಲ್ಲವೆಂದು ಅವರಿಗನಿಸಿದೆ. ಅವರೀಗ ತಮ್ಮ ಅಭಿಪ್ರಾಯವನ್ನು ಪುನರಪಿ ಪ್ರದರ್ಶಿಸಿದ್ದಾರೆ. ಈಗಿನ ಅವರ ನಿದಾನ ಹೇಳುತ್ತದೆ: ರೋಗಿಗೆ ತಲೆ ಬಹಳ ದೊಡ್ಡದಾಗಿದೆ, ಹೃದಯ ಬಹಳ ಸಣ್ಣದಾಗಿದೆ, ಎಂದು. ಕಾಂಗ್ರೆಸ್ಸಿನಲ್ಲಿದ್ದ ಬುದ್ಧಿವಂತರೆಲ್ಲ ಹೋಗಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್ ಸಂಸ್ಥೆಯ ನಾಯಕತ್ವ ಹೆಡ್ಡರ ಮತ್ತು ದುಯ್ಯಂ ಪ್ರತಿಯ ಜನರ ಕೈಯಲ್ಲಿದೆ. ಪಾಟೀಲರು ಇದಕ್ಕೆ ಅತ್ಯಂತ ಸರಳವಾದ ಚಿಕಿತ್ಸೆಯನ್ನೂ ಹೇಳಿದ್ದಾರೆ. ಮಂತ್ರಿಪದಗಳಲ್ಲಿರುವ ಬುದ್ಧಿವಂತರಲ್ಲಿ ಅರ್ಧದಷ್ಟು ಜನರಾದರೂ ಇಳಿದುಬಂದು ಕಾಂಗ್ರೆಸ್ ಸಂಸ್ಥೆಗಳ ನಾಯಕತ್ವ ವಹಿಸಬೇಕು.

* * *

ಪಾಟೀಲರ ನಿದಾನ ಸರಿಯಾಗಿದ್ದರೆ ಮತ್ತು ಅವರು ಹೇಳುವಂತೆ ಮಂತ್ರಿಪದಗಳಲ್ಲಿ ಇಷ್ಟೆಲ್ಲ ಬುದ್ಧಿವಂತರು ಇರುವುದೇ ನಿಜವಾದರೆ ಸರಕಾರ ಇಷ್ಟೇಕೆ ಅಸಮರ್ಥವಾಗಿ ಸಾಗಿದೆ? ಎಂದೊಂದು ಪತ್ರಿಕೆಯ ಸವಾಲು. ಇದು ಹೆಡ್ಡತನದ ಸವಾಲೆಂದು ಹೇಳಬೇಕು. ಹೆಚ್ಚು ಜನ ಬುದ್ಧಿವಂತರಿದ್ದುದರಿಂದಲೇ ಸರಕಾರಗಳು ಇಷ್ಟು ಕೆಟ್ಟಿವೆಯೆಂದು ಲಾಂಗೂಲಾ ಚಾರ್ಯರು ಹೇಳುತ್ತಾರೆ. ಮಾನವೀರಾಜಕಾರಣದ ಗಣಿತ ನಿಯಮಗಳು ವ್ಯವಹಾರಿ ಗಣಿತದ ನಿಯಮಗಳಂತಿಲ್ಲ. ಇಬ್ಬರು ಬುದ್ಧಿವಂತರು ಒತ್ತಟ್ಟಿಗೆ ಸೇರಿದರೆ ಅದರಿಂದಾಗುವ ಕೆಲಸವು ಇಬ್ಬರು ಹೆಡ್ಡರು ಸೇರಿ ಮಾಡುವುದಕ್ಕಿಂತ ಕಡಿಮೆಯಾಗಿರುತ್ತದೆ ಎಂಬುದು ಈ ಗಣಿತಶಾಸ್ತ್ರದ ನಿಯಮ. ರಾವಣ ಏಕೆ ಸೋತ ಎನ್ನುತ್ತೀರಿ? ರಾಮ ಶೂರ, ಬುದ್ಧಿವಂತ ಆಗಿದ್ದುದರಿಂದ ಎನ್ನುತ್ತೀರಾ? ಅಲ್ಲ, ರಾವಣನಿಗೆ ಹತ್ತು ತಲೆಗಳಿದ್ದವು. ಅದೇ ಅವನಿಗೆ ಮುಳುವಾಯಿತು. ಆ ಹತ್ತು ತಲೆಗಳೆಲ್ಲವೂ ಬುದ್ಧಿಶಾಲಿಗಳಾಗಿದ್ದುದು ಅದಕ್ಕಿಂತಲೂ ದೊಡ್ಡ ವಿಪತ್ತಾಯಿತು. ರಾಮನ ಕಪಿ ಸೈನ್ಯವನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಆ ಹತ್ತು ತಲೆಗಳಲ್ಲಿ ಒಮ್ಮತವಾಗಲಿಲ್ಲ. ಪಾಕಿಸ್ತಾನದ ಪಾರ್ಲಿಮೆಂಟಿನ ಹಾಗೆ ಅನ್ನಿಸಬೇಕಾದರೆ ಅವೆಲ್ಲ ಒಮ್ಮತಕ್ಕೆ ಬರುವಷ್ಟರೊಳಗೆ ಎಲ್ಲವೂ ನೆಲದ ಮೇಲೆ ಉರುಳಿದ್ದವು.

* * *

ಲಾಂಗೂಲಾಚಾರ್ಯರನ್ನು ಕೇಳಿದರೆ ಎಸ್.ಕೆ. ಪಾಟೀಲರ ಈ ಸೂಚನೆ ಅತ್ಯಂತ ಗ್ರಾಹ್ಯವಾಗಿದೆ. ಆದರೆ ಅದು ಸ್ವೀಕೃತವಾಗುವುದೆಂಬ ಆಶೆ ಅಥವಾ ಅಂಜಿಕೆ ಮಾತ್ರ ಅವರಿಗಿಲ್ಲ. ಮಂತ್ರಿಪದವನ್ನು ಬಿಡಬೇಕಾದ ಆ ಅರ್ಧಜನರನ್ನು ಆರಿಸುವುದು ಅಸಾಧ್ಯವೇ ಸೈ. ಯಾವ ಮಂತ್ರಿಯೂ ತಾನು ಬುದ್ಧಿಶಾಲಿಯೆಂದಾಗಲಿ ಪ್ರಥಮ ವರ್ಗದ ನಾಯಕನೆಂದಾಗಲಿ ಒಪ್ಪಲಾರ. ಮುರಾರ್ಜಿ ತಾವು ಬುದ್ಧಿವಂತರೆಂದು ಒಪ್ಪುವರೆ? ಲಾಲಬಹಾದೂರಶಾಸ್ತ್ರಿಗಳು

ಒಪ್ಪುವರೆ? "ಎಸ್.ಕೆ. ಪಾಟೀಲರೇ ಬುದ್ಧಿವಂತರು. ನಾನು ಹೆಡ್ಡ, ಅದಕ್ಕಾಗಿಯೆ ೧೯೩೮ ರಿಂದಲೂ ಒಂದಲ್ಲ ಒಂದು ಮಂತ್ರಿಪದದಲ್ಲಿ ಇದ್ದೇನೆ" ಎಂದು ಮುರಾರ್ಜಿ ಹೇಳುವರು. ಎಸ್.ಕೆ. ಪಾಟೀಲರು, "ರಾಮರಾಮಾ, ಮುರಾರ್ಜಿ ಭಾಯಿಗಿಂತ ನಾನು ಬುದ್ಧಿವಂತನೇ? ಇದನ್ನು ನಾನು ಕೇಳಲಾರೆ" ಎಂದು ಕಿವಿ ಮುಚ್ಚಿಕೊಳ್ಳುವರು. ಸಭ್ಯಗೃಹಸ್ಥರ ಬಾಯಿಯಿಂದ ತಾವು ಬುದ್ಧಿವಂತರು ಎಂಬುದಾದರೂ ಹೇಗೆ ಬಂದೀತು? ಸದೋಬಾ ಪಾಟೀಲರೇನೋ ತಾವು ಮಂತ್ರಿಪದದಿಂದ ಇಳಿದು ಹೋಗಲು ಸಿದ್ಧರಿದ್ದಾರೆ. ಇದು ಅಷ್ಟು ವಿವೇಕವಲ್ಲ. ಇದರಿಂದ ಅವರು ಬುದ್ಧಿವಂತರೆಂದು ಅವರೇ ಹೇಳಿದಂತಾಗುತ್ತದೆ. ಅವರ ಶತ್ರುಗಳು ಈ ಬಗ್ಗೆ ಕೂಗೆಬ್ಬಿಸದಿರರು. ಇತ್ತ ಅಸಂಖ್ಯ ಕಾಂಗ್ರೆಸ್ ಸಮಿತಿಗಳ ನಾಯಕರು ತಮ್ಮ ಹೆಡ್ಡತನದ ಬಗ್ಗೆ ನೂರಾರು ಸರ್ಟಿಫಿಕೇಟುಗಳನ್ನು ಸಾದರಪಡಿಸಿ ನಾವು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗುವಷ್ಟು ದಡ್ಡರಲ್ಲದಿದ್ದರೂ ಸ್ಟೇಟ್ ಮಂತ್ರಿಗಳಾಗುವಷ್ಟಾದರೂ ದಡ್ಡರು ಖಂಡಿತ ಇದ್ದೇವೆ ಎಂದು ಕೂಗತೊಡಗುವರು. ಸದೋಬಾ ಪಾಟೀಲರು ಈ ಸಮಸ್ಯೆಯನ್ನು ಹೇಗೆ ಬಿಡಿಸುವರು?

❑

# ಬಿರುದಿಲ್ಲದ ಭಾರತ

**ಗ**ಂಟೆಕಟ್ಟಿದರೆ ಮಾತ್ರ ಆನೆಯೇ? ಎಂದು ಕೇಳಿದ ಎಬಡ ಆನೆಗೆ ಗಂಟೆ ಕಟ್ಟುವುದರ ನಿಜ ಉದ್ದೇಶವನ್ನು ತಿಳಿಯಲೇ ಇಲ್ಲ. ಆದರೆ ಬೆಕ್ಕಿಗೆ ಗಂಟೆ ಕಟ್ಟಬೇಕೆಂದು ಹವಣಿಸಿದ ಇಲಿಗಳು ಈ ಯುಕ್ತಿಯ ಮರ್ಮವನ್ನು ಕಂಡುಕೊಂಡಿದ್ದವು. ಆನೆಗೆ ಗಂಟೆ ಕಟ್ಟುವ ಸಂಪ್ರದಾಯವನ್ನು ಪ್ರಾರಂಭಿಸಿದ ಹಿಕ್ಮತಿವಂತನು ಮೊದಲು ಗಂಟೆ ಕಟ್ಟಿಕೊಳ್ಳುವುದೊಂದು ಗೌರವವೆಂಬ ಭಾವನೆಯನ್ನು ಆನೆಯಲ್ಲಿ ಹುಟ್ಟಿಸಿದಂತೆ ಬೆಕ್ಕಿನಲ್ಲಿಯೂ ಹುಟ್ಟಿಸುವುದು ಇಲಿಗಳಿಗೆ ಶಕ್ಯವಾಗಿದ್ದರೆ ಬೆಕ್ಕೂ ಘಂಟಾಲಂಕೃತವಾಗುತ್ತಿತ್ತೋ ಏನೊ. ಏನೇ ಇರಲಿ, ಇಂದಿನ ಸಮತಾವಾದದ ಯುಗದಲ್ಲಿ ಆನೆಗೆ ಮಾತ್ರ ಗಂಟೆ ಏಕೆ? ಎಂಬ ಹೆಡ್ಡು ಪ್ರಶ್ನೆ ಎಲ್ಲೆಲ್ಲಿಯೂ ಎದ್ದು ಆನೆಯ ಗಂಟೆಯನ್ನು ತೆಗೆಸಿ ಅನರ್ಥ ಮಾಡುತ್ತದೆ. ಬುದ್ಧಿವಂತರಾದ ಬ್ರಿಟಿಷರು ಪಾರ್ಲಿಮೆಂಟ್ ಸದಸ್ಯರಿಗೆ Honourable—"ಮಾನ್ಯ" ಎಂಬ ಬಿರುದನ್ನು ಈ ದೃಷ್ಟಿಯಿಂದಲೇ ಕೊಟ್ಟಿದ್ದಾರೆಂದು ಲಾಂಗೂಲಾಚಾರ್ಯರ ದೃಢವಿಶ್ವಾಸ. ಪ್ರಜಾರಾಜ್ಯದ ಮತ್ತೇರಿದ ಸರಕಾರ ಈಗ ಈ ಬಿರುದನ್ನು ರದ್ದುಗೊಳಿಸಿಬಿಟ್ಟಿದೆ. ಇನ್ನು ಮುಂದೆ ನಮ್ಮ ಸಂಸತ್ ಸದಸ್ಯರು ಆನರೇಬಲ್ ಎಂ.ಪಿ.—ಅರ್ಥಾತ್ ಮಾನ್ಯ ಇಲ್ಲವೇ ನಾಮದಾರ ಸದಸ್ಯರಲ್ಲ. ಕೇವಲ ಶ್ರೀಯುತರು—ಶ್ರೀಯುತ ದಫೇದಾರ, ಶ್ರೀಯುತ ಪಟ್ಟೇವಾಲಾರಂತೆ ಅವರು ಶ್ರೀಯುತ ಎಂ.ಪಿ.ಗಳು.

* * *

ಇ-ನಾಮದಾರರನ್ನೇ ನಿಕಾಲೆ ಮಾಡಿದ ಮೇಲೆ ನಾಮದಾರರೇಕೆ? ಎಂಬ ಪ್ರಶ್ನೆಯಲ್ಲ ಅದು. ಆನೆಯಂತೆ ಅಪಾಯಕರವಾದ ರಾಜಕಾರಣಿ ಪ್ರಾಣಿಗೆ ಪಾರ್ಲಿಮೆಂಟ್ ಸದಸ್ಯತ್ವವೆಂಬ ಮದ ಬಂದಾಗ ನಾಮದಾರತ್ವದ ಗಂಟೆ ಕಟ್ಟದೆ ಬೀದಿಯಲ್ಲಿ ಬಿಡುವುದು ಎಷ್ಟು ಜಾಣತನ ಎಂಬುದನ್ನು ನಾವು ವಿಚಾರಿಸಬೇಕಾಗಿದೆ. ಮೇಲಾಗಿ ಇದರಲ್ಲಿ ಇನ್ನೊಂದು ಮಹತ್ವದ ಮನಃಶಾಸ್ತ್ರೀಯ ಅಂಶವಿದೆ. ಕಳ್ಳನಾದರೂ ತನ್ನ ಪ್ರಾಮಾಣಿಕತೆಯ ಪರೀಕ್ಷೆಯಾಗುವ ಸಂದರ್ಭದಲ್ಲಿ ಸಂಭಾವಿತನಾಗಿಯೇ ನಡೆದುಕೊಳ್ಳುವನಂತೆ. ರಾಜಕಾರಣವು ಲಫಂಗನ ಕೊನೆಯ ಆಶ್ರಯ ಎಂದು ಹೇಳಿದವನು ಅನುಭವದಿಂದಲೇ ಹೇಳಿದ್ದಾನೆ. ಅಂಥವನ ಕೈಯಲ್ಲಿ ನಮ್ಮ ಹಣೆಬರಹವನ್ನು ಕೊಟ್ಟು ನಮ್ಮ ಪ್ರತಿನಿಧಿಯಾಗಿ ಕಳಿಸುತ್ತೇವೆ. ಅವನನ್ನು ನಾವು "ಮಾನ್ಯ", "ಸನ್ಮಾನ್ಯ", "ನಾಮದಾರ" ಎಂಬ ನಂಬಿಕೆಯಿಂದ

ಕಳಿಸಿದ್ದೇವೆಂದು ಗಳಿಗೆ ಗಳಿಗೆಗೆ ನೆನಪು ಕೊಡುತ್ತಿದ್ದರೆ ಮಾತ್ರ ಅವನು ನಮ್ಮ ನಂಬಿಕೆಯನ್ನು ಕಾಯ್ದುಕೊಳ್ಳಬಹುದು. ಇಲ್ಲದಿದ್ದರೆ ರಾಜಕಾರಣವನ್ನು ಆಶ್ರಯಿಸುವಾಗ ಏನಿದ್ದನೋ ಅದೇ ಆಗಿ ವರ್ತಿಸುವ ಅಂಜಿಕೆ ತಪ್ಪಿದ್ದಲ್ಲ.

* * *

ಮಾನ್ಯ ಎಂಬುದರಲ್ಲಿ ಏನೂ ಅರ್ಥವಿಲ್ಲೆಂದು ನೀವು ವಾದಿಸಬಹುದು. ಸಭೆಯಲ್ಲಿ ಪರಸ್ಪರ ಟೀಕಾಟೂಕೆಗಳು ನಡೆದಾಗ "ಮಾನ್ಯ ಸದಸ್ಯರ ಪಕ್ಷದವರಲ್ಲಿ ಏನೂ ಮಾನಮರ್ಯಾದೆ ಉಳಿದಂತೆ ಕಾಣುವುದಿಲ್ಲ" ಎಂಬಿತ್ಯಾದಿಯಾಗಿ ಅಸಂಬದ್ಧ ಮಾತುಗಳು ಹೊರಟು ಹಗರಣವಾಗುತ್ತದೇನೋ ನಿಜ. ಆದರೆ ಶ್ರೀಯುತ ಎಂದರೇನು ಭಾಗ್ಯ? ಕೈಯಲ್ಲಿ ಕಾಸಿಲ್ಲದಿದ್ದರೂ ಅವನು ಶ್ರೀಯುತನೇ ಅನಿಸುವುದಿಲ್ಲವೇ? ಶ್ರೀಮತಿಯಲ್ಲಿ ಶ್ರೀಯಾಗಲಿ ಮತಿಯಾಗಲಿ ಇಲ್ಲದಿರುವ ಸಂಭವವೇ ಹೆಚ್ಚು. ನ್ಯಾಯಸ್ಥಾನದಲ್ಲಿ ವಕೀಲರು ಪರಸ್ಪರರನ್ನು Learned Brother—ವಿದ್ವಾಂಸರಾದ ಬಂಧುಗಳು ಎನ್ನುತ್ತಾರೆ. ವಾದ ನಡೆದಾಗ "ನನ್ನ ವಿದ್ವಾನ್ ಬಂಧುಗಳು ಈ ಕಾಯದೆಯ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ" ಎನ್ನುವರು! "ಖಟ್ಲೆ ವಿಚಾರಣೆ ಮಾಡಿದ ವಿದ್ವಾನ್ ನ್ಯಾಯಾಧೀಶರು ಕಾಯದೆಯ ಅಪಾರ್ಥ ಮಾಡಿದ್ದಾರೆ" ಎಂದು ಹೈಕೋರ್ಟ ನ್ಯಾಯಮೂರ್ತಿಗಳು ಕೆಳ ಕೋರ್ಟಿನವರನ್ನು ಖಂಡಿಸುತ್ತಾರೆ. ಹೀಜ್ ಹೈನೆಸ್ ಮಹಾರಾಜರನ್ನು ಕೆಳಗೆಳೆದು ಹಾಕಿದ ಮೇಲೂ ಅವರನ್ನು ಹೈನೆಸ್ ಎಂದೇ ಕರೆಯುತ್ತೇವೆ. ಬಿರುದುಗಳಿಗೆಲ್ಲ ಅರ್ಥ ಹಚ್ಚಹೋದರೆ ಜಗತ್ತಿನಲ್ಲಿ ಸ್ವಾರಸ್ಯವೇ ಉಳಿಯಲಿಕ್ಕಿಲ್ಲ. ನಮ್ಮ ವಿಶ್ವವಿದ್ಯಾಲಯ ಬಿರುದುಗಳನ್ನೇ ನೋಡಿರಿ. ಏಳುಮಕ್ಕಳ ತಂದೆಗೆ ಬೆಚಲರ್ ಆಫ್ ಆರ್ಟ್ಸ—ಬಿ.ಎ—ಅಂದರೆ ಕಲಾಬ್ರಹ್ಮಚಾರಿಯೆಂದು ಬಿರುದು ಕೊಡುತ್ತಾರೆ. ನಮ್ಮ ಎಂ.ಪಿ.ಗಳ ಆನರೇಬಲ್‌ತನ—ಮಾನ್ಯತೆಯನ್ನು ಮಾತ್ರ ಕಸಿದುಕೊಳ್ಳಲು ಅವರೇನು ಅಪರಾಧ ಮಾಡಿದರು?

* * *

ಬಿರುದುಗಳಿಂದ ಅಸಮಾನ ಭಾವನೆ ಬೆಳೆಯುತ್ತದೆ ಎನ್ನುವವರಿದ್ದಾರೆ. ಅಮೇರಿಕನ್ನರು ಸ್ವಾತಂತ್ರ್ಯ ಪಡೆದೊಡನೆ ಎಲ್ಲ ಬಿರುದುಗಳನ್ನು ರದ್ದುಮಾಡಿ ಎಲ್ಲರೂ "ಮಿಸ್ಟರ"ರಾದರು. ಆದರೆ ಬಿಳಿಯರು ಶ್ರೇಷ್ಠ ಎಂಬ ಭಾವನೆ ಅಳಿಯಲಿಲ್ಲ. ಫ್ರೆಂಚ್ ಕ್ರಾಂತಿಯ ನಂತರ ಎಲ್ಲರೂ ನಾಗರಿಕರಾದರೂ ಅನಾಗರಿಕ ರೀತಿಯಲ್ಲಿ ಒಬ್ಬರನ್ನೊಬ್ಬರು ಶಿರಶ್ಛೇದಕ ಯಂತ್ರಕ್ಕೆ ಬಲಿಕೊಟ್ಟರು. ರಶಿಯನ್ ಕ್ರಾಂತಿಯ ನಂತರ ಎಲ್ಲರೂ ಕಾಮ್ರೇಡ್—"ಭಾಯಿ"ಗಳಾದರು. ಆದರೆ ಭಾಯಿ ಭಾಯಿಗಳೊಳಗೆ ತಿಕ್ಕಾಟವಾಗಿ ಬಡಾಭಾಯಿ ಛೋಟಾ ಭಾಯಿಯನ್ನು ನುಂಗುವುದೇನೂ ತಪ್ಪಲಿಲ್ಲ. "ಭಾಯಿ ದುರ್ದೈವೋಘರು ಪಕ್ಷ ದ್ರೋಹ ಮಾಡಿದ್ದರಿಂದ ಅವರಿಗೆ ಮರಣದಂಡನೆಯೇ ಪ್ರಾಯಶ್ಚಿತ್ತ" ಎಂದು ನಿರ್ದಾಕ್ಷಿಣ್ಯವಾಗಿಯೇ ಸಾರಲಾಗುತ್ತದೆ.

* * *

ತಲೆಗೊಂದು ಮತದ ಈ ರಾಜ್ಯದಲ್ಲಿ ವೈಭವದ ಚಿಹ್ನೆಗಳೆಲ್ಲ ಮಾಯವಾಗುತ್ತಿರುವುದು ಲಾಂಗೂಲಾಚಾರ್ಯರಿಗೆ ಅತ್ಯಂತ ಖೇದವನ್ನುಂಟುಮಾಡಿದೆ. ಬಿರುದು ಬಾವಲಿಗಳು ಭಾರತದ ಸಂಸ್ಕೃತಿಗೆ ಪ್ರತಿಕೂಲವಾಗಿಲ್ಲವೆಂದು ಹಿಂದೊಮ್ಮೆ ಹಿಂದೀ ಕವಿ ಪಂ. ಬಾಲಕೃಷ್ಣ ಶರ್ಮರು ಸಂಸತ್ತಿನಲ್ಲಿ ವಾದಿಸಿದ್ದರು. ಮದ್ರಾಸಿನಲ್ಲಿ ಮಹಾರಾಜ ರಾಜಶ್ರೀ ದರಿದ್ರ ನಾರಾಯಣರಾವ್ ಅವರ್ಗಳ್ ಎಂದು ಈಗ ಯಾರೂ ವಿಳಾಸ ಬರೆಯುವುದಿಲ್ಲ. ಬ್ರಹ್ಮಶ್ರೀಗಳ ಇತಿಶ್ರೀಯಾಗಿದೆ. ಮದ್ವಶಾಸ್ತ್ರ ಸಂಪನ್ನ, ವೇದ ಮೂರ್ತಿಗಳು ಕಾಲಗರ್ಭದಲ್ಲಿ ಅಡಗಿದ್ದಾರೆ. ಹಸು ಹೊಡೆದು ಹುಲಿಗೆ ಹಾಕಿ ಇನ್ನು ಯಾರೂ ಧರ್ಮರತ್ನಾಕರರಾಗಲಾರರು. ರಾವ್ ಸಾಹೇಬ, ರಾವ್ ಬಹಾದೂರ, ದಿವಾನ ಸಾಹೇಬ, ದಿವಾನ ಬಹೂದೂರ, ಖಾನ ಸಾಹೇಬ, ಖಾನ ಬಹಾದೂರ ಎಲ್ಲವೂ ಬಹುದೂರ ಹೋಗಿಬಿಟ್ಟವು. ಅನ್ನಕ್ಕಂತೂ ಬರಗಾಲ ಬಂದಿದೆ. ಒಳ್ಳೇ ಮಾತಿಗೂ ಈ ದೇಶದಲ್ಲಿ ಬರಗಾಲ ಬಂದುಬಿಟ್ಟಿತೆ?

❑

# ಒಂದು ಪ್ರತ್ಯೇಕ ಸಂದರ್ಶನ

"ನಮಸ್ಕಾರ!" ಎಂದೆ ನಾನು.

"ನಮಸ್ಕಾರ!" ಎಂದರವರು. ಆ ಮೇಲೆ ಹುಬ್ಬುಗಂಟಿಕ್ಕಿದರು. "ಯಾರಯ್ಯ ನೀನು? ಬರುವುದಕ್ಕೆ ನಿನಗೆ ಯಾರು ಅನುಮತಿ ಕೊಟ್ಟರು?" ಎಂದರು.

"ನಾನು... ನಾನು ಲಾಂಗೂಲಾಚಾರ್ಯ ಅಂತ", ಎಂದು ಆತ್ಮ ಪರಿಚಯ ಮಾಡಿಕೊಟ್ಟೆ.

"ಲಾಂಗೂಲಾಚಾರ್ಯ? ರಾಜಗೋಪಾಲಾಚಾರ್ಯ ಏನಾದರೂ ಆಗಬೇಕೋ?"

"ಇಲ್ಲ ತಾಯಿ ಆ ಆಚಾರ್ಯರು ಜಾಣರ ಚಕ್ರವರ್ತಿ ನನಗೆ ಜಾಣರೆಂದರೆ ಆಗದು. ನಾನು ಸ್ವತಃ ಜಾಣನಲ್ಲ—ಜಾಣತನದಿಂದ ಬಹುದೂರ."

"ಹಾಗೇ ಕಾಣುತ್ತದೆ. ಇಲ್ಲದಿದ್ದರೆ ಹೀಗೆ ಹೇಳದೆ ಕೇಳದೆ ಇಲ್ಲಿ ಪ್ರವೇಶಮಾಡುತ್ತಿರಲಿಲ್ಲ" ಅವರು ಮತ್ತೆ ಹುಬ್ಬುಗಂಟಿಕ್ಕಿದರು. "ಇಲ್ಲಿ ಹೇಗೆ ಹೊಕ್ಕೆ?" ಎಂದು ದಬಾಯಿಸಿದರು.

"ನೋಡಿ, ಕಾವಲಿನವರನ್ನು ದಾಟಿ ಅಕ್ರಮಪ್ರವೇಶ ಮಾಡುವುದರಲ್ಲಿ ನಾನು ಪ್ರವೀಣ. ಆದರೆ ನಾನೇನೂ ನಿಮ್ಮ ಕೊಲೆ ಮಾಡುವುದಕ್ಕೆ ಬಂದವನಲ್ಲ. ನೀವು ಹೊಸದಾಗಿ ಕರ್ನಾಟಕಕ್ಕೆ ಬಂದಿದ್ದೀರಿ. ಒಂದು ಇಂಟರ್ವ್ಯೂ ತೆಗೆದುಕೊಳ್ಳೋಣ ಅಂತ ಹೊಕ್ಕೆ ಅಷ್ಟೆ."

"ಇಂಟರ್ವ್ಯೂ? ನಾನು ಈ ದೇಶಿ ಪತ್ರಿಕಾಕರ್ತರಿಗೆ ವಿಶೇಷ ಇಂಟರ್ವ್ಯೂ ಕೊಡೋದಿಲ್ಲ ಅಂತ ನಿನಗೆ ಗೊತ್ತಿಲ್ಲವೇ?"

"ಗೊತ್ತು, ಆದರೆ ನಾನು ಕೂಡ ನಿಮ್ಮ ಹಾಗೆಯೆ ದೇಶಿ ಅಲ್ಲ. ನನಗೂ ಈ ದೇಶದ ಮೂರ್ಖ ಜನರನ್ನು ಕಂಡರಾಗುವುದಿಲ್ಲ. ಆದರೆ ನಿಮ್ಮ ಹಾಗೆಯೆ ನಾನೂ ಇಲ್ಲಿ ಹುಟ್ಟಿಸಿಕ್ಕಿಕೊಂಡಿದ್ದೇನೆ. ಐಕ್ಯದಲ್ಲಿ ವೈವಿಧ್ಯ ಅಂತ ಈ ದೇಶದವರು ಹಗಲೆಲ್ಲಾ ಹೇಳುವ ಹಾಗೆ ನಾನು ದೇಶಿಯಲ್ಲಿ ಪರದೇಶಿ."

"ತಮಾಷೆ ಮನುಷ್ಯನಾಗಿ ಕಾಣುತ್ತೀ ನಿನ್ನನ್ನು ಒದ್ದು ಹೊರಗೆ ಹಾಕಿಸುವ ಮೊದಲು ಬೇಗ ಬೇಗ ನಿನ್ನ ಪ್ರಶ್ನೆಗಳನ್ನು ಬೊಗಳು."

"ನೀವು ಈ ರಾಜ್ಯಕ್ಕೆ ಬಂದಿರುವುದು ವೀರೇಂದ್ರ ಪಾಟೀಲರ ಮಂತ್ರಿಮಂಡಲವನ್ನು ಉರುಳಿಸುವುದಕ್ಕೆ ಅನ್ನುವುದು ನಿಜವೆ?"

“ಸುಳ್ಳು, ನಾನು ನನ್ನ ಹೊಸಮಿತ್ರರನ್ನು ಕಂಡು ಅವರ ಕ್ಷೇಮ ಸಮಾಚಾರ ತಿಳಿಯುವುದಕ್ಕೆ ಇಲ್ಲಿ ಬಂದಿದ್ದೇನೆ. ಇಲ್ಲಿ ಮಳೆಗಾಲ ಬಹಳ ಚೆನ್ನಾಗಿರುತ್ತದೆ ಅಂತ ಕೇಳಿದ್ದೇನೆ. ಆದರೆ ನಾನು ಬಂದದ್ದರಿಂದಲೇ ವೀರೇಂದ್ರ ಪಾಟೀಲರ ಗಾಡಿ ಬುಡಮೇಲಾಗುವಂತಿದ್ದರೆ ಅದರ ಗಾಲಿಗಳು ಸರಿಯಾಗಿಲ್ಲವೆಂದು ಅರ್ಥವಾಗುತ್ತದೆ ಹೊರತು ನಾನು ಅದನ್ನು ಉರುಳಿಸಿದೆ ಎಂದಾಗುತ್ತದೆಯೆ?”

“ನೀವು ವೀರೇಂದ್ರ ಪಾಟೀಲರ ಹತ್ತಿರ ವಿಚಾರ ಮಾಡಿಕೊಳ್ಳದೆ ಇಲ್ಲಿಯ ಸಂಚಾರ ಕಾರ್ಯಕ್ರಮ ವ್ಯವಸ್ಥೆ ಮಾಡಿಕೊಂಡದ್ದು ತಪ್ಪಲ್ಲವೆ?”

“ನೋಡಿ, ನಾನು ಈ ಸ್ಥಳಕ್ಕೆ ಬರುವುದನ್ನು ನೋಡಿಯೇ ನಾನು ಅವರನ್ನು ಉರುಳಿಸಲಿಕ್ಕೆ ಬಂದಿದ್ದೇನೆ ಅಂತ ಅಪವಾದ ಬಂದಿದೆ. ಇನ್ನು ಅವರ ಹತ್ತಿರ ವಿಚಾರ ಮಾಡಿ, ಅವರ ಸರಕಾರದ ತೀರ ಹತ್ತಿರ ಹೋದರಂತೂ ತೀರಿಯೇಹೋಯಿತು. ನಾನು ಅವರ ಸರಕಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರಿಂದಲೇ ಅವರಿಗೆ ಅಪಾಯವಾಯಿತು ಎಂದು ನಾಳೆ ಯಾರೂ ಹೇಳುವುದು ಬೇಡ.”

“ಕ್ಷಮಿಸಿ, ನೀವು ನನ್ನ ಪ್ರಶ್ನೆಯಿಂದ ಜಾರಿಕೊಳ್ಳಲು ಯತ್ನಿಸುತ್ತಿದ್ದೀರಿ ಹೋಗಲಿ. ನಮ್ಮ ವೀರೇಂದ್ರ ಪಾಟೀಲರ ಬಗ್ಗೆ ನಿಮ್ಮ ಅಭಿಪ್ರಾಯವೇನು?”

“ಹಾಗೆ ನೋಡಿದರೆ ಆತ ಗುಡ್ ಗಾಯ್ ಅಂತಲೇ ಹೇಳಬೇಕು. ನನ್ನ ಸುತ್ತ ಇರುವ ಎಷ್ಟೊ ಜರಿಗಿಂತ ಸಮರ್ಥನೇ ಅಂತಲೂ ಖಾಸಗಿಯಾಗಿ ಒಪ್ಪುತ್ತೇನೆ. ಆದರೆ ಈ ಮ್ಯಾಚಿನಲ್ಲಿ ಅವರು ಎದುರು-ಪಕ್ಷದಲ್ಲಿದ್ದಾರೆ ಮತ್ತು ಎದುರು-ಪಕ್ಷದಲ್ಲಿರುವ ಒಳ್ಳೆಯವನು ಕೆಟ್ಟವನಿಗಿಂತಲೂ ಅಪಾಯಕರ ಅಂತನ್ನುವುದು ರಾಜಕೀಯ ಈಕ್ವೇಶನ್ನಿನ ನಿಯಮ. ನಿಜವಾಗಿ ನನಗೆ ಅವರ ಮೇಲೆ ಸಹಾನುಭೂತಿ ಆನಿಸುತ್ತದೆ. ಅವರು ನನ್ನ ಸಂಗಡ ಏಕೆ ಸೇರಬಾರದು ಅಂತ ನನಗೆ ತಿಳಿಯುವುದಿಲ್ಲ.” ಎಂದು ಅವರು ನಿಟ್ಟುಸಿರು ಬಿಟ್ಟರು.

“ಆದರೆ ನೀವು ಅಧಿಕಾರದಲ್ಲಿ ಉಳಿಯುವ ಸಲುವಾಗಿ ಅನುಸರಿಸಿದ ರೀತಿನೀತಿಗಳು ಅಷ್ಟು ಸಮಂಜಸವಲ್ಲ ಅಂತ ನನಗನಿಸುತ್ತದೆ. ನನ್ನ ಧಾರ್ಷ್ಟ್ಯವನ್ನು ಕ್ಷಮಿಸಿ” ಎಂದೆ ನಾನು.

“ನೋಡು ಮಿ. ಲಾಂಗೂಲ್, ನನ್ನ ಮೇಲೆ ಈಗ ಆರೋಪ ಹೊರಿಸುವವರು ತಾವು ಅಧಿಕಾರಕ್ಕೆ ಬರಲು ಮತ್ತು ಅದನ್ನು ಉಳಿಸಿಕೊಳ್ಳಲು ಮಾಡದೆ ಇರುವ ಯಾವ ಪಾಪವನ್ನು ನಾನು ಮಾಡಿದ್ದೇನೆ ಹೇಳು?”

ನಾನು ಸ್ವಲ್ಪ ಯೋಚಿಸಿದೆ. “ಒಂದು ಲೆಕ್ಕ ದೇಶದ ಜನ ತಿರಸ್ಕಾರದಿಂದ ನೋಡುತ್ತಾರೆಂದು ನಾನೂ ಬಲ್ಲೆ. ಆದರೆ ಸಾರ್ವಜನಿಕ ನೀತಿಯನ್ನು ಪ್ರತ್ಯಕ್ಷವಾಗಿ ಭಂಗಿಸಿದವರನ್ನು ನೀವು ಹತ್ತಿರ ಇಟ್ಟುಕೊಂಡದ್ದು ನನಗೇನೂ ಹಿಡಿಸಲಿಲ್ಲ. ಅದು ನಿಮ್ಮ ಹೆಸರು ಕೆಡಿಸಿದೆ” ಎಂದೆ ನಾನು.

“ನೀನು ಶುದ್ಧ ದಡ್ಡ!” ಎಂದರವರು ನನ್ನನ್ನು ಸ್ವಲ್ಪ ಕರುಣೆಯಿಂದ ನೋಡುತ್ತ,

'ಸಾರ್ವಜನಿಕ ನೀತಿಮತ್ತೆ ಯಾರಿಗೆ ಬೇಕಾಗಿದೆಯೆಂದು ತಿಳಿದಿದ್ದೀ. ಜಗಜೀವನರಾಮರ ವಿಷಯವಲ್ಲವೇ ನೀನು ಹೇಳೋದು? ಅವರ ಟ್ಯಾಕ್ಸ್ ವ್ಯವಹಾರವನ್ನು ಹಿಂದಿನ ಅಧಿವೇಶನದಲ್ಲೇ ನಿನ್ನ ಮೊರಾರ್ಜಿಭಾಯಿ ಪ್ರಕಟಪಡಿಸಿದ್ದರು. ಆದರೆ ನನ್ನ ಪಕ್ಷದವರು ಹೋಗಲಿ. ವಿರೋಧ ಪಕ್ಷದವರಾದರೂ ಆ ವಿಷಯ ಏನಾದರೂ ಕೂಗೆಬ್ಬಿಸಿದರೆ? ಇಲ್ಲ. ಲಾಂಗೂಲ್, ರಾಜಕಾರಣದಲ್ಲಿ ಪ್ರಾಮಾಣಿಕತೆಯಿಂದ ಮಾತ್ರ ಕೆಲಸವಾಗುವುದಿಲ್ಲ. ಅಪ್ರಾಮಾಣಿಕರೊಡನೆ ವ್ಯವಹಾರ ಮಾಡುವುದಿಲ್ಲ ಅಂತಂದರೆ ನೀನು ಮೂಲೆ ಹಿಡಿದು ಕೂದ್ರಬೇಕು. ನಮ್ಮ ದೇಶದಲ್ಲಿ ಸಮಾಜವಾದದ ವಿರುದ್ಧ ಮಾತಾಡುವವನು ಕೋಟಿಗಟ್ಟಳೆ ಸರಕಾರಿ ಹಣ ಮುಳುಗಿಸಿದವನಿಗಿಂತ ಜನ ದ್ವೇಷಕ್ಕೆ ಒಳಗಾಗುತ್ತಾನೆಂದು ನೀನು ಎಣಿಸಿದ್ದೀಯಾ?"

"ಹಾಗೇ ಕಾಣುತ್ತದೆ. ಆದರೆ ಈ ಗಡಿವಿವಾದದಲ್ಲಿ ನೀವು ಮೊದಲಿಂದಲೂ ಕರ್ನಾಟಕಕ್ಕೆ ಅನ್ಯಾಯ ಬಗೆದಿದ್ದೀರಿ ಅಂತ ನಾನು ಹೇಳುತ್ತೇನೆ."

"ಇಲ್ಲಿ ನೋಡು, ನೀವು ಕನ್ನಡ ಜನ ಶುದ್ಧ ಅಪ್ರಯೋಜಕರು. ನಿಮ್ಮ ಕೈಲಿ ಅಧಿಕಾರವಿದ್ದಾಗಲೂ ನೀವು ಏನೂ ಸಾಧಿಸಿಕೊಳ್ಳಲು ಪ್ರಯತ್ನಿಸುವದಿಲ್ಲ. ನಿಮ್ಮ ಗಡಿಗಳಲ್ಲಿ ನೆರೆಯವರು ಬಂದು ನೆಲಸುತ್ತಿದ್ದಾಗ ನೀವೇನು ನಿದ್ದೆ ಮಾಡುತ್ತಿದ್ದಿರಾ? ನಾನು ರಾಜಕೀಯ ತಥ್ಯಗಳನ್ನು ಎದುರಿಸಬೇಕಾಗಿದೆ. ನೀವು ನನ್ನ ಎದುರಾಳಿಗಳ ಬಾಲ ಹಿಡಿದಿದ್ದೀರಿ ಅನ್ನೋದನ್ನೂ ನಾನು ಮರೆಯುವುದಕ್ಕಾಗುವುದಿಲ್ಲ. ನಿಮಗೆ ಕೇಡು ಮಾಡಬೇಕೆಂದು ನನ್ನ ಉದ್ದೇಶವಲ್ಲ. ನಿಮ್ಮನ್ನು ಗಡಿ ವಿಷಯದಲ್ಲಿ ಸ್ವಲ್ಪ ಹೆದರಿಸಿ ಏನಾದರೂ ಪ್ರಯೋಜನ ವಾಗುತ್ತದೋ ನೋಡುತ್ತಿದ್ದೇನೆ. ಆದರೆ ನಿಜವಾಗಿ ಹೇಳುತ್ತೇನೆ. ನಿಮ್ಮ ನಡವಳಿ ನೋಡಿದರೆ ನಿಜವಾಗಿ ನಿಮಗೆ ಬೆಳಗಾವಿಯನ್ನು ಉಳಿಸಿಕೊಳ್ಳುವ ಇಚ್ಛೆ ಉಂಟೇ ಅಂತ ನನಗೆ ಸಂಶಯವಾಗುತ್ತದೆ. ನೀವು ಕನ್ನಡಿಗರು ಸಂಭಾವಿತರೂ ಅಲ್ಲ, ಘಟಿಂಗರೂ ಅಲ್ಲ, ಶುದ್ಧ ಮೂಢರು. ನಿಮ್ಮ ಬೇಳೆ ಎಲ್ಲಿ ಬೇಯುತ್ತದೆ ಅಂತಕೂಡ ನಿಮಗೆ ತಿಳಿಯದು. ನಿಮ್ಮ ಕೆಲಸ ಕೆಟ್ಟಿದ್ದಕ್ಕೆ ದೂರು ಹೊರಿಸಲು ಯಾರಾದರೂ ಸಿಕ್ಕಿದರೆ ನಿಮಗೆ ಸಂತೋಷವಾಗುತ್ತದೆ ಅಷ್ಟೇ—ಈಗ ಮಿ. ಲಾಂಗೂಲ್ ಇಲ್ಲಿಂದ ಎದ್ದು ಹೋಗುತ್ತೀಯಾ ಏನು"—

"ನಮಸ್ಕಾರ ಬರುತ್ತೇನೆ" ಅಂತ ನಾನು ಎಚ್ಚೆತ್ತೆ.

❑

# ಕಾಯದೆ ಮತ್ತು ದೊಡ್ಡವರು

ನೀವು ಹೊತ್ತು ತಪ್ಪಿಸಿ ಅಪರಾತ್ರಿಯಲ್ಲಿ ಮನೆಗೆ ಬಂದು ಗೇಟು ಮುಚ್ಚಿದ್ದು ನೋಡಿ ಉಪಾಯಗಾಣದೆ ಕಂಪೌಂಡಿನ ಗೋಡೆ ಹಾರಿ ಒಳಗೆ ಬರಲು ಯತ್ನಿಸುತ್ತಿದ್ದೀರೆಂದುಕೊಳ್ಳಿ. ಆಗ ನಿಮ್ಮ ನಾಯಿ ತನಗೆ ಹೇಳಿಕೊಟ್ಟಿದ್ದ ಅಪ್ಪಣೆಯನ್ನು ಅಕ್ಷರಶಃ ಲಗಾಯಿಸಿ ನಿಮ್ಮನ್ನೇ ಕಚ್ಚಿತೆಂದುಕೊಳ್ಳಿ. ನೀವು ಆಗ ಏನನ್ನುವಿರಿ? ನಿಮ್ಮ ನಾಯಿಗೆ ಹುಚ್ಚು ಹಿಡಿದಿದೆಯೆಂದು ತೀರ್ಮಾನಿಸಿ ಅದನ್ನು ಗುಂಡಿನ ಬಾಯಿಗೆ ಕೊಡುವಿರೋ, ಇಲ್ಲವೊ? ನಿಜ—ನೀವು ಗೋಡೆಹಾರುವವರನ್ನು ಕಳ್ಳರೆಂದು ಬಗೆದು ತಕ್ಷಣ ಕಡಿಯಬೇಕೆಂದು ಅದಕ್ಕೆ ಕಾಯದೆ ಹಾಕಿಕೊಟ್ಟಿದ್ದಿರಿ. ಈ ನಿಯಮಕ್ಕೆ ನೀವು ಅಪವಾದವನ್ನೇನೂ ಹೇಳಿರಲಿಲ್ಲವೆಂಬುದೂ ನಿಜ. ಆದರೆ ನಾಯಿಗಳಿಗೆ ಕಳ್ಳಾಕಳ್ಳ ಭೇದ ಗೊತ್ತಿಲ್ಲದಿದ್ದರೂ ಕಚ್ಚಾಕಚ್ಚ (ಸ್ಪೃಶ್ಯಾ ಸ್ಪೃಶ್ಯದಂತೆ) ಭೇದವಾದರೂ ಗೊತ್ತಿರಬೇಕೋ ಬೇಡವೋ? ಯಜಮಾನನಿಗೆ ತನ್ನ ಸ್ವಂತ ಮನೆಯ ಗೋಡೆ ಜಿಗಿದು ಒಳಬರಬೇಕೆಂಬ ಹುಮ್ಮಸ ಬಂದರೆ ಅವನಿಗೆ ಹಾಗೆ ಮಾಡಲು ಅವನ ಸ್ವಂತ ಕಾಯದೆಗಳು ಕೂಡ ಅಡ್ಡ ಬರಲಾರವು. ಅವನು ತನ್ನ ಕಾಯದೆಗಳನ್ನು ಯಾಕೆ ಪಾಲಿಸಲಿಲ್ಲೆಂದು ಕೇಳುವ ಹಿಮ್ಮತ್ತು ನಾಯಿಗಳದಲ್ಲ. ಶ್ವಾನಧರ್ಮದ ಆಕಾರವಾದ ಈ ನಿಯಮವನ್ನು ಅರಿತುಕೊಳ್ಳದ ನಾಯಿಗಳು ಯಜಮಾನ ಪ್ರಪಂಚಕ್ಕೆ ಆಪಾಯಕರವಾಗಿವೆ. ನಾಯಿಗಳಿಗೆ ತಮ್ಮ ಸ್ಥಾನ ಗೊತ್ತಿಲ್ಲದಿದ್ದರೆ ಅವುಗಳಿಗೆ ಇನ್ನೊಂದು ಜನ್ಮದಲ್ಲಿ (ಈ ಜನ್ಮದಿಂದ ನೀವು ಅವುಗಳನ್ನು ಮುಕ್ತ ಮಾಡಿರುತ್ತೀರಿ ತಾನೆ?) ಮರೆಯದಂಥ ಪಾಠ ಕಲಿಸುವದು ಯಜಮಾನರ ಕ್ಲೇಶದಾಯಕ ಕರ್ತವ್ಯವಾಗುತ್ತದೆ.

* * *

ಯಾಕೆ ಬಂತೂ ಅಂದರೆ, ನಮ್ಮ ಲೋಕಸಭೆಯ ಉಪಾಧ್ಯಕ್ಷರಾದ ಅನಂತಶಯನ ಅಯ್ಯಂಗಾರರು ನಿಯಮದಂತೆ ಹಳದಿ ಜ್ವರದ ಸರ್ಟಿಫಿಕೇಟು ತೋರಿಸದಿದ್ದುದರಿಂದ ಅವರನ್ನು ಮುಂಬಯಿ ವಿಮಾನ ನಿಲ್ದಾಣದ ಅಧಿಕಾರಿಗಳು ಒಂಭತ್ತು ದಿನ ಕೊರಂಟೈನಿನಲ್ಲಿ ಹಾಕಿದ್ದಾರಂತೆ. ವಿದೇಶಕ್ಕೆ ಹೋಗಿದ್ದ ಅನಂತಶಯನರು ತ್ರಿನಿದಾದದಿಂದ ಹಾಯ್ದು ಬಂದರು. ಅಲ್ಲಿ ಹಳದಿ ಜ್ವರದ ಪಿಡುಗು ಇದೆಯಂತೆ. ಅಯ್ಯಂಗಾರರು ಹಳದಿ ಜ್ವರದ ಸರ್ಟಿಫಿಕೇಟನ್ನು ಯೋಗ್ಯ ಅಧಿಕಾರಿಗಳಿಂದ ತರಲು ಮರೆತಿದ್ದರಂತೆ. ಇದೆಲ್ಲ ನಿಜವಿರಬಹುದು. ಅಂದ ಮಾತ್ರಕ್ಕೆ ಅವರನ್ನು ಒಂಭತ್ತು ದಿನ ಕೊರಂಟೈನಿನಲ್ಲಿ ತುರುಕಿ ಬಿಡಬೇಕೆ?

ಅನಂತಶಯನ ಅಯ್ಯಂಗಾರರಿಗೆ ಕೊರಂಟೈನಿನಲ್ಲಿ ಒಂಭತ್ತು ದಿನಗಳ ಶಯನ ಮಾಡುವದು ಕಷ್ಟವಾಗಲಾರದು. ಆದರೆ ಇಷ್ಟು ದೊಡ್ಡ ಮನುಷ್ಯರ ಮೇಲೆ ಕೂಡ ಕಾಯದೆಯು ಏಕಪ್ರಕಾರವಾಗಿ ಎರಗಬೇಕೇ ಎಂಬದೀಗ ಎಲ್ಲ ದೊಡ್ಡ ಮನುಷ್ಯರೂ ವಿಚಾರಿಸಬೇಕಾದ ಪ್ರಶ್ನೆ. ಪ್ರಜಾಸತ್ತೆ ಮತ್ತು ಅದರ ಕೋರೆಗಳಾದ ಕಾಯದೆಗಳ ಆಳಿಕೆಯು ಎಷ್ಟು ಅಪಾಯಕರವಾಗಿ ಏರಿ ಕುಳಿತಿವೆಯೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಪ್ರಜಾಸತ್ತೆಯು ತನ್ನ ಸ್ಥಳವನ್ನು ಅರಿತಿರಬೇಕಾದ ಸಾಕುನಾಯಿಯಾಗಿರಬೇಕು. ಒಡೆಯರು ಗೋಡೆ ಜಿಗಿದಾಗ ಅದು ತೋರಿಸಬೇಕಾದ್ದು ಹಲ್ಲುಗಳನ್ನಲ್ಲ, ಸುರುಳಿ ಗಟ್ಟಿದ ಬಾಲದ ಅಲ್ಲಾಟವನ್ನು.

* * *

ನಿಜ, ಕಾಯದೆಗಳಿವೆ—ಹಳದಿ ಜ್ವರ ಪ್ರದೇಶದಿಂದ ಬಂದವರಿಗೆ ಸರ್ಟಿಫಿಕೇಟು ಇರಬೇಕೆಂದು. ಆದರೆ ದೊಡ್ಡ ಮನುಷ್ಯರಿಗೆ ಅವುಗಳನ್ನು ಮುರಿಯಲು ಬಾರದಿದ್ದರೆ ಕಾಯದೆಗಳು ಇರುವುದಾದರೂ ಯಾತಕ್ಕೆ? ಲಾಂಗೂಲಾಚಾರ್ಯರಿಗೆ ಗೊತ್ತಿದೆ. ಪ್ರಜಾಸತ್ತೆಯಲ್ಲಿ ಕಾಯಿದೆಯ ಮುಂದೆ ಎಲ್ಲರೂ ಸಮಾನರು ಎಂಬ ನಿಯಮವುಂಟೆಂದು. ಆದರೆ ಅಪವಾದಗಳು ನಿಯಮಗಳನ್ನು ಸಿದ್ಧಪಡಿಸುತ್ತವೆ.—Exception prove the rule—ಎಂಬ ನಿಯಮ ನೀವು ಕೇಳಿಲ್ಲವೆ? ಪ್ರತಿಯೊಂದು ನಿಯಮಕ್ಕೂ ಕೆಲ ದೊಡ್ಡ ಮನುಷ್ಯರು ಅಪವಾದವಾಗಿರದಿದ್ದರೆ ಎಲ್ಲರೂ ಸಮಾನರೆಂಬುದು ಹೇಗೆ ಸಿದ್ಧವಾಗುವದು? ಪ್ರಜಾಸತ್ತೆಯು ಹೀಗೆ ತನ್ನನ್ನು ಸಾಕಿದ ದೊಡ್ಡ ಮನುಷ್ಯರನ್ನೇ ಕಚ್ಚುವದು ನಮ್ಮ ದೇಶದಲ್ಲಿ ಈಚಿಗಿನವರೆಗೆ ಇದ್ದಿಲ್ಲ. ಒಬ್ಬಾನೊಬ್ಬ ರಾಜ್ಯ ಮುಖ್ಯಮಂತ್ರಿಯ ಮಗನು ಸರಕಾರಿ ವಾಹನವಾದ ತನ್ನ ಅಪ್ಪನ ಕಾರನ್ನು ಡ್ರೈವಿಂಗ್ ಲೈಸನ್ಸು ಇಲ್ಲದೆ ಯದ್ವಾತದ್ವಾ ಓಡಿಸಿಕೊಂಡು ಹೋಗಿ ಒಬ್ಬ ಮುದುಕಿಯನ್ನು ಕೆಡವಿದರೂ ಕಾಯದೆಗಳ ಅಸ್ತಿತ್ವವನ್ನು ಅಪವಾದ ಮೂಲಕವಾಗಿ ಸಿದ್ಧಮಾಡಿ ತೋರಿಸಿದ್ದನೆಂದು ಕೆಲವೇ ವರ್ಷಗಳ ಹಿಂದೆ ನಾವು ಪತ್ರಿಕೆಗಳಲ್ಲಿ ಓದಿದ್ದೆವು. ಕಾಯಿದೆಗಳು (ಅವುಗಳನ್ನು ಮಾಡಿದ ಮತ್ತು ಅವರ ಬಂಧು ಬಳಗದವರ) ಕೈಮೀರಿ ಹೋಗಿಲ್ಲೆಂದೂ ಕಾಯದೆ ಸುವ್ಯವಸ್ಥೆ ಪರಿಸ್ಥಿತಿ ಪೂರ್ತಿಯಾಗಿ ಹಿಡಿತದಲ್ಲಿದೆಯೆಂದೂ ಪದೇ ಪದೇ ಖಾತ್ರಿ ಮಾಡಿಕೊಳ್ಳಲು ಇಂಥ ಪರೀಕ್ಷೆಗಳು ಬೇಕಾಗುತ್ತವೆ. ಕಾಯದೆಗಳು ಎಚ್ಚರವಾಗಿವೆಯೆಂದು ತೋರಿಸಲು ಅವು ಅಗತ್ಯ. ಒಂದು ನಾಯಿಯು ಯಜಮಾನನನ್ನೋ ಅವನ ಮಗನನ್ನೋ ಕಚ್ಚಿದರೆ ಅದು ಎಚ್ಚರವಾಗಿತ್ತೆಂದು ತೋರಿಸುವ ಬದಲು ಅದು ತೂಕಡಿಸುತ್ತಿತ್ತೆಂದೂ ಒಮ್ಮೆಲೇ ಎಚ್ಚರಗೊಳಿಸಲ್ಪಟ್ಟಿದ್ದರಿಂದ ಹೌಹಾರಿ ಯಾರೆಂದು ನೋಡದೆ ಕಚ್ಚಿತೆಂದೂ ತೋರಿಸುವ ಸಂಭವವೇ ಹೆಚ್ಚಲ್ಲವೇ?

* * *

ಆದರೆ ಪ್ರಜಾಸತ್ತೆಯ ಆ ಸುವರ್ಣ ಯುಗವು ಈಗ ನಿಶ್ಶೇಷವಾಗುತ್ತಿದೆಯೆಂದು ಅನಂತಶಯನರ ಕೊರಂಟೈನ್ ಶಯನದಿಂದ ಸ್ಪಷ್ಟವಾಗುತ್ತದೆ. ಅಂದ ಮೇಲೆ ಆ

ಪಾಖಂಡ ಪ್ರಜಾಸತ್ತೆಗಳಾದ ಅಮೇರಿಕ ಬ್ರಿಟನುಗಳಂತೆ ಇಲ್ಲಿಯೂ ಮನುಷ್ಯರ ಶ್ರೇಷ್ಠತ್ವವನ್ನು ಧಿಕ್ಕರಿಸಿ ಕಾಯದೆಗಳು ಆಳತೊಡಗಿವೆಯೆಂದು ತೋರಿಸುತ್ತದೆ. ಅಮೇರಿಕದಲ್ಲಿ ದೊಡ್ಡ ಮನುಷ್ಯರನ್ನು ಯಃಕಶ್ಚನ ಪೊಲೀಸರು ಕೂಡ ಗುರುತಿಸುವದಿಲ್ಲೆಂದು ನಮ್ಮ ಮುಂಬಯಿಯ ಗವರ್ನರರಾಗಿದ್ದ ದಿ. ವಾಜಪೇಯಿಯವರ ಬಗ್ಗೆ ಹಬ್ಬಿದ ಒಂದು ಕಥೆಯಿಂದ ತಿಳಿಯುತ್ತದೆ. ಅಮೇರಿಕದಲ್ಲಿ ಇವರು ಹಿಂದೆ ಭಾರತದ ಪ್ರತಿನಿಧಿಯಾಗಿದ್ದಾಗ ಯಾವುದೋ ಒಂದು ಸಮಾರಂಭಕ್ಕೆ ಹೊರಡುವಾಗ, ಅಚ್ಚ ಭಾರತೀಯ ಸಾಂಪ್ರದಾಯವನ್ನುಸರಿಸಿ, ತಡಮಾಡಿ ಹೊರಟರು. ಅವರು ತಮ್ಮ ಡ್ರೈವರನಿಗೆ ಪುಷ್ಪಕ ವಿಮಾನವನ್ನು ಮೀರಿಸುವ ವೇಗದಿಂದ ಕಾರು ಓಡಿಸಲು ಅಪ್ಪಣೆ ಕೊಟ್ಟರು. ಆದರೆ ಅವರ ಅಪ್ಪಣೆ ನಡೆದದ್ದು ಮುಂದಿನ ಕೂಟು ಮುಟ್ಟುವ ತನಕ ಮಾತ್ರ. ಯಾಕಂದರೆ ಅಲ್ಲಿ ನಿಂತಿದ್ದ ಪೋಲಿಸನು ಕಾರನ್ನು ತರುಬಿ ಇಷ್ಟು ಜೋರಿನಿಂದ ಮೋಟಾರು ನಡೆಸಿದರೆ ಗುರಿ ಮುಟ್ಟುವ ಬದಲು ಪೊಲೀಸು ಠಾಣೆ ಮುಟ್ಟಬೇಕಾದೀತೆಂದು ಎಚ್ಚರವಿತ್ತನು.

* * *

ವಾಜಪೇಯಿ ಮಹಾಶಯರಿಗೆ ಇದು ತೀರ ಅಸಹನೀಯವಾಯಿತು. ಬ್ರಿಟಿಷರಿದ್ದ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದವರಾದರೂ ಜಗತ್ತಿನಲ್ಲಿ ಕಾಯಿದೆಗಳಿಗಿಂತ ದೊಡ್ಡವರಾದ ಮನುಷ್ಯರಿದ್ದಾರೆಂದು ದೃಢವಾಗಿ ನಂಬಿದವರಲ್ಲಿ ಅವರೊಬ್ಬರಾಗಿದ್ದರು ಮತ್ತು ಅವರ ಸಹಪಾಠಿಗಳಾದ ಅನಿಲ ಕುಮಾರ ಚಂದಾರು ಹೇಳುವದು ಸರಿಯಾದರೆ, ಅಂಥ ದೊಡ್ಡವರಲ್ಲಿ ತಾವೂ ಒಬ್ಬರೆಂದ ನಂಬಿದವರು ಅವರಾಗಿದ್ದರು. ಅವರಿಗೆ ಈ ಅಮೇರಿಕನ್ ರಸ್ತೆ ಪೊಲಿಸನ ಈ ಧೃಷ್ಟತೆಯು ಮಹಿಮಾಶಾಲಿಗಳ ಕುಲಕ್ಕೆ ಅವಮಾನವಾಗಿ ಕಂಡಿತು. ಆದರೆ ಬಹುಶಃ ಈ ಅಜ್ಞಪೋಲೀಸನಿಗೆ ಈ ಮೋಟಾರಿನೊಳಗೆ ಎಂಥ ಘನವಾದ ಶ್ರೇಷ್ಠತ್ವವು ಮನುಷ್ಯರೂಪದಲ್ಲಿ ಕುಳಿತಿದೆಯಂದು ಗೊತ್ತಿಲ್ಲದೆ ಹೋಗಿರಬಹುದೆಂದು ಒಮ್ಮೆಲೇ ಹೊಳೆಯಿತೇನೋ. ಪಾಪ, ಅನಾಗರಿಕ ಅಮೇರಿಕನ್ನರು!

ವಾಜಪೇಯಿ ಮಹಾಶಯರು ಮೋಟಾರಿನ ಕಂಡಿಯಲ್ಲಿ ತಲೆ ಹೊರಗೆ ಹಾಕಿ "ಹೇಯ್! ನಾನು ಯಾರೆಂದು ಗೊತ್ತಿದೆಯೇ ನಿನಗೆ?" ಎಂದು ಪೊಲೀಸನಿಗೆ ಕೇಳಿದರು. ಶ್ರೇಷ್ಠತ್ವವನ್ನು ಮೋಟಾರಿನಿಂದಲೇ ಗುರುತಿಸಲು ಬಾರದ ಕುರುಡರೂ ಇದ್ದರೆ ಅವರಿಗೆ ಶ್ರೇಷ್ಠತ್ವವು ತನ್ನ ನಿಜಸ್ವರೂಪವನ್ನು ತಾನೇ ಬಾಯಿಬಿಟ್ಟು ಹೇಳಬೇಕಾಗುವದಲ್ಲವೆ?

ಆದರೆ ಕೂಟಿನ ಆ ಪೊಲೀಸನ ಮೇಲೆ ಈ ಗಂಭೀರವಾದ ವಾಣಿಯ ಪರಿಣಾಮ ಏನೂ ಆಗಲಿಲ್ಲ. ವಾಜಪೇಯಿಯವರು ಬಲ್ಲ ಭಾರತೀಯ ಪೊಲೀಸರಂತೆ ಈ ಅಮೇರಿಕನ್ನರು ಹೌಹಾರಿ ಸಲಾಮು ಹೊಡೆಯಲಿಲ್ಲ. ಬದಲಿಗೆ ಹುಂಬತನದಿಂದ,

"ಯಾರಯ್ಯಾ ನೀನು?" ಎಂದು ಆಹ್ವಾನವನ್ನೇ ಕೊಟ್ಟ.

"ನಾನು ಬಾಜಪೇ" ಎಂದರು ಮಹನೀಯರು. ಈ ಮಡ್ಡನ ಮನಸಿನಲ್ಲಿ ಏನೂ ಸಂಶಯ ಉಳಿಯದಿರಲೆಂದು.

ಆದರೆ ಆ ದಡ್ಡನ ಚರ್ಮಕ್ಕೆ ಇದು ಕೂಡ ನಾಟಲಿಲ್ಲ.

ನೀನು ಬಾಜಪೇ ಇರು ಮತ್ತೇನಾದರೂ ಇರು. ಇನ್ನೊಮ್ಮೆ ಹೀಗೆ ಮೋಟಾರು ಹಿಡಿಸಿದರೆ ಕಚೇರಿಗೆ ಕಳಿಸುತ್ತೇನೆ" ಎಂದು ಬಿಟ್ಟ.

ದೊಡ್ಡ ಮನುಷ್ಯರಿಂದಲೇ ಬದುಕುತ್ತಿರುವ ಭಾರತವೂ ಇದೇ ದಾರಿ ಹಿಡಿದಿದೆಯೇನೋ.

* * *

ಹಳದಿ ಜ್ವರದ ಮಾತಿಗೆ ಮರುಳುವದಾದರೆ, ಬಡಪಾಯಿ ಅನಂತಶಯನರನ್ನಷ್ಟೇ ಯಾಕೆ ಕೊರಂಟೈನಿಗೆ ಹಾಕಬೇಕಿತ್ತೂ ಅಂತ? ಹಳದಿ ಜ್ವರವು ಜಗತ್ತಿನಲ್ಲಿ ಏಕಮಾತ್ರ ಜ್ವರವೂ ಅಲ್ಲ, ಎಲ್ಲಕ್ಕಿಂತ ಅಪಾಯಕರ ಪಿಡುಗೂ ಅಲ್ಲ. ಉದಾಹರಣೆಗೆ ಈಗ ಮಹಾರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಹಬ್ಬಿರುವ ಕಪ್ಪು (ಬಾವುಟದ) ಜ್ವರದ ಮಾತೇನು? ಅಮೃತಸರ ಕಾಂಗ್ರೆಸ್ಸಿಗೆ ಬಂದ ಮಹಾರಾಷ್ಟ್ರೀಯ ಕಾಂಗ್ರೆಸ್ಸಿಗರಿಂದ ಕಪ್ಪು ಜ್ವರದ ಸರ್ಟಿಫಿಕೇಟು ಯಾರಾದರೂ ಕೇಳಿದ್ದಾರೆಯೆ? ಮತ್ತೆ ಅಮೃತಸರದ ಜನರು ಈ ಜ್ವರಕ್ಕೆ ಸುಲಭವಾಗಿ ತುತ್ತಾಗಬಹುದಾದವರು. ಆಗಲೇ ಅವರು ಜ್ವರಪೀಡಿತರಾಗುವ ಲಕ್ಷಣ ತೋರಿಸುತ್ತಿದ್ದಾರೆ. ಇನ್ನು ಕಳೆದ ತಿಂಗಳಲ್ಲೇ ದ್ರವಿಡ ಕಳಗದ ಒಂದು ಸಭೆಯಲ್ಲಿ ಭಾಗವಹಿಸಿದ್ದ ಮುದ್ರಾಸ ಮುಖ್ಯಮಂತ್ರಿ ಕಾಮರಾಜರನ್ನು ದ್ರವಿಡ ಜ್ವರದ ವಿರುದ್ಧ ಇನಾಕ್ಯುಲೇಶನ್ ಮಾಡಲಾಗಿದೆಯೆ? ಮೈಸೂರಿನಿಂದ ಹೋದವರಲ್ಲಿ ಗಂಡ ಭೇರುಂಡ ಜ್ವರದ ಕ್ರಿಮಿಗಳಲ್ಲೆಂದು ಖಾತ್ರಿ ಮಾಡಿಕೊಳ್ಳಲಾಗಿದೆಯೇ? ಇವೆರಡೂ ಜ್ವರಗಳು ತುಂಬ ಅಪಾಯಕರವಾದ ಸುಂಕು ರೋಗಗಳು. ಅವು ತಗಲಿದ ಭಾರತೀಯರು ತಾವು ಬೇರೆ ಯಾರೊ—ತಾವು ದ್ರವಿಡರು ಅಥವಾ ತಾವು ಗಂಡಭೇರುಂಡ ಪಕ್ಷಿ—ಎಂಬ ಭ್ರಾಂತಿಗೊಳಗಾಗಿ ಬಡಬಡಿಸುತ್ತಾರಂತೆ. ಅದಕ್ಕಿಂತಲೂ ಹೆಚ್ಚಾಗಿ ಆ ಅತಿ ದಾರುಣ ಭಯಂಕರವಾದ ಕೆಂಪು ಜ್ವರದ ಸುದ್ದಿಯೇನು? ನಮ್ಮ ಪ್ರಧಾನಮಂತ್ರಿಗಳು ಈ ಜ್ವರಪೀಡಿತವಾದ ಪ್ರದೇಶದಲ್ಲಿ ಎರಡು ಮೂರು ವಾರ ಸಂಚರಿಸಿ ಬಂದ ಮೇಲೆ ಅವರನ್ನು ಆರು ತಿಂಗಳು ಕೊರಂಟೈನಿನಲ್ಲಿ ಹಾಕಬೇಕಿತ್ತೆಂದು ತಜ್ಞ ಡಾಕ್ಟರರ ಅಭಿಪ್ರಾಯವಾಗಿದೆ. ಹಾಗೆ ಮಾಡದೆ ಬಿಟ್ಟಿದ್ದರಿಂದಲೇ ವಿಮಾ ರಾಷ್ಟ್ರೀಕರಣ ಮೊದಲಾದ ಕೆಂಪು ಜ್ವರದ ಲಕ್ಷಣಗಳು ಭಾರತ ಸರಕಾರದಲ್ಲಿ ಆಗಲೇ ಕಾಣಿಸಿಕೊಂಡಿವೆಯೆಂದು ಡಾ।। ಬಿರ್ಲಾ, ಡಾ।। ಹೊಮಿಮೋದಿ ಮೊದಲಾದ ಎಕ್ಸಪರ್ಟ್‌ರು ಹೇಳತೊಡಗಿದ್ದಾರೆ.

❑

# ರೋಗಿಗಳು ಯಾಕೆ ಸತ್ತರು?

ದೊಡ್ಡ ಆಸ್ಪತ್ರೆಯಲ್ಲಿ ಕೋಲಾಹಲ ಎದ್ದಿತ್ತು. ಅಂದು ಬೆಳಗ್ಗೆ ಎದ್ದು ನೋಡುವಾಗ ಆಸ್ಪತ್ರೆಯಲ್ಲಿದ್ದ ಐನೂರು ಚಿಲ್ಲರೆ ಪೇಶಂಟರಲ್ಲಿ ೩೫೦ ಜನ ಸತ್ತುಹೋಗಿದ್ದರು. ಸತ್ತದ್ದಕ್ಕೆ ಯಾರಿಗಾದರೂ ದುಃಖವಾಗಿತ್ತೊ ಇಲ್ಲವೋ ಹೇಳುವುದು ಕಷ್ಟ. ಆದರೆ ರಾತ್ರಿ ಡ್ಯೂಟಿ ಡಾಕ್ಟರರೂ ನರ್ಸಮ್ಮಗಳೂ ರಿಕ್ರಿಯೇಷನ್ ಹಾಲಿನಲ್ಲಿ ಟೇಬಲ್ ಟೆನ್ನಿಸ್ ಆಟವಾಡುತ್ತಿದ್ದು ಯಾರೂ ವಾರ್ಡುಗಳಲ್ಲಿ ಇಲ್ಲದಿದ್ದಾಗ ಈ ಪೇಶಂಟರು ಸತ್ತದ್ದು ಬಹಳ ಅನ್ಯಾಯ ಎಂದು ಆಸ್ಪತ್ರೆಯ ಡಾಕ್ಟರರನ್ನೊಳಗೊಂಡ ಎಲ್ಲಾ ಸಿಬ್ಬಂದಿಯವರ ಏಕಾಭಿಪ್ರಾಯವಾಗಿತ್ತು. ಈ ಪೇಶಂಟುಗಳು ಸಾಯುವುದಕ್ಕೆ ತಪ್ಪು ಗಳಿಗೆಗಳನ್ನೇ ಆರಿಸಿಕೊಳ್ಳುತ್ತಾರೋ ಏನೋ. ಬೇವಾರೀಸ್ ಪೇಶಂಟರು ಆಗಿದ್ದರೆ ನೆಟ್ಟಗೆ ಶವಾಲಯಕ್ಕೆ ಸಾಗಹಾಕಿ ಮರುದಿನ ವಿದ್ಯಾರ್ಥಿಗಳಿಗೆ ಸಿಗಿಯುವುದಕ್ಕೆ ಕೊಟ್ಟುಬಿಡಬಹುದಾಗಿತ್ತು. ಆದರೆ ಈ ಪೇಶಂಟರು ದೊಡ್ಡ ಮನುಷ್ಯರಿಗೆ ಬೇಕಾದವರಾಗಿದ್ದರು. ಆದ್ದರಿಂದಲೇ ಅವರಿಗೆ ಪುಕ್ಕಟೆ ಟ್ರೀಟ್‌ಮೆಂಟ್ ಕೊಡಲಾಗುತ್ತಿತ್ತು. ಈಗ ಅವರು ಏಕಾಏಕಿ ಸತ್ತದ್ದರಿಂದ ದೊಡ್ಡ ಮನುಷ್ಯರು ಬಹಳ ಧೂಳೆಬ್ಬಿಸುವ ಭಯವುಂಟಾಗಿತ್ತು. ಮತ್ತು ಡಾಕ್ಟರರಾಗಲಿ ನರ್ಸುಗಳಾಗಲಿ ಧೂಳನ್ನು ಮೆಚ್ಚುತ್ತಿರಲಿಲ್ಲ.

ವಾಸ್ತವವೆಂದರೆ ಈ ಪೇಶಂಟರು ಈ ರಾತ್ರಿಯೆ ಸಾಯುತ್ತಾರೆಂದು ಯಾವ ಡಾಕ್ಟರರೂ ಊಹಿಸಿರಲಿಲ್ಲ. ಆ ಸಂಶಯವಿದ್ದರೆ ಅವರು ಟೇಬಲ್ ಟೆನ್ನಿಸ್‌ನಲ್ಲಿ ಮತ್ತು ಅನಂತರ ಸ್ವಲ್ಪ ಬಲವಾದ ಸುಧಾಪಾನದಲ್ಲಿ ರಾತ್ರಿ ಮೂರು ಗಂಟೆಯವರೆಗೂ ಕಳೆದು ಆಮೇಲೆ ಯಾವ ನರ್ಸಳ ತೋಳಲ್ಲಿ ಯಾವ ಡಾಕ್ಟರು ಮೂರ್ಛೆಹೋಗಿದ್ದ ಎಂದು ತಿಳಿಯದ ಸ್ಥಿತಿಯಲ್ಲಿ ಬೆಳಗಿನ ಜಾವವನ್ನು ಕಳೆಯುತ್ತಿರಲಿಲ್ಲ. ಅದಕ್ಕೂ ಕೆಟ್ಟದ್ದೆಂದರೆ ಈಚೆಗೆ ಅವರು ಹೊರಗೆ ಹಾಕಬೇಕೆಂದು ಒಟ್ಟಾಗಿ ಪ್ರಯತ್ನಿಸುತ್ತಿದ್ದ ಮತ್ತು ಸಸ್ಪೆಂಡ್ ಆಗಿದ್ದ ಪ್ರಮುಖ ಡಾಕ್ಟರಿಣಿಯೊಬ್ಬಳಿಗೆ ಈ ಅನಿರೀಕ್ಷಿತ ಮರಣಗಳ ಸುದ್ದಿ ಗೊತಾಗಿ ಹೋಗಿತ್ತು. ಪೇಶಂಟರನ್ನು ಅಲಕ್ಷ್ಯದಿಂದ ಕೊಂದರು ಎಂಬ ಆರೋಪ ಬರುವುದೂ ಅವಳು ಅದಕ್ಕೆ ಪ್ರಚೋದನೆ ಕೊಡುವುದೂ ಕಟ್ಟಿಟ್ಟ ಮಾತಾಗಿತ್ತು. ರಾತ್ರಿ ಡ್ಯೂಟಿಯ ಎಲ್ಲಾ ಡಾಕ್ಟರರೂ ನರ್ಸಮ್ಮಗಳೂ ಇದರ ಪರಿಣಾಮವೇನಾದೀತೆಂದು ಭಯಗ್ರಸ್ತರಾಗಿದ್ದರು.

ಈಗವರೆಲ್ಲಾ ಮೀಟಿಂಗ್ ಹಾಲಿನಲ್ಲಿ ಸಭೆ ಸೇರಿ ಪೇಶಂಟರು ಹೇಗೆ ಸತ್ತರು ಎಂದು ಚರ್ಚೆ ಪ್ರಾರಂಭಿಸಿದರು. ಅವರು ಏನಾದರೊಂದು ಸಮರ್ಪಕ ಮತ್ತು ನಂಬಲರ್ಹವಾದ ಕಾರಣವನ್ನು ಕಂಡುಹಿಡಿಯಬೇಕಾಗಿತ್ತು. ತಾವು ರಾತ್ರಿ ಡ್ಯೂಟಿಯನ್ನು ಮರೆತು ವಿನೋದಲೋಲರಾಗಿದ್ದುದರಿಂದಲೇ ಹೀಗಾಯಿತು ಎಂಬ ಆರೋಪ ತಪ್ಪಿಸಿಕೊಳ್ಳುವುದಕ್ಕೆ ಅವರು ಏನಾದರೊಂದು ಸಾಧಿಸುವುದು ಹೆಚ್ಚು ಅಗತ್ಯವಾಗಿತ್ತು.

ಡಾ. ಬಾಜಾಬಜಂತ್ರಿಯವರು ಚರ್ಚೆಯನ್ನು ಪ್ರಾರಂಭಿಸಿದರು. "ನನ್ನ ಮಿತ್ರ ಮತ್ತು ವಿದ್ವಾನ್ ಡಾಕ್ಟರರೇ, ಈ ಪೇಶಂಟರು ಸಾಯುವುದಕ್ಕೆ ಕಾರಣವನ್ನು ನಾನು ಊಹಿಸಿದ್ದೇನೆ. ಈ ಸಾವು ಉದ್ದೇಶಪೂರ್ವಕವಾಗಿತ್ತೆಂದು ನಂಬುವುದಕ್ಕೆ ನನಗೆ ಆಧಾರಗಳಿವೆ. ರಾತ್ರಿ ಒಂಭತ್ತು ಗಂಟೆಗೆ ಪೇಶಂಟರಿಗೆ ಕೊಟ್ಟ ಔಷಧದಲ್ಲಿ ವಿಷ ಸೇರಿತ್ತು. ಮತ್ತು ಈ ವಿಷವನ್ನು ಡಾಕ್ಟರ್ ಇಂದುಮುಖಿಯವರೇ ಗುಟ್ಟಾಗಿ ಇಲ್ಲಿರುವ ಯಾವನೋ ಕಂಪೌಂಡರನ ಸಹಾಯದಿಂದ ಔಷಧದಲ್ಲಿ ಸೇರಿಸಿದ್ದಾರೆಂದು ನನಗೆ ಮನವರಿಕೆಯಾಗಿದೆ. ರಾತ್ರಿಯಲ್ಲಿ ಪೇಶಂಟರಿಗೆ ಕೊಟ್ಟ ಬ್ರೊಮೈಡಿನಲ್ಲಿ ಈ ವಿಷವನ್ನು ಬೆರಸಿರಬೇಕು. ಈ ಬ್ರೊಮೈಡು ಡಾ. ಇಂದುಮುಖಿಯವರಿಗೆ ಬೇಕಾದವರಾದ 'ಕುಡುಗೋಲು—ಕೊಡತಿ, ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟರಿಂದ ಖರೀದಿ ಮಾಡಿದ್ದಾಗಿದೆಯೆಂದು ನೆನೆದರೆ ನನ್ನಊಹೆಗೆ ಬಲ ಬರುತ್ತದೆ."

ಸಭೆಯಲ್ಲಿ ಒಂದು ಆನಂದಲಹರಿ ಸಂಚರಿಸಿತು. ಆದರೆ ಅದು ಬಹುಕಾಲ ಉಳಿಯಲಿಲ್ಲ.ಡಾ. ನಿಜಂಭಟ್ಟರು ಎದ್ದುನಿಂತು ತಮ್ಮ ಸ್ವಾಭಾವಿಕ ವಿಷಾದ ಮುದ್ರೆಯನ್ನು ಹೆಣವಿಷಾದ ಮುದ್ರೆಯಾಗಿ ಮಾಡಿಕೊಂಡು ಮಾತನಾಡತೊಡಗಿದರು. "ವಿದ್ವಾನ್ ಸಹಕಾರಿಗಳೇ, ಡಾ.ಬಿ. ಬಜಂತ್ರಿಯವರು ಹೇಳುವಂಥದೇ ಯಾವುದೋ ಸಂಗತಿ ಕಳೆದ ರಾತ್ರಿ ನಡೆದಿರಬೇಕು. ಇಲ್ಲದಿದ್ದರೆ ಒಂಭತ್ತು ಗಂಟೆಯವರೆಗೆ ಜೀವಂತವಾಗಿದ್ದು ರಾತ್ರಿಯೂಟದಲ್ಲಿ ಕೊಟ್ಟ ಚಪಾತಿ ತೀರ ಮೆತ್ತಗಾಗಿತ್ತೆಂದು ಕೂಗಾಡಿದ್ದ ಪೇಶಂಟುಗಳು ಏಕಾಏಕಿ ಬೆಳಗಾಗುವುದರೊಳಗೆ ನಮ್ಮಗಳ ಕೈಯಿಂದ ಮುಕ್ತರಾಗುವುದು ಕಲ್ಪನಾತೀತವೇ ಸೈ. ಆದರೂ ಡಾ.ಬಿ. ಬಜಂತ್ರಿಯವರ ಥಿಯರಿಯನ್ನು ನಾವು ಮುಂದೊಡ್ಡಿದರೆ ಜನರನ್ನು ನಂಬಿಸುವುದು ಕಷ್ಟ. ಮೊದಲನೆಯದಾಗಿ ಬ್ರೊಮೈಡಿನಲ್ಲಿ ವಿಷವಿದ್ದರೆ ನಮ್ಮ ಐನೂರು ಚಿಲ್ಲರೆ ಪೇಶಂಟರೂ ಹೀಗೇ ಒಂದೇಟಿಗೆ ಸತ್ತುಹೋಗಬೇಕಾಗಿತ್ತು. ಹಾಗಾಗಿಲ್ಲ. ಬದುಕಿ ಉಳಿದ ಪೇಶಂಟರು ಮುಂಜಾನೆ ತಮಗೆ ಕೊಟ್ಟ ಹಾಲಿನಲ್ಲಿ ದ್ರವಾಂಶ ತೀರ ಜಾಸ್ತಿಯಾಗಿದೆಯೆಂದು ಕೂಗಾಡುವಷ್ಟು ಗಟ್ಟಿಮುಟ್ಟಾಗಿದ್ದರೆಂಬ ಅಂಶ ಈ ಬಹಳ ಪ್ರಶಂಸಾರ್ಹ ಥಿಯರಿಗೆ ವಿರುದ್ಧವಾಗಿ ಹೋಗುತ್ತದೆ. ಜನರನ್ನು ಸಮಾಧಾನಪಡಿಸುವುದಕ್ಕೆ ನಾವೇ ಇನ್ನೇನಾದರೂ ಥಿಯರಿ ಹುಡುಕಬೇಕು."

ಡಾ.ಎಸ್. ಸ್ವತಂತ್ರಂ ಅವರು ತಮ್ಮ ಗಂಭೀರ ಮುದ್ರೆಗೆ ಅನುಗುಣವಾದ ಸಾಗರ ಗಂಭೀರವಾಣಿಯಿಂದ ಸಭೆಯನ್ನುದ್ದೇಶಿಸಿ ಮಾತಾಡಿದರು: "ವಿದ್ವಾನ್ ಮಿತ್ರರೇ, ಡಾ. ಬಿ.ಬಿ.ಯವರ ಥಿಯರಿ ತುಂಬಾ ಆಕರ್ಷಕವಾಗಿದೆ. ಆದರೆ ಅದನ್ನು ಸ್ಥಾಪಿಸುವುದು ಕಷ್ಟ.

ಡಾ.ಎನ್. ಭಟ್ಟರು ಹೇಳಿದ ಅಂಶವಲ್ಲದೆ ಈ ಔಷಧವನ್ನು ಡಾ.ಐ. ಮತಿಯವರಿಗೆ ಬೇಕಾದ ಕೆ.ಕೆ.ಸಿ. ಅಂಡ್ ಡಿ. ಅವರಿಂದ ಖರೀದಿಸಿರಲಿಲ್ಲವೆಂಬುದನ್ನೂ ನಾನು ದೃಢಪಡಿಸಿಕೊಂಡಿದ್ದೇನೆ. ಹಾಗೆ ಕೇಳಿದರೆ ನಮಗೆ ಅನುಕೂಲವಾದ ಕೆಮಿಸ್ಟರ ಕೈಯಿಂದಲೇ ಅದನ್ನು ಕೊಳ್ಳಲಾಗಿತ್ತು. ಮೇಲಾಗಿ ಈ ಖರೀದಿ ಕಾಲದಲ್ಲಿ ಡಾ.ಐ. ಮತಿಯವರಿಗೂ ನಮಗೂ ಯಾವ ವ್ಯಾಜ್ಯವೂ ಇರಲಿಲ್ಲ. ಅವರ ಸಸ್ಪೆಂಡೂ ಆಗಿದ್ದಿಲ್ಲ. ಆದ್ದರಿಂದ ಅವರು ಕೆಮಿಸ್ಟರ ಸಹಾಯದಿಂದ ಪೇಶಂಟರುಗಳಿಗೆ ವಿಷ ಹಾಕಿದರೆಂದು ಸಾಧಿಸುವುದು ಕಷ್ಟ. ಜನರು ಸುಳ್ಳನ್ನು ಸುಲಭವಾಗಿ ನಂಬುತ್ತಾರೆಂದು ನನಗೆ ಗೊತ್ತು. ಆದರೆ ಇಷ್ಟು ಪಾರದರ್ಶಕವಾದ ಸುಳ್ಳನ್ನು ಅವರು ನಂಬಲಿಕ್ಕಿಲ್ಲ. ನಂಬಿಸಲು ಯಾರಿಗಾದರೂ ಸಾಧ್ಯವಿದ್ದರೆ ನನಗೆ ಬಹಳ ಸಂತೋಷ" ಎಂದರು.

ಡಾ. ಬಿ. ಬಜಂತ್ರಿಯವರ ಮುಖ ಕೆಂಪಾಯಿತು. ಆದರೆ ಅವರೇನೂ ಮಾತಾಡಲಿಲ್ಲ. ಡಾ. ಸ್ವತಂತ್ರಂ ಮುಂದುವರಿಸಿದರು: "ನಿನ್ನ ಅಭಿಪ್ರಾಯದಲ್ಲಿ ಈ ರೋಗಿಗಳ ಮರಣಕ್ಕೆ ಕಾರಣ ಬೇರೆಯೇ. ನಾವು ಈ ಆಲೋಪತಿಯ ಮೋಹಕ್ಕೆ ಬಿದ್ದಿರುವುದೇ ಈ ಅನಾಹುತಕ್ಕೆ ಕಾರಣ. ಹೋಮಿಯೋಪತಿಯ ಸಿಹಿ ಗುಳಿಗೆಗಳನ್ನು ನಾವು ಕೊಡುತ್ತ ಹೋಗಿದ್ದರೆ ರೋಗಿಗಳು ಗುಣಹೊಂದುತ್ತಿದ್ದರೆಂದು ನನಗೆ ನಂಬಿಕೆಯಾಗಿದೆ. ನಾನು ಆಲೋಪತಿಯ ಎಂ.ಡಿ. ಆಗಿದ್ದರೂ ಈಚೆಗೆ ಹೋಮಿಯೋ ಅಭ್ಯಾಸ ಮಾಡಿ ಅದು ಕಡಿಮೆ ವೇಗದಿಂದ ರೋಗಿಗಳನ್ನು ಕೊಲ್ಲುತ್ತದೆ ಎಂದು ತೀರ್ಮಾನಿಸಿದ್ದೇನೆ" ಎಂದು ಮುಕ್ತಾಯಗೊಳಿಸಿದರು.

ಆಲೋಪತಿಯ ಮೇಲೆ ಸಜಾತಿ ಬಾಂಧವನೊಬ್ಬನು ಮಾಡಿದ ಆರೋಪಗಳಿಂದ ಸಭೆಯಲ್ಲಿದ್ದ ರೋಷದಿಂದಾಗಿ, ಕೆಲ ಕಾಲ ರೋಗಿಗಳ ರಹಸ್ಯಮಯ ಮೃತ್ಯುವಿನಿಂದೊದಗಿದ ಸಾಮಾನ್ಯ ಅಪಾಯ ಕೂಡ ಮರೆತುಹೋಯಿತು. ಡಾ. ಸ್ವತಂತ್ರಂ, ಡಾ. ಬಿ. ಬಜಂತ್ರಿ ಮತ್ತು ಡಾ. ನಿಜಂಭಟ್ಟ ಇವರು ಈ ಅನಾಹುತದ ಜವಾಬ್ದಾರಿಯನ್ನು ಮಾತ್ರವಲ್ಲ, ಒಳಸಂಚಿನ ಆರೋಪವನ್ನು ಕೂಡ ಪರಸ್ಪರರ ಮೇಲೆ ಹೊರಿಸಿದರು. ಹಿರಿಯ ಮ್ಯಾಟ್ರನ್ ಶಾಂತಬೀರಮ್ಮನವರು ತಮ್ಮ ಐದೂಕಾಲಡಿ ಎತ್ತರ ಮೂರೂ ಕಾಲಡಿ ಅಗಲ ಮತ್ತು ಅಷ್ಟೇ ದಪ್ಪವಾದ ಶರೀರವನ್ನು ಯುದ್ಧಪ್ರವೃತ್ತರಾದ ಡಾಕ್ಟರರ ನಡುವೆ ಅಕ್ಷರಶಃ ನಿಲ್ಲಿಸಿರದಿದ್ದರೆ ಪೊಲೀಸರನ್ನು ಕರೆಸುವ ಅಗತ್ಯ ಬೀಳುತ್ತಿತ್ತು.

ಆಮೇಲೆ ನಾಲ್ಕನೇ ಡಾಕ್ಟರರಾದ ಡಾ. ಜಿ. ಪರಗಂಡೇಶರವರು ತಮ್ಮ ಸ್ವಾಭಾವಿಕ ಭೀಷಣ ಸ್ವರದಿಂದ ಮಾತಾಡಿದರು: "ವಿದ್ವಾನ್ ಬಂಧುಗಳೇ, ನಾನು ಹೇಳುತ್ತೇನೆ, ಅಲೋಪತಿಯ ಔಷಧದಿಂದ ಇವರು ಸಾಯಲಿಲ್ಲ. ಬದಲಿಗೆ ಹೇಡಿಗಳಾದ ನಮ್ಮ ಸಹಬಂಧುಗಳು ಈ ಔಷಧಗಳನ್ನು ಕಡಿಮೆ ಪ್ರಮಾಣದಲ್ಲಿ ಕೊಟ್ಟಿದ್ದರಿಂದ ಸತ್ತರು. ಆಲೋಪತಿಯ ವಿಷಮಯ ಔಷಧಗಳನ್ನು ಡಬಲ್ ಡೋಜಿನಲ್ಲಿ ಕೊಡಬೇಕಿತ್ತು. 'ವಿಷಂ ವಿಷೇನ ಶಾಮ್ಯತಿ' ಎಂದು ಹಿಂದಿನವರು ಹೇಳಿದ್ದಾರೆ. ಈ ಔಷಧಿಗಳನ್ನು ಈ ಪ್ರಕಾರ ಕೊಟ್ಟಿದ್ದರೆ ಅವುಗಳಿಂದ ರೋಗಿಗಳು ಗುಣಹೊಂದದಿದ್ದರೂ ಸಾಯುವ ಮೊದಲೇ

ಆಸ್ಪತ್ರೆಯಿಂದ ಓಡಿಹೋಗುತ್ತಿದ್ದರು. ನಾನು ಮೊದಲಿಂದ ಡಬಲ್ ಡೋಜ್ ವಾದಿಯಾಗಿದ್ದೆ. ನೀವು ಹೇಡಿಗಳಾಗಿ ನನ್ನ ಮಾತು ಕೇಳಲಿಲ್ಲ. ಈಗ ಕೈಮೀರಿಹೋಗಿದೆ. ಆದರೂ ಮಿತ್ರರೆ, ಇದರ ತಪ್ಪನ್ನು ನಾವು ಹೇಗಾದರೂ ಡಾ.ಐ. ಮತಿಯವರ ಮೇಲೆ ಹೊರಿಸುವ ಉಪಾಯ ಹುಡುಕಬೇಕು", ಎಂದಾಗ ಸಭೆಯಲ್ಲಿ 'ಹಿಯರ್! ಹಿಯರ್!' ಎಂಬ ಕೂಗು ಕೇಳಿಬಂತು.

ಅಷ್ಟರಲ್ಲಿ ಯಾರೋ ಬಾಗಿಲನ್ನು ತಳ್ಳಿ ಒಳ ನುಗ್ಗಿದರು. ನೋಡಿದರೆ ಡಾ. ಐ. ಮತಿ ಅಪ್ಪಣೆ ಪಡೆಯದೆಯೇ ಅವರು ಒಳಗೆ ಬಂದು ಸಭಾಧ್ಯಕ್ಷರ ಹತ್ತಿರ ಒಂದು ಕುರ್ಚಿ ಎಳೆದುಕೊಂಡು ಕುಳಿತರು. ಆಮೇಲೆ ಎಲ್ಲರನ್ನೂ ಒಮ್ಮೆ ತಿರಸ್ಕಾರದಿಂದ ನೋಡಿ, ಎದ್ದು ನಿಂತು ಭಾಷಣ ಮಾಡಿದರು: "ಮಿತ್ರರೇ! ನಿಮ್ಮ ಅಪ್ಪಣೆ ಇಲ್ಲದೆ ಒಳಗೆ ನುಗ್ಗಿದ್ದಕ್ಕೆ ಕ್ಷಮಿಸಿ. ಆದರೆ ನನಗೆ ನೀವೇನು ಚರ್ಚಿಸುತ್ತಿದ್ದೀರೆಂದು ಗೊತ್ತು. ನೀವು ವ್ಯರ್ಥವಾಗಿ ಪ್ರಯತ್ನಿಸುತ್ತಿದ್ದೀರಿ. ನನ್ನ ಮೇಲೆ ಈ ಸಾಮೂಹಿಕ ಮರಣದ ಆರೋಪ ಹೊರಿಸುವ ನಿಮ್ಮ ಸುಳ್ಳುಗಳು ಎಷ್ಟೂ ಯಶಸ್ವಿಯಾಗಲಾರವು. ಸತ್ಯಗಳು ಅದಕ್ಕಿಂತಲೂ ಕಡಿಮೆ ಯಶಸ್ವಿಯಾಗುವವು. ಪಂಥ ಕಟ್ಟಿದರೆ ನೀವೆಲ್ಲರೂ ಸೇರಿ ಸೃಷ್ಟಿಸಬಹುದಾದ ಸುಳ್ಳಿಗಿಂತ ದೊಡ್ಡ ಸುಳ್ಳನ್ನು ನಾನೊಬ್ಬಳೇ ಸೃಷ್ಟಿಸಬಲ್ಲೆ. ಆದರೆ ಬೇಡ. ನೀವು ನನ್ನನ್ನು ಓಡಿಸಬೇಕೆಂದು ಪ್ರಯತ್ನಿಸಿದರೂ ನಾನು ನಿಮಗೆ ವೈದ್ಯಕೀಯ ವೃತ್ತಿಯ ಕೆಲ ಬೀಜಮಾತುಗಳನ್ನು ತಿಳಿಸುತ್ತೇನೆ. ನಿಮ್ಮ ಪೇಶಂಟುಗಳು ಸಾಯುವುದಕ್ಕೆ ಕಾರಣ ಅಲ್ಲೋಪತಿಯೂ ಅಲ್ಲ. ಎಲ್ಲೋಪತಿಯೂ ಅಲ್ಲ. ಯಾವ ಪತಿಯೂ ರೋಗಿಗಳನ್ನು ಬದುಕಿಸುವುದಿಲ್ಲ. ಅವರನ್ನು ಬದುಕಿಸುವುದು ಆಶೆ. ಗುಣವಾಗುತ್ತದೆಂಬ ಆಶೆ: ಡಾಕ್ಟರನ ಮೇಲೆ ವಿಶ್ವಾಸ, ನಿಮ್ಮ ರೋಗಿಗಳಲ್ಲಿ ಬದುಕಿಯೇವೆಂಬ ಆಶೆಯನ್ನು ನೀವು ಹುಟ್ಟಿಸಲಿಲ್ಲ. ಮೊದಲಿಂದ ನಾನು ಇದನ್ನೇ ಹೇಳುತ್ತ ಬಂದಿದ್ದೇನೆ. ಆಶೆಯಿಲ್ಲದವನಿಗೆ ಅಮೃತವನ್ನೇ ಕೊಟ್ಟರೂ ಬದುಕುವುದಿಲ್ಲ. ನೀವು ಮನೋವಿಜ್ಞಾನವನ್ನು ಕಲಿಯಲಿಲ್ಲ. ನಾನು ನನ್ನ ರೋಗಿಗಳಿಗೆ ಶುದ್ಧ ನಲ್ಲೀ ನೀರನ್ನು ಕೊಟ್ಟು ಬದುಕಿಸುತ್ತೇನೆ. ಬದುಕಿಸಿದ್ದೇನೆ. ಬೇಕಾದರೆ ನನ್ನ ಮನೆಯಲ್ಲಿ ಬಂದು ನೋಡಿರಿ. ನನ್ನ ಔಷಧ ಬ್ಯೂರೋವಿನಲ್ಲಿ ನೀರು ಹೊರತು ಏನೂ ಇಲ್ಲ. ಆದರೂ ನಾನು ಗುಣಪಡಿಸಿದ ರೋಗಿಗಳ ಸಂಖ್ಯೆಯನ್ನು ನೀವು ನೋಡಿ ಆಶ್ಚರ್ಯಪಡುವಿರಿ.

"ವಿದ್ವಾನ್ ಬಂಧುಗಳೇ, ರೋಗಿಗಳು ಶುದ್ಧ ಮೂರ್ಖರೆಂದು ನಾನೂ ಬಲ್ಲೆ. ಆದರೆ ರೋಗಿಗಳಿಲ್ಲದಿದ್ದರೆ ನಮ್ಮ ಆಸ್ಪತ್ರೆಯೂ ಇಲ್ಲ. ನಾವೂ ಅಗತ್ಯವಿಲ್ಲ ಎಂಬುದನ್ನು ನೀವು ಮನಗಾಣಬೇಕು. ಅವರಿಗೆ ರೋಗ ಗುಣವಾಗಬಹುದೆಂಬ ಆಸೆ ಬೇಕು. ಕೆಲ ರೋಗಿಗಳನ್ನು ನಾವು ಸಾಯಲಿಕ್ಕೂ ಬಿಡಬೇಕು. ಇಲ್ಲದಿದ್ದರೆ ರೋಗಿಗಳು ಡಾಕ್ಟರರಿಗೆ ಹೆದರಲಾರರು; ಡಾಕ್ಟರರನ್ನು ಧಿಕ್ಕರಿಸುವರು. ಈಗಿನ ರೋಗಿಗಳು ಬೇರೆ ತರಹ ಎಂಬುದನ್ನೂ ನೀವು ಮರೆಯುತ್ತೀರಿ. ಅವರಿಗೆ ಕಹಿಗುಳಿಗೆಗಳು ಸೇರುವುದಿಲ್ಲ. ಸಪ್ಪೆ, ಸಿಹಿ ನೀರು, ಸುಲಭವಾಗಿ ನುಂಗತಕ್ಕಂಥಾದ್ದು. ಪಥ್ಯಪಾನ ಇಲ್ಲದಂಥಾದ್ದು ಬೇಕು. ನಾವು ಇದಕ್ಕೆ ಒಪ್ಪಿ ತಕ್ಕ ಔಷಧ—ಅಂದರೆ ಶುದ್ಧನೀರನ್ನು —ಅತ್ಯಂತ ಧೀರ ಭಾವದಿಂದ ಕೊಡಬೇಕು.

"ಮಿತ್ರರೇ, ಈಗಾದರೂ ನನ್ನ ಮಾತು ಕೇಳಿ. ನೀವು ಸತ್ತಿದ್ದಾರೆಂದು ಭಾವಿಸಿದ ಈ ರೋಗಿಗಳಲ್ಲಿ ಅರ್ಧದಷ್ಟು ಜನರನ್ನಾದರೂ ನಾನು ಬರೇ ಡಿಸ್ಟಿಲ್ಡ್ ವಾಟರ್ ಇಂಜಕ್ಶನ್ನಿನಿಂದ ಬದುಕಿಸಿಕೊಡಬಲ್ಲೆ. ನನ್ನ ನಾಯಕತ್ವ ಒಪ್ಪಿಕೊಳ್ಳಿ" ಎಂದು ಡಾ. ಐ. ಮತಿಯವರು ಹೇಳಿದರು.

ಯಾರೂ ಮಾತಾಡಲಿಲ್ಲ. ಯಾರೂ ವಿರೋಧಿಸಲು ಇಲ್ಲ.

❑

# ಚುಂಬನದ ರಾದ್ಧಾಂತ

ಕವಿಗಳು ಹೊಗಳಿ ಹೊಗಳಿ ದಣಿಯದ ಆ ಅಪೂರ್ವ ಮಾನುಷಸಂಧಿಯಾದ ಚುಂಬನವು ತರುಣ "ಸಂಧಿಸಾಧಕ" ಜೋಡಿಗಳನ್ನು ಕಾಯದೆಯ ಕೆಂಗಣ್ಣುಗಳ ಮುಂದೆ ಎಳೆತಂದ ಕೆಲ ಸಂದರ್ಭಗಳು ಈಚೆಗೆ ವರದಿಯಾಗಿವೆ. ಇಂಥ ಒಂದು ಘಟನೆ ನಡೆದುದು ಕೃಷ್ಣನಗರದಲ್ಲಿ (ಅದು ಎಲ್ಲೇ ಇರಲಿ). ಅಲ್ಲಿ ಒಂದು ತರುಣ ದಂಪತಿಯು ಒಂದು ಕ್ಷಣದ ಅಧರಸಂಧಾನಕ್ಕಾಗಿ ಒಂದು ತಿಂಗಳ ಸೆರೆಮನೆ ಕಾಣಬೇಕಾಯಿತು. ಕೃಷ್ಣನಗರದಲ್ಲಿ ಕೃಷ್ಣಸದೃಶವಾದ ಈ ಕೃತಿಗಾಗಿ ಆ ಕೃಷ್ಣಸದೃಶವಾದ ಪ್ರಾಯಶ್ಚಿತ್ತವನ್ನು ಕೊಟ್ಟ ಅಧಿಕಾರಿಗಳು ತಮ್ಮ ಎಳವೆಯ ಚಪಲಗಳನ್ನು ಮರೆತ ಮಡಿವಂತರಾದರೂ ಇರಬೇಕು, ಇಲ್ಲವೆ ತನ್ನ ತಾರುಣ್ಯದಲ್ಲಿ ತಾವು ಮಾಡಬಯಸಿದ್ದ, ಆದರೆ ಮಾಡಲು ಧೈರ್ಯಪಡದಿದ್ದ ಕಾರ್ಯವನ್ನು ಇಂದಿನವರು ಮಾಡುವುದನ್ನು ಕಂಡು ಅಸೂಯೆಪಡುವವರಾದರೂ ಇರಬೇಕು. ಈ ಪ್ರಕರಣವನ್ನು ಸರಿಯಾಗಿ ಪರಿಶೀಲಿಸಿದ್ದರೆ ಅಪರಾಧ ಮಾಡಲು ಬೇಕಾದಷ್ಟು ಉದ್ರೇಕಜನಕ ಸಂದರ್ಭವಿದ್ದೇ ಇತ್ತೆಂದು ಅಧಿಕಾರಿಗಳಿಗೆ ಮನವರಿಕೆಯಾಗದಿರುತ್ತಿದ್ದಿಲ್ಲ. ಅಪರಾಧಿ ದಂಪತಿಗಳು ಜಾತ್ರೆಯೊಂದರಲ್ಲಿ ತಿರುಗುವ ತೊಟ್ಟಿಲಲ್ಲಿ ಕುಳಿತು ಸುತ್ತುತ್ತಿದ್ದರು ತಿರುಗು ತೊಟ್ಟಿಲಲ್ಲಿ ಗಿರಿಗಿರಿ ಸುತ್ತುವಾಗ ಗುರುತ್ವಾಕರ್ಷಣದ ವಿಕಲ್ಪಗಳಿಂದ ಮನುಷ್ಯರು ಎಷ್ಟು ಉದ್ರಿಕ್ತರಾಗುತ್ತಾರೆಂದು ಯಾರಿಗೆ ಗೊತ್ತಿಲ್ಲ? ಈ ಉತ್ತೇಜನದ ಕ್ಷಣದಲ್ಲಿ ಬಾಹ್ಯಪ್ರಪಂಚದ ಧ್ಯಾಸವೇ ಹೋಗಿ ಈ ತರುಣ ತರುಣಿಯರು ತಮ್ಮ ಉತ್ಸಾಹಾತಿರೇಕವನ್ನು ಹೀಗೆ ಪ್ರಕಟಿಸಿರಬಹುದು. ಆದರೆ ಪ್ರೇಮಕ್ಕೆ ಕಣ್ಣಿಲ್ಲವಾದರೆ ಕಾಯದೆಗೆ ತಲೆಯಿಲ್ಲ. ಆದ್ದರಿಂದ ಈ ಬಡಪಾಯಿ ಪ್ರಣಯಿಗಳು ಸಾರ್ವಜನಿಕ ಸ್ಥಳದಲ್ಲಿ ತಮ್ಮ ಅಂತರಂಗದ ಭಾವಗಳನ್ನು ಕೃತಿಗಿಳಿಸಿದ್ದಕ್ಕೆ ಪ್ರಾಯಶ್ಚಿತ್ತ ಪಡೆಯಬೇಕಾಯಿತು.

* * *

ಆದರೆ ಅಹಮದಾಬಾದಿನ ಇನ್ನೊಬ್ಬ ಮೆಜಿಸ್ಟ್ರೇಟನು ತನ್ನ ತಾರುಣ್ಯದ ದಿನಗಳನ್ನು ಮರೆತವನಲ್ಲೆಂದು ತೋರುತ್ತದೆ. ಪಾರ್ಕಿನಲ್ಲಿ ಮುಖಾಮುಖಿ ಸಂಧಿಯನ್ನು ಸಾಧಿಸಿದ್ದಕ್ಕೆ ಪೊಲೀಸರಿಂದ ಎಳೆತರಲ್ಪಟ್ಟ ತರುಣ ತರುಣಿಯರನ್ನು ಅವನು ಹಗುರು ಶಿಕ್ಷೆಗೊಳಪಡಿಸಿ ತೃಪ್ತನಾದನು. ಅವನು ತರುಣನಿಗೆ ಒಂದು ನೂರು ರೂಪಾಯಿ ದಂಡ ಹಾಕಿದನು. ಮುತ್ತು ಅಮೂಲ್ಯ ಪದಾರ್ಥವೆಂಬುದನ್ನು ನೆನೆದುಕೊಂಡರೆ ಒಂದು ನೂರೇಕೆ ಇನ್ನೂರು ರೂಪಾಯಿ

ಕೂಡ ಅದಕ್ಕೆ ಮಿತಿಮೀರಿದ ಬೆಲೆಯೆನಿಸಲಿಕ್ಕಿಲ್ಲ. ಈ ತರುಣ ಜೋಡಿ ಇನ್ನೂ ಮದುವೆಯಾದಂತೆ ಕಾಣುವುದಿಲ್ಲ. ಅಂದ ಮೇಲೆ ಕಳ್ಳ ಮಾರಾಟದ ಸರಕಿಗಾಗಿ ಅವನು ತೆತ್ತ ಬೆಲೆ ಹೆಚ್ಚಾಗಲಿಲ್ಲ. ಇಬ್ಬರೂ ಶ್ರೀಮಂತ ಕುಲದವರೆಂದು ವರದಿಯಾಗಿದೆ. ಆದ್ದರಿಂದ ಆ ತರುಣನು ಇದೇ ದರದಲ್ಲಿ ಈ ಸರಕಿನ ಇನ್ನೂ ಅನೇಕ ಪ್ರತಿಗಳನ್ನು ಕೊಳ್ಳಲು ಸಿದ್ಧನಿದ್ದರೂ ಇರಬಹುದು! ಅಹಮದಾಬಾದದ ಅಧಿಕಾರಿಯ ಸಾನುಕಂಪವಾದ ದಂಡವು ಫ್ರೆಂಚ ಕತೆಗಾರ ಮೋಪಾಸಾನ ಕಥೆಯ ಮೆಜಿಸ್ಟ್ರೇಟನನ್ನು ನೆನಪಿಗೆ ತರುತ್ತದೆ. ಪಾರ್ಕಿನಲ್ಲಿ ಹೀಗೆಯೇ ಉತ್ತಾನ ಶೃಂಗಾರಕ್ಕಿಳಿದ ತರುಣ ತರುಣಿಯರನ್ನೆಲ್ಲ ಮುದುಕ ಮುದುಕಿಯರನ್ನು ಕೂಡ ಮೋಪಾಸಾನ ಮೆಜಿಸ್ಟ್ರೇಟನು ಸಹಾನುಭೂತಿಯಿಂದ ಬಿಟ್ಟುಬಿಡುತ್ತಾನೆ. ಮುದುಕಿ ಅವನಿಗೆ ತಮ್ಮ ಈ ಅಪರಾಧದ ಮಾನಸಿಕ ಹಿನ್ನೆಲೆಯನ್ನು ವಿವರಿಸುತ್ತಾಳೆ. ತಾವು ಇನ್ನೂ ಎಳೆಹರೆಯದ ಅವಿವಾಹಿತರಿದ್ದಾಗ ಮುಂದೆ ತನ್ನ ಗಂಡನಾಗಬೇಕಿದ್ದ ಇವನು ಇದೇ ಪಾರ್ಕಿನ ಇದೇ ಸ್ಥಳದಲ್ಲಿ ತನ್ನನ್ನು ಬರಸೆಳೆದು ಮುತ್ತಿಡಲು ಹವಣಿಸಿದ್ದ. ಆದರೆ ಆಗ ತಾನು ವಿವಾಹಪೂರ್ವದಲ್ಲಿ ಕೌಮಾರಹರಣಕ್ಕೆ ಒಪ್ಪದೆ ದೂರ ಸರಿದಿದ್ದೆ. ಮುಂದೆ ತಮ್ಮ ಮದುವೆಯಾಗಿ ಹೊಟ್ಟೆಪಾಡಿಗಾಗಿ ದೂರದೂರಿಗೆ ಹೋಗಬೇಕಾಯಿತು. ಇಂದು ಅನೇಕ ದಶಕಗಳ ನಂತರ ಈ ಊರಿಗೆ ಮರಳಿ ಈ ಪಾರ್ಕಿನಲ್ಲಿ ಅಲೆಯಲೆಂದಾಗ ತನಗೆ ಆ ಹಳೆಯ ನೆನಪೆಲ್ಲ ಮರುಕಳಿಸಿತು. ಒಂದು ಕ್ಷಣ ಬಾಹ್ಯ ಪ್ರಪಂಚ, ನೆರೆತ ಕೂದಲು ಎಲ್ಲವೂ ಮರೆತುಹೋಯಿತು. ಆ ಕ್ಷಣದಲ್ಲಿ ಈ ಅಪರಾಧ ಘಟಿಸಿ ಹೋಯಿತೆಂದು ಮುದುಕಿ ಹೇಳಿದಾಗ ಮೆಜಿಸ್ಟ್ರೇಟ್ ಅರಿತವನಂತೆ ನಕ್ಕು, "ಹೋಗಿರಿ, ಇನ್ನು ಗಿಡಗಳ ನೆರಳಲ್ಲಿ ಪಾಪ ಮಾಡಬೇಡಿರಿ!" ಎಂದು ಕಳಿಸಿಬಿಡುತ್ತಾನೆ!

* * *

ನಿಚ್ಚಳ ದೃಷ್ಟಿಯಿಂದ ನೋಡಿದರೆ ಚುಂಬನವು ಪ್ರಪಂಚದ ಅತಿ ಅರ್ಥರಹಿತ ಮೂರ್ಖಾಚಾರಗಳಲ್ಲೊಂದೆಂದು ತೋರುತ್ತದೆ. ಡಾ. ಹೆನ್ರಿ ಗಿಬ್ಬನ್ಸನ ಲಕ್ಷಣವಾಕ್ಯದ ಪ್ರಕಾರ ಚುಂಬನವೆಂದರೆ "ಎರಡು ವೃತ್ತಾಕಾರದ ಮುಖಸ್ನಾಯುಗಳು ಸಂಕುಚಿತಾವಸ್ಥೆಯಲ್ಲಿ ಸಂಯೋಗ ಹೊಂದುವ ಶಾರೀರಿಕ ಕ್ರಿಯೆ" ಇಂಥ ನಿರರ್ಥಕವಾದ ಕೃತಿಗಾಗಿ ಇಷ್ಟೆಲ್ಲ ಹಪಾಪಿ ಯಾಕೋ ತಲೆ ನೆಟ್ಟಗಿರುವವರಿಗೆ ಅರ್ಥವಾಗುವುದು ಕಷ್ಟ. ಆದರೆ ಮನುಷ್ಯನ ಅನೇಕ ಸುಖಗಳ ನಿರರ್ಥಕ ಕೃತಿಗಳಲ್ಲೇ ಅಡಕವಾಗಿವೆಯಲ್ಲವೇ? ತಲೆ ನೆಟ್ಟಗಿರುವಾಗ ಈ ಪ್ರಪಂಚದಲ್ಲಿ ನಮಗೆ ಯಾವ ಆನಂದವೂ ಕಾಣಿಸುವುದಿಲ್ಲ. ಅದಕ್ಕಾಗಿಯೇ ದೇವರು ನಮಗೆ ನಡುನಡುವೆ ಬುದ್ಧಿಸ್ವಾಧೀನ ತಪ್ಪಿಸಿ ಸುಖತೋರಿಸುತ್ತಾನೊ? ಏನೋ ಮೇಲಾಗಿ ಇಂಥ ಅರ್ಥರಹಿತ ಕೃತಿಗಾಗಿ ಹಪಾಪಿಪಡುವದು ಅರ್ಥರಹಿತವಾಗಿರುವ ಹಾಗೆ ಅದರ ವಿರುದ್ಧ ಇಷ್ಟು ಗುಲ್ಲೆಬ್ಬಿಸುವುದೂ ಕಡಿಮೆ ಅರ್ಥರಹಿತವೆಂದು ಆಚಾರ್ಯರಿಗೆ ಅನಿಸುವುದಿಲ್ಲ. ಮುತ್ತಿನ ತಪ್ಪೊಪ್ಪುಗಳ ಬಗ್ಗೆ ಡಾಕ್ಟರ ಜನರಲ್ಲಿ ಎಂದೂ ಒಮ್ಮತವಾಗಿಲ್ಲ. ಕೆಲ ಡಾಕ್ಟರರ

ಅಭಿಪ್ರಾಯದಲ್ಲಿ ಅದು ಅಸಹ್ಯ ಅನಾಗರಿಕ ದುರಭ್ಯಾಸ—ರೋಗಜಂತುಗಳ ಸಂಕ್ರಮಣಕ್ಕೆ ಸುಲಭ ಮಾರ್ಗವೊದಗಿಸುವ ಅಪಾಯಕರ ಚಟ. ಆದರೆ ಇತರ ಡಾಕ್ಟರರ ಪ್ರಕಾರ ಇದು ರೋಗಜಂತು ಪ್ರಸಾರಕ ಪದ್ಧತಿಯಲ್ಲವಿಷ್ಟೇ ಅಲ್ಲ, ತುಟಿಗಳ ಈ ಒಳಸಂಚಿನಲ್ಲಿ ಕ್ರಿಮಿನಾಶಕ ಶಕ್ತಿ ಕೂಡ ಇದೆ! ಈ "ಸ್ನಾಯವಿಕ ಸಂಧಾನ"ದಿಂದ ಶರೀರಯಷ್ಟಿಯಲ್ಲಿ ವಿದ್ಯುತ್ಸಂಚಾರವಾಯಿತೆಂದು ಕವಿಗಳು ಹೇಳುವುದು ಕೂಡ ಪೂರಾ ಕವಿಕಲ್ಪನೆಯಲ್ಲೆಂದು ಕೆಲ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಈ ಸಂಧಾನದಲ್ಲಿ ನಿಜವಾಗಿ ತುಟಿಯಿಂದ ತುಟಿಗೆ ವಿದ್ಯುತ್ತು ಹರಿಯುವುದಂತೆ ಈ ವಿದ್ಯುತ್ತಿನಿಂದ ನಿಮ್ಮ ಬ್ಯಾಟರಿ ದೀಪವನ್ನು ಉರಿಸುವಷ್ಟಾದರೂ ಶಕ್ತಿ ಉತ್ಪನ್ನವಾಗುವುದೋ ಇಲ್ಲವೊ ಗೊತ್ತಿಲ್ಲ. ಆದರೆ ಜಗತ್ತನ್ನು ಸುಡಬಲ್ಲ ಬೇಗೆಯನ್ನು ಹೊತ್ತಿಸುವಷ್ಟು ತೇಜಸ್ಸು ಅದರಲ್ಲಿದೆಯೆಂದು ಇತಿಹಾಸ ಹೇಳುತ್ತದೆ.

* * *

ಮುತ್ತು ವಿಚಿತ್ರ ಪದಾರ್ಥ. ಅದಕ್ಕಿಂತಲೂ ವಿಚಿತ್ರ ಅದರ ಬಗ್ಗೆ ಮನುಷ್ಯರ ವಿಚಾರಗಳು. ಗಂಡು—ಹೆಣ್ಣು ಮುತ್ತಿಟ್ಟರೆ ಅದು (ನೋಡುವವರಿಗೆ) ಅಶ್ಲೀಲ. ಅದೇ ಮಗು ಮಗುವನ್ನು ಮುತ್ತಿಟ್ಟರೆ ನಿಷ್ಪಾಪ ಮುಗ್ಧ ದೃಶ್ಯ. ತಾಯಿ ಮಗುವನ್ನು ಮುತ್ತಿಟ್ಟರೆ ಯಾವ ಮೆಜಿಸ್ಟ್ರೇಟನೂ ದಂಡ ಹಾಕುವುದಿಲ್ಲ. ಅದು ಅಮಲ ಮಾತೃಪ್ರೇಮ. (ತಾಯಿ ಮಕ್ಕಳ ಚುಂಬನ ಅಷ್ಟು ನಿರ್ಮಲ ಪ್ರೇಮವಲ್ಲೆಂದು ಫ್ರಾಯ್ಡ ಹೇಳಿದರೆ ಯಾರು ಕೇಳುತ್ತಾರೆ!) ಕವಿಗಳು ಸಮಸ್ತ ನಿಸರ್ಗವನ್ನೇ ಮುತ್ತಿನ ಲೀಲೆಯಲ್ಲಿರುವಂತೆ ಕಾಣುತ್ತಾರೆ "ಗಿರಿಗಳು ಗಗನವನ್ನು ಮುತ್ತಿಡುತ್ತವೆ, ಬೆಳದಿಂಗಳು ಕಡಲನ್ನು ಮುತ್ತಿಡುತ್ತದೆ, ನೀನು ನನ್ನನ್ನು ಮುತ್ತಿಡದಿದ್ದರೆ ಇಷ್ಟೆಲ್ಲ ಸವಿಗೆಲಸಗಳಿಗೆ ಏನು ಬೆಲೆ?" ಎಂದು ಶೆಲ್ಲಿ ಪ್ರೇಯಸಿಯನ್ನು ಕೇಳುತ್ತಾನೆ. ಶೇಕ್ಸ್‌ಪಿಯರನ ಮಿತ್ರನಾದ ಕವಿ ಬೆನ್ ಜಾನ್ಸನ್ನನಿಗೆ ಪ್ರೇಯಸಿ ಕಪ್ಪಿನಲ್ಲಿ ಬಿಟ್ಟ ಮುತ್ತಾದರೂ ಸಾಕಂತೆ, ಆ ಮೇಲೆ ಅವನು ಮದಿರೆಗಾಗಿ ಹುಡುಕುವುದಿಲ್ಲಂತೆ. "ಹೇಳಿ ಕೇಳಿ ಮುತ್ತೆಂದರೇನಪ್ಪಾ?" ಎಂದು ಎಡ್ಮಂಡ್ ರೊಸ್ಟಾಂಡ ಕೇಳಿ ನಿಮಗೆ ಉತ್ತರ ಕೊಡಲು ಪುರಸೊತ್ತು ಕೊಡದೆ, "ಅದು ಕಿವಿಯ ಬದಲು ಬಾಯಿಗೆ ಹೇಳುವ ಗುಟ್ಟು" ಎಂದು ತಾನೇ ಉತ್ತರ ಕೊಡುತ್ತಾನೆ. ಕವಿಗಳಿಗೆ ಅದು ಅಧರಾಮೃತ ಕವಿಗಳು ಅದಕ್ಕಾಗಿ ಇಷ್ಟು ಹಾತೊರೆದರೂ ಎಲ್ಲ ಪ್ರೀತಿಪಾತ್ರ ಪದಾರ್ಥಗಳಿಗಂಜಿದಂತೆ ಅದಕ್ಕೂ ಅಂಜುತ್ತಾರೆ. "ನನ್ನ ಮುತ್ತಿಗೆ ನಾನು ಹೆದರುವೆ, ನೀನು ನನ್ನದಕಂಜಬೇಡ" ಎನ್ನುತ್ತಾನೆ ಶೆಲ್ಲಿ.

* * *

ಇಂಗೆಂಡಿನ ಒಬ್ಬಳು ಹುಡುಗಿ ಮೊನ್ನೆ ತನ್ನ ಸುಂದರನನ್ನು ಚುಂಬಿಸಿದ ಮರುಕ್ಷಣದಲ್ಲಿ ಆಸ್ಪತ್ರೆಗೆ ಹೋಗಬೇಕಾಯಿತು. ಪ್ರೇಮಾವೇಶದ ಭರದಲ್ಲಿ ಅವಳು ಅಡ್ಡ ತಿಡ್ಡ ತಿರುಗಿಸಿ

ಮುಖ ಒತ್ತಿದ ಪರಿಣಾಮವಾಗಿ ಅವಳ ದವಡೆಯ ಎಲುಬು ಸ್ಥಾನಭ್ರಷ್ಟವಾಯಿತಂತೆ!

ಹಂಗೇರಿಯಲ್ಲೊಬ್ಬ ತನ್ನ ಪ್ರಿಯತಮೆಯನ್ನು ಚುಂಬಿಸಿದ ಹೊಡೆತಕ್ಕೆ ಅವಳ ದವಡೆ ಮುರಿದು ಹೋಯಿತು. ವಿಕ್ಟೋರಿಯಾ ರಾಣಿಯ ಕಾಲದ ಸುಂದರವೀರರು ಮೊಣಕಾಲೂರಿ ಪ್ರಣಯಿನಿಯೆದುರು ಪ್ರೇಮಭಿಕ್ಷೆಯನ್ನು ಬೇಡುವ ರಸಿಕತೆಯನ್ನು ಬಹಳ ಕಾಲ ಪ್ರದರ್ಶಿಸಿ ಕಡೆಗೆ ಪ್ರೇಮಿಕೆಯನ್ನು ಕರೆದೊಯ್ಯಲೆಂದು ಏಳಹೋದರೆ ಕಾಲು ಸೆಟೆದು ಹೋದದ್ದು ತಿಳಿದುಬಂದು ಪೆಚ್ಚಾಗಿ ಅವರೇ ಬಂದು ಈ ಅನಾಥನಾಥನನ್ನು ಕೈಹಿಡಿದು ಎಬ್ಬಿಸಿ ಕರೆದೊಯ್ಯುವ ಪ್ರಸಂಗ ಉಂಟಾಗುತ್ತಿದ್ದ ಸಂಗತಿಯನ್ನು ನೀವು ಕೇಳಿರಬಹುದು. ಆದುದರಿಂದ 'ಪ್ರಥಮಚುಂಬನೇ ದಂತಭಂಗಃ' ಎಂಬ ನಮ್ಮ ಗಾದೆ ಅಷ್ಟೇನೂ ಅವಾಸ್ತವವಾದುದಿರಲಿಕ್ಕಿಲ್ಲ ಎನ್ನಬಹುದಲ್ಲವೇ?

ಆದರೆ ಪ್ರೇಮದ ಫಜೀತಿಗಳೆಂದರೆ ಕವಿ ಪುಟ್ಟಪ್ಪನವರ ಮಾತಿನಲ್ಲಿ ಹೇಳಬೇಕಾದರೆ 'ದುಃಖ ಹೆತ್ತ ಸುಖಗಳು!' ದುಃಖದಲ್ಲಿ ಇಬ್ಬಗೆ, ಕಹಿದುಃಖ, ಸಿಹಿದುಃಖ ಎಂದು. ಆದ್ದರಿಂದ ಪ್ರೇಮಾಸ್ವಾದ ಮಾಡುವವರ ಆಕಸ್ಮಿಕ ಅಪಘಾತಗಳು ಸಿಹಿದುಃಖ ಎಂದು ನೀವು ಹೇಳಬಹುದು. ಅದನ್ನು ಒಮ್ಮೆ ಹೌದೆನ್ನಬಹುದಾದರೂ ಜಗಳ ಕಾಯುವ ಎಲ್ಲ ದಂಪತಿಗಳ ಜೀವನವೂ ಕಹಿದುಃಖದ್ದು ಎಂದು ಮಾತ್ರ ನಂಬುವುದು ಕಷ್ಟ. 'ನಾನು ಹೊಡೆದ ಹಾಗೆ ಮಾಡುತ್ತೇನೆ, ನೀನು ಅತ್ತಹಾಗೆ ಮಾಡು' ಎಂಬ ಗಾದೆಯನ್ನು ಜೀರ್ಣಸಿಕೊಂಡೋ ಎಂಬಂತೆ ಹಗಲಿಡೀ ನಾನಾ ವಿಷಯಗಳನ್ನೆತ್ತಿಕೊಂಡು ಸೆಣಸುವ ಸ್ವಭಾವ ಇಬ್ಬರು 'ದಂಪತಿ'ಗಳಿಗಿತ್ತು. ಅವರಿಗೆ ತಮ್ಮ ಕರ್ಕರೆ, ರಗಳೆ ಎಂದರೆ ಸುಬ್ಬಲಕ್ಷ್ಮಿಯ ಸಂಗೀತಕ್ಕಿಂತಲೂ ಸುಂದರ. ಒಮ್ಮೆ ಪತಿ ಮನೆಗೆ ಬಂದವನೇ ಗದ್ದರಿಸಿದ: 'ಕಾಲು ತೊಳೆಯೋದಕ್ಕೆ ಒಂದು ತಂಬಿಗೆ ನೀರು ಬೇರೆ ಇಟ್ಟಿಲ್ಲ'. ನೀರಿನ ತಂಬಿಗೆಯನ್ನು ಹಿಡಿದು ಕಾಲು ತೊಳೆದುಕೊಳ್ಳಲು ಸುರುಮಾಡಿದ್ದ ಶಠನಾಯಕನನ್ನು ಕಂಡು ದಂ 'ಇಟ್ಟನೀರು ತಲೆ ತೊಳೆದುಕೊಳ್ಳೋದಕ್ಕೆ ಅಂತ ಮಾಡಿದ್ದೀರೋ?' ಎಂದು ರಾಮಬಾಣ ಎಸೆದಳು. ಸರಿ ಅಲ್ಲಿಂದ ಪ್ರಾರಂಭವಾದ ವಾದ ಪ್ರತಿವಾದ ಮಧ್ಯಾಹ್ನ ೧೨ಕ್ಕೆ ಕವಳಧ್ವಂಸ ಪ್ರಾರಂಭ ವಾಗುವವರೆಗೆ ಸಾಗಿತ್ತು. ಇದು ಪ್ರಾಚೀನ ರಸಿಕತೆ ಎಂದು ಇಂದು ಹೆಚ್ಚಿನ ಧೀರರಾದ ನವನಾಗರಿಕ ತರುಣ ತರುಣಿಯರು ಕಹಿದುಃಖದ ಸನ್ನಿವೇಶವನ್ನು ಅವಿವೇಕದಿಂದ ಅಣಿಮಾಡಿಕೊಂಡು ಸಿಹಿದುಃಖವನ್ನು ಬಯಸಿ 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಎಂಬ ಸ್ಫೋಟ ನೀತಿಹಿಡಿದು ಯಾವ ಆಸ್ಪತ್ರೆಯೂ ಗುಣಪಡಿಸಲಾರದ, ಕೋರ್ಟು ಮಾತ್ರ ಶಸ್ತ್ರಕ್ರಿಯೆಯಂತೆ ಪೆಟ್ಟೊಂದು ತುಂಡೆರಡು ಮಾಡಬಲ್ಲ ರೋಗಕ್ಕೆ ತುತ್ತಾಗುತ್ತಿರುವುದು ರೋಮಾನ್ಸಿನ ಪ್ರಣಯ ಪ್ರೌಢಿಯ ಅತ್ಯುನ್ನತ ಶಿಖರವೆನ್ನಬೇಕಲ್ಲವೆ?

❑

# ನಿಮ್ಮ ನಾತೆ ಯಾವುದು?

ನಿಮಗೆ ಎಷ್ಟು ನಾತೆ ಇವೆ? ಎರಡೇ? ಮೂರೇ? ಹತ್ತೇ? ನೂರೇ? ನಿಮಗಿರುವುದು ಒಂದೇ ನಾತೆ ಎನ್ನುತ್ತೀರಾ? ಹಾಗಾದರೆ ನೀವು ಶುದ್ಧ ನಾಲಾಯಖ್ಖು ಜನ ಅಥವಾ ಶುದ್ಧ ನಗಣ್ಯ, ನಾನೆಂಟಿಟಿ ಮನುಷ್ಯ ಇರಬೇಕು. ಅಂದರೆ ನೀವೊಬ್ಬ ವ್ಯಕ್ತಿ ಅಂತ ಲೆಕ್ಕಕ್ಕೇ ಹಿಡಿಯಲಿಕ್ಕೆ ಸಾಧ್ಯವಿಲ್ಲ. ಒಂದು ಕಣ್ಣು ಕಣ್ಣಲ್ಲ. ಒಬ್ಬ ಮಗ ಮಗನಲ್ಲ. ಒಂದು ನಾತೆ ನಾತೆಯೇ ಅಲ್ಲ. ಕನಿಷ್ಠ ಪಕ್ಷ ಎರಡಾದರೂ ನಾತೆ ಇದ್ದರೆ ನೀವು ಒಬ್ಬ ವ್ಯಕ್ತಿ ಅನ್ನಬಹುದು.

ಆದರೆ "ನಾತೆ" ಅಂದರೇನು ಅಂತ ನೀವು ಕೇಳಬಹುದು. ನೀವು ನಾತೆಗಳಿಲ್ಲದ ಅ-ನಾಥರಾಗಿದ್ದರೆ ಈ ಪ್ರಶ್ನೆ ಸಹಜವೇ ಸೈ. ನಿಮ್ಮಂಥವರ ತಲೆಯೊಳಗೆ ಬೆಳಕು ಚೆಲ್ಲುವುದಕ್ಕಾಗಿ ನಾತೆಯ ಶಬ್ದಾರ್ಥವನ್ನು ವಿವರಿಸಬೇಕು. ಅದನ್ನು ಅರಿತ ಮೇಲೆ ನೀವೂ ನಾತೆಗಳನ್ನು ಸಂಪಾದಿಸಿ ಮನುಷ್ಯರಾಗಬಹುದೆಂಬ ಆಶೆಯಿಂದ ಇದನ್ನು ಕೈಕೊಳ್ಳುತ್ತೇನೆ.

ಒಂದು ಉದಾಹರಣೆಯಿಂದ ಪ್ರಾರಂಭಿಸುವುದು ಯೋಗ್ಯ. ನೀವು ಹುಟ್ಟುತ್ತೀರಿ. ತತ್‌ಕ್ಷಣವೇ ನಿಮಗೆ ನಾತೆಗಳನ್ನು ಪಡೆಯುವ ಜನ್ಮಸಿದ್ಧ ಹಕ್ಕು ಪ್ರಾಪ್ತವಾಗುತ್ತದೆ. ಅಂದರೆ ನಾನು ಹುಟ್ಟಿದ್ದೇನೆ. ಅಥವಾ ಇದ್ದೇನೆ ಎಂಬ ತಿಳಿವಳಿಕೆ ಬಂದೊಡನೆ ನಿಮ್ಮ ಹಕ್ಕು ಅಮಲಿಗೆ ಬರುತ್ತದೆ. ಅಂದಾಕ್ಷಣ ಆ ಹಕ್ಕು ನಿಮ್ಮ ವಶವಾದ ಹಾಗಲ್ಲ. ಹಕ್ಕು ನಿಮಗಿದೆಯೆಂಬ ಪ್ರಜ್ಞೆ ಇಲ್ಲದೆ ನೀವು ಜೀವಮಾನವೆಲ್ಲ ಅ-ನಾತರಾಗಿ ಬದುಕುತ್ತ ಹೋಗಲೂಬಹುದು. ಕುದುರೆಯನ್ನು ನಿಮ್ಮ ಮನೇ ಮುಂದೆ ಕಟ್ಟಲಾಗಿದೆ. ಅದನ್ನು ಸವಾರಿ ಮಾಡಲು ಕಲಿತರೆ ತಾನೆ ಸವಾರರು ಅನಿಸುವುದು.

ನೀವು ಖಾಸಗಿ ವ್ಯಕ್ತಿಯಾಗಿದ್ದರೆ ನಾತೆಗಳನ್ನು ಸಂಪಾದಿಸುವ ಸಂದರ್ಭ ಸಾಮಾನ್ಯವಾಗಿ ಮದುವೆ ವಯಸ್ಸಿನಲ್ಲಿ ಬರುತ್ತದೆ. ಕಾಲೇಜಿನಲ್ಲಿ ನೀವು ವರದಕ್ಷಿಣೆಯನ್ನು ಖಂಡಿಸಿ ಭಾಷಣ ಮಾಡುತ್ತೀರಲ್ಲ. ಆದರೀಗ ವರದಕ್ಷಿಣೆ ಇಲ್ಲದೆ ಪಾಣಿಗ್ರಹಣಕ್ಕೆ ನಿಮ್ಮ ಕೈ ಏಳುವುದೇ ಇಲ್ಲ. ನನ್ನಂಥ ಯಾರಾದರೂ ಪೆದ್ದು ಮನುಷ್ಯ ನಿಮ್ಮ ಕಾಲೇಜು ಭಾಷಣವನ್ನು ನೆನಪಿಸಿಕೊಟ್ಟರೆ ಆಗ ನೀವು ಹೇಳುತ್ತೀರಿ: "ಹೌದಯ್ಯಾ ಲಾಂಗೂಲ್, ವೈಯಕ್ತಿಕವಾಗಿ ನಾನು ಈಗಲೂ ವರದಕ್ಷಿಣೆಗೆ ವಿರೋಧಿಯೇ. ಆದರೆ ಪ್ರಾಕ್ಟಿಕಲ್ ಮ್ಯಾನ್ ಅನ್ನೋ ನಾತೆಯಿಂದ ನಾನು ವರದಕ್ಷಿಣೆ ಸ್ವೀಕರಿಸಲೇಬೇಕಾಗುತ್ತೆ. ಒಂದನೇದಾಗಿ ಈಗ ಪಾಗಡಿ ಕೊಡದೆ ಬಾಡಿಗೆಗೆ ಮನೇನೇ ಸಿಗಲ್ಲ. ಮೇಲೆ ಫರ್ನಿಚರ್, ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆ ಪಗಡಿ ಮೇಲೆ ಹಣ ಸುರೀಬೇಕು. ಪರ್ಸನಲೀ ಕೇಳಿದರೆ ನನಗೆ ಇಂಥಾ ಆಡಂಬರ ಅಗತ್ಯ ಇಲ್ಲ, ಅನ್ನು. ಮಣ್ಣಿನ

ಮಡಿಕೇನೂ ನಡಿಯುತ್ತೆ. ಈಚಲು ಚಾಪೇನೂ ಸೈಯೇ. ಆದರೆ ಗೃಹಿಣೀ ಗೃಹಮುಚ್ಯತೇ ಅಂತಾರಲ್ಲ. ನಾನು ಮಾಡಿಕೊಳ್ಳೋ ಮಹಾರಾಯಿತಿ ಮೇಲೆ ನನ್ನ ಸ್ವಂತದ ಈ ಸಿಂಪಲ್ ಲಿವಿಂಗ್ ಈಡಿಯೋಜಂಕ್ರಸಿಸ್ಸನ್ನು ಹೇರೋಕ್ಕೆ ನನಗೆ ಅಧಿಕಾರವಿಲ್ಲ. ಅವಳ ಸಲುವಾಗೇ ನಾನು ಮನೇ ಮಾಡೋದಲ್ವೇ? ಅದಕ್ಕೆ ಅವಳಪ್ಪನ ಹತ್ತಿರ ಒಂದಿಷ್ಟು ದುಡ್ಡು ಅಪೇಕ್ಷಿಸೋದು ಏನು ತಪ್ಪು? ಅದೂ ಅಲ್ಲದೆ, ನಾನು ವರದಕ್ಷಿಣೆ ಬೇಡ ಅಂತ ಘೋಷಣೆಮಾಡಿದರೆ ಮಾವಂದಿರಾಗತಕ್ಕವರು ಇವನಲ್ಲಿ ಏನೋ ಐಬು ಇರಬೇಕು ಅಥವಾ ಇವನ ತಲೇನೇ ಸರಿ ಇಲ್ಲ ಅಂದುಕೊಳ್ಳುತ್ತಾರೆ. ಆದ್ದರಿಂದ ಪ್ರಾಕ್ಟಿಕಲ್ ಮ್ಯಾನ್ ಅನ್ನೋ ನಾತೆಯಿಂದ ಮತ್ತು ರೆಸ್ಪೆಕ್ಟ್ ಎಕ್ಸ್‌ಪೆಕ್ಟ್ ಮಾಡೋ ಅಳಿಯ ಅನ್ನೋ ನಾತೆಯಿಂದ ನಾನು ವರದಕ್ಷಿಣೆ ಕೇಳಬೇಕಾಗಿದೆ" ಅನ್ನುತ್ತೀರಿ. ಈಗ ನಿಮಗೆ ವೈಯಕ್ತಿಕ, ಪ್ರಾಕ್ಟಿಕಲ್ ಮ್ಯಾನ್ ಮತ್ತು ಮರ್ಯಾದಾರ್ಹ ಅಳಿಯ ಅನ್ನೋ ಮೂರು ನಾತೆಗಳು ಪ್ರಾಪ್ತವಾದಂತಾಯಿತು. ತದ್ವಿಪರೀತವಾಗಿ ನೀವು ಕಾಲೇಜಿನಲ್ಲಿ ನಾನು ಹೀಗೆ ಭಾಷಣ ಮಾಡಿದ್ದೇನೆ, ಆದ್ದರಿಂದ ಅದರ ಪ್ರಕಾರ ನಡಕೊಳ್ಳೋದು ನನ್ನ ಕರ್ತವ್ಯ ಅಂತ ವರದಕ್ಷಿಣೆ ಇಲ್ಲದೆ ನಿಮ್ಮ ವರಲಕ್ಷ್ಮೀನ ಮನೆತುಂಬಿಸಿಕೊಂಡಿರೋ ನಿಮಗೆ ಆಗ ಒಂದೇ ನಾತೆ ಇರುತ್ತೆ—ಅದು ವೈಯಕ್ತಿಕ—ಅಂದರೆ ಅದು ನಾತೆಯೇ ಅಲ್ಲ. ಆದ್ದರಿಂದ ನೀವು ನಾನೆಂಟಿಟಿ ಯಾನೇ ನಗಣ್ಯ ಆಗುತ್ತೀರಿ.

ಮೇಲಿನದು ಒಂದು ಸಿಂಪಲ್ ಕೇಸ್. ನಿಮ್ಮಂಥ ಸುಕುಮಾರಮತಿಗಳಿಗೆ ವಿಷಯವನ್ನ ತಲೇಲಿ ಹೋಗಿಸೋ ಸಲುವಾಗಿ ಉದಾಹರಿಸಿದ್ದು. ಜೀವನದಲ್ಲಿ ನಿಮಗೆ ಎದುರಾಗುವುದು ಇಷ್ಟು ಸಿಂಪಲ್ ಕೇಸುಗಳಲ್ಲ. ಎರಡನೇ ಪಾಠವಾಗಿ ನಿಮಗೆ ಸ್ವಲ್ಪ ಕಾಂಪ್ಲಿಕೇಟೆಡ್ ಆದ ಇನ್ನೊಂದು ಕೇಸ್ ಉದಾಹರಿಸುತ್ತೇನೆ. ಮದುವೇ ಕೇಸೇ ಮುಂದುವರಿಸಿ ಹೇಳುವುದಾದರೆ, ನಿಮ್ಮ ವಧುವನ್ನು ಮನೆತುಂಬಿಸಿಕೊಂಡು ನಾಲ್ಕು ದಿನ ಕಳೆದು ಗೃಹಲಕ್ಷ್ಮಿತನ ಒಂದಿಷ್ಟು ಸವಕಲಾದ ಮೇಲೆ ನಿಮ್ಮ ತಾಯಿಗೂ ಹೆಂಡತಿಗೂ ತಂಟೆ ಹುಟ್ಟುತ್ತದೆ. ಒಂದು ದಿನ ನೀವು ಕಚೇರಿಯಿಂದ ಮನೆಗೆ ಬರುವಾಗ ಧುಸುಮುಸು ಬುಸುಬುಸು ಕೇಳಿಸುತ್ತದೆ. ಕೆಲ ನಿಮಿಷಗಳಲ್ಲಿಯೇ ನಿಮ್ಮ ಕೋರ್ಟಿನ ಮುಂದೆ ಪ್ರಕರಣ (ಅಥವಾ ವಕೀಲಿ ಕಾರಕೂನರ ಸ್ಪೆಲ್ಲಿಂಗ್ ಪ್ರಕಾರ ಪ್ರಕರ್ಣ) ದಾಖಲಾಗುತ್ತದೆ. ಈಗ ನೀವು ಬರೇ ನ್ಯಾಯಾಧೀಶ ಅನ್ನೋ ನಾತೆಯಿಂದ ಸತ್ಯ ನ್ಯಾಯ ಯಾವ ಕಡೆ ಇದೆ ಅಂತ ಒಂದು ತೀರ್ಮಾನಕ್ಕೆ ಬಂದು ಜಡ್ಜ್‌ಮೆಂಟು ಓದುವವರಾದರೆ ನಿಮಗೆ ನಾತೆಗಳು ಅಗತ್ಯವಾಗುವುದೇ ಇಲ್ಲ. ಆದರೆ ಪ್ರಪಂಚದಲ್ಲಿ ಯಾವಾಗಲೂ ಸತ್ಯ ನ್ಯಾಯ ಹೇಗೆ ಸಾಧ್ಯವಾಗುತ್ತೆ? ನಿಮ್ಮ ನ್ಯಾಯಾಧೀಶ ನಾತೆಯನ್ನು ತತ್ಕಾಲಕ್ಕೆ ಐಸ್ ಪೆಟ್ಟಿಗೆಯಲ್ಲಿಟ್ಟು ನೀವು ಹೀಗೆ ಹೇಳುತ್ತೀರಿ:

"ಅಮ್ಮಾ ವೈಯಕ್ತಿಕ ನಾತೆಯಿಂದ ನಾನು ನಿನ್ನದು ಸರಿ ಅನ್ನುತ್ತೇನೆ. ಆದರೆ ಅವಳ ಗಂಡ ಅನ್ನುವ ನಾತೆಯಿಂದ ಮತ್ತು ಅವಳ ಅಪ್ಪ ನನಗೆ ಪ್ರಮೋಷನ್ ಕೊಡಿಸಿದ್ದಾನೆ ಅನ್ನೋ ನಾತೆಯಿಂದ ಅವಳದ್ದೇ ಸರಿ ಎಂದು ತೀರ್ಪು ಕೊಡುತ್ತೇನೆ."

ಅಥವಾ,

"ನನ್ನ ಚಿನ್ನಾ, ನಾನು ವೈಯಕ್ತಿಕವಾಗಿ ನಿನ್ನ ವಾದ ಸರಿಯೆಂದು ಒಪ್ಪುತ್ತೇನೆ. ಆದರೆ ನನ್ನಮ್ಮನ ಮಗ ಅನ್ನೋ ನಾತೆಯಿಂದ ನಿನಗೆ ಸುಮ್ಮನೆ ಬಾಯಿ ಮುಚ್ಚಿಕೊಂಡು ಬಿದ್ದಿರು ಅನ್ನುತ್ತೇನೆ."

(ಹೆಂಡತೀನ ನೋಡಿ) "ಇಲ್ಲವೆ, ನಿನ್ನ ಗಂಡ ಅನ್ನೋ ನಾತೆಯಿಂದ ನನ್ನಮ್ಮನ ಕಿರಿಕಿರಿಯಿಂದ ನಿನ್ನ ಪಾರುಮಾಡಿ ಬೇರೆ ಮನೆ ಮಾಡಬೇಕೆನ್ನೋದು ಸರಿ; (ತಿರುಗಿ), ನಿನ್ನ ಮಗ ಅನ್ನೋ ನಾತೆಯಿಂದ ನನ್ನ ಹೆಂಡತೀನ ನಿನಗೆ ವಿಧೇಯಳಾಗಿ ಮಾಡಬೇಕೆಂಬೋದೂ ಸರಿ. ಆದರೆ ವೈಯಕ್ತಿಕ ನಾತೆಯಿಂದ ನಾನು ಈ ಬಗ್ಗೆ ತಲೆ ಕೆಡಿಸಿಕೊಳ್ಳೋಕೆ ತಯಾರಿಲ್ಲ; ಆದ್ದರಿಂದ ನೀವು ನೀವು ತಲೆ ತಲೆ ಘಟ್ಟಿಸಿಕೊಳ್ಳಿ, ನನ್ನ ನಿದ್ದೆ ಕೆಡಿಸಬೇಡಿ."

ಈ ಮೂರು ತರಹದ ನಿಲುವುಗಳಿಂದಲೂ ನಿಮ್ಮ ಸಮಸ್ಯೆ ಉಪಶಮನ ಹೊಂದುವುದಿಲ್ಲ ಎಂದು ನೀವು ಹೇಳುತ್ತೀರಿ. ನಾನೂ ಬಲ್ಲೆ. ಆದರೆ ಜಗತ್ತಿನಲ್ಲಿ ಯಾವ ಸಮಸ್ಯೆ ತಾನೆ ಬಗೆಹರಿಯುತ್ತದೆ ಹೇಳಿ? ಮುಖ್ಯ ಅಂಶ ಅಂದರೆ ನಿಮ್ಮ ವೈಯಕ್ತಿಕ ನಾತೆಯೇ ಬೇರೆ. ಬೇರೆ ನಾತೆಗಳೇ ಬೇರೆ ಎಂಬುದು. ವೈಯಕ್ತಿಕವಾಗಿ ನಿಮ್ಮದು ನಿಷ್ಕಲ್ಮಷ ನಾತೆ ಅದಲ್ಲದೆ ಈ ಪ್ರಕರಣದಲ್ಲಿ ನೀವು ನ್ಯಾಯಾಧೀಶರ ನಾತೆಯನ್ನು ಪೂರ್ತಿ ಐಸ್ ಪೆಟ್ಟಿಗೆಯಲ್ಲಿಟ್ಟಿದ್ದೀರಿ ಎಂಬುದೂ ಗಮನಾರ್ಹವಾಗಿದೆ. ನೀವು ಜಿಲ್ಲಾ ಜಡ್ಜರಾಗಿದ್ದರೆ ನಿರ್ವಿಕಾರವಾಗಿ ನಿಮ್ಮ ಮುಂದೆ ನಡುಗುತ್ತ ನಿಂತ ಅಪರಾಧಿಗೆ ಗಲ್ಲಿನ ಶಿಕ್ಷೆ ಕೊಟ್ಟು ನಿಮ್ಮ ನ್ಯಾಯಾಧೀಶ ನಾತೆಯನ್ನು ಕಾಪಾಡಿಕೊಳ್ಳಬಹುದು. ಆದರೆ ನಿಮ್ಮ ಶ್ರೀಮತಿಗೂ ನಿಮ್ಮ ಮಾತೃದೇವತೆಗೂ ನಡುವೆ ನೀವು ನಿಮ್ಮ ನ್ಯಾಯಾಧೀಶ ನಾತೆಯನ್ನು ಏನೂ ಮಾಡಲಾರಿರಿ. ಕಟ್ಟಕಡೆಗೆ ನಿಮ್ಮ ಶ್ರೀಮತಿಯದೇ ತಪ್ಪೆಂದು ನೀವು "ವೈಯಕ್ತಿಕ"ವಾಗಿ ನಂಬಿದ್ದರೂ ನಿಮ್ಮ ಶ್ರೀಮತಿಯ ಕೈಲಿ ನಿಮ್ಮ ಮತಿ ಇರುವುದರಿಂದ ಬೇರೆ ಮನೆ ಮಾಡಲೇಬೇಕಾದೀತು. ಆಗ ನೀವು ಇನ್ನೊಂದು ನಾತೆಯನ್ನು ಹೊರಗೆ ತೆಗೆದು "ಮಾನವತಾವಾದಿ" ನಾತೆಯಿಂದ, ಹುಲಿಯನ್ನು ಆಕಳಿನೊಡನೆ ಬಾಳಲು ನಿರ್ಬಂಧಪಡಿಸಬಾರದೆಂದು ಬೇರೆ ಮನೆ ಮಾಡಿದ್ದಾಗಿ ಹೇಳಿಕೊಳ್ಳುವಿರಿ. ಆದರೆ ಈ ಇಬ್ಬರಲ್ಲಿ ಹುಲಿ ಯಾರು ಆಕಳು ಯಾರು ಎಂಬ ವಿಷಯದಲ್ಲಿ ನೀವು ಡಿಪ್ಲೊಮ್ಯಾಟಿಕ್ ನಾತೆಯಿಂದ ಅರ್ಥಪೂರ್ಣ ಮೌನವನ್ನು ವಹಿಸುತ್ತೀರಿ.

ಈ ಪ್ರಾಥಮಿಕ ಪಾಠಗಳಿಂದ ನಿಮಗೆ "ನಾತೆ"ಯ ಅರ್ಥಗ್ರಹಣವಾದ ಮೇಲೆ ನಮ್ಮೀ ಇಂಡಿಯ ದಟೀಸ್ ಭಾರತ ದೇಶದಲ್ಲಿ ನಾತೆಗಳು ಆಡುವ ಪಾತ್ರಗಳ ಲೀಲೆಯನ್ನು ನೋಡಿ ಆನಂದಿಸುವುದು ಸುಲಭವಾಗುತ್ತದೆ.

ಮೊನ್ನೆ ನನಗೊಬ್ಬ ಅಪ್ಪಟ ಗಾಂಧೀವಾದಿ ವಕೀಲರ ಪರಿಚಯವಾಯಿತು. ಕೋರ್ಟಿನಲ್ಲಿ ಸುಳ್ಳು ಹೇಳುವ ಪ್ರಶ್ನೆಯನ್ನು ನಾವು ಚರ್ಚಿಸಿದೆವು. "ವೈಯಕ್ತಿಕ ನಾತೆಯಿಂದ ನಾನು ಎಲ್ಲ ತರಹದ ಎಲ್ಲ ಸ್ಥಳಗಳ ಸುಳ್ಳುಗಳನ್ನು ಖಂಡಿಸುತ್ತೇನೆ" ಎಂದು ಅವರು ನನಗೆ ಭರವಸೆ ಕೊಟ್ಟರು. "ಆದರೆ ನೀವು ಗೆದ್ದುಕೊಟ್ಟ ಕೇಸುಗಳೆಲ್ಲ ಸತ್ಯ ಕೇಸುಗಳೇಯೋ?"

ಎಂಬುದಾಗಿ ಕೇಳುವ ಹೆಡ್ಡತನ ಮಾಡಿದೆ. "ವೈಯಕ್ತಿಕವಾಗಿ ಅಂದೆನಲ್ಲ ಮಿ। ಲಾಂಗೂಲ್?" ಎಂದವರು ನನಗೆ ನೆನಪು ಮಾಡಿಕೊಟ್ಟರು. "ಆದರೆ ವಕೀಲ ಅನ್ನೋ ನಾತೆಯಿಂದ ನಾನು ನನ್ನ ಕಕ್ಷಿಗಾರನ ಹಿತವನ್ನು ಕಾಪಾಡಬೇಕಾಗುತ್ತೆ. ಅದು ಸತ್ಯದಿಂದಲೇ ಯಾವಾಗಲೂ ಸಾಧ್ಯ ಅನ್ನೋಕಾಗಲ್ಲ. ನಾನು ವೃತ್ತಿಧರ್ಮವನ್ನೂ ನೋಡಬೇಕಲ್ಲ." ಆದರೆ ತಾವು ಕೋರ್ಟಿನಲ್ಲಿ ಅಪ್ಪಟ ಸುಳ್ಳುಗಳನ್ನು ಹೇಳುವುದಿಲ್ಲ ಎಂದು ಮತ್ತೆ ಭರವಸೆ ಕೊಟ್ಟರು. "ಎಷ್ಟೋ ಸಲ ನಾವು ಬದುಕಿನಲ್ಲಿ ಅರ್ಧ ದೋಸೆಯಿಂದ ತೃಪ್ತರಾಗಬೇಕಾಗುತ್ತೆ, ಅಲ್ಲವೆ? ಮೇಲಾಗಿ ಅರ್ಧ ಸತ್ಯಗಳು ಪೂರ್ಣ ಸತ್ಯಗಳಿಗಿಂತಲೂ ಹೆಚ್ಚು ಸತ್ಯವಾಗಿ ಕಾಣಿಸುತ್ತವೆ" ಒಂದೊಮ್ಮೆ ಕೇಸು ಗೆಲ್ಲೋಕೆ ಪೂರ್ಣ ಸುಳ್ಳೇ ಹೇಳಬೇಕಾಗಿ ಬಂದರೆ? ಅವರು ದನಿ ಇಳಿಸಿ ಗುಟ್ಟು ಹೇಳುವವರಂತೆ, "ಹಾಗೆ ಪ್ರಸಂಗ ಬಂದಾಗ ನಾನು ತಲೆಯ ಮೇಲಿನ ಗಾಂಧೀಟೊಪ್ಪಿಯನ್ನು ತೆಗೆದು ಕೆಳಗೆ ಟೇಬಲ್ ಮೇಲಿಟ್ಟು ಆರ್ಗ್ಯುಮೆಂಟ್ ನಡೆಸುತ್ತಿದ್ದೆ. ಈಗ ಆ ಪ್ರಸಂಗ ಬರಲ್ಲ. ಇಡೀ ಸುಳ್ಳು ಹೇಳಬೇಕಾದಾಗ ನನ್ನ ಮಗ ಆರ್ಗ್ಯುಮೆಂಟ್ ಮಾಡುತ್ತಾನೆ. ಅವನು ಗಾಂಧೀವಾದಿಯಲ್ಲ. ಅವನು ಕಮ್ಯುನಿಸ್ಟ್ ಒಲವಿನವ. ಸತ್ಯ ಅನ್ನೋದು ಬೂರ್ಜುವಾ ಹಿತಕ್ಕೋಸ್ಕರ ಪ್ರಯೋಗಿಸಲ್ಪಡುವ ಫ್ಯೂಡಲ್ ಕಾನ್ಸೆಪ್ಟ್— ಎಂಬುದು ಅವನ ದೃಢಾಭಿಪ್ರಾಯ" ಎಂದು ತಿಳಿಸಿದರು.

ಕಾಲೇಜಿನಲ್ಲಿ ಮಹಾಮಾನವತಾವಾದಿಯಾಗಿದ್ದು ಮುಂದೆ ಪೊಲೀಸ್ ಪಡೆ ಸೇರಿದ್ದ ನನ್ನ ಮಿತ್ರರೊಬ್ಬರು ಲಾಕಪ್ಪಿನಲ್ಲಿ ಒಬ್ಬ ಕೈದಿಯನ್ನು ಬೂಟುಗಾಲಿನಿಂದ ಒದ್ದು ಅವನು ಆಸ್ಪತ್ರೆ ಸೇರಬೇಕಾಗಿ ಬಂದು ಸ್ವಲ್ಪ ಗಲಾಟೆ ಆಯಿತು. ಅವರಿಗೆ ಎರಡೂ ರಾಜಕೀಯ ಪಕ್ಷಗಳಲ್ಲಿ ಸ್ನೇಹಿತರಿದ್ದದ್ದರಿಂದ ಬೌ ಆಗಿ ಎದ್ದ ಗದ್ದಲ ಕುಂಯಿ ಆಗಿ ಮುಕ್ತಾಯವಾಯಿತು ಅನ್ನಿ. ಮೊನ್ನೆ ಅವರು ಸಿಕ್ಕಿದಾಗ ಈ ಕುತ್ತಿನಿಂದ ಪಾರಾದದ್ದಕ್ಕೆ ಅವರನ್ನ ಅಭಿನಂದಿಸಿದೆ. ಅವರು ಕ್ರಿಸ್ತನ ಮೇಲೆ ಮಾಡಿಕೊಂಡು, "ಮಾನವತಾವಾದಿ ಎಂಬ ನಾತೆಯಿಂದ ಆಯ್ ಹೇಟ್ ಆಲ್ ದೀಸ್ ಥರ್ಡ್ ಡಿಗ್ರಿ ಮೆಥಡ್ಸ್" ಎಂದರು. ಆಮೇಲೆ ಪೊಲೀಸ್ ಮುಖ ಮಾಡಿಕೊಂಡು, "ಆದರೆ ಪೊಲೀಸ್ ಅಧಿಕಾರಿ ಅನ್ನೋ ನಾತೆಯಿಂದ ಪ್ರಿಸ್ನರ್ಸನ್ನ ಮೊದಲೊಂದು ಒದೆ ಕೊಟ್ಟೇ ಮಾತಾಡಿಸ್ತೇನೆ", ಎಂದು ನನ್ನನ್ನು ದುರುಗುಟ್ಟಿ ನೋಡಿದರು. "ಆದರೆ ಒದೆ ಕೊಟ್ಟಮೇಲೆ ಅವನು ನಿರಪರಾಧಿ ಅಂತ ಗೊತ್ತಾದರೆ ಏನು ಮಾಡುತ್ತೀರಿ?" "ಏನು ಮಾಡಲಿಕ್ಕಾಗುತ್ತೆ ಹೇಳಿ? ಸಂಭಾವಿತರನ್ನು ಒದೆಯದೆ ಕದೀಮರನ್ನ ಹಿಡಿಯಕ್ಕಾಗಲ್ಲ ಯಾವಾಗಲೂ. ನಾನು ತಪ್ಪು ಮನುಷ್ಯನ ಒದ್ದಿದೀನಿ ಅನಿಸಿದರೆ ಅವನಿಗೊಂದು ಕಪ್ ಕಾಫಿ ಕೊಡಿಸಿ, ಒಂದೇ ಒದೆ ಬಿದ್ದದ್ದು ಅವನ ಪುಣ್ಯ ಅನಿಸೋ ಹಾಗೆ ಮಾತಾಡಿ ಕಳಿಸ್ತೇನೆ". ಕಡೆಗೆ ವ್ಯವಹಾರಜ್ಞಾನ ನಾತೆಯಿಂದ ಅವರು ನನಗೆ ಒಂದು ಬೀಜಮಾತು ಹೇಳಿದರು. "ನಾವು ಒದೆಯದೆ ಇದ್ದರೂ ಬರೇ ಹೆದರಿಕೆಯಿಂದಲೇ ಅವನು ಸತ್ಯ ಹೇಳಿದ್ದರೂ ನಾಳೆ ಕೋರ್ಟಿನಲ್ಲಿ ಅವನ ವಕೀಲರು ನಾವು ಚಿತ್ರಹಿಂಸೆ ಕೊಟ್ಟು ಸುಳ್ಳು ತಪ್ಪೊಪ್ಪಿಗೆ ಪಡೆದಿದ್ದೀವಿ ಅಂತಲೇ ವಾದಿಸ್ತಾರೆ. ಕೋರ್ಟು ಅದನ್ನೇ ನಂಬುತ್ತೆ. ಆದ್ದರಿಂದ

ನಮ್ಮಿಂದ ಸಮಾಜ ನಿರೀಕ್ಷಿಸೋದು ಇದನ್ನೇ ಅಂತಾಗಲ್ಲವೇ?" ನಾನು ಒಪ್ಪಲೇ ಬೇಕಾಯಿತು. ಗಾಂಧೀವಾದಿಗಳು ತಮ್ಮ ಪರವಾಗಿ ಸುಳ್ಳು ಹೇಳುವುದಕ್ಕೆ ಬೇರೆಯವರನ್ನು ನೇಮಿಸುವ ಹಾಗೆ ನಾವು ನಮ್ಮ ಪರವಾಗಿ ಅಮಾನುಷವಾಗಿ ನಡೆದುಕೊಳ್ಳುವುದಕ್ಕೆ ಪೊಲೀಸರನ್ನು ಇಟ್ಟುಕೊಳ್ಳುವುದಿಲ್ಲವೆ?

ಆದರೆ ನಾತೆಗಳ ಅತ್ಯಂತ ಸ್ವಾರಸ್ಯವಾದ ಆಟ ನಡೆಯುವುದು ರಾಜಕಾರಣದಲ್ಲಿ. ರಾಜಕಾರಣಿಗಳ ಹತ್ತಿರಮತ್ತಾರಿಗಿಂತಲೂ ಹೆಚ್ಚಿಗೆ ನಾತೆಗಳು ಇರುತ್ತವೆ. ಒಂದು ನಾತೆ ಟೊಪ್ಪಿಯಲ್ಲಿ ಇನ್ನೆರಡು ಹೊರ ಜೇಬಿನಲ್ಲಿ, ಮತ್ತೆ ಎಷ್ಟೋ ಒಳ ಜೇಬಿನಲ್ಲಿ ಯಾವಾಗ ಬೇಕಾದರೂ ಚಂಗ್ ಅಂತ ನೆಗೆಯುವುದಕ್ಕೆ ಸಿದ್ಧವಾಗಿರುತ್ತವೆ. ನಮ್ಮ ಪ್ರದಾನ ಮಂತ್ರಿಗಳನ್ನೇ ನೋಡಿರಿ. ಅವರು ತುಂಬಾ ನ್ಯಾಯಸ್ಥ ಮನುಷ್ಯ. ಆದರೆ ವೈಯಕ್ತಿಕವಾಗಿ ಮಾತ್ರ. ಹಿಂದಿನ ಪ್ರಧಾನಮಂತ್ರಿಗಳು ನಮ್ಮ ನೆರೆಯ ಹಿಮಾಲಯ ರಾಜ್ಯವಾದ ಸಿಕ್ಕಿಂ ಅನ್ನು ಹೆಚ್ಚು ಕಮ್ಮಿ ಬಲವಂತದಿಂದ ಇಂಡಿಯ ದಟೀಸ್ ಭಾರತದಲ್ಲಿ ಸೇರ್ಪಡೆ ಮಾಡಿಕೊಂಡದ್ದು ತಪ್ಪು ಎಂಬುದು ನಮ್ಮ ಸದ್ಯದ ಪ್ರೀತಿಯ ಪ್ರಧಾನಮಂತ್ರಿ ಮುರಾರ್ಜಿ ಭಾಯಿಯ ದೃಢಾಭಿಪ್ರಾಯ. ಅಭಿಪ್ರಾಯ ಇದ್ದ ಮೇಲೆ ಅದನ್ನು—ಅದು ಅದೃಢವಿರಲಿ ಸದೃಢವಿರಲಿ —ವ್ಯಕ್ತಗೊಳಿಸದೇ ಬಿಡುವ ಆಯಪ್ಪ ಅವರಲ್ಲ. ಪ್ರಧಾನಮಂತ್ರಿಯಾದ ಮೇಲೆ ಕೈಗೆ ಸಿಕ್ಕಿದ ಪ್ರಥಮ ಅವಕಾಶವನ್ನೇ ಹಿರಿದುಕೊಂಡು ಅವರು ಸಿಕ್ಕಿಂ ಬಗ್ಗೆ ತಮಿಳು ಅಭಿಪ್ರಾಯವನ್ನು ಜಗಜ್ಜಾಹೀರು ಮಾಡಿದರು.

ಹಾಗಾದರೆ ಮುಂದೇನು? ಬಡ ಸಿಕ್ಕಿಂ ಚೋಗ್ಯಾಲರಿಗೆ ಅವರ ಪುಟ್ಟ ರಾಜ್ಯವನ್ನು ಚಿನ್ನದ ಹರಿವಾಣದಲ್ಲಿಟ್ಟು ವಾಪಸು ಮಾಡುವ ವಿಧೇಯಕವನ್ನು ನಮ್ಮ ಪಾರ್ಲಿಮೆಂಟ್ ದಟೀಸ್ ಸಂಸತ್ತಿನ ಮುಂದೆ ತರುತ್ತಾರೆಯೆ? ಛೇ, ಛೇ, ಅದು ಹೇಗಾದೀತು? ಸಿಕ್ಕಿಂ ಸೇರ್ಪಡೆ ಬಗ್ಗೆ ಈ ದೃಢಾಭಿಪ್ರಾಯ ಅವರಿಗಿರುವುದು ವೈಯಕ್ತಿಕ ನಾತೆಯಲ್ಲಿ; ಪ್ರಧಾನಮಂತ್ರಿ ನಾತೆಯಲ್ಲಿ ಅಲ್ಲ. ವೈಯಕ್ತಿಕ ಮುರಾರ್ಜಿಯ ಬದಲು ಪ್ರಧಾನಮಂತ್ರಿ ಮುರಾರ್ಜಿಗೇನಾದರೂ ಈ ಅಭಿಪ್ರಾಯ ಇದ್ದಿದ್ದರೆ ಈ ಪ್ರಪಂಚದ ಯಾವ ಶಕ್ತಿಯೂ ಸಿಕ್ಕಿಂ ಅನ್ನು ಚೋಗ್ಯಾಲರಿಗೆ ತಿರುಗಿ ಸಮರ್ಪಿಸುವ ವಿದೇಯಕ ಬರುವುದನ್ನು ತಪ್ಪಿಸುತ್ತಿರಲಿಲ್ಲ. ಕದಾಚಿತ್ ಮೊದಲೊಂದು ಸುಗ್ರೀವಾಜ್ಞೆ ಹೊರಡಿಸಿಯೇ ಆಮೇಲೆ ಸಂಸತ್ತಿನಲ್ಲಿ ಅವರು ವಿಧೇಯಕ ತರಬಹುದಾಗಿತ್ತು. ಆದರೆ ಪಾಪ, ಚೋಗ್ಯಾಲರ ದುರದೃಷ್ಟ. ವೈಯಕ್ತಿಕ ಮುರಾರ್ಜಿ ಅಭಿಪ್ರಾಯದ ಕೋಣೆ ಯಿಂದ ಪ್ರಧಾನಮಂತ್ರಿ ಮುರಾರ್ಜಿಯ ಅಭಿಪ್ರಾಯದ ಕೋಣೆಗೆ ಬಾಗಿಲು. ಕಿಟಕಿ ಅಥವಾ ಒಂದು ಬಿರುಕು ಕೂಡ ಇಲ್ಲದಿದ್ದರಿಂದ ಅವರ ವೈಯಕ್ತಿಕ ಅಭಿಪ್ರಾಯ ಪ್ರಧಾನಮಂತ್ರಿ ಅಭಿಪ್ರಾಯದ ಕೋಣೆಗೆ ಪ್ರವೇಶ ಪಡೆಯಲೇ ಇಲ್ಲ. ಪಾಪ! ಅದು ಆಗ್ರಾ ಕೋಟೆಯ ಗೋಡೆಯೊಳಗೆ ಹುಗಿದ ಅನಾರ್ಕಲಿಯ ಹಾಗೆ ಅಲ್ಲಿಯೇ ಉಳಿಯಬೇಕಾಗಿದೆ. ಎಂದಾದರೊಮ್ಮೆ ಹುಣ್ಣಿಮೆಯ ಬೆಳದಿಂಗಳಲ್ಲಿ ಅವಳ ಆಕ್ರೋಶ ಮಾತ್ರ ಕೇಳಿಬರುತ್ತದಷ್ಟೇ.

ಕಾಂತಿ ದೇಸಾಯಿ ಪ್ರಕರಣ ಇದಕ್ಕೆ ತದ್ವಿರುದ್ಧವಾದದ್ದು. ಮುರಾರ್ಜಿ ಭಾಯಿಗೆ ತಮ್ಮ

ಮಗನ ಹಸ್ತಶುದ್ಧಿಯ ಬಗ್ಗೆ ಎಳ್ಳಿನ ಏಳು ಭಾಗದಷ್ಟು ಸಂಶಯ ಇಲ್ಲ. ಅದೂ ಅಲ್ಲದೆ ಸಂಶಯ ಇದ್ದರೂ ವೈಯಕ್ತಿಕ ನಾತೆಯಿಂದ ಅವರು ತಮ್ಮ ಮಗನ ಮೇಲೆ ಒಂದು ವಿಚಾರಣಾ ಆಯೋಗ ನೇಮಿಸುವುದಕ್ಕೆ ಹಿಂಜರಿಯುವವರಲ್ಲ. ಕಾಂತಿಯ ತಂದೆ ಎಂಬ ನಾತೆಯಿಂದ ತಮ್ಮ ಮಗನನ್ನು ವಿಚಾರಣಾ ಆಯೋಗ ಎಂಬ ಜಗನ್ನಾಥ—ಕಾ—ರಥದ ಹಾದಿಯಲ್ಲಿ ಕೆಡಹುವುದಕ್ಕೆ ಅವರಿಗೆ ಸ್ವಲ್ಪ ಆತಂಕವಾಗುತ್ತಿ ಅನ್ನಿ. ಆದರೆ ವಿಚಾರಣಾ ಆಯೋಗ ನೇಮಕಕ್ಕೆ ಅಡ್ಡಿಯಾದದ್ದು ಈ ತಂದೆಯ ನಾತೆಯಲ್ಲ. ಅವರು ಬೊಂಬಾಯಿಯಲ್ಲಿ ಅಧಿಕಾರಕ್ಕೆ ಬಂದ ಕೂಡಲೆ ಎಲ್ಲ ದುಡ್ಡಿನ ದೊಡ್ಡಪ್ಪಗಳಿಗೂ ಅಧಿಕಾರದ ಚಿಕ್ಕಪ್ಪಗಳಿಗೂ ಸುತ್ತೋಲೆ ಕಳಿಸಿ ತಮ್ಮ ಮಗನಿಗೆ ತಮ್ಮ ಮಗ ಅನ್ನುವ ನಾತೆಯಿಂದ ಯಾರೂ ಯಾವ ಸವಲತ್ತನ್ನೂ ಕೊಡತಕ್ಕದ್ದಲ್ಲ ಎಂದು ತಾಕೀತು ಮಾಡಿದ್ದು ನಿಮಗೆ ನೆನಪಿರದಿದ್ದರೂ ಅವರಿಗೆ ನೆನಪಿದೆ. ಆದರೆ ವಿಚಾರಣಾ ಆಯೋಗಕ್ಕೆ ಅಡ್ಡ ಬಂದಿರುವುದು ಅವರ ಪ್ರಧಾನಮಂತ್ರಿ ನಾತೆ, ಖಚಿತ ಆರೋಪಗಳಿಲ್ಲದೆ ಯಾರ ಮೇಲಾದರೂ ವಿಚಾರಣಾ ಆಯೋಗ ನೇಮಿಸುವ ಅಪಪ್ರಥೆ ಒಮ್ಮೆ ಬಿದ್ದುಬಿಟ್ಟರೆ ಅದರಿಂದ ನಾಳೆ ಹುಟ್ಟಬಹುದಾದ ಸಮಸ್ಯೆಗಳಿಗೆ ತಂದೆಯಾಗುವುದಕ್ಕೆ ಪ್ರಧಾನಮಂತ್ರಿ ನಾತೆಯಿಂದ ಮುರಾರ್ಜಿ ದೇಸಾಯಿ ಇಷ್ಟಪಡುವುದಿಲ್ಲ. ಅಖಂಡ ಬ್ರಹ್ಮಚರ್ಯ ಪಾಲಿಸುತ್ತ ಬಂದ ಅವರಿಗೆ ಇನ್ನೊಮ್ಮೆ ತಂದೆಯಾಗುವುದು ಬೇಕಿಲ್ಲ.

ಪ್ರಧಾನಮಂತ್ರಿಯ ಮಗನ ಪ್ರಕರಣದ ಭೂತವನ್ನು ಬಡಿದೆಬ್ಬಿಸಿದ ಭೂತಪೂರ್ವ ಗೃಹಮಂತ್ರಿ ಮತ್ತು ಅಭೂತಪೂರ್ವ ಅರ್ಥಮಂತ್ರಿ ಚರಣಸಿಂಗ್‌ರ ಸಮಸ್ಯೆ ಇನ್ನೊಂದೇ ತರಹದ್ದು. ಸುದೈವದಿಂದ ಅವರಿಗೆ ಗಂಡು ಮಕ್ಕಳಿಲ್ಲ. ಇದು ಅವರ ಶತ್ರುಗಳ ದುರ್ದೈವ ಕೂಡ ಹೌದು. ವೈಯಕ್ತಿಕ ನಾತೆಯಿಂದ ಅವರಿಗೆ ಕಾಂತಿ ದೇಸಾಯಿಯ ಮೇಲೆ ಖಚಿತ ಸಂಶಯವೂ ಇದ್ದಿಲ್ಲ. ಆದರೆ ರಾಜಕಾರಣಿಯೆಂಬ ನಾತೆಯಿಂದ ಕಾಂತಿ ವ್ಯವಹಾರಗಳ ಗಾಳಿಸುದ್ದಿಯಿಂದ ಅವರ ಸೂಕ್ಷ್ಮವಾದ ನಾಸಿಕಕ್ಕೆ ಅತಿಶಯ ಗಾಸಿಯಾಗಿತ್ತು; ಮತ್ತು ಈ ದೇಶದ ಉದಾತ್ತತಮ ಕ್ಷತ್ರಿಯರಾದ ಜಾಟ್ ರೈತಬಾಂಧವರ ಏಕೈಕ ಪ್ರತಿನಿಧಿಯೆಂಬ ನಾತೆಯಿಂದ ಲಾಭಬಡಕ ವೈಶ್ಯವರ್ಗದ ಬ್ರಾಹ್ಮಣ ಪ್ರತಿನಿಧಿಯೊಬ್ಬನು ಪ್ರದಾನಮಂತ್ರಿ ಪದದಲ್ಲಿರುವುದು ಶುದ್ಧ ಅವಮಾನವೆನಿಸಿತ್ತು. ವೈಯಕ್ತಿಕ ನಾತೆಯಿಂದ ಅವರಿಗೆ ಅಧಿಕಾರದ ವ್ಯಾಮೋಹವಿಲ್ಲ. "ನಾ ತೆತ್ತ ರಾಜೀನಾಮೆ ಲೆಕ್ಕ ಇಡುವವರ। ಸೊಕ್ಕ ನೋಡಿ ಯಮ। ನಕ್ಕ" ಅಂತ ಬೇಂದ್ರೆ ಹಾಡದೆ ಇದ್ದದ್ದು ಚರಣಸಿಂಗ್‌ರ ಬಗ್ಗೆ ಅಲ್ಲವೆ! ನಿಜಕ್ಕೂ ಅವರು ರಾಜೀನಾಮೆ ಕೊಟ್ಟ ಪ್ರತಿಸಲವೂ ಮತ್ತೆ ಅಧಿಕಾರ ಸ್ವೀಕರಿಸಿದ್ದು ಮತ್ತೊಮ್ಮೆ ರಾಜೀನಾಮೆ ಕೊಡುವುದಕ್ಕಾಗಿ ಹೊರತು ಅಧಿಕಾರ ಬೇಕೆಂದೇನೂ ಅಲ್ಲ. (ದುರ್ದೈವದಿಂದ ಈ ದೇಶದಲ್ಲಿ ಅಧಿಕಾರ ಸ್ವೀಕರಿಸದೆ ರಾಜೀನಾಮೆ ಕೊಡುವುದಕ್ಕೆ ಅವಕಾಶ ಸಿಗುವುದಿಲ್ಲ ತಾನೆ.) ದೇಶೋದ್ಧಾರಕ ಎಂಬ ನಾತೆಯಿಂದ, ತಾವು ಪ್ರಧಾನಮಂತ್ರಿಯಾಗದ ಹೊರತು ರೈತರ ತಾಯಿಯಾದ ಭಾರತಮಾತೆಗೆ ನಿಜವಾದ ಬಿಡುಗಡೆ ಇಲ್ಲ ಎಂದು ಅವರಿಗೆ

ಖಚಿತವಾಗಿ ಗೊತ್ತಿದೆ. ದುರ್ದೈವದಿಂದ ಅವರ ರಾಜಕೀಯ ನಾತೆಯ ಚಟುವಟಿಕೆಗಳನ್ನು ತಡೆಯುವ ಶಕ್ತಿ ಅವರ ವೈಯಕ್ತಿಕ ನಾತೆಗೆ ಇಲ್ಲ.

ಸುದೈವದಿಂದ ಚರಣಸಿಂಗರಿಗೆ ಗಂಡುಮಕ್ಕಳಿಲ್ಲ. ಆದ್ದರಿಂದ ವೈಯಕ್ತಿಕ ನಾತೆಯಿಂದ ಚರಣಸಿಂಗರ ರಾಜಕೀಯ ತಲೆಯ ಮೇಲೆ ಗೂಬೆ ಕೂಡಿಸುವುದಕ್ಕಿಲ್ಲ ಎನ್ನುವುದು ತಪ್ಪಾಯಿತು. ಖಾಸಾ ಮಗ ಅಲ್ಲದಿದ್ದರೆ ಸೋದರಳಿಯನೋ ಅಳಿಯನೋ ಯಾರಾದರೂ ಇರುತ್ತಾರಲ್ಲ. ಇದು ಶುದ್ಧ ಅನ್ಯಾಯ; ಆದರೆ ಅದನ್ನು ತಪ್ಪಿಸಲಾಗುವುದಿಲ್ಲ. ನಾವು ಗಂಡುಮಕ್ಕಳನ್ನು ಹಡೆಯದೆ ಕೂಡ್ರಬಹುದು. ನಮ್ಮ ಸಂಬಂಧಿಕರನ್ನು ಹಾಗೆ ನಿರ್ಬಂಧಿಸ ಲಾದೀತೆ? ಇಂಥವರಲ್ಲೊಬ್ಬನಿಗೆ ಯಾರಾದರೂ ಯಾವುದೇ ನಾತೆಯಿಂದ ನಮಗೆ ಹೇಳದೆ ಕೇಳದೆ ಒಂದು ರಾಜ್ಯದ ಉಗ್ರಾಣ ಮಂಡಲಿಯ ಅಧ್ಯಕ್ಷ ಪಟ್ಟ ಕಟ್ಟಿದರೆ ಏನು ಮಾಡಲಾದೀತು? ಚರಣಸಿಂಗರು—ವೈಯಕ್ತಿಕ ನಾತೆಯಿಂದಲೋ ರಾಜಕೀಯ ನಾತೆ ಯಿಂದಲೋ—ಇದನ್ನು ವಿರೋಧಿಸಿದ್ದರು ಕೂಡ. ಆದರೆ ನಾವು ಅಧಿಕಾರದಲ್ಲಿರುವಾಗ ನಮ್ಮ ಮಕ್ಕಳಿಗೋ ಅಳಿಯಂದಿರಿಗೋ ಏನೂ ಸವಲತ್ತು ಕೊಡಬಾರದೆಂಬ ನಮ್ಮ ಸೂಚನೆಯನ್ನು ಯಾರಾದರೂ ಅಲಕ್ಷಿಸಿದರೆ ನಾವೇನು ಮಾಡಲಾದೀತು? ಸವಲತ್ತು ಕೊಟ್ಟವರನ್ನು ಬಂದೀಖಾನೆಗೆ ಕಳಿಸಲಾದೀತೆ? ಕಳಿಸಿದರೆ ಅವರು ಕೋರ್ಟಿಗೆ ಹೋಗಿ ಬಿಡುಗಡೆ ಹೊಂದದಿರುವರೆ? ತಮ್ಮವರಿಗೆ ಯಾರಾದರೂ ಹೀಗೆ ಸವಲತ್ತು ಕೊಟ್ಟರೆ ರಾಜಕಾರಣಿಗಳು ಆಜ್ಞಾಭಂಗ ಮಾಡಿದವರ ಈ ಉದ್ಧಟತನವನ್ನು ನುಂಗಿಕೊಳ್ಳುವುದು ಹೊರತು ಮತ್ತೇನ ಮಾಡಲಾಪರು? ಚರಣಸಿಂಗರಿಗೂ ಏನೂ ಮಾಡಲಾಗಲಿಲ್ಲ. ಹೀಗೆ ಅಧಿಕಾರ ಪಡೆದ ಸಂಬಂಧಿಕರು ಸರಕಾರಕ್ಕೆ ಒಂದಕ್ಕೆ ಮೂವತ್ತು ಪಟ್ಟು ಬೆಲೆಗೆ ಜಮೀನು ಮಾರಿದರು ಅಂದುಕೊಳ್ಳಿ. ಚರಣಸಿಂಗರು ವೈಯಕ್ತಿಕ ನಾತೆಯಿಂದ ಬಹಳ ದುಃಖಪಡಬಲ್ಲರು. ರಾಜಕಾರಣಿ ಎಂಬ ನಾತೆಯಿಂದ ನಾನೇನು ಮಾಡಲಿ? ಎಂದು ಅಂಗೈ ಮೇಲ್ಮುಖ ಮಾಡಬಲ್ಲರು. ಮಂತ್ರಿಯೆಂಬ ನಾತೆಯಿಂದ ರಾಜೀನಾಮೆ ಕೊಡಲಾರರು. ಇಷ್ಟೆಲ್ಲ ನಾತೆಗಳಿದ್ದೂ ಕೆಲ ವೇಳೆ ರಾಜಕಾರಣಿಗಳು ನಿಸ್ಸಹಾಯಕರಾಗಿಬಿಡುತ್ತಾರೆ ಪಾಪ!

ನಮ್ಮ ಮಮತೆಯ ಭೂತಪೂರ್ವ ಅಥವಾ ಭೂತಪೂರ್ವ ಮಮತೆಯ ಪ್ರಧಾನಮಂತ್ರಿಗಳಾದ ಇಂದಿರಾ ಗಾಂಧಿಯವರ ನಾತೆಗಳ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಪ್ರಜಾಸತ್ತೆಯ ಅನಿವಾರ್ಯ ಅಂಗವಾದ ವಿರೋಧ ಪಕ್ಷಕ್ಕೆ ಮನ್ನಣೆ ಕೊಡದಿದ್ದ ಮಹಾಪರಾಧಕ್ಕೆ ಗುರಿಯಾದೇನು. ಅವರ ಪ್ರಕರಣ ಮುರಾರ್ಜಿ ಪ್ರಕರಣಕ್ಕಿಂತ ಕರುಣಾಸ್ಪದ ವಾದದ್ದು. ಅವರ ನಾತೆಗಳ ಖಾನೆಗಳು ಸಾಕಷ್ಟು ವಾತಸ್ತಂಭಕವಾಗಿಲ್ಲ. ನಾತೆಗಳು ಹೀಗಾಗಿ ಒಂದಕ್ಕೊಂದು ಕಲಬೆರಕೆಯಾಗಿ ಹೋಗುತ್ತವೆ. ವೈಯಕ್ತಿಕ ನಾತೆಯಿಂದ ಅವರಿಗೆ ಹಣಕಾಸಿನ ಲೆಕ್ಕಾಚಾರವೇ ತಿಳಿಯುತ್ತಿರಲಿಲ್ಲ. (ಇದು ಆಶ್ಚರ್ಯವಲ್ಲ ಅನ್ನಿ. ಅನೇಕ ರಾಜಕಾರಣಿಗಳು ಸ್ವಂತವಾಗಿ ಜೀವಮಾನದಲ್ಲಿ ಒಂದು ರೂಪಾಯಿ ಗಳಿಸಿದವರಲ್ಲ). ಪ್ರಧಾನಮಂತ್ರಿ ನಾತೆಯಿಂದ ಸಾವಿರಾರು ಕೋಟಿ ವ್ಯವಹಾರದ ಬ್ಯಾಂಕುಗಳನ್ನು

ರಾಷ್ಟ್ರೀಕರಿಸುವುದು ಹಣಕಾಸಿನ ಅಜ್ಞಾನದಿಂದಲೇ ಅವರಿಗೆ ಸಾಧ್ಯವಾಗಿರಬೇಕು. ಪ್ರಧಾನಮಂತ್ರಿಯ ನಾತೆಯಿಂದ ಅವರು ಇಲ್ಲದ ಉಸಾಬರಿ ಮಾಡುತ್ತಿದ್ದ ತಮ್ಮ ಕಿರಿಯ ಸುಪುತ್ರನನ್ನು ದಂಡಿಸಲು ಬಹಳವಾಗಿ ಬಯಸುತ್ತಿದ್ದರೆಂದು ನನಗೆ ಖಾಸಗಿ ನಾತೆಯಿಂದ ಗೊತ್ತು. ವಿಕ್ಟೋರಿಯ ರಾಣಿ ತಮ್ಮ ಮಗನಿಗೆ ಒಂದು ಪೈ ದಂಡ ಹಾಕಿದ್ದರೆಂದು ನನ್ನಕ್ಕ ಅಥೆಂಟಿಕ್ಕಾಗಿ ನನಗೆ ಹೇಳಿದ್ದುಂಟು. ಆದರೆ ಇಂದಿರಾ ಗಾಂಧಿಯವರಿಗೆ ತಮ್ಮ ಮಕ್ಕಳಿಗೆ ಕೂಡ ಒಂದು ಪೈಸಾ ದಂಡ ಹಾಕುವ ಅಧಿಕಾರವಿರಲಿಲ್ಲ. ತೊಂದರೆ ಬಂದದ್ದು ಅದರಿಂದಲ್ಲ. ಪ್ರಧಾನಮಂತ್ರಿಯ ನಾತೆಯಿಂದ ಅವರು ಮಾಡಬಹುದಾದ್ದನ್ನು ತಾಯಿಯ ನಾತೆ ವಿರೋಧಿಸುತ್ತಿತ್ತು. ಹೀಗೆ ಎರಡೂ ನಾತೆಗಳು ಗಲಿಬಿಲಿಯಾದ ಹಾಗೆ ಕಾಣುತ್ತದೆ. ಕೆಲವರ ಅಭಿಪ್ರಾಯದಲ್ಲಿ, ನಾತೆಗಳನ್ನು ಬೇರೆ ಬೇರೆಯಾಗಿಡುವುದರಲ್ಲಿ ಮಾತಾಜಿಗೆ ನಂಬಿಕೆಯೆ ಇರಲಿಲ್ಲ. ಈಗಲೂ ಇಲ್ಲ. ಅವರ ಸರಳ ಮನಸ್ಸಿಗೆ ಈ ನಾತೆಗಳ ಗೋತಾಗಳು ಅರ್ಥಹೀನ ಉಪದ್ರವಗಳು. ವೈಯಕ್ತಿಕ ಇಂದಿರಾಜಿಯ ಪ್ರಿಯಪುತ್ರ ಪ್ರಧಾನಿಯ ಪ್ರಿಯಪುತ್ರನೂ ಆಗಿರಬೇಕು ಮತ್ತು ದೇಶದ ಪ್ರಿಯಪುತ್ರನೂ ಉತ್ತರಾಧಿಕಾರಿಯೂ ಆಗಿರಬೇಕು ಎಂಬುದು ಅವರಿಗೆ ಸೂರ್ಯಪ್ರಕಾಶದಷ್ಟು ಸ್ಪಷ್ಟ ಮತ್ತು ಬಿದಿರುಗಳದಷ್ಟು ಸರಳ ವಿಷಯವಾಗಿ ಕಾಣುತ್ತಿತ್ತು. ಇಷ್ಟು ಸ್ಪಷ್ಟವೂ ಸರಳವೂ ಆದದ್ದು ಅರ್ಥವಾಗದಿದ್ದ ಅಧಿಕಾರಿಗಳೂ ರಾಜಕಾರಣಿಗಳೂ ದೇಶದ ಶತ್ರುಗಳೆಂದು ಅವರಿಗೆ ತೋರುತ್ತಿತ್ತು. ತಾಯಿಯ ನಾತೆಯಿಂದ ಅವರಿಗೆ ಏನನಿಸುತ್ತಿತ್ತೋ ಅದೇ ವೈಯಕ್ತಿಕ ನಾತೆಯಿಂದಲೂ ಪ್ರಧಾನಿ ನಾತೆಯಿಂದಲೂ ಅನಿಸುತ್ತಿತ್ತು. ಈಗಲೂ ಅವರು ದೇವರಾಜ ಅರಸರಿಗೆ ಹೇಳಿದ್ದು ಅದೇ ಇರಬೇಕು. "ಈ ನಾತೆಗಳ ಕೂದಲು ಸೀಳುವಿಕೆಯಿಂದ ನನ್ನ ಪೀಡಿಸಬೇಡಿ. ಬೇಕಾದರೆ ನನ್ ಮಗ ಸಹಿತ ನನ್ನನ್ನು ತೆಗೆದುಕೊಳ್ಳಿ. ಬೇಡದಿದ್ದರೆ ಬಿಡಿ."

ಆದರೂ ಇಂದಿರಾಜಿಯ ಹತ್ತಿರ ನಾತೆಗಳಿಗೆ ಕೊರತೆ ಇದ್ದಿಲ್ಲ. ಈಗಲೂ ಇಲ್ಲ. ವೈಯಕ್ತಿಕ ನಾತೆಯಿಂದ ಅವರು ತಮ್ಮ ತಂದೆಯ ಹಾಗೆ ತುಂಬಾ ಉದಾರರು. ರಾಜಕೀಯ ನಾತೆಯಿಂದ ಜೈಲಿಗೆ ಹಾಕಿದವರ ಯೋಗಕ್ಷೇಮವನ್ನು ವೈಯಕ್ತಿಕ ನಾತೆಯಿಂದ ವಿಚಾರಿಸುತ್ತ ಇರುವಷ್ಟು ದೊಡ್ಡ ಮನಸ್ಸು ಅವರದ್ದು. ಜನಪ್ರಿಯತೆಯ ನಾತೆಯಿಂದ ಅವರು ಸಮಾಜವಾದದ ವೀರಭಕ್ತರು. ವಾಸ್ತವವಾದಿಯ ನಾತೆಯಿಂದ ಬಂಡವಾಳಗಾರರ ಮಿತ್ರರು. ರಾಜಕೀಯ ವಿರೋಧದ ನಾತೆಯಿಂದ ಅವರು ಗುಂಡು ಹಾಕಿಸಿದವರ ಬಗ್ಗೆ ಮಾನವತಾ ವಾದಿಯ ನಾತೆಯಿಂದ ಕಣ್ಣೀರು ಸುರಿಸಬಲ್ಲರು. ನಂಬಿಕೆಯ ನಾತೆಯಿಂದ ಅವರು ಮಿತ್ರನಿಷ್ಠರು; ಅಪನಂಬಿಕೆಯ ನಾತೆಯಿಂದ ಮಿತ್ರರನ್ನು ಬದಲಾಯಿಸುತ್ತಾ ಇರುವವರು.

ನಮ್ಮ ಮಧುಲಿಮಯೆಯವರನ್ನು ನೋಡಿರಿ. ಅವರು ಸಮಾಜವಾದಿ ನಾತೆಯಿಂದ ಜಾತ್ಯತೀತರು. ಆರ್.ಎಸ್.ಎಸ್. ಇತ್ಯಾದಿ ಧಾರ್ಮಿಕ ಪುನರುಜ್ಜೀವನವಾದಿಗಳನ್ನು ಅವರು ದ್ವೇಷಿಸುತ್ತಾರೆ. ಆದರೆ ಈ ಸಮಾಜವಾದಿ ನಾತೆ, ಜಾತ್ಯತೀತ ನಾತೆ ಇಂಡಿಯ

ದಟೀಸ್ ಭಾರತದ ಮಟ್ಟಿಗೆ ಮಾತ್ರ. ಮುಸ್ಲಿಂ ಪುನರುಜ್ಜೀವನದ ಪರಮ ನಾಯಕರಾದ ಇರಾಣದ ಆಯತುಲ್ಲಾ ಖೊಮೇನಿಯವರು ಅಧಿಕಾರಕ್ಕೆ ಬರುವ ಪುರುಸೊತ್ತಿಲ್ಲದೆ ಲಿಮೆಯೇ ಸಾಹೇಬರು ಅವರ ದರ್ಶನಕ್ಕೆ ಹೋದರು. ಆದರೆ ಅದು ಬೇರೆಯೆ ನಾತೆಯಿಂದ. ರಾಜಕೀಯ ಡಿಪ್ಲೊಮಸಿ ನಾತೆ ಅದು.

ನಾತೆಗಳ ಈ ಅದ್ಭುತ ಚಮತ್ಕಾರಗಳ ನಡುವೆ ನನ್ನಂಥ ಅನಾಥನಿಗೂ ನಾತೆಗಳು ಜೋತುಬೀಳುವ ಲಕ್ಷಣಗಳು ಕಾಣಿಸುತ್ತಿವೆ. ಮೊನ್ನೆ ಯಾರ ಹತ್ತಿರವೋ ಮಾತನಾಡುವಾಗ, "ವೈಯಕ್ತಿಕ ನಾತೆಯಿಂದ ನಾನು ದೇವರನ್ನು ನಂಬುವುದಿಲ್ಲ. ಆದರೆ—" ಎಂದು ನಾನು ಹೇಳುತ್ತಿರುವುದನ್ನು ನಾನೇ ಹಿಡಿದೆ. ನಾನು ದಿನಾ ದೇವರ ಪೂಜೆ ಮಾಡುವುದು ಯಾವನಾತೆಯಿಂದ ಅಂತ ನನಗಿನ್ನೂ ಅರ್ಥವಾಗಿಲ್ಲ. ಯಾವ ನಾತೆಯಿಂದ ಎಂದು ಹೇಳಲು ಸಾಧ್ಯವಾದಾಗ ನಾನು ಕೂಡ ದೊಡ್ಡ ಮನುಷ್ಯನಾಗುತ್ತೇನೆ ಅಂದುಕೊಂಡಿದ್ದೇನೆ.

❑

# ಹಳದಿ ಪತ್ರಿಕೆಗಳು

ಭಾರತದ ಲೋಕಸಭೆಯಲ್ಲಿ ಕಳೆದವಾರ ಪತ್ರಿಕಾ ಆಯೋಗದ ವರದಿಯ ಚರ್ಚೆಯು ಬಣ್ಣ ಬಣ್ಣಗಳಿಂದ ಕಂಗೊಳಿಸಿತೆಂದು ಲಾಂಗೂಲ ಸುದ್ದಿ ಸಂಸ್ಥೆಯು ವರದಿ ಮಾಡಿದೆ.

'ಹಳದಿ ಪತ್ರಿಕೆ'ಗಳು ಚರ್ಚೆಯಲ್ಲಿ ಹೇಗೋ ತಲೆ ಹಾಕಿದ್ದರಿಂದ ಈ ಅಕಾಲಿಕ ಹೋಳಿ ಓಕುಳಿ ಪ್ರಾರಂಭವಾಯಿತು. "ಹಳದಿ ಪತ್ರಿಕೆಯೆಂದರೇನು ಸ್ವಾಮಿ?" ಎಂದು ಮಾನ್ಯ ಆಕಾಶವಾಣಿಯ ಮಂತ್ರಿ ಡಾ॥ ಕೇಸಕರರು ಮಾನ್ಯ ಸದಸ್ಯ ಮಹಾಂತಿಯವರನ್ನು ಕೇಳಿದರು. ಮಾನ್ಯ ಸದಸ್ಯರು ಸಹಾ ಬೆಚ್ಚಿಬಿದ್ದರು. ಒಂದು ಕ್ಷಣ ತಾವೂ ಮಂತ್ರಿ ಪದಕ್ಕೇರಿದಂತೆ ಅವರಿಗೆ ಭಾಸವಾಯಿತು. ಯಾಕೆಂದರೆ ಲೋಕಸಭೆಯಲ್ಲಿ ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳಿಗೆ ಪ್ರಶ್ನೆ ಕೇಳುತ್ತಿರುತ್ತಾರಲ್ಲದೆ ಇವರು ಅವರಿಗೆ ಕೇಳುತ್ತಿರುವುದು ಪಾರ್ಲಿಮೆಂಟುಗಳ ಇತಿಹಾಸದಲ್ಲಿ ಇದೇ ಮೊದಲನೇ ಸಲವೆಂದು ಲಾಭಿ ತಜ್ಞವರ್ಗಗಳು ಹೇಳಿದವು.

ಮಾನ್ಯ ಮಹಾಂತಿಯವರಿಗೆ ಗೊತ್ತಿರಲಿಲ್ಲವೋ ಅಥವಾ ತಮ್ಮ ಉತ್ತರಗಳನ್ನೆಲ್ಲ ತಾವು ಮಂತ್ರಾಸನ (ಮಂತ್ರಿಯ ಆಸನ)ಕ್ಕೆ ಸ್ಥಾನಪಲ್ಲಟ ಹೊಂದುವ ಆ ಭವ್ಯ ಕನಸಿನ ದಿನಗಳಿಗಾಗಿ ಜೋಪಾನವಾಗಿರಿಸಬೇಕೆಂದು ಅವರು ಭಾವಿಸಿದರೋ—ಅಂತೂ ಮಾನ್ಯ ಮಹಾಂತಿಯವರು ಮಾನ್ಯ ಕೇಸಕರರ ಕುತೂಹಲವನ್ನು ಸಮಾಧಾನ ಪಡಿಸಲಿಲ್ಲ. ಬದಲಿಗೆ ಮತ್ತೊಂದು ಜಿಜ್ಞಾಸೆಯನ್ನು ಅವರ ಮೇಲೆ ಎಸೆದರು: 'ಬಿಳಿ ಟೊಪ್ಪಿಗೆಯೆಂದರೇನು ಸ್ವಾಮಿ?"

ಮಾನ್ಯ ಕೇಸಕರರಾದರೂ ಈ ಪ್ರಶ್ನೆಗೆ ಸಮಾಧಾನ ಹೇಳಲಿಲ್ಲ. ಹೀಗಾಗಿ ಎಂದೂ ಬಣ್ಣದ ಪ್ರಶ್ನೆಗಳು ಲೋಕಸಭೆಯಲ್ಲಿ ಹಾಗೇ ಪ್ರತಿಬಿಂಬಿಸುತ್ತ ಕೆಂಪು ಸದಸ್ಯರಾದ ಶ್ರೀಮತಿ ಕೃಷ್ಣನರನ್ನು ಸಿಟ್ಟಿನಿಂದ ಹಸುರು ಬಣ್ಣಕ್ಕೆ ತಿರುಗುವಂತೆ ಮಾಡಿದವು. ಅವರು ಹೀಗೆ ತಾತ್ಕಾಲಿಕವಾಗಿ ಕೆಂಪಿನಿಂದ ಹಸುರು ಬಣ್ಣಕ್ಕೆ ತಿರುಗುವುದಿಲ್ಲದಿದ್ದರೆ ಖಂಡಿತವಾಗಿ ಡಾ. ಕೇಸಕರರ "ಕೆಂಪು ಟೇಪಿಜಂ"ನ್ನು ಖಂಡಿಸುವ ಹವ್ಯಾಸಕ್ಕೆ ಹೋಗುತ್ತಿರಲಿಲ್ಲವೆಂದು ನಂಬಲಾಗಿದೆ.

ಕೆಂಪನ್ನು ಬಯ್ಯುವ ಮೀಸಲು ಹಕ್ಕು ಪಡೆದ ಮಾನ್ಯ ಭಗವಾ ಸದಸ್ಯರ ಮುಖಗಳು ತಮ್ಮ ಕ್ಷೇತ್ರದ ಈ ಆಕ್ರಮಣದಿಂದ ಕಪ್ಪಿಕ್ಕಿಹೋದವೆಂಬುದು ಪ್ರತ್ಯಕ್ಷವೇ ಆಗಿತ್ತು.

ಇದು ನೀಲಿ ಕೆಟ್ಟ ಸುದ್ದಿಯೆಂದು ಯಾರಾದರೂ ಬಗೆಯುವದಾದರೆ ಲಾಂಗೂಲಾಚಾರ್ಯರ ಆಕ್ಷೇಪವಿಲ್ಲ.

* * *

'ಹಳದಿ ಪತ್ರಿಕೆ'ಗಳೆಂಬ ಮಾತು ಹೇಗೆ ಹುಟ್ಟಿತೋ ಆಚಾರ್ಯರಿಗೆ ಗೊತ್ತಿಲ್ಲ ೧೮೯೮ರಲ್ಲಿ ಸ್ಪೇನದ ವಿರುದ್ಧ ಯುದ್ಧಸಾರಬೇಕೆಂದು ಉದ್ವೇಗ ಜನಕವಾಗಿ ಪ್ರಚಾರ ಮಾಡುತ್ತಿದ್ದ ಅಮೇರಿಕನ್ ಪತ್ರಿಕೆಗಳಿಗೆ ಮೊದಲು ಈ ಬಿರುದು ಸಿಕ್ಕಿತಂತೆ. ಆದರೆ ಅದು ಕೆಂಪಾಗಲಿ ಹಸುರಾಗಲಿ ಅಥವಾ ಜಾಂಬಳಿಯಾಗಲಿ ಆಗದೆ ಹಳದಿಯಂಥ ಸೌಮ್ಯ ಬಣ್ಣ ಯಾಕಾಯಿತೆಂಬುದೀಗ ಸಮಸ್ಯೆ. ಬಿಳಿ ಜನರಿಗೆ ಹಳದಿಯ ಮೇಲಿದ್ದ ಭಯವೇ ಇದಕ್ಕೆ ಕಾರಣವಾಗಿರಬಹುದೆ? ಯಾಕೆಂದರೆ 'ಹಳದಿ ಪಿಡುಗು" ಅವರನ್ನು ಎಂದಿನಿಂದಲೂ ನಡುಗಿಸುತ್ತಿದೆ. ಹಳದಿ ಪಿಡುಗೆಂದರೆ ಕಾಮಾಣೆಯಲ್ಲ. ಹಳದಿ ಚೀನೀ ಜನರು ಬಿಳಿ ಯುರೋಪಿಯನ್ನರ ಮೇಲೆ ಪ್ರಭುತ್ವ ಸ್ಥಾಪಿಸುವರೆಂಬ ಸಿಂಹಸ್ವಪ್ನದ ಫಲವಾಗಿ ಈ ಶಬ್ಧ ಹುಟ್ಟಿಕೊಂಡಿದೆ. ಇನ್ನು ಸಿಟ್ಟಿನಿಂದ "ಕೆಂಪಾಗಿ" ಹೋದನೆಂದು ನಾವು ಹೇಳುತ್ತಿದ್ದರೆ ಬಿಳಿ ಜನರು "ಹಸುರಾಗಿ" ಹೋದನೆಂದು ಹೇಳುತ್ತಿರುವದೂ ಸೋಜಿಗವೇ. ಮತ್ತೆ ಬ್ರಿಟಿಶ ಜನರಲ್ಲಿ "ನೀಲಿರಕ್ತ"ದವರೆಂಬ ವಿಚಿತ್ರ ಜನರಿದ್ದಾರೆ. ತಾವು ಸತ್ಕುಲ ಪ್ರಸೂತರೆಂದು ಹೇಳಿಕೊಳ್ಳುವವರಿಗೆ ಈ ಶಬ್ದ ಅನ್ವಯಿಸಲಾಗುತ್ತಿದೆ. ಬಿಳಿ ಮೋರೆಯವರನ್ನು ಹೆದರಿಸುವ ಇನ್ನೊಂದು ಬಣ್ಣವೆಂದರೆ ಕೆಂಪು. ನಮಗೆ ಕೆಂಪು ಮಂಗಳಕರ ಬಣ್ಣವಾಗಿದ್ದರೆ ಅವರಿಗೆ ಅದು ಅಪಾಯದ ಚಿಹ್ನೆ. ಇದೇ ಕಾರಣದಿಂದಿರಬೇಕು, ಕಮ್ಯೂನಿಸಂಗೆ ಅವರು ಅಂಜುವಷ್ಟು ನಾವು ಅಂಜುವುದಿಲ್ಲ. ಅವರೀಗ ಎಲ್ಲೆಲ್ಲಿಯೂ "ಕೆಂಪು" ಕಾಣುತ್ತಿದ್ದಾರೆ. ಹಸರು ಅವರಿಗೆ ನಿರ್ಭಯತೆಯ ಗುರುತಾದರೆ ನಮ್ಮಲ್ಲಿ ಹಸುರಿಗೆ ಅಷ್ಟು ಒಳ್ಳೇ ಹೆಸರಿಲ್ಲ. ನಾವು ತಲೆಯ ಸ್ಕ್ರೂ ತುಸು ಸಡಿಲಿರುವವರನ್ನು "ಪಚ್ಚೆ" ಎಂದು ಸಂಭೋದಿಸುತ್ತೇವೆ.

❑

# ಮಹಿಷ ನೀತಿ ಸುಧಾರಣೆ

ಉತ್ತರಪ್ರದೇಶದ ಇಟಾವಾದ "ನೀತಿ ಸುಧಾರ ಮಂದಿರ" (ಸೆರೆಮನೆಗಳಿಗೆ ಉ.ಪ್ರ.ದ ಹೊಸ ಹೆಸರು)ಕ್ಕೆ ಅಪರೂಪ ಆಗಂತುಕನೊಬ್ಬನ ಆಗಮನವು ಉತ್ತರಪ್ರದೇಶದ ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು. ನೀತಿ ಸುಧಾರಣೆಗಾಗಿ ಇಟಾವಾ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಕೆಲ ತಿಂಗಳ ವಾಸ್ತವ್ಯಕ್ಕಾಗಿ ಕಳಿಸಲ್ಪಟ್ಟಿದ್ದ ಈ ನೀತಿಭ್ರಷ್ಟ ವ್ಯಕ್ತಿಯನ್ನು 'ಮಂದಿರ'ದ ಪೂಜಾರಿಯು ಒಳತೆಗೆದುಕೊಳ್ಳಲೊಪ್ಪಲಿಲ್ಲ ಕಾರಣ ಬಹಳ ಸ್ಪಷ್ಟವಾಗಿತ್ತು: ಈ ಹೊಸ ಕೈದಿಯನ್ನು ನೀತಿ ಸುಧಾರಣೆಗಾಗಿ ಪ್ರವೇಶಗೊಳಿಸಿದರೆ, ಆಸ್ಟ್ರೇಲಿಯದಲ್ಲಿ ಏಶಿಯನ್ನರಿಗೆ ಪ್ರವೇಶ ಕೊಟ್ಟರೆ ಹುಟ್ಟಬಹುದಾದಂಥ ಸಮಸ್ಯೆಯೇ ಸುಧಾರ ಮಂದಿರದಲ್ಲಿಯೂ ಹುಟ್ಟಬಹುದೆಂದು ಆ ಅಧಿಕಾರಿಗೆ ಅಂಜಿಕೆಯಾಯಿತು. ಇಟಾವಾ ಸೆರೆಮನೆಯಲ್ಲಿ ಉಂಟಾಗಬಹುದಾಗಿದ್ದ ಈ ಸಮಸ್ಯೆಯನ್ನು ವರ್ಣ ಸಮಸ್ಯೆಯೆಂದು ಹೆಸರಿಸಲು ಶಕ್ಯವಿದ್ದಿಲ್ಲ. ಯಾಕೆಂದರೆ ಆಗಲೇ ಸುಧಾರಣೆಗಾಗಿ ಸ್ವೀಕರಿಸಲ್ಪಟ್ಟಿದ್ದ ನಿವಾಸಿಗಳಲ್ಲಿ ಅನೇಕರ ವರ್ಣವು ಈ ಹೊಸಬನ ಬಣ್ಣಕ್ಕಿಂತ ಭಿನ್ನವಾಗಿರಲಿಲ್ಲೆಂಬುದು ಸುವ್ಯಕ್ತವೇ ಆಗಿತ್ತು. ಮೇಲಾಗಿ ಭಾರತದ ಸೆರೆಮನೆಗಳಲ್ಲಿ ವರ್ಣದ್ವೇಷಕ್ಕೆ ಆಸ್ಪದವೆಲ್ಲಿ? ಅದೊಂದು ಬಗೆಯ "ಜಾತೀಯ" ಪ್ರಶ್ನೆಯಾಗಿತ್ತು. ಈ ಹೊಸಬನಿಗೆ ಉಳಿದೆಲ್ಲ ಸುಧಾರಣಾಪಾತ್ರರಿಗಿಂತ ಎರಡು ಹೆಚ್ಚು ಕಾಲುಗಳಿದ್ದವಲ್ಲದೆ ಅವನು ಅವು ನಾಲ್ಕೂ ಕಾಲುಗಳಿಂದ ನಡೆಯುವ ಹಟ ತೊಟ್ಟಿದ್ದನು. ಮೇಲಾಗಿ ಸೆರೆಮನೆಯ ಕಾನೂನುಗಳು ಕೈದಿಗೆ ಸಶಸ್ತ್ರವಾಗಿ ಪ್ರವೇಶಿಸಲು ಅನುಮತಿ ಕೊಡುವುದಿಲ್ಲ. ಆದರೆ ಇವನ ಹತ್ತಿರ ಎರಡು ಮೊನಚಾದ ಕುಡುಗೋಲಿನಂಥ ಆಯುಧಗಳಿದ್ದವು. ಅವು ಕರ್ಣನ ಕವಚ ಕುಂಡಲಗಳಂತೆ ದೇಹದ ಅಂಗವಾಗಿಯೇ ತಲೆಯ ಮೇಲೆ ಘಟಿತವಾಗಿದ್ದುದರಿಂದ ಆ ಆಯುಧಗಳನ್ನು ಕಸಿದುಕೊಳ್ಳುವುದು ಶಕ್ಯವಿದ್ದಿಲ್ಲ. ಈ ಅಧಿಕತರ ಪಾದ ಮತ್ತು ಮಸ್ತಕಾಯುಧಗಳ ಸಂಗಡ ಇವನನ್ನು 'ಸುಧಾರಿಸಲು' ಒಪ್ಪಿಸಿಕೊಂಡರೆ ಭಾರತದ ಜಾತ್ಯತೀತ ಸೆರೆಮನೆಗಳಲ್ಲಿ ಸಹಿಸಲಾರದ ಜಾತೀಯ ಸಮಸ್ಯೆ ಉದ್ಭವಿಸಬಹುದೆಂಬ ಭಯದಿಂದ ಇಟಾವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಭರ್ತಿಮಾಡಿ ಕಳಿಸಿದ ರಿಕ್ರೂಟನನ್ನು ಸ್ವೀಕರಿಸಲು ಸೆರೆಮನೆಯ ಅಧಿಕಾರಿಯು ನಿರಾಕರಿಸಿದನು.

ಇಟಾವಾ ಸೆರೆಮನೆಯ ಅಧಿಕಾರಿಯನ್ನು ನ್ಯಾಯಾಲಯದ ಅವಮಾನಕ್ಕೆ ಪ್ರೇರಿಸಿದ ಈ ಕೈದಿಯು ಒಂದು ಕೋಣವಾಗಿರಬೇಕು ಎಂದು ನೀವು ಈಗಾಗಲೇ ಊಹಿಸಿರಬೇಕು. ನಿಮ್ಮ ಊಹೆ ತಪ್ಪೇನು ಅಲ್ಲ. ಮಹಿಷಾಸುರ ಕುಲೋದ್ಭೂತನಾದ ಈ ಚತುಷ್ಪಾದ ಕೈದಿಯ

ಅಪರಾಧವೇನಿತ್ತೆಂಬುದನ್ನು ಮುಖ್ಯಮಂತ್ರಿ ಸಂಪೂರ್ಣಾನಂದರು ಸಂಪೂರ್ಣವಾಗಿ ವಿವರಿಸಲಿಲ್ಲ. "ಅಂಡಲೆತ"ವೆಂಬ ಒಂದೇ ಶಬ್ದದಿಂದ ಅವರು ಅವನ ಅಪರಾಧವನ್ನು ನಿರೂಪಿಸಿದರು. ನಮ್ಮ ಕಾಲೇಜು ವಿದ್ಯಾರ್ಥಿಗಳಲ್ಲಿ ಕೆಲವರಂತೆ ಅವನು ಬೀದಿಗಳಲ್ಲಿ ಅಂಡಲೆಯುತ್ತ, ಪ್ರತಿವ್ರತೆಯರಾದ ಮಹಿಷಾಮಾನಿನಿಯರು ತಮ್ಮ ನ್ಯಾಯಸಮ್ಮತವಾದ ಕೆಲಸಗಳಿಗಾಗಿ ಬೀದಿಯಲ್ಲಿ ಸಂಚರಿಸುತ್ತಿದ್ದಾಗ ಅವರ ಕಡೆ ಕಣ್ಣು ಮಿಟುಕಿಸುತ್ತ, ತನ್ನ ಕಟಾಕ್ಷಕ್ಕೆ ಪ್ರತಿಕಟಾಕ್ಷ ಬಂದಾಗ ಅಥವಾ ಬಂತೆಂದು ಅವನು ಕಲ್ಪನೆ ಮಾಡಿಕೊಂಡಾಗ, ಕಾಲೇಜು ಹುಡುಗರ ಸಿಳ್ಳಿನ ಮಹಿಷಾಭಾಷಾಂತರವಾದ ಯಕಾರಾಂತ ಓಂಕಾರವನ್ನುಚ್ಚರಿಸುತ್ತ ಸಾರ್ವಜನಿಕ ನ್ಯೂಸೆನ್ಸ್ ಮಾಡುತ್ತಿದ್ದನೆಂದು ನಾವು ಸುಲಭವಾಗಿ ತರ್ಕಿಸಬಹುದು.

ಕೆಲವೇಳೆ ಅವನು ವಿಶೇಷ ಪ್ರಮತನಾಗಿದ್ದಾಗ ವಾಹನ ಸಂಚಾರಕ್ಕೂ ತಡೆ ಯಾಗುತ್ತಿದ್ದಿರಬಹುದು. ಬಹಳವಾಗಿ ಮನಸೆಳೆದ ಮಹಿಷಿಯರನ್ನು ಅವನು ಅವರವರ ಮನೆವರೆಗೂ ಬೆಂಬತ್ತಿ ಹೋಗಿ ಅಲ್ಲಿ ಬೇಲಿ ಹಾರುವ ಇಲ್ಲವೆ ಮುರಿಯುವ ಪ್ರಯತ್ನಗಳನ್ನು ಮಾಡಿರುವ ಸಂಭವವೂ ಇಲ್ಲದಿಲ್ಲ. ತನ್ನ ಉದರಂಭರಣಕ್ಕಾಗಿ ಅವನು ಹುಲ್ಲಿನ ಗಾಡಿಗಳಿಂದ ಹಿಂಬದಿಯಲ್ಲಿ ಹುಲ್ಲನು ಎಳೆಯುವ ಇಲ್ಲವೆ ತೊಪ್ಪಲ ಪಲ್ಯ ತರುತ್ತಿರುವವರ ಚೀಲಗಳಿಗೆ ಬಾಯಿ ಹಾಕುವ ಅಥವಾ ನೇರವಾಗಿ ತರಕಾರಿ ಪೇಟೆಗಳಲ್ಲಿ ನುಗ್ಗುವ ಚಿಲ್ಲರೆ 'ಕೃತ್ಯ'ಗಳನ್ನು ಆಶ್ರಯಿಸಿರಬಹುದು. ಆದರೆ ನಗರದ ಅಭ್ಯಾಸವಾದ ಅವನು ನಮ್ಮ ಮಂತ್ರಿಗಳ ಉಪದೇಶ ಕೇಳಿ ಹಳ್ಳಿಗಳಿಗೆ ಹೋಗುವಷ್ಟು ದೇಶಭಕ್ತಿಯನ್ನು ಪ್ರಕಟಿಸಿಲ್ಲೆಂದು ತೋರುತ್ತದೆ: ಇದು ಹಳ್ಳಿಗಳ ಪುಣ್ಯವೆಂದು ಹೇಳಬೇಕು. ಈ ಸಾರ್ವಜನಿಕ ಉಪಟಳಗಾರನನ್ನು ಹಿಡಿದು ಪಾಂಜರಪೋಳದ ಲಾಕಪ್ಪಿನಲ್ಲಿ ಹಾಕಿದ್ದು ವಿಫಲವಾಗಿರಬೇಕು. ಯಾಕೆಂದರೆ ಅವನು ರಾಜಕಪೂರನ "ಆವಾರಾ" ವರ್ಗಕ್ಕೆ ಸೇರಿದ್ದವನಿದ್ದಂತೆ ಅನಿಸುತ್ತದೆ. ಜಾಮೀನುಕೊಟ್ಟು ಬಿಡಿಸಿಕೊಳ್ಳಲು ಯಾರೂ ಬಂದಿರಲಿಕ್ಕಿಲ್ಲ. ಹೀಗಾಗಿ ಅವನನ್ನು ಪೋಲೀಸರು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುವ ಪ್ರಸಂಗ ಬಂದಿರಬೇಕು. ಆ ಮೇಜಿಸ್ಟ್ರೇಟರಾದರೂ ಆಧುನಿಕ ಮನೋವಿಶ್ಲೇಷಣದ ಅಭ್ಯಾಸಿಗಳೂ ಮುಖ್ಯಮಂತ್ರಿ ಸಂಪೂರ್ಣಾನಂದರ ಭಾಷಣ ಲೇಖನಗಳ ಪಾಠಕರೂ ಆಗಿದ್ದು ಈ ಅಪರಾಧಿಯನ್ನು ಸುಧಾರಿಸಲು ನೀತಿ ಸುಧಾರ ಮಂದಿರಕ್ಕೆ ಕಳಿಸಬೇಕೆಂದು ನಿರ್ಧರಿಸಿದರೆಂಬುದು ಕಲ್ಪನಾತೀತವಲ್ಲ.

* * *

ಇಟಾವಾ ನೀತಿಸುಧಾರ ಮಂದಿರದಲ್ಲಿ ಈ 'ಆವಾರಾ' ಮಹಿಷನಿಗೆ ಆಶ್ರಯ ದೊರೆಯದೆ ಇದ್ದದ್ದು ತುಂಬ ಶೋಚನೀಯ ಸಂಗತಿಯಾಗಿದೆ. ಅಶೋಕ ಚಕ್ರವರ್ತಿಯು ಇರುವೆಗಳಿಗೆ ಆಸ್ಪತ್ರೆ ಕಟ್ಟಿಸಿದ್ದನಂತೆ. ಅವನ ಚಕ್ರವನ್ನು ರಾಷ್ಟ್ರಸಂಕೇತವಾಗಿ ಸ್ವೀಕರಿಸಿದ ನಾವು ಕೋಣನ ನೀತಿ ಸುಧಾರಣೆಯ ವ್ಯವಸ್ಥೆ ಮಾಡಬೇಕಾದ್ದು ಕ್ರಮಪ್ರಾಪ್ತವಲ್ಲವೆ? ಲಾಂಗೂಲಾಚಾರ್ಯರನ್ನು ಕೇಳಿದರೆ ಮನುಷ್ಯ ನೀತಿ ಸುಧಾರಣೆಗೆ ಮಹಿಷನೀತಿ ಸುಧಾರಣೆಯು ಪೂರ್ವಾವಶ್ಯಕತೆಯಾಗಿದೆ. ಭಾರತೀಯರಾದ ನಾವು ಗೋಪೂಜಕರಾಗಿದ್ದರಿಂದ

ಹಾಲಿಗಾಗಿ ಗೋಮಾತೆಯನ್ನು ಸಾಕುವದು ಅಧರ್ಮವೆಂದು ಬಗೆದು ಮಹಿಷೀಕೃಪಾ ಪೋಷಿತವಾಗುತ್ತಿದ್ದೇವೆ. ಈಚೆಗೆ ಮಹಿಷ ಕುಲದಲ್ಲಿ ನೀತಿಭ್ರಷ್ಟತೆ ಹೆಚ್ಚಾಗುತ್ತ ನಡೆದದ್ದರಿಂದಲೇ ಆದರ ಹಾಲನ್ನು ಸೇವಿಸುವ ಭಾರತೀಯ ಮನುಷ್ಯರಲ್ಲಿಯೂ ನೀತಿಭ್ರಷ್ಟತೆ ಬೆಳೆಯುತ್ತಿದೆಯೆಂಬದು ಸಂಖ್ಯಾಶಾಸ್ತ್ರಿಗಳು ತರ್ಕಿಸಿದ್ದಾರೆ. ಗೋಹತ್ಯಾ ಪ್ರತಿಬಂಧದಲ್ಲಿ ಭಾರತಕ್ಕೆಲ್ಲ ಮುಂದಾಳಾದ ಉತ್ತರಪ್ರದೇಶವು ತನ್ನ ನೀತಿಸುಧಾರ ಮಂದಿರಗಳಲ್ಲಿ ಮಹಿಷಾ ವಾರ್ಡುಗಳನ್ನೂ ಸ್ಥಾಪಿಸಲು ಮುಂದಾಗಿದ್ದಾರೆ. ಅದು ಜಗತ್ತಿನಲ್ಲೇ ಕೀರ್ತಿಶಾಲಿ ಯಾಗುತ್ತಿತ್ತು. ಮೇಲೆ ಹೇಳಿದ ಮಹಿಷಾಪರಾಧಿಯಿಂದಲೇ ಸಂಪೂರ್ಣಾನಂದರು ಅನಾಯಾಸವಾಗಿ ಪ್ರಾರಂಭಿಸಬಹುದಿತ್ತು. ಈ ಮಹಿಷಾಪರಾಧಿಯ ಗತಜೀವನದ ಕಥೆ ಲಭ್ಯವಾಗಿದ್ದರೆ ಅದು ರಾಜಕಪೂರನ "ಆವಾರ"ನ ಕಥೆಗಿಂತ ಕಡಿಮೆ ಕರುಣಾಜನಕ ವಾಗಿರುತ್ತಿದ್ದಿಲ್ಲೆಂದು ಲಾಂಗೂಲಾಚಾರ್ಯರಿಗೆ ಭರವಸೆಯಿದೆ. ಆವಾರನ ತಂದೆಯಂತೆ ಈ ಅನಾಮಧೇಯ ಮಹಿಷನ ತಂದೆಯೂ ನಿರಪರಾಧಿ ಪತ್ನಿಯ ಮೇಲಿನ ಶಂಕೆಯಿಂದ ಅವನನ್ನೂ ಅವಳನ್ನೂ ತೊರೆದಿರಬಹುದು. ಅಥವಾ ಚಿಕ್ಕಂದಿನಲ್ಲಿ ಅತಿ ಲಲ್ಲೆಯಿಂದ ಅವನನ್ನು ಕೆಡಿಸಿರಬಹುದು. ಅಥವಾ ನಿಷ್ಕರುಣ ರೈತರು ಅವನನ್ನು ಶೋಷಿಸಿ ಸರಿಯಾದ ಪ್ರತಿಫಲವೀಯದೆ ತುಡುಗುತನವೇ ದುಡಿಮೆಗಿಂತ ಲಾಭಕರವೆಂಬ ಅಭಿಪ್ರಾಯಕ್ಕೆ ಅವನನ್ನು ಅಟ್ಟಿರಬಹುದು. ನೈತಿಕ ಸುಧಾರ ಮಂದಿರಲ್ಲಿ ಅವನಿಗೆ ಯಾವುದೊಂದು ಉಪಯುಕ್ತ ಉದ್ಯೋಗವನ್ನು ಕಲಿಸಿ ಮಹಿಷ ಕುಲದ ಉಪಯುಕ್ತ ನಾಗರಿಕನಾಗಲು ಅಣಿಗೊಳಿಸುವುದು ಅಸಾಧ್ಯಕೋಟಿಯ ಮಾತಾಗಿರಲಿಲ್ಲ. ಆದರೆ ಇಂಥ ಸುಸಂಧಿಯನ್ನು ಕಳೆದುಕೊಂಡದ್ದಷ್ಟೇ ಅಲ್ಲದೆ ಸಂಪೂರ್ಣಾ ನಂದರು ಇನ್ನು ಮುಂದೆ ಮಾನುಷ ಕಾಯಿದೆಗಳ ಮೇರೆಗೆ ಮಹಿಷಗಳನ್ನು ನಡೆಸಿಕೊಳ್ಳಬಾರದೆಂದು ಮೆಜಿಸ್ಟ್ರೇಟರಿಗೆ ಆಜ್ಞೆ ಹೊರಡಿಸಿದ್ದು ಶುದ್ಧ ದಡ್ಡತನವಾಯಿತೆಂದು ಹೇಳದೆ ವಿಧಿಯಿಲ್ಲ.

ಇದೀಗ ಭಾರತದಲ್ಲಿ ಬ್ರಿಟಿಶ್ ಹೈಕಮೀಶನರಾಗಿ ಬಂದಿರುವ ಮ್ಯಾಲ್ಕಂ ಮ್ಯಾಕ್ ಡೊನಾಲ್ಡರ ತಂದೆ (ಹಿಂದಿನ ಬ್ರಿಟಿಶ್ ಪ್ರಧಾನಿ) ರಾಮ್ಸೆ ಮ್ಯಾಕಡೊನಾಲ್ಡರು ದಕ್ಷಿಣ ಭಾರತದಲ್ಲಿ ಎಷ್ಟು ಜನಪ್ರಿಯರಾಗಿದ್ದರೆಂದರೆ ಜನರು ಅವರನ್ನು ರಾಮಸ್ವಾಮಿ ಮುದಲಿಯಾರ್ ಎಂದು ಕರೆಯುತ್ತಿದ್ದರೆಂದು ಹೇಳಿ ಒಬ್ಬ ಸುದ್ದಿಗಾರನು ಮಾಲ್ಕಂರನ್ನು ಮೊನ್ನೆ ನಗಿಸಿದನಂತೆ. ರಾಮಸ್ವಾಮಿ ಮುದಲಿಯಾರರ ಜನಪ್ರಿಯತೆಯ ವಿಷಯ ಮಾಲ್ಕಂರಿಗೆ ಹೆಚ್ಚು ತಿಳಿದಾಗ ಅವರು ತಮ್ಮ ತಂದೆಗೆ ದೊರೆತ ಈ ತುಲನೆಗಾಗಿ ಅಷ್ಟು ಹೆಮ್ಮೆ ಪಡಲಿಕ್ಕಿಲ್ಲವೇನೋ. ತಮಿಳರು ತಮಗೆ ಲಾಭಕರವೆನಿಸಿದಾಗ ಪರಕೀಯರನ್ನು ಸ್ವಕೀಯರಾಗಿ ಮಾಡಿಕೊಳ್ಳುವಲ್ಲಿ ನಿಸ್ಸೀಮರೆಂದು ಯಾರಿಗೆ ಗೊತ್ತಿಲ್ಲ? ಶೇಕ್ಸ್‌ಪಿಯರ ಮಹಾಕವಿಯು ಶೇಷಪ್ಪಯ್ಯನೆಂಬ ತಮಿಳನೆಂದು ಹಿಂದೊಬ್ಬರು ಒಳ್ಳೇ ಗಂಭೀರವಾಗಿ ವಾದಿಸಿದ್ದರು. ಲಾಭಕರವೆನಿಸಿದಾಗ ತಮ್ಮನ್ನು ವಿದೇಶಿಯರಾಗಿ ಮಾಡಿಕೊಳ್ಳುವುದರಲ್ಲಿಯೂ ಅವರು ಗಟ್ಟಿಗರೇ. ಶ್ರೀನಿವಾಸನ್ನರು ಎಸ್. ವಾಸನ್ನರಾಗುತ್ತಾರೆ; ಈಶ್ವರನ್ನರು ಈ ವಾರನ್ನರಾಗುತ್ತಾರೆ.

❑

# ವೇದಾಂತ ಮತ್ತು ಸ್ತ್ರೀಕಲಹ

ವೇದಾಂತ ಪ್ರೊಫೆಸರರೂ ಧೀರ್ಘ ದೃಷ್ಟಿಯ ರೋಗಿಗಳಂತೆ ಎಂದು ಹೇಳಲಾಗುತ್ತದೆ: ಅವರಿಗೆ ತಮ್ಮ ಮೂಗಿನ ಒಂದು ಗೇಣಿನೊಳಗಿರುವ ಸತ್ಯ ಕಾಣಿಸುವುದಿಲ್ಲ; ಆದರೆ ಅವರು ದೂರದ ಚರಮ ಸತ್ಯವನ್ನು ಎಳೆಯೆಳೆಯಾಗಿ ಬಿಡಿಸಲು ಹವಣಿಸುತ್ತಾರೆ. ನಮ್ಮ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನರು ಮಾತ್ರ ವೇದಾಂತಿಗಳು ಮತ್ತು ಪ್ರೊಫೆಸರರು ಎರಡೂ ಆಗಿದ್ದರೂ ತಮ್ಮ ಜಾತಿಯಲ್ಲಿ ಅಪವಾದವಾಗಿದ್ದಾರೆ. ಅವರು ಜಗಲಿ ಹಾರದೆ ಗಗನಕ್ಕೆ ಜಿಗಿಯಲು ಟೊಂಕ ಬಿಗಿಯುವವರಲ್ಲ. ಮೊನ್ನೆ ರಾಜ್ಯಸಭೆಯಲ್ಲಿ ಅವರು ಡಾ|| ಮಿತ್ರರಿಗೆ ವ್ಯವಹಾರಚತುರ ಉಪದೇಶವೊಂದನ್ನು ಕೊಟ್ಟರು. "ಇಬ್ಬರು ಹೆಂಗಸರು ವಾದಿಸುತ್ತಿರುವಾಗ ನೀವು ತೆಪ್ಪಗೆ ಕೂತಿರುವುದು ಒಳ್ಳೇದು." ಡಾ|| ಸೀತಾ ಪರಮಾನಂದರಿಗೂ ಆರೋಗ್ಯ ಮಂತ್ರಿ ಅಮೃತಕೌರರಿಗೂ ವಿವಾದ ಪ್ರಾರಂಭವಾಗಿದ್ದ ಸಂದರ್ಭದಲ್ಲಿ ಡಾ|| ಮಿತ್ರರು ಬಲು ಅವಿವೇಕದಿಂದ ನಡುವೆ ಬಾಯಿ ಹಾಕಲೆದ್ದಾಗ ಡಾ|| ರಾಧಾಕೃಷ್ಣನ್ನರು ಆಡಿದ ಹಿತವಚನವಿದು. "ಯಾವ ಜಾತಿಯಲ್ಲಿಯೂ ಗಂಡಿಗಿಂತ ಹೆಣ್ಣು ಅಪಾಯಕರ ವಾಗಿರುತ್ತದೆ" ಎಂದು ಕಿಪ್ಲಿಂಗನು ಹೇಳಿದಾಗ ತಾನೇನು ಹೇಳುತ್ತಿದ್ದೇನೆಂದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಬುದ್ಧಿವಂತರಾದ ಆರ್ಯಭಾಷೆಗಳ ಹಲವು ಜನಕುಲಗಳು ಸ್ತ್ರೀಯರನ್ನು ಬೆಕ್ಕುಗಳಿಗೆ ಹೋಲಿಸುತ್ತವೆ. ಇಬ್ಬರು ಹೆಂಗಸರು ಹೋರಾಡುವಾಗ ಬೆಕ್ಕುಗಳಂತೆ ಹೋರಾಡುತ್ತಾರೆಂದು ಅವರು ಹೇಳುತ್ತಾರೆ. ಅವರು ತಮ್ಮ ಹಲ್ಲುಗಳಿಂದಲೂ ಉಗುರು ಗಳಿಂದಲೂ ಮೇಲೆ ಕಂಠದಿಂದಲೂ ಯುದ್ಧ ಮಾಡುತ್ತಾರೆ. ಎರಡು ಬೆಕ್ಕುಗಳು ಜಗಳ ಮಾಡುವಾಗ ನಡುವೆ ಪ್ರವೇಶಿಸಿದರೆ ಏನಾಗುತ್ತದೆಂದು ಯಾರಿಗೆ ಗೊತ್ತಿಲ್ಲ? ಅವರೆಡೂ ಅವನ ಮೇಲೆ ತಿರುಗಿ ಬೀಳುವ ಭಯವಿದೆ. ಮತ್ತು ಇಬ್ಬರು ಸ್ತ್ರೀಯರು ಒಬ್ಬ ಪುರುಷನ ಮೇಲೆ ತಿರುಗಿಬಿದ್ದರೆ ಅವನು ಪಾರಾಗುವ ಸಂಭವವೇ ಇಲ್ಲ. ಸ್ತ್ರೀಯರಾಗಲಿ ಪುರುಷರಾಗಲಿ ಅವನನ್ನು ಕಾಪಾಡಲು ಮುಂದೆ ಬರಲಾರರು. ಜಾಣರಾದ ಪುರುಷರು ಇಂಥ ಪ್ರಸಂಗದಲ್ಲಿ ವಹಿಸಬೇಕಾದ ನೀತಿಯೊಂದೇ; ನಿರೀಹತೆಯಿಂದ ಎರಡು ಹೆಣ್ಣುಗಳ ಜಗಳನ್ನು ನೋಡುತ್ತ ನಿಂತಿರುವುದು—ಸುರಕ್ಷಿತ ದೂರದಲ್ಲಿ. ಕೂಗು ಮುಗಿದು ಗಾಯ ಮಾತ್ರ ಉಳಿದಮೇಲೆ ಬೆಕ್ಕುಗಳಲ್ಲೊಂದನ್ನು ರೆಕ್ಕೆಯ ಕೆಳಗೆ ತೆಗೆದುಕೊಂಡು ಅದು ಗಾಯಗಳನ್ನು ನೆಕ್ಕುತ್ತಿರುವಾಗ ಸವಿನುಡಿಗಳ ಮಲಮು ಒದಗಿಸುವುದು.

*   *   *

ನಮ್ಮ ಸಂಸತ್ತಿನಲ್ಲಿ ಈ ವಾರ ಬಂದ ಇನ್ನೊಂದು ಜಾಣತನದ ಹಿತೋಪದೇಶ ಹಣಕಾಸಿನ ಮಂತ್ರಿ ಚಿಂತಾಮಣಿ ದೇಶಮುಖರ ಮುಖದಿಂದ ಹೊರಟಿತು. "ಎಲ್ಲ ವಾಗ್ದಾನಗಳನ್ನೂ ಅವುಗಳ ಸಂದರ್ಭವನ್ನರಿತು ಅರ್ಥಮಾಡಿಕೊಳ್ಳಬೇಕು" ಎಂದು ಅವರು ಉಪದೇಶಿಸಿದ್ದಾರೆ. ಇದು ಮಂತ್ರಿಗಳ ಮುಖದಿಂದ ಹೊರಟ ವಚನಗಳಿಗೆ ಸಂಬಂಧಿಸಿದ್ದೆಂದು ಸಂದರ್ಭದಿಂದ ಅರ್ಥವಾಗುತ್ತದೆ. ಪ್ರತಿಯೊಂದು ಮಂತ್ರಿವಚನವೂ ಅದು ಎಂಥ ಪೇಚಿನಲ್ಲಿ ಕೊಡಲ್ಪಟ್ಟಿದ್ದೆಂಬದನ್ನು ಅನುಸರಿಸಿ ಅದರದರ ಹುಳಿಯ ಪ್ರಮಾಣಕ್ಕನುಸರಿಸಿ—ಇಂಗ್ಲಿಷಿನಲ್ಲಿ ಹೇಳುವಂತೆ—"ಉಪ್ಪು ಬೆರೆಸಿ" ತೆಗೆದುಕೊಳ್ಳಬೇಕು. ಪೇಟೆಯಲ್ಲಿ ಸರಕಾರಿ ಪತ್ರಗಳು ಹೇಗೆ ಹದಿನಾರಾಣೆ ಬೆಲೆಯಲ್ಲಿರುವುದು ವಿರಳವೋ ಹಾಗೆ ಮಂತ್ರಿಗಳ ವಚನಗಳನ್ನೂ ಹದಿನಾರಾಣೆ ಬೆಲೆಯಲ್ಲಿ ತೆಗೆದುಕೊಳ್ಳುವುದು ಸುರಕ್ಷಿತವಲ್ಲ. ನೀವು ಒತ್ತಾಯದಿಂದ ಒಂದು ವಚನ ತೆಗೆದುಕೊಂಡರೆ ಒತ್ತಾಯದಿಂದಲೇ ಅದನ್ನು ಪೂರೈಸಿ ಕೊಳ್ಳಬೇಕಾಗುತ್ತದೆ ಮತ್ತು ಎರಡನೆಯದಕ್ಕೆ ಬೇಕಾದ ಒತ್ತಾಯ ಮೊದಲನೆಯದಕ್ಕೆ ಬೇಕಾದಕ್ಕಿಂತ ಹಲಪಟ್ಟು ಹೆಚ್ಚಾಗಿರುತ್ತದೆ. ವಚನಗಳನ್ನು ಎರಡು ಸರಳ ರೇಖೆಗಳು ಒಂದನ್ನೊಂದು ಕತ್ತರಿಸುವ ಭೂಮಿತಿಯ ಆಕೃತಿಗೆ ಹೋಲಿಸಬಹುದು. ಅವು ಒಂದನ್ನೊಂದು ಛೇದಿಸುವ ಮೊದಲು ಪರಸ್ಪರ ದೂರವಾಗಿಯೇ ಇರುತ್ತವೆ. ಛೇದಿಸಿದ ನಂತರ ಪುನಃ ದೂರವಾಗುತ್ತ ಹೋಗಿ ಕೊನೆಗೆ ಸಮಾಂತರವಾಗುತ್ತವೆ. ಮತ್ತು ಸಮಾನಾಂತರ ರೇಖೆಗಳು ಅನಂತದಲ್ಲಿ ಮಾತ್ರ ಸೇರುತ್ತವೆಂದು ನಮಗೆ ಭೂಮಿತಿಯ (ನಾಲ್ಕನೇ ಅಲ್ಲವೇ?) ಪ್ರಮೇಯವು ಕಲಿಸುತ್ತದೆ. ಈ ಅನಂತವು ವಚನಗಳ ಸಂದರ್ಭದಲ್ಲಿ ಅನಂತ ಸ್ಥೈರಣೆಯೆಂಬ ಅರ್ಥಕೂಡುತ್ತದೆ. "ವಚನ ಕರ್ಣ, ಪಾಲನ ಜಿಪುಣ" ಇದೀಗ ನಮ್ಮ ಮೂಲ ಮಂತ್ರ.

❏

# ಸವತಿ ಮತ್ಸರ

ಜನತೆಯೇ ತಮ್ಮ ಗಂಡನೆಂದು ಹೇಳಿದವರು ಮುರಾರಜಿ ದೇಸಾಯರೋ ಅಥವಾ ಜೀವರಾಜ ದೇಸಾಯರೋ ನೆನಪಿಲ್ಲ. ಎಲ್ಲ ರಾಜಕಾರಣಿಗಳೂ ತಾವು ಜನತೆಯ ರಾಣಿಯರೆಂದು ಹೇಳಿಕೊಳ್ಳುವವರೇ. ಅಧಿಕಾರಸ್ಥ ಪಕ್ಷದ ರಾಜಕಾರಣಿಗಳಂತೂ ತಾವೇ ಜನತೆಯ ಪಟ್ಟದ ರಾಣಿಯೆಂದುಕೊಳ್ಳುತ್ತಾರೆ. ಮತ್ತು ಎಲ್ಲ ಪಟ್ಟದ ರಾಣಿಯರಂತೆ ಇವರೂ ತುಂಬ ಮತ್ಸರಗ್ರಸ್ಥ ಜೀವಿಗಳು. ಕಾಂಗ್ರೆಸ್ ಕೌಸಲ್ಯೆಗೆ ಪ್ರಸವಾ ಸುಮಿತ್ರೆಯ ಕಡೆ ಜನತಾ ದಶರಥನ ಕಟಾಕ್ಷವಿಕ್ಷೇಪವಾದರೆ ಅಂಜಿಕೆ, ಕಮ್ಯೂನಿಸ್ಟ್ ಕೈಕೇಯಿಯ ಮೋಹನ ಮಂತ್ರದ ಭಯವಂತೂ ಯಾವಾಗಲೂ ಅವಳ ನಿದ್ದೆ ಕೆಡಿಸುತ್ತದೆ. ಅವಳ ದುರ್ದೈವ ಅಲ್ಲಿಗೇ ಮುಗಿಯಲಿಲ್ಲ. ಪಟ್ಟದ ರಾಣಿ ರುಕ್ಮಿಣಿಗೆ ಮಾಯಾವಿ ಕೃಷ್ಣನನ್ನು ಹುಸಿ ಮುನಿಸಿನ ಸತ್ಯಭಾಮೆಯರಿಂದ ಮಾತ್ರವಲ್ಲ, ಆ ಮಹಾಚದುರೆ ಗೋಪಿ ರಾಧೆಯಿಂದಲೂ ಉಳಿಸಿ ಕೊಳ್ಳುವ ಚಿಂತೆಯುಂಟಾಗಿದೆ. ಈ ರಾಧೆ ಯಾರೆಂದು ನಿಮಗೆ ಗೊತ್ತಿದೆಯೇ? ಸಿನೆಮಾ ತಾರಕ-ತಾರಿಕೆಯರು ಕಾಂಗ್ರೆಸ್ ಅಧ್ಯಕ್ಷ ಉಚಂಗರಾಯ ನವಲಂಕರ ಢೇಬರರು ಸಿನೆಮಾ ಮೋಹಕ್ಕಾಗಿ ಜನತೆ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಹರಿಹಾಯ್ದರು. "ಸಿನೆಮಾ ತಾರೆಯರ ಬಗ್ಗೆ ಪರೀಕ್ಷೆ ಮಾಡಿದ್ದಾದರೆ ವಿದ್ಯಾರ್ಥಿಗಳಿಗೆಲ್ಲ ಫಸ್ಟ್‌ಕ್ಲಾಸ್ ಸಿಗುವುದರಲ್ಲಿ ಸಂದೇಹವಿಲ್ಲ ಎಂದವರು ಕರುಬು ನುಡಿಗಳನ್ನಾಡಿದರು.

* * *

ಶುದ್ಧ ಪಟ್ಟದರಾಣಿ! ರುಕ್ಮಿಣಿ!! ಕಷ್ಟ ಬಂದದ್ದೆಂದರೆ ಇವಳು ಕೃಷ್ಣನನ್ನು ಮದುವೆಯಾಗಿಬಿಟ್ಟದ್ದು. ಮಹಾ ಠಕ್ಕ ಕೃಷ್ಣ ಮದುವೆಯಾದ ಪಟ್ಟದ ರಾಣಿಯನ್ನು ಲೆಕ್ಕಿಸದೆ ರಾಧೆಯ ಬೆಂಬೆತ್ತಿ ಸುಳಿಯುತ್ತಾನೆ. ಮಾನಗೇಡಿ ರಾಧೆ ಎಲ್ಲಿ ಇವನನ್ನು ಅಪಹರಿಸಿ ಬಿಡುವಳೋ, ಈ ಗಂಡಸರೇ ಹೀಗೆ. ಮನೆಯ ಹಿತವಾದ ಊಟ ಬಿಟ್ಟು ಹೋಟೇಲಿನ ಹೊಲಸು ತಿಂಡಿಗೆ ಜೀವ ಬಿಡುತ್ತಾರೆ. ಎಲ್ಲ ಹೊಟೇಲುಗಳಲ್ಲಿಯೂ ಎಣ್ಣೆಯಲ್ಲಿ ಜಿಲೇಬಿ ಕರಿಯುತ್ತಾರೆಂದು ಎಲ್ಲ ಹೆಂಡಂದಿರಿಗೂ ಗೊತ್ತಿಲ್ಲವೆ? ಗಂಡಂದಿರು ಮಾತ್ರ ಅಪ್ಪಟ ಆಕಳ ತುಪ್ಪದಿಂದಲೇ ಕರಿದಿದ್ದೆಂದು ನಂಬುತ್ತಾರಲ್ಲ ಇದಕ್ಕೇನು ಮಾಡೋಣ? ರುಕ್ಮಿಣಿ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಾಳೆ. ಕಣ್ಣುಗಳ ಬುಡಕ್ಕೆ ಸುಕ್ಕುಗಳು. ಕಪೋಲದ ಕಾಂತಿ ಕುಂದುತ್ತದೆ. ಹಣೆಯಲ್ಲಿ ಅಡ್ಡಗೆರೆಗಳು. ಅವಳ ಮತ್ಸರ ಇನ್ನಷ್ಟು ಹೆಚ್ಚುತ್ತದೆ. ಆ ರಾಧೆಯ ಮೈಮೊಗಗಳಲ್ಲಿ ಚಿರಂತನ ಯೌವನ ಪುಟಿಯುವುದನ್ನು ನೆನೆಯುತ್ತಾಳೆ. ಕೃಷ್ಣ ಪೂರಾ

ಕೈತಪ್ಪಿದನೆಂದೇ ನಂಬುತ್ತಾಳೆ. ಈ ಮೋಸಗಾರನ ಸೇವೆಯಲ್ಲಿ ತನ್ನ ತನು ಇಷ್ಟು ನುಗ್ಗಾಗಿದೆ. ಆ ಮಾಯಾವಿನಿ? ಬರಿ ಕಣ್ಣಿನ ಕುಣಿತದಿಂದ ಇವನನ್ನು ಸೆರೆಯಿಕ್ಕಿ ಯೌವನ ಕಾಪಾಡಿ ಕೊಂಡಿದ್ದಾಳಲ್ಲ...!

* * *

ಲಾಂಗೂಲಾಚಾರ್ಯರನ್ನು ಕೇಳಿದರೆ ರುಕ್ಮಿಣಿಯ ಹೊಟ್ಟೆಕಿಚ್ಚು ನಿಷ್ಕಾರಣವಾದದ್ದು. ಅಣ್ಣನನ್ನು ತೊರೆದು ತನಗಾಗಿ ಓಡಿಬಂದ ರುಕ್ಮಿಣಿಯ ಮೇಲೆ ಕೃಷ್ಣನ ಮಮತೆ ನಿಜವಾಗಿ ಕಡಿಮೆಯಾಗಿಲ್ಲ. ಆದರೆ ಪಾಪ, ಅವನಿಗೆ ನಿಜವಾಗಿ ಬೇಸರ ಬಂದಿದೆ. ರುಕ್ಮಿಣಿಯ ಸಾನಿಧ್ಯದಲ್ಲಿ ಆಕಳಿಕೆಯನ್ನು ತಡೆದುಕೊಳ್ಳುವುದು ಅವನಿಗೆ ತೀರ ಕಷ್ಟವಾಗುತ್ತದೆ. ರುಕ್ಮಿಣಿಗೆ ವಯಸ್ಸು ಮೀರಿದಂತೆ ಮಾತಾಡುವ ಚಟ ಬಹಳ ಹೆಚ್ಚಾಗಿದೆ. "ನೀನು ಹೀಗೆ ಮಾಡಬೇಕು ಕೃಷ್ಣಾ; ಹಾಗೆ ಮಾಡಬಾರದು ವಾಸುದೇವ; ತಣ್ಣೀರು ಕುಡಿದರೆ ನೆಗಡಿಯಾದೀತು ಹರೀ; ಕೆರೆಯಲ್ಲಿ ಈಸಹೋದರೆ ಮುಳುಗಿ ಹೋದೀಯ ಗಂಡಯ್ಯ; ಗರುಡನನ್ನೇರಿ ಹಾರುವಾಗ ಬಿದ್ದರೆ ನಾನೇನು ಮಾಡಲಿ ರಂಗಯ್ಯ; ಏಳು ನಾರಾಯಣನೆ ಏಳು ಲಕ್ಷ್ಮೀರಮಣ ಏಳಯ್ಯ ಬೆಳಗಾಯಿತು; ಇಷ್ಟು ರಾತ್ರಿವರೆಗೆ ಎಲ್ಲಿ ಹೋಗಿದ್ದೀ ರಮಣಾ; ತಡಮಾಡಿ ಮಲಗಿದರೆ ಆರೋಗ್ಯಕ್ಕೆ ಒಳಿತಲ್ಲೆಂದು ಆಶ್ವಿನೀಕುಮಾರರು ಹೇಳಿಲ್ಲವೆ ವಲ್ಲಭಾ..." ಈ ಉಪದೇಶಾಮೃತ ಕೇಳಿಕೇಳಿ ಕೃಷ್ಣ ತೂಕಡಿಸತೊಡಗುತ್ತಾನೆ. ರುಕ್ಮಿಣಿಗೆ ಕೆರಳುತ್ತದೆ. ನಾನೇನಾದರೂ ತುಸು ಹೇಳಿದರೆ ನಿನಗೆ ಆಕಳಿಕೆ ಬರುತ್ತದೆ. ಆ ರಾಧೆ ಹೇಳಿದ್ದನ್ನಾದರೆ ಇದೀಗ ಮೊದಲಿನಿಂದ ಕೊನೆವರೆಗೆ ಬಾಯಿಪಾಠ ಒಪ್ಪಿಸುತ್ತೀ" ಎಂದು ಜರೆಯುತ್ತಾಳೆ. ನಿಜವೆಂದರೆ ಕೃಷ್ಣ ಎಲ್ಲಾದರೂ ತಪ್ಪಿಸಿಕೊಂಡು ರಾಧೆಯಲ್ಲಿಗೆ ಹೋದಾಗ ಅವಳು ಉಪದೇಶಾಮೃತ ಸುರಿಸುವುದಿಲ್ಲ. ಸುಮ್ಮನೆ ಅವನ ಕೈಯಲ್ಲಿ ತನ್ನ ಕೈಯಿಟ್ಟು ಭವಭೂತಿ ಹೇಳುವ ಹಾಗೆ ಕೆನ್ನೆಗೆ ಕೆನ್ನೆ ಕೊಟ್ಟು ಮಧುರವಾಗಿ ಏನೇನೋ ಹರಟುತ್ತಾಳೆ. ಯಾಕೆ ತಡಮಾಡಿದಿ ಎಂದು ಕೇಳುವುದಿಲ್ಲ. ಬೆಳಿಗ್ಗೆ ಕೋಳಿ ಕೂಗಿದೊಡನೆ ಏಳು ನಾರಾಯಣನೆ ಎಂದು ಮೈ ಕುಲುಕುವುದಿಲ್ಲ. ಬೆಳಗಿನವರೆಗೆ ಅವಳ ಸವಿಮಾತು ಕೇಳುತ್ತಾ ಬೆಳಗಾದ ಮೇಲೆ ಮಲಗುತ್ತಾನೆ ಕೃಷ್ಣ. ಅವಳ ಸವಿಮಾತುಗಳನ್ನೇ ಕನವರಿಸುತ್ತಾನೆ. ರಾಧೆಯ ಮೇಲೆ ಅವನಿಗೆ ಪ್ರೀತಿ ಹೆಚ್ಚೆಂದೇನೂ ಅರ್ಥವಲ್ಲ. ಅವಳಲ್ಲಿ ಹೋದರೆ ಕರಕರೆಯಿಲ್ಲ, ಅದಕ್ಕೆ ಹೋಗುತ್ತಾನೆ. ರುಕ್ಮಿಣಿಯೂ ರಾಧೆಯಂತೆ ಮಾಡಿದರೆ ಅವಳಲ್ಲಿಯೂ ಅಷ್ಟೇ ಸಂತೋಷದಿಂದ ಮಲಗಬಹುದು. ಆದರೆ ಅವಳು ನಿದ್ದೆಯಲ್ಲಿ ಕೂಡ ಉಪದೇಶವನ್ನೇ ಕನವರಿಸುತ್ತಾಳೆ. ರುಕ್ಮಿಣಿಗೂ ರಾಧೆಗೂ ಅಂತರವಿಷ್ಟೇ: ರುಕ್ಮಿಣಿ ಕೃಷ್ಣನನ್ನು ತನ್ನ ಸೊತ್ತೆಂದು ಭಾವಿಸುತ್ತಾಳೆ. ಅದರಿಂದ ಅದು ಕಳೆದು ಹೋಗದಂತೆ ಸುತ್ತಲೂ ಬೇಲಿ ಕಟ್ಟುತ್ತಾಳೆ. ದಾರಿಗೆ ಮುಳ್ಳು ಹಾಕುತ್ತಾಳೆ. ರಾಧೆ ಕೃಷ್ಣನ ಸೊತ್ತಲ್ಲ. ಸೊತ್ತು ಮಾಡಿಕೊಳ್ಳುವ ಹಂಬಲವೂ ಇಲ್ಲ. ತನ್ನ ಮಗನಿಗೆ ಪಟ್ಟವಾಗುವದು ಆಗಬೇಕು ಎಂಬ ಆಸೆಯೂ ಇಲ್ಲ ಅವಳಿಗೆ. ಕೃಷ್ಣನನ್ನು ಮೆಚ್ಚಿಸುವುದೊಂದೇ ಅವಳ ಮನೋಭೀಷ್ಟ. ರುಕ್ಮಿಣಿ ಮಾತ್ರ ಕೃಷ್ಣನನ್ನು ಬೇಸರಪಡಿಸುವಂತೆ ಬುದ್ಧಿ ಹೇಳುವುದೇ ಪಾತಿವ್ರತ್ಯದ ಮುಖ್ಯಾಂಶವೆಂದು ಇಂದಿಗೂ ನಂಬಿದ್ದಾಳೆ. ಧೇಬರರು ಇದನ್ನು ಮನಗಾಣಲಿ.

❑

# ಬಸ್ಸಿನಲ್ಲಿ ಸ್ವಾತಂತ್ರ್ಯ

ನೀವು ಸ್ವತಂತ್ರವಾದ ಯಾವುದೊಂದು ರಾಜ್ಯದಲ್ಲಿ ವಾಸ ಮಾಡಬಯಸುತ್ತಿದ್ದರೆ ಹೆಚ್ಚು ಹುಡುಕದೆ ನೆಟ್ಟಗೆ ಮೈಸೂರು ರಾಜ್ಯಕ್ಕೆ ಹೋಗಿರಿ. ಹಿತ್ತಲಗಿಡ ಮದ್ದಲ್ಲವೆಂಬಂತೆ ಲಾಂಗೂಲಾಚಾರ್ಯರಿಗೆ ನಮ್ಮದೇ ಆದ (ಕೆಲ ಮೈಸೂರಿಗರು ಅದು ನಮ್ಮದಲ್ಲವೆಂದು ಸಾರುತ್ತಿದ್ದರೂ) ಮೈಸೂರು ಇಷ್ಟು ಸ್ವತಂತ್ರವಾಗಿದೆಯೆಂಬ ಕಲ್ಪನೆಯೇ ಇರಲಿಲ್ಲ. ಆದರೆ ಕಳೆದ ಒಂದು ಪಕ್ಷದಲ್ಲಿ ಹರಿಹರ ಆಗುಂಬೆಗಳ ನಡುವಣ ಆ ಅಚ್ಚ, ಕಡು, ಸುದ್ದ, ತಿರುಳು ಮೈಸೂರಿನೊಳ್ ಎರಡು ಸಲ ಸಂಚಾರ ಮಾಡಿದ ಮೇಲೆ, ಮೈಸೂರಿನ ಸ್ವಾತಂತ್ರ್ಯದ ಬಗ್ಗೆ ಸಂಶಯದ ಕಿಲುಬೂ ಉಳಿಯಲಿಲ್ಲ. ಮೈಸೂರಿನಲ್ಲಿ ಕೆಂಗಲ್ ಅಥವಾ ಕ್ಯಾಸಂಬಳ್ಳಿ ಅಥವಾ ಮತ್ತಾವುದೇ ಕಲ್ಲಿನ ಇಲ್ಲವೆ ಬಳ್ಳಿಯ ಮಂತ್ರಿಮಂಡಲವು ಕಾನೂನುಗಳನ್ನು ಮಾಡಲು ಎಷ್ಟು ಸ್ವತಂತ್ರವೋ ಅಷ್ಟೇ ಸಾಧ್ಯವಿದ್ದವರೆಲ್ಲ ಅವನ್ನು ಮುರಿಯಲೂ ಸ್ವತಂತ್ರರೆಂಬುದು ನಿಮಗೆ ಯಾವ ಬಸ್ಸಿನಲ್ಲಿ ಕೂಡ ನಿಸ್ಸಂದಿಗ್ದವಾಗಿ ಮನವರಿಕೆಯಾಗುತ್ತದೆ.

* * *

ಮೈಸೂರು ರಾಜ್ಯದ ಬಸ್ಸುಗಳಲ್ಲಿ ಬಸ್ಸಿನವರು ತಮಗೆ ಸಿಕ್ಕಿದಷ್ಟು ಅಥವಾ ಬಸ್ಸಿನಲ್ಲಿ ಹಿಡಿಸುವಷ್ಟು ಜನರನ್ನು ಓವರ್‌ಲೋಡ್ ಮಾಡಲು ಸ್ವತಂತ್ರರು. ಹರಿಹರದಿಂದ ಹೊರಟ ಬಸ್ಸು ನ್ಯಾಮತಿ ಮುಟ್ಟುವದರೊಳಗೆ (ಎಷ್ಟೋ ವೇಳೆ ಬಸ್ಸು ಸಂಪು ಹೂಡುವ ತನ್ನ ಸ್ವಾತಂತ್ರ್ಯವನ್ನು ಉಪಯೋಗಿಸಿ ನ್ಯಾಮತಿಯನ್ನು ಮುಟ್ಟಲೊಲ್ಲೆನೆಂದು ನಿಂತೇಬಿಡುವುದುಂಟು) ಅದು ಕೋಳಿ ಮರಿಗಳನ್ನು ತುಂಬಿದ ಬುಟ್ಟಿಯನ್ನು ಅತಿಶಯವಾಗಿ ಹೋಲುವುದು. ಆಗಲೂ ನೀವು ಸಾಧ್ಯವಿದ್ದರೆ ಉಸಿರಾಡಿಸಲು ಸ್ವಂತಂತ್ರರಿದ್ದೀರಿ. ಹೊಸತಾಗಿ ಬಂದವರಿಗೆ ಸೀಟಿನಲ್ಲಿಯಾಗಲಿ ಕೆಳಗೆ ನೆಲದಲ್ಲಾಗಲಿ ಜಾಗವಿಲ್ಲದಿದ್ದರೆ ನಿಮ್ಮ ತೊಡೆಯ ಮೇಲೆ ಅವರನ್ನು ಕುಳ್ಳಿರಿಸಿಕೊಳ್ಳಲು ಅಥವಾ ಕೊಳ್ಳದಿರಲು ನೀವು ಸ್ವತಂತ್ರರಿದ್ದೀರಿ. ಆದರೆ ನೀವು ನಿಮ್ಮ ತೊಡೆಯ ಮೇಲೆ ಅವಕಾಶ ಕೊಡದಿದ್ದರೆ ಹೊಸ ಪ್ರಯಾಣಿಕನು "ಬಿಲ್ಲಾಗಿರಬೇಕು ಸಜ್ಜನರ ಬಳಿಯಲ್ಲಿ" ಎಂಬ ದಾಸರ ಉಪದೇಶವನ್ನು ಅಕ್ಷರಶಃ ಪಾಲಿಸುವ ಭಂಗಿಯಲ್ಲಿ ನಿಂತು ತನ್ನ ಪೃಷ್ಠಭಾಗವನ್ನು ನಿಮ್ಮ ಮೂಗಿಗೆ ತಗುಲಿಸಲು ಸ್ವತಂತ್ರನಿದ್ದಾನೆ. ಅವನ ಆ ಭಾಗದ ಸ್ಪರ್ಶವು ನಿಮಗೆ ರುಚಿಸದಿದ್ದರೆ ನೀವು ಅವನನ್ನು ರಾಮ ಪಂಚಾಯತನ ಚಿತ್ರದಲ್ಲಿ

ರಾಮನು ಸೀತೆಯನ್ನು ಏರಿಸಿಕೊಂಡಂತೆ ತೊಡೆಯ ಮೇಲೇರಿಸಿಕೊಳ್ಳಲು ಮತ್ತಾದರೂ ಸ್ವತಂತ್ರರೇ ಆಗಿದ್ದೀರಿ.

* * *

ಮೈಸೂರಿನ ಬಸ್ಸುಗಳು ದ್ರೌಪದಿಯ ಅಕ್ಷಯಪಾತ್ರವಿದ್ದಂತೆ. ಅಲ್ಲಿ ಎಷ್ಟೇ ಜನಸಂದಣಿಯಿದ್ದರೂ ಯಾವಾಗಲೂ ಮತ್ತೊಬ್ಬನನ್ನು ಏರಿಸಿಕೊಳ್ಳಲು ಸ್ಥಳವಿದ್ದೇ ಇರುತ್ತದೆ. ಆರು ಜನರಿಗಿರುವ ಸೀಟಿನ ಮೇಲೆ ಒಂಭತ್ತು ಜನರನ್ನು ಕೂಡಿಸಿದ ಮೇಲೂ ಕಂಡಕ್ಟರನು ಹತ್ತನೆಯವನಿಗೆ ಅಲ್ಲಿ ಸ್ಥಳವುಂಟೆಂದು ಹೇಳಿದಾಗ ನೀವು ಅವಿಶ್ವಾಸಪೂರ್ವಕವಾಗಿ ನಕ್ಕರೂ ಇನ್ನೊಬ್ಬ ಪ್ಯಾಸೆಂಜರು ಏರಿದಾಗ ಅನುಭವಶಾಲಿಯಾದ ಕಂಡಕ್ಟರನೇ ಸರಿ ನೀವೇ ತಪ್ಪೆಂದು ಬಲುಬೇಗ ನಿಮಗೆ ಮನವರಿಕೆಯಾಗುವುದು. ಮನುಷ್ಯಶರೀರದ ಸಂಕೋಚನ ಶಕ್ತಿಯ ಅಸೀಮತ್ವವನ್ನು ಕಂಡು ನೀವು ಬೆರಗಾಗುತ್ತೀರಿ. ಹತ್ತನೇ ಪ್ರವಾಸಿಗನು ನಿಮ್ಮ ಮತ್ತು ನಿಮ್ಮ ಒತ್ತಿನ ಪ್ರವಾಸಿಕನ ನಡುವೆ ತನ್ನನ್ನು ಕುಕ್ಕರಿಸಿಕೊಂಡಾಗ ಅವನ ತಳವು ಎಂದಿಗೂ ಸೀಟನ್ನು ತಗಲಲಿಕ್ಕಿಲ್ಲವೆಂದು ನೀವು ಮೊದಲು ಭಾವಿಸುತ್ತೀರಿ... ಆದರೆ ಹತ್ತು ಮಾರು ದೂರ ಹೋಗುವಷ್ಟರಲ್ಲಿ ಬಸ್ಸು ಒಂದು ಹೈಜಂಪ್ ಹೊಡೆಯಿತೆಂದರೆ ಈ ಹತ್ತನೆಯವರು ಎಂಟು ಒಂಭತ್ತನೆಯವರ ನಡುವೆ ಸರಕ್ಕನೆ ಸೇರಿ ಹೋಗಿ ಸೀಟು ಮುಟ್ಟಿ ಕೀಲೀಕೃತನಾಗುವನು. ಮತ್ತು ಆಮೇಲೆ ಹನ್ನೊಂದನೇ ಪ್ಯಾಸೆಂಜರನು ಸಿಕ್ಕಿದರೆ ಕಂಡಕ್ಟರನು ಈ ಸೀಟು ಹನ್ನೊಂದು ಜನರದೆಂದು ಸಾಧಿಸತೊಡದಿದಾಗ ನೀವು ಪ್ರತಿಭಟನೆಯಿಲ್ಲದೆ ಶರಣಾಗತರಾಗಲು ಸಿದ್ಧರಾಗುತ್ತೀರಿ.

* * *

ಆದರೆ ಪೊಲೀಸರಿಲ್ಲವೆ? ಎಂದು ನೀವು ಕೇಳಬಹುದು. ಮೈಸೂರು ಪೊಲೀಸನ ಬಣ್ಣವನ್ನಾಗಲಿ ಟೋಪಿಯನ್ನಾಗಲಿ ನೀವು ಮೆಚ್ಚದಿರಬಹುದಾದರೂ ಅವನ ಅಂತರಂಗ ಬಹಳ ಮೆದುವಾಗಿರುತ್ತದೆಂದು ಒಪ್ಪಲೇಬೇಕಾಗುವುದು. ಅವನು ಸಹನಾಮೂರ್ತಿಯಾದ ಆ ಬಸ್ ಹಾಗು ಅದರ ಕಂಡಕ್ಟರನಂತೆ ಬಹಳ 'ಅಕಾಮೊಡೇಟಿಂಗ್' ಪ್ರಾಣಿ. ಅವನು ವಾಹನ ಕಾಯದೆಯ ಮೇರೆಗೆ ಬಸ್ಸಿನೊಳಗಿನ ಜನರನ್ನು ಎಣಿಸಿ ಬಸ್ಸಿನವರನ್ನು ತರಾಟೆಗೆ ತೆಗೆದುಕೊಳ್ಳುವ ಅನವಶ್ಯಕವೂ ಕ್ರೂರವೂ ಆದ ಕ್ರಮವನ್ನು ಕೈಕೊಳ್ಳುವುದಿಲ್ಲ. ತನಗೆ ಪುಕ್ಕಟೆ ಪ್ರವಾಸವನ್ನು ನಿರಾಕರಿಸುವ ಅಥವಾ ತನ್ನ ಮೇಲಧಿಕಾರಿಯ ಮನೆಬಾಗಿಲಿಗೆ ಬಸ್ಸನ್ನು ಒಯ್ಯಲು ಒಲ್ಲೆನೆನ್ನುವ ಅಕ್ಷಮ್ಯ ಕೃತಿಯನ್ನು ಡ್ರೈವರನು ಮಾಡಿದರೆ ಮಾತ್ರ ಕಾಯದೆ ಬಜಾಯಿಸುವ ಚರಮೋಪಾಯವನ್ನು ಅವನು ಕೈಕೊಳ್ಳಬೇಕಾಗುವುದು. ಆದರೆ ಅಂಥ ಪರಿಸ್ಥಿತಿ ಒದಗುವುದೇ ವಿರಳ. ಬಸ್ಸಿನವರೂ ಪೊಲೀಸರೂ ಯಾವಾಗಲೂ ಪರಸ್ಪರ ದಾಕ್ಷಿಣ್ಯಪರರಾಗಿರುವುದರಿಂದ ಪೋಲಿಸರ ಕಡೆಯಿಂದ ಪ್ರವಾಸಿಕರಿಗೆ ವಿಳಂಬವಾಗುವುದಿಲ್ಲ.

ಈ ಪ್ರಕಾರ ಪರಮಾವಧಿ ಜನರ ಸೇವೆಗೈದು ಪರಮಾವಧಿ ಭಾರವನ್ನು ಹೊರುವ ಸದವಕಾಶವು ನಿರಂತರವಾಗಿ ಬಸ್ಸಿಗೆ ಲಭ್ಯವಾಗುವುದು.

* * *

ಮೈಸೂರಿನ ಬಸ್ಸುಗಳಲ್ಲಿ ನೀವು ಬೇಕಾದಷ್ಟು ಬೀಡಿ ಸಿಗರೇಟುಗಳನ್ನು ಧ್ವಂಸಮಾಡಲು ಸ್ವತಂತ್ರರು. ನೀವೇನಾದರೂ ಅಳ್ಳೆದೆಯವರಾಗಿದ್ದರೆ ಬಸ್ಸುಹೊರಟು ಐದು ನಿಮಿಷಗಳವರೆಗೆ ತಡೆಯಿರಿ. ಕಂಡಕ್ಟರನೇ ಅಗ್ನಿಪ್ರತಿಷ್ಠೆ ಮಾಡುವನು. ಆಮೇಲೆ ಬಸ್ ಏಜಂಟನು ಹೊಗೆ ಕಾರಲಾರಂಭಿಸುವನು. ಬಳಿಕ ನಿರಾತಂಕವಾಗಿ ಸಾಮೂಹಿಕ ಅಗ್ನಿಹೋತ್ರ ನಡೆಯುವುದು. ಜ್ಞಾನದಿಂದ ಜ್ಞಾನವನ್ನು ಹೊತ್ತಿಸುವಂತೆ ಬೀಡಿಯಿಂದ ಬೀಡಿಗಳು ಜ್ವಲೀನವಾಗುವವು. ಬಸ್ಸಿನಲ್ಲಿ ಪೋಲಿಸನಿದ್ದರೂ ಈ ಯಜ್ಞಕ್ಕೆ ಅಡ್ಡಿತಂದು ಅವನು ಧರ್ಮಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ನಿಮ್ಮ ಸಂಕೋಚಾವಶೇಷವನ್ನು ಹೊಡದೋಡಿಸಲು ಅವನೇ ಒಂದು ಬೀಡಿಯನ್ನು ಅಧರೋಷ್ಠಗಳ ನಡುವೆ ನಿಲ್ಲಿಸಿ ನಿಮ್ಮಿಂದ ಕಡ್ಡಿಪೆಟ್ಟಿಗೆಯನ್ನು ಸನ್ನೆಯಿಂದ ಕೇಳುವನು. ಈ ಧೂಮಸ್ವಾತಂತ್ರ್ಯದ ಕುರುಹನ್ನು ಲಾಂಗೂಲಾಚಾರ್ಯರು ತಮ್ಮ ಎಡ ಮುಂಗೈ ಮೇಲೆ ಹೊತ್ತಿದ್ದಾರೆ. ಮುಂದೆ ಕುಳಿತಿದ್ದವರ ಬೀಡಿಯಿಂದ ಹಾರಿದ ಕಿಡಿಯೊಂದು ಹಿಂದೆ ಕುಳಿತಿದ್ದ ಆಚಾರ್ಯರ ಖಾದಿ ಜುಬ್ಬದ ಕೈಮೇಲೆ ಕುಳಿತಿತು. ಅದು ಈ ಕಿಡಿಯಿಂದ ಸುಟ್ಟು ಲಾಂಗೂಲಾಚಾರ್ಯರ ಕೈಗೆ ಚುರ್ರೆಂದಿತು. ಆಚಾರ್ಯರು ಕಂಡಕ್ಟರನಿಗೆ ಪ್ರತಿಭಟಿಸಿದರು. ಉತ್ತರವಾಗಿ ಕಂಡಕ್ಟರನು ಇನ್ನೊಂದು ಬೀಡಿ ಹೊತ್ತಿಸಿದನು. ಆಚಾರ್ಯರ ಖಾದಿ ಜುಬ್ಬವನ್ನು ಸಂಶಯ ದೃಷ್ಟಿಯಿಂದ ಅವನು ನೋಡಿದಂತೆ ತೋರಿತು. ಅದು ನಕಲಿ ಖಾದಿಯಾಗಿರಬೇಕು. ಇಲ್ಲವೇ ಆಚಾರ್ಯರು ನಕಲಿ ದೇಶಭಕ್ತರಿರಬೇಕೆಂದು ಅವನು ಭಾವಿಸಿದನೋ ಏನೊ. ಇಲ್ಲದಿದ್ದರೆ ಅಂಗಿಯು ಸೀತಾದೇವಿಯಂತೆ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿರುತ್ತಿತ್ತೆ? ಮೇಲಾಗಿ ತಾವೂ ಒಂದು ಬೀಡಿ ಹೊತ್ತಿಸಿ ತಮಗಿಂತ ಹಿಂದೆ ಕುಳಿತವರ ಮೈಮೇಲೆ ಕಿಡಿ ಹಾರಿಸುವ ಸ್ವಾತಂತ್ರ್ಯವನ್ನು ಲಾಂಗೂಲಾಚಾರ್ಯರು ಉಪಯೋಗಿಸದಿದ್ದುದು ಅವರದೇ ತಪ್ಪು ತಾನೆ?

❑

# ಎರಡನೇ ಮದುವೆ

ಎರಡನೇ ಮದುವೆಯೆಂಬುದು ಅನುಭವದ ಮೇಲೆ ಆಸೆಗೆ ದೊರೆತ ವಿಜಯವೆಂಬ ಡಾ|| ಜಾನ್‌ಸ್ಟನ್‌ರ ಸಿದ್ಧಾಂತ ಸರಿಯಾಗಿದ್ದರೆ ಚಾಣಕ್ಯರೆನಿಸಿದ ಜಾಫರುಲ್ಲಾಖಾನರಲ್ಲಿ ೬೩ನೇ ತ್ರಿಷಷ್ಟ ವಯಸ್ಸಿನಲ್ಲಿಯೂ ಆಶಾವಾದದ ಭಾಂಡಾರ ಅಮಿತವಾಗಿದೆಯೆಂದೇ ಹೇಳಬೇಕು. ಅರವತ್ತರ ನಂತರ ಅವರ ಹಿಂದಿನ ಹೆಂಡತಿ ಅವರ ಕೈಬಿಡಲು ನಿರ್ಧರಿಸಿದಳು. ಆದರೆ ಈಗ ಅವರು ಮತ್ತೆ ಚತುರ್ಭುಜರಾಗಿದ್ದಾರೆ. "ಜಫರುಲ್ಲಾರ ಮುಖಕ್ಕೆ ಈ ಅರುವತ್ತರ ಅರಳು ಮರಳಲ್ಲಿ ಮತ್ತಾವ ರಂಭೆ ಒಲಿದುಬರುತ್ತಾಳೆ ನೋಡುವೆ" ಎಂದೇನಾದರೂ ಅವರ ಮೊದಲ ಹೆಂಡತಿ ಪಂಥ ತೊಟ್ಟಿದ್ದರೆ ಅವಳ ಪಣವನ್ನು ಅವರು ಗೆದ್ದುಕೊಂಡಿದ್ದಾರೆಂದೊಪ್ಪದೆ ವಿಧಿಯಿಲ್ಲ. ಯಾಕಂದರೆ ಅವರ ಈಗಿನ ಹೆಂಡತಿ ನಿಜವಾಗಿ ರಂಭೆ. ಅಷ್ಟೇ ಏಕೆ, ಅವರು ಅವಳನ್ನು ಕಂಡು ಮೆಚ್ಚಿ ಪ್ರೇಮಭಿಕ್ಷೆ ಬೇಡಿರದೇ ಅವಳೇ ಅವರನ್ನು ನೋಡಿ ಅವರಿಂದ ನಾಮಭಿಕ್ಷೆ ಬೇಡಿ ಬಂದಳಂತೆ. ಅರ್ಜುನನಿಗೆ ಚಿತ್ರಾಂಗದೆ, ಪುರೂರವನಿಗೆ ಊರ್ವಶಿ (ಅಥವಾ ಭೀಮನಿಗೆ ಹಿಡಿಂಬೆ ಏನ್ನೋಣವೇ?) ಕೂಡ ಈ ವಯಸ್ಸಿನಲ್ಲಿ ತಾವಾಗಿ ಒಲಿದು ಬಂದಿರಲಿಕ್ಕಿಲ್ಲ. ಜಫರುಲ್ಲಾಖಾನರೂ ತಮ್ಮ ವಯಸ್ಸಿಗೂ ಅವಳದಕ್ಕೂ ಇರುವ ಅಂತರವನ್ನು ಅವಳ ಗಮನಕ್ಕೆ ತರದೆ ಬಿಡಲಿಲ್ಲ; ಯಾಕೆಂದರೆ ರಾಜಕಾರಣದಲ್ಲಿ ಅವರೇನೇ ಅನ್ಯಾಯ ಮಾಡಲಿ, ಮದುವೆಯಲ್ಲಿ ಅತ್ಯಂತ ಪ್ರಾಮಾಣಿಕತೆಯಿರಬೇಕೆಂಬುವವರು ಅವರು. ಆದರೆ ಅವರಿಗೆ ಒಲಿದುಬಂದ ನಾರಿ ಹಳೇ ಮದ್ಯ ಮತ್ತು ಹಳೇ ಗಂಡ ಶ್ರೇಷ್ಠವೆಂದು ದೃಢವಿಶ್ವಾಸವುಳ್ಳವಳಾಗಿರಬೇಕು. (ಅವರಿಗಿಂತ ಎಳೆ ವಯಸ್ಸಿನ ಇನ್ನೊಬ್ಬ ವರನನ್ನು ಅವಳು ತಿರಸ್ಕರಿಸಿದ್ದಳಂತೆ).

* * *

ಮುದುಕರು ಯಾಕೆ ಮದುವೆಯಾಗುತ್ತಾರೆ ಎಂಬ ಪ್ರಶ್ನೆ ಯಾವಾಗಲೂ ತರುಣರನ್ನು ಬಾಧಿಸಿದೆ. ಕೆಲ ತರಣರಂತೂ ಅವರು ಪರೋಪಕಾರಕ್ಕಾಗಿ ವಿವಾಹವಾಗುತ್ತಾರೆಂದು ಆರೋಪಿಸುವುದನ್ನು ಲಾಂಗೂಲಾಚಾರ್ಯರು ಕೇಳಿದ್ದುಂಟು. ಆದರೆ ವಿವಾಹೇಚ್ಛು ವೃದ್ಧರಿಗೆ ಇದು ತೀರ ಸರಳ ಪ್ರಶ್ನೆ. ಪರೋಪಕಾರವು ಅವರ ತಲೆಯಲ್ಲಿ ಕೂಡ ಸುಳಿಯುವುದಿಲ್ಲ. ೬೩ನೇ ವಯಸ್ಸು ಪರೋಪಕಾರ ಪ್ರಾರಂಭಿಸಲು ಅಕಾಲವೆಂದು ಅವರಿಗೆ ಗೊತ್ತಿದೆ. ಆ

ವಯಸ್ಸಿನಲ್ಲಿ ಜನರು ತಮಗೆ ತಾವೇ ಕೈಲಾದಷ್ಟು ಉಪಕಾರ ಮಾಡಿಕೊಳ್ಳಬೇಕೆಂಬ ಸ್ಥಿತಿಯಲ್ಲಿರುತ್ತಾರೆ. ಅದರಿಂದಲೇ ಅವರ ಮನಸ್ಸು ದೇವರ ಕಡೆ ಹೊರಳುತ್ತದೆ. ಆಚಾರ್ಯರಿಗೆ ಗೊತ್ತಿದ್ದ ಒಬ್ಬ ಮುದುಕರಂತೂ ಆ ವಯಸ್ಸಿನಲ್ಲಿ ಮೂರನೇ ಸಲ ಮದುವೆಯಗುತ್ತ ಪರಲೋಕ ಸಾಧನೆಯ ಅಂಗವಾಗಿ ಧರ್ಮಕರ್ಮಗಳಲ್ಲಿ ನೆರವಾಗಲು ಬೇಕೆಂದು ತಾವೇ ತೃತೀಯ ಪ್ರಯತ್ನ ಮಾಡುತ್ತಿರುವುದಾಗಿ ಹೇಳಿದರು. (ಪರೋಪಕಾರ ಮಾಡಬೇಕೆಂಬವರು ದೇವರ ಕಡೆ ಎಂದಾದರೂ ಹೊರಳಿದ್ದನ್ನು ನೀವು ನೋಡಿದ್ದೀರಾ?) ಆದ್ದರಿಂದ ಅವರ ಕೃತಿಗೆ ಪರೋಪಕಾರಕ್ಕಿಂತ ಹೊರಗಿನ ಕಾರಣಗಳನ್ನು ನಾವು ಹುಡುಕ ಬೇಕಾಗುವುದು.

* * *

ಜಫರುಲ್ಲಾಖಾನರಂತೆಯೇ ನ್ಯಾಯಾಧೀಶನಾಗಿದ್ದ ಲಾರ್ಡ್ ಬೇಕನ್ನನು "ತರುಣರಿಗೆ ಹೆಂಡತಿ ಸೂಳೆ, ಮುದುಕರಿಗೆ ಹೆಂಡತಿ ದಾದಿ" ಎಂದು ಹೇಳಿದಾಗ ಅವನು ಏನೇನೂ ಗುರಿ ತಪ್ಪಲಿಲ್ಲ. ಮುದುಕರಿಗೆ ಹೆಂಡತಿ ದಾದಿ; ಮತ್ತು ದಾದಿಯಾದವಳು ಮುದುಕಿಯಾಗಿದ್ದರೆ ಯಾರು ಮೆಚ್ಚುವರು ಹೇಳಿ? ನೀವು ಮದುವೆಯಾಗುವ ವಿಚಾರದಲ್ಲಿದ್ದರೂ ತರುಣಿ ದಾದಿಯನ್ನೇ ಹಾರೈಸುವಿರಿ. ಅದರಿಂದಲೇ ಮುದುಕರು ತರುಣಿಯರನ್ನು ಮದುವೆ ಮಾಡಿಕೊಳ್ಳುತ್ತಾರೆ. ಅದು ಅವರಿಗೆ ಈ ಜಗತ್ತಿನಲ್ಲಿ ಇನ್ನೂ ಉಳಿಯುತ್ತ ಹೋಗಲು ಒಳ್ಳೇ ನೆವವನ್ನು ಒದಗಿಸುತ್ತದೆ. ಅವಳ ಮಾಂಗಲ್ಯರಕ್ಷಣೆಗಾಗಿ ತಾನು ಬದುಕುವುದು ಕರ್ತವ್ಯವೆಂದು ಅವರು ತಮ್ಮನ್ನು ಪುಸಲಾಯಿಸಿಕೊಳ್ಳಬಹುದಾಗುತ್ತದೆ. ಅರವತ್ತರ ನಂತರವೇ ನಿಜವಾದ ಜೀವನ ಪ್ರಾರಂಭವಾಗುತ್ತದೆಂದು, ಮೂರುನೂರು ವರ್ಷ ಬದುಕುವ ಆಸೆಯಿದ್ದರೂ ತೊಂಭತ್ತರಲ್ಲೇ ನಿಷ್ಕ್ರಮಣ ಹೊಂದಿದ ಬರ್ನಾರ್ಡ್ ಶಾನ ಅಭಿಪ್ರಾಯ. ಕೆಲ ನವ ವಿವಾಹಿತ ಮುದುಕರಿಗೆ ಇದು ವಿಶೇಷವಾಗಿ ಒಪ್ಪುತ್ತದೆ. ಅರವತ್ತರ ನಂತರ ಸ್ತ್ರೀ ಸೌಂದರ್ಯದ ವಿಷಯಕ್ಕೆ ಪುರುಷನಲ್ಲಿ ಒಂದು ನಿಜವಾದ ಕಲಾತ್ಮಕ ರಸಾನುಭೂತಿ ಶಕ್ಯವಾಗುತ್ತದೆ. ಹಲ್ಲಿಲ್ಲದ ಮನುಷ್ಯನೇ ಚಕ್ಕುಲಿಯ ನಿಜವಾದ ಸೊಗಸು ಅರಿಯಬಲ್ಲ. ಅವನು ಅದನ್ನು ಕಡಿಯಲಾರನಾದ್ದರಿಂದ ಅವನಿಗೆ ಅದರ ವಿಷಯದಲ್ಲಿ ಒಂದು ಸುಂದರ ಸ್ವಪ್ನದಂತೆ ಭಾಸವಾಗುತ್ತದೆ. "ಅನುಭವವು ಸವಿಯಲ್ಲ ಅದರ ನೆನಪೇ ಸವಿ." ತಾನು ಚಕ್ಕುಲಿ ತಿನ್ನುತ್ತಿದ್ದ ದಿನಗಳ ನೆನವು ಚಕ್ಕುಲಿ ದರ್ಶನದಿಂದ ಮರುಕಳಿಸಿದಾಗ ಅವನಿಗಾಗುವ ಆನಂದ ನಿಜವಾದ ರಸಾನಂದವೆ. ಅವನು ಅದನ್ನು ಅಘ್ರಾಣಿಸುತ್ತಾನೆ, ಅದರ ಮುಳ್ಳು ಮುಳ್ಳಾದ ಮೈಯನ್ನು ಸ್ಪರ್ಶಿಸುತ್ತಾನೆ. ಅದನ್ನು ತಿನ್ನಲಾರನೆಂದು ಚೆನ್ನಾಗಿ ಗೊತ್ತಿರುವುದರಿಂದ ಅದರ ಮೇಲೆ ಅವನಿಗೊಂದು ಪ್ಲಟಾನಿಕ್ ಲವ್ (ಅನಾಸಕ್ತ ಲೋಭ) ಉದ್ಭವಿಸುತ್ತದೆ. ರಸಾನುಭೂತಿಯೆಂದರೆ ಕಟ್ಟಕಡೆಗೆ ಏನು? ಯಾವ ಪದಾರ್ಥವನ್ನು ಯಾವ ಇಂದ್ರಿಯದಿಂದ ಅನುಭವಿಸಬೇಕೋ ಅದನ್ನು ಬಿಟ್ಟು ಬೇರೊಂದು ಅಥವಾ ಇಂದ್ರಿಯಗಳಿಂದ ಅನುಭವಿಸುವುದೇ

ರಸಾಸ್ವಾದವಲ್ಲವೆ? "ಕಿವಿಯಿಂ ದೀಂಟಿಸುಗುಂ ಸಮಸ್ತ ರಸಮಂ." ತರುಣಿ ಮಡದಿಯ ಮುದುಕ ಗಂಡನಾದರೂ ಇಂಥ ಅನಾಸಕ್ತ ರಸಋಷಿಗಳಲ್ಲೊಬ್ಬ.

* * *

ಬೇರೆ ಕೆಲ ಮುದುಕರು ಕೊನೆಯಗಾಲದಲ್ಲಿ ಯಾಕೆ ಮದುವೆಯಾಗುತ್ತಾರೆಂದರೆ ಅವರಿಗೆ ಹೆಂಗಸು ಒಂದು ವ್ಯಸನವಾಗಿಬಿಟ್ಟಿರುತ್ತಾಳೆ. ರತ್ನ ಹೇಳಿದಂತೆ ಅವರಿಗೂ "ಯೆಂಡ ಯೆಂಡ್ತಿ ಕನ್ನಡ್ ಪದಗೋಳ್" ಒಂದೇ ಕೂಟದಲ್ಲಿ ಸೇರಿದ ಪದಾರ್ಥಗಳು ಮೊದಲ ಹೆಂಡತಿ ಅಪ್ಪಟ ವಿಲಾಯತಿ ಸಾರಾಯಿಯಂತೆ ಅವರ ತಲೆಗೇರಿಬಿಟ್ಟಿರುತ್ತಾಳೆ. ಆಮೇಲೆ ಅವಳು ಅಪರವಯಸ್ಸಿನಲ್ಲಿ ಅವರ ಕೈಬಿಟ್ಟು ಹೋಗುತ್ತಾಳೆ. ಏನಾಗುವುದಾಗ? ಅವರ ಗುಂಗು ಇಳಿದು ಹೋಗುವುದು. ಆಗಲೇ ಅವರಿಗೆ ತಾವು ಈ ಸಾರಾಯಿಗೆ ಎಷ್ಟು ಅಧೀನರಾಗಿ ಹೋಗಿದ್ದೇವೆಂಬ ಪ್ರಜ್ಞೆ ಬರುವುದು. ಅದಿಲ್ಲದಿದ್ದರೆ ತಾವೆಷ್ಟು ಅಸಹಾಯರೆಂದೂ ಅವರಿಗೆ ತಿಳಿಯುವುದು. ತಮಗಿನ್ನು ಈ ಪಾನ ಪ್ರತಿಬಂಧದ ಕಾಲದಲ್ಲಿ ಆ ವಿಲಾಯತಿ ಸಾರಾಯಿ ಸಿಗುವುದು ಅವಶ್ಯಕವೆಂದು ಅವರಿಗೆ ಗೊತ್ತಿದೆ. ಆದರೆ ಭಟ್ಟಿ ಸಾರಾಯಿಯಾದರೂ ಚಿಂತಿಲ್ಲ, ಸಾರಾಯಿ ಇಲ್ಲದೆ ಬದುಕಲಾರೆವೆಂದು ಅವರಿಗನಿಸುತ್ತದೆ. ಆಗ ಅವರು ಎರಡನೇ ಮದುವೆಗೆ ಕೈನೀಡುತ್ತಾರೆ. ಭಟ್ಟಿ ಸಾರಾಯಿಯಂತೆ ಇದೂ ಅನಾರೋಗ್ಯಕರವೆಂದು ಅವರಿಗೆ ಗೊತ್ತಿಲ್ಲದೆ ಇಲ್ಲ. ಆದರೆ ಅವರು ನಿಸ್ಸಹಾಯರು. ಹೆಂಗಸು ಗಂಡಸಿನ ಮೇಲೆ ಹಾಕಿದ ಛಾಪು ಅಷ್ಟು ಬಲವತ್ತರವಾದದ್ದು. ಅವಳು ಅವನಿಗೆ ತನ್ನ ಕೈಯ ಬೇಡಿಗಳನ್ನೇ ಪ್ರೀತಿಸಲು ಕಲಿಸಿಬಿಡುತ್ತಾಳೆ.

❑

# ಚುನಾವಣೆ ಸ್ವಾರಸ್ಯಗಳು

ದೊಡ್ಡವರಿಗೆ ಸಣ್ಣ ವಿಷಯಗಳು ತಿಳಿದಿರುವುದಿಲ್ಲೆಂಬುದು ವಿರೋಧಾಭಾಸಿಕವಾಗಿ ಕಾಣಬಹುದಾದರೂ ಅದು ಸತ್ಯ. ದೊಡ್ಡವರ ಅಲಕ್ಷ್ಯದ ಫಲವಾಗಿ ಕಳೆದವಾರ ನಮ್ಮ ಪ್ರಧಾನ ಮಂತ್ರಿ ಪಂಡಿತ ನೆಹರು, ಮತ್ತೊಬ್ಬ ಮಂತ್ರಿ ಶ್ರೀಪ್ರಕಾಶರು ಹೋರಾಟವಿಲ್ಲದೆ ಮುಂದಿನ ಲೋಕಸಭೆಯಲ್ಲಿ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದರು. ಅವರ ಪ್ರತಿನಿಧಿಗಳು ಅವರ ಪರವಾಗಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಗೋವಿಂದ ವಲ್ಲಭ ಪಂತರಂಥವರ ನೇತೃತ್ವದಲ್ಲಿ ರಿಟರ್ನಿಂಗ್ ಆಫೀಸರರ ಮುಂದೆ ನಾಮಪತ್ರ ಕೊಡಲು ಬಂದಾಗ ನಾಮಪತ್ರಗಳಲ್ಲಿ ಹಲವು ದೋಷಗಳು ಕಂಡುಬಂದು ಅದನ್ನು ಹಿಂತೆಗೆದು ಕೊಳ್ಳಬೇಕಾಯಿತಂತೆ. ಕಾಯದೆ ಮಾಡಿದವರ ಪ್ರತಿನಿಧಿಗಳಿಗೇ ಕಾಯದೆ ಗೊತ್ತಿಲ್ಲದ ಈ ಮೋಜಿನ ಪ್ರಸಂಗ ನೋಡಿದರೆ ಆ ಪ್ರಸಿದ್ಧ ವಿಮರ್ಶಕನ ಹೇಳಿಕೆ ನೆನಪಿಗೆ ಬರುತ್ತದೆ. ಪತ್ರಿಕೆಯಲ್ಲಿ ತನ್ನ ಪುಸ್ತಕದ ಅಸ್ತವ್ಯಸ್ತ ವಿಮರ್ಶೆ ಬಂದದ್ದನ್ನೋದಿ ಲೇಖಕರು ವಿಮರ್ಶಕನಿಗೆ ಕೇಳಿದನಂತೆ: "ನೀವು ನನ್ನ ಪುಸ್ತಕ ಓದಿ ವಿಮರ್ಶೆ ಬರೆದಿದ್ದೀರಾ ಹಾಗೆಯೇ ಬರೆದಿದ್ದೀರಾ?" ಎಂದು. ಚಟ್ಟನೆ ಬಂತು ವಿಮರ್ಶಕನ ಉತ್ತರ: "ನಾವಿಲ್ಲಿರುವುದು ಪುಸ್ತಕ ವಿಮರ್ಶೆ ಮಾಡಲಿಕ್ಕೆ-ಓದಲಿಕ್ಕಲ್ಲ!' ನಮ್ಮ ಶಾಸನಕರ್ತರೂ ಹೇಳಬಹುದು: "ನಾವಿರುವುದು ಕಾಯದೆ ಮಾಡಲಿಕ್ಕೆ, ಅದನ್ನು ತಿಳಿದುಕೊಳ್ಳಲು ನಮಗೆ ಪುರಸೊತ್ತಿಲ್ಲ!"

* * *

ನೆಹರೂ ಮತ್ತು ಶ್ರೀಪ್ರಕಾಶರ ಬಗ್ಗೆ ಕೊನೆಯ ಗಳಿಗೆಯಲ್ಲಿ ನಾಮಪತ್ರ ಕೊಡಲಾಯಿತು, ಅದು ಸ್ವೀಕರಿಸಲ್ಪಟ್ಟಿತು, ಎನ್ನಿ. ಆದರೆ ಇವರಿಬ್ಬರಿಗೆ ಅನುಕೂಲ ಮಾಡಿಕೊಡಲು ರಿಟರ್ನಿಂಗ್ ಆಫೀಸರರು ಗಡಿಯಾರದ ಮುಳ್ಳನ್ನು ಐದು ನಿಮಿಷ ಹಿಂತಿರುಗಿಸಿಟ್ಟರೆಂದು ಹಿಂದೂ ಮಹಾ ಸಭೆಯವರ ಆರೋಪ. ಗಡಿಯಾರದ ಮುಳ್ಳು ಹಿಂತಿರುಗಿಸುವುದರಲ್ಲಿ ನಮ್ಮ ಅಧಿಕಾರಿಗಳು ಸ್ವಯಂ ಸಮರ್ಥರೆಂದೂ ಅವಕ್ಕೆ ಮೇಲಿನವರ ಅಪ್ಪಣೆ, ಅನುಮೋದನೆ ಅಥವಾ ಪಕ್ಷಪಾತದ ಸಹಾಯ ಬೇಕಿಲ್ಲವೆಂದೂ ಲಾಂಗೂಲಾಚಾರ್ಯರು ವಾದಿಸಿದರು. ಆದರೆ ಅವರ ಹಿಂದೂ ಮಹಾಸಭಾ ಗೆಳೆಯರು ಅದರಿಂದ ಸಂತುಷ್ಟರಾಗಲಿಲ್ಲ. ಅಧಿಕಾರಿಗಳು ಸ್ವಯಂಸಾಮರ್ಥ್ಯದಿಂದ ಗಂಟೆ ಹಿಂದೆ ತಿರುಗಿಸುವುದು ನಿಜವಾದರೂ ಅದು ಆಫೀಸ್ ಪ್ರಾರಂಭಕ್ಕಿಂತ ಮೊದಲೆಂದೂ ಆಫೀಸ್ ಮುಗಿಯುವ ಹೊತ್ತಿಗೆ

ಗಡಿಯಾರದ ಮುಳ್ಳನ್ನು ಮುಂದೂಡುವುದೇ ಅವರ ಪ್ರಗತಿಪರತೆಯ ದ್ಯೋತಕವೆಂದೂ ಈ ವಿಶಿಷ್ಟ ಪ್ರಸಂಗದಲ್ಲಿ ಆಫೀಸು ಮುಗಿಯಬೇಕಾದಾಗ ಮುಳ್ಳು ಹಿಂದೂಡಿದ್ದರಿಂದ ಇದರಲ್ಲೇನೋ ಮೋಸವಿರಲೇಬೇಕೆಂದೂ ಅವರು ವಾದಿಸಿದಾಗ ಲಾಂಗೂಲಾಚಾರ್ಯರು ನಿರುತ್ತರರಾದರು.

* * *

ವಿಶ್ವವಿದ್ಯಾಲಯಗಳು ಮುಂದಾಳುಗಳನ್ನು ಪೂರೈಸಬೇಕೆಂದು ಬಂಗಾಲ ಗವರ್ನರರು ಹೇಳಿದರು.

-ಅನೇಕ ಮುಂದಾಳುಗಳಿಗೆ ಹಿಂದಾಳುಗಳೇ ಇಲ್ಲದಿರುವಾಗ ಇನ್ನಷ್ಟು ಮುಂದಾಳುಗಳನ್ನುಂಟು ಮಾಡುವ ಹವ್ಯಾಸ ಬಿಟ್ಟು ಕೆಲಹಿಂದಾಳುಗಳನ್ನು ಸೃಷ್ಟಿಸಿದರೆ ನೆಟ್ಟಗಲ್ಲವೇ?

* * *

ನಾಮಪತ್ರ ಕೊಡಲು ಹೊರಟಾಗ ಸಮಾಜವಾದಿ ಪಕ್ಷದ ಹುರಿಯಾಳಿಗೆ ಮೂರ್ಛೆ ಬಂತು.

-ಸುದ್ದಿ.

-ಚುನಾವಣೆ ಪರಿಣಾಮ ಕೇಳಹೋದಾಗ ಮೂರ್ಛೆ ಬಾರದೆ ಮೊದಲೇ ಬಂದದಕ್ಕೆ ಅವರು ದೇವರಿಗೆ ಉಪಕಾರ ಮನ್ನಿಸಿದರಂತೆ.

* * *

ಹಿಮಾಚಲ ಪ್ರದೇಶದಲ್ಲಿ ಚುನಾವಣೆ ಮುಗಿದು ಒಂದು ವಾರದೊಳಗೆ ಹಿಮವೃಷ್ಟಿ ಪ್ರಾರಂಭವಾಗಿದೆಯೆಂದು ಹೇಳಲಾಗಿದೆ. ಚುನಾವಣೆಯ ಪರಿಣಾಮಗಳು ಒಂದೊಂದಾಗಿ ಹೊರಬೀಳುತ್ತಿರುವುದೇ ಇದಕ್ಕೆ ಕಾರಣವಲ್ಲವಂತೆ.

* * *

ಚಕ್ರವರ್ತಿ ರಾಜಗೋಪಾಲಾಚಾರ್ಯರು ಕೇಂದ್ರ ಮಂತ್ರಿ ಮಂಡಲದಿಂದ ಹೊರಬೀಳುವಾಗ ಈ ಕೆಳಗಿನ ಕವನವನ್ನು ತಮ್ಮ ಸಹಮಂತ್ರಿ ಹರೇಕೃಷ್ಣ ಮೆಹತಾಬರಿಗೆ ಸಮರ್ಪಿಸಿದರಂತೆ.

❑

# ಘಾತಕ ಹರ್ಷೋನ್ಮಾದ

ನಾವು ಬಗೆದದ್ದೊಂದು, ದೈವ ಬೇರೊಂದು:
ಬಲುಗಾಲ ಹೋರಾಡಿ, ಕೊನೆಗೊಮ್ಮೆ ಬಂತು
ನಮಗೆ ಕಾಯದೆಯ ರೂಪಿಸುವ ಅವಕಾಶ
ರಚಿಸಿದೆವು ಅವನು ನಿರ್ಲೋಪ ನಿರ್ದೋಷ:
ನಮಗೀಗ ಉಳಿದಿಲ್ಲ ಅಧಿಕಾರಲೇಶ
ಕೈಕಾಲನಾಡಿಸಲು ಬಿಗಿದಿಹುದು ಪಾಶ.
ಜಗವೆಲ್ಲ ಬೆಕ್ಕಸಂ ಬೆರಗಾಗಿ ನೋಡೆ
ಹೇರಿದೆವು ಮೂವತ್ತು ಕೋಟಿಗಳ ಮೇಲೆ
ಲಿಂಗಭೇದಾತೀತ ಪ್ರೌಢ ಮತದಾನ
ದಿಗ್ದೇಶಗಳಲಾಯ್ತು ನಮ್ಮ ಜಸನ-ಗಾನ.
ಮುರಿದೆವೈ ಹಣವುಳ್ಳವರ ದುಷ್ಟ ಶಕ್ತಿ
ಗುಪ್ತ ಪ್ರತ್ಯಕ್ಷ ಮತದಾಯುಧವನೆತ್ತಿ
ಹೊಲೆಯರವರಿನ್ನು ಅಧಿಕಾರ ಮಂದಿರದಿ
ರಾಜ್ಯಗಳಲೆಂ ತುಟೋ ಅಂತೆ ಕೇಂದಿರದಿ.
ನಮ್ಮ ಬೆಳೆಯಷ್ಟು ಹುಲುಸಾಗಿ ಬಂದಿತ್ತು!
ಆದರೇನಣ್ಣ, ಬರಿ ಒಂದೆ ಕುಂದಿತ್ತು;
ಬೆಳೆಯ ಕೊಯ್ಯಲು ಹೋಗೆ ಮನೆಯೇ ದಿವಾಳಿ
ನಮ್ಮ ಜನರೋ ಮೊದಲೆ ಜೇಬೆಲ್ಲ ಖಾಲಿ!
ಈ ವೆಚ್ಚ ಹೊರಬಲ್ಲ ಕಾಂಗ್ರೆಸಿಗನೆಲ್ಲಿ
ಶ್ರೀಮಂತ ಮಿತ್ರರಾ ನೆರವಿಲ್ಲದಲ್ಲಿ?
ಸುಮ್ಮನೆ ನೆರವುಬಹುದೆ? ನೂರಾರು ಉರುಲು!
ಇದಕಾಗಿ ಹೋರಿದೆವೆ ಸ್ವರಾಜ್ಯ ತರಲು?
ಮಾನವನ ಹಂಬಲದ ಬಯಲುತನ ನೋಡು
ದೈವ ನಗುವುದು ನಮ್ಮ ಯೋಜನೆಯ ಕಂಡು

ಸತ್ಯಗಾನಕೆ ನುಡಿಯ ನೀಡು ವಾಗ್ದೇವಿ!
ಹಾಡಿನಲಿ ಕರುಣರಸಧಾರೆಯನು ತೀವಿ;
ವಿಲಪಿಸುವೆ ಮಾನವನ ಮೌಢ್ಯವನು ನೋಡಿ.
ಜಸಗಳಿಸಲೆಂದು ಹೋರಾಡಿದವರಂದು
ಮನೆಮಾರು ಕಳೆಯೆ ಸಾಲ್ ಹಿಡಿದಿರುವದರಿಂದು
ಧಗಧಗಿಪ ದೀಪದಲಿ ನುಗ್ಗುವ ಪತಂಗ
ಸುಡುವುದೆಂದರಿವುದೇ ತನ್ನ ಶಬಲಾಂಗ?
ರೆಕ್ಕೆ ಸೊಕ್ಕಿದ ಕೀಟ ಹಾಕಿದಾದರ್ಶ
ದೇಶಭಕ್ತರಿಗಿಂದು ತೋರುತಿದೆ ಮಾರ್ಗ.
ಪ್ರಕೃತಿ ನಿಯಮವದೊಂದೆ ಜೀವಿಗಳಿಗೆಲ್ಲ
ಸ್ತ್ರೀಪುರುಷ, ಕ್ರಿಮಿಕೀಟ ಭೇದವದಕಿಲ್ಲ.
ಅವತಾರದುದ್ದೇಶ ಮುಗಿದೊಡನೆ ದೈವ
ಕಳಿಸುವುದು ಘಾತಕೋತ್ಸಾಹವ ಸದೈವ.

❑

# ಸುದ್ದಿಸ್ವಾರಸ್ಯ

ಕೆಲದಿನಗಳ ಹಿಂದೆ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞರೊಬ್ಬರು ಮನುಷ್ಯನನ್ನು ಹಿಂದೂಡಿ ಈ ಭೂಮಿಯ ಮೇಲೆ ಪ್ರಭುತ್ವ ಸ್ಥಾಪಿಸಲು ಪ್ರಾಣಿಗಳು ಹೊಂಚುಹಾಕುತ್ತಿವೆಯೆಂದು ಬರೆದಿದ್ದರು. ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಕೆಲ ಸಂಗತಿಗಳನ್ನು ನೋಡಿದರೆ ಆ ವಿಜ್ಞಾನಿಯ ಭವಿಷ್ಯ ಎಣಿಸಿದ್ದಕ್ಕಿಂತ ಬೇಗನೆ ಸತ್ಯವಾಗುವುದೋ ಎನಿಸುತ್ತದೆ. ಅದರಲ್ಲಿಯೂ ಪ್ರಾಣಿಗಳು ಮನುಷ್ಯನಿಂದಲೇ ತಮ್ಮ ಕಲೆಯನ್ನು ಕಲಿಯುತ್ತಿವೆಯೋ ಎನ್ನುವಂತೆ ಅವುಗಳ ರೀತಿನೀತಿಗಳಿವೆ. ಬರೇಲಿಯಲ್ಲಿಯ ಆ ಮಂಗನನ್ನೇ ತೆಗೆದುಕೊಳ್ಳಿರಿ. ಅದು ಕಾಲೇಜು ವಿದ್ಯಾರ್ಥಿನಿಯರನ್ನೇ ತನ್ನ ಕುಚೇಷ್ಟೆಗೆ ಆರಿಸಿಕೊಳ್ಳಬೇಕೇ? ಅದು ಈವರೆಗೆ ಹತ್ತು ಹನ್ನೆರಡು ವಿದ್ಯಾರ್ಥಿನಿಯರನ್ನು ಹಿಂಸಿಸಿದೆಯಂತೆ. ನನಗಂತೂ ಅದು ಈ ವಿದ್ಯೆಯನ್ನು ಯಾರೋ ಕಾಲೇಜು ವಿದ್ಯಾರ್ಥಿಯಿಂದಲೇ ಕಲಿತಿರಬೇಕೆಂದು ತೋರುತ್ತದೆ. ಅಥವಾ ವಿದ್ಯಾರ್ಥಿನಿಯರ ಕೆಲ ಅಂಗಚೇಷ್ಟೆಗಳನ್ನು ನೋಡಿ ಅದಕ್ಕೆ ಅವರು ಸ್ವಜಾತೀಯರೆಂಬ ಅನುಮಾನ ಬಂದಿರಬಹುದೇ? ಇವೆರಡೂ ತಪ್ಪಾಗಿದ್ದರೆ ಕುರಿಯ ತೊಗಲು ಹೊದ್ದ ತೋಳನಂತೆ ಮಂಗವೇಷಧಾರಿಯಾದ ಕಾಲೇಜು ವಿದ್ಯಾರ್ಥಿಯೇ ಇರುವ ಸಂಭವವೂ ಇದೆ.

* * *

ಹಾಂ, ತೋಳ ಎಂದಾಗ ಮತ್ತೊಂದು ಸುದ್ದಿ ನೆನಪಾಯಿತು ನೋಡಿರಿ. ಮತ್ತೆ ಅವುಗಳೂ ಉತ್ತರ ಪ್ರದೇಶದಲ್ಲೇ ಬಹಳ ಕೊಬ್ಬಿವೆ. ಅವುಗಳಿಗೆ ಖಂಡಿತವಾಗಿ ಕಮ್ಯುನಿಸ್ಟರೇ ಗುರುಗಳೆಂದು ಅಧಿಕಾರಿಗಳ ಮತವಂತೆ. ಏಕೆಂದರೆ ಅವು ನಡೆಸಿರುವುದು ಕೂಟಯುದ್ಧ ಅಥವಾ ವಿಧ್ವಂಸಕ ಚಟುವಟಿಕೆಯೆಂದು ಹೆಸರಾದ ಹೊಡೆದು ಓಡುವ ವಂಚಕ ತಂತ್ರ. ಉತ್ತರಪ್ರದೇಶ ರಾಜಧಾನಿಯಾದ ಲಖನೋದ ಸುತ್ತಮುತ್ತ ೧೫೬ ಚೌ. ಮೈಲು ವಿಸ್ತಾರದಲ್ಲಿ ಅವು ಹಾವಳಿ ನಡೆಸಿ ೧೯ ಜನರನ್ನು, ವಿಶೇಷತಃ ಮಕ್ಕಳನ್ನು ಕೊಂದಿವೆಯೆಂದು ಅಧಿಕಾರಿಗಳು ಹೇಳಿದ್ದಾರೆ. ತೆಲಂಗಾಣಾದಲ್ಲಿ ಕಮ್ಯುನಿಸ್ಟರು ನಡೆಸಿರುವ ಹಾವಳಿಯೂ ವಿಸ್ತಾರ ಪ್ರದೇಶದಲ್ಲಿ ಗಾಬರಿಯನ್ನು ಹುಟ್ಟಿಸುವ ಇವುಗಳ ತಂತ್ರವೂ ಒಂದಕ್ಕೊಂದು ಹೋಲುತ್ತಿರುವುದರಿಂದ ಸಕರಕಾರದ ಕ್ರಮಗಳಿಂದ ಸಂಖ್ಯಾಬಲದಲ್ಲಿ ಕುಗ್ಗಿದ ಕಮ್ಯುನಿಸ್ಟರು ತಮ್ಮ ಪಕ್ಷಕ್ಕೆ ತೋಳಗಳನ್ನೂ ಕತ್ತೆಕಿರುಬಗಳನ್ನೂ ಸೇರಿಸಿಕೊಂಡು

ದ್ವಿತೀಯ ರಂಗವನ್ನು ಸ್ಥಾಪಿಸಿರಬೇಕೆಂಬ ಊಹಾಪೋಹಕ್ಕೆಡೆಯಾಗಿದೆ. ಪೂರ್ವ ಜರ್ಮನಿಯಲ್ಲಿ ಈಗ ಕಮ್ಯುನಿಸ್ಟರು ತಮ್ಮ ಜನ್ಮವೈರಿಗಳಾದ ನಾಜಿಗಳನ್ನೂ ತಮ್ಮ ಮಧ್ಯದಲ್ಲಿ ಸೇರಿಸಿಕೊಂಡಿರುವ ಸಂಗತಿಯನ್ನು ಅರಿತ ವರ್ಗಗಳು ನೆನೆದುಕೊಳ್ಳುತ್ತಿವೆ. ಕಾರ್ಯಸಾಧನೆಗಾಗಿ ತೋಳ-ಚಿರತೆ-ಕಿರುಬಗಳನ್ನು ತಮ್ಮ ಪಕ್ಷದಲ್ಲಿ ಸೇರಿಸಿಕೊಳ್ಳುವುದು ಕಮ್ಯುನಿಸ್ಟರಿಗೆ ಅಕಲ್ಪನೀಯವಲ್ಲೆಂದು ಹೇಳಲಾಗುತ್ತಿದೆ. ಮುಖ್ಯಮಂತ್ರಿಗಳ ಅಳಿಯನಾದ ಶ್ರೀ ಫಿರೋಜ ಗಾಂಧಿಯವರು ತಮ್ಮ ಮನೆಯಲ್ಲಿ ಮಲಗಿದ್ದಾಗ ಕತ್ತೆಕಿರುಬವೊಂದು ಅವರ ಮನೆಯಲ್ಲಿ ನುಸುಳಿ ಚೌಕಿದಾರನನ್ನು ಕೆಡವಿತೆಂಬ ಇದೀಗ ಬಂದ ಸುದ್ದಿ ಈ ಹಿಂಸ್ರಪ್ರಾಣಿಗಳ ಕಮ್ಯುನಿಸ್ಟ್ ಹಿನ್ನೆಲೆಯನ್ನು ಇನ್ನಷ್ಟು ಪುಷ್ಟೀಕರಿಸುತ್ತದೆ. ಕಮ್ಯುನಿಸ್ಟರಂತೆ ಇವುಗಳೂ ವಿಶೇಷತಃ ಕಾಂಗ್ರೆಸ್ಸಿಗರ ಮತ್ತು ಅವರ ಬಂಧುಮಿತ್ರರ ಮೇಲೆಯೇ ದಾಳಿಯನ್ನು ನಡೆಸುವಂತಿದೆ. ಈ ಕಿರುಬನನ್ನು ಹಿಡಿಯುವುದು ಪೊಲೀಸರಿಗೆ ಸಾಧ್ಯವಾಗದಿದ್ದರೂ ಅದರ ಹೆಜ್ಜೆಯ ಗುರುತುಗಳನ್ನು ಅವರು ಫೋಟೋಗ್ರಾಫ್ ಮಾಡಿಕೊಂಡಿದ್ದಾರಂತೆ. (ಉತ್ತರ ಪ್ರದೇಶ ಪೊಲೀಸರು ಮನುಷ್ಯನ ಬೆರಳಿನ ಮುದ್ರೆಯ ಶಾಸ್ತ್ರದಂತೆ ಮೃಗಗಳ ಕಾಲುಗುರುತಿನ ಶಾಸ್ತ್ರವನ್ನೂ ಬೆಳೆಸಿಕೊಂಡಿರಬೇಕು.) ಲಖೋನದ ಈ ಹಾವಳಿಯನ್ನು ನಿಲ್ಲಿಸಲು ಸರಕಾರದವರು ಮಿಲಿಟರಿಯವರ ಸಹಕಾರವನ್ನು ಕೇಳಿದ್ದಾರೆ. ಇದೂ ತೆಲಂಗಾಣಾದಲ್ಲಿ ಸರಕಾರದವರು ಅನುಸರಿಸಿದ ಪ್ರತೀಕಾರೋಪಾಯವನ್ನೇ ಹೋಲುತ್ತದೆ.

* * *

ಹೀಗೆ ಪಶುಗಳು ಮನುಷ್ಯನನ್ನು ಅನುಸರಿಸುತ್ತಿರುವಾಗ ಮನುಷ್ಯನಾದರೂ ಪಶುಗಳಿಂದ ಕಲಿಯದೆ ಬಿಟ್ಟಿಲ್ಲ. ಬಿಹಾರ ಶರೀಫದಲ್ಲಿ ಫುಟ್‌ಬಾಲ್ ಪಂದ್ಯದಲ್ಲಿ ಹನ್ನೆರಡು ವರ್ಷದ ಹುಡುಗನೊಬ್ಬನನ್ನು ಇಂದು ಕೊಂದ ಪ್ರೇಕ್ಷಕನು ಪಶುಗಳ ತತ್‌ಕ್ಷಣ ಪ್ರತೀಕಾರದ ಮಾದರಿಯನ್ನೇ ಅನುಸರಿಸಿದ್ದಾನೆ. ಗಡಿರೇಖೆಯಲ್ಲಿ ನಿಯಮಿಸಲ್ಪಟ್ಟಿದ್ದ ಆ ಹುಡುಗ ತಪ್ಪು ನಿರ್ಣಯ ಕೊಟ್ಟದ್ದೇ ಆ ಪ್ರೇಕ್ಷಕನ ಉದ್ರೇಕಕ್ಕೆ ಕಾರಣವಾಗಿತ್ತು. ಬೆಳಗಾವಿ ನಗರ ಸಭೆಯ ಅಧಿವೇಶನದಲ್ಲಿ ಅಧ್ಯಕ್ಷರ ವಿರುದ್ಧ ಅವಿಶ್ವಾಸದ ಗೊತ್ತುವಳಿ ಎದ್ದು, ಬಿದ್ದಾಗ ಒಬ್ಬಾನೊಬ್ಬ ಸದಸ್ಯನು ತನ್ನಲ್ಲಿದ್ದ ಪಿಸ್ತೂಲನ್ನು ಹಿರಿದಾದರೂ ಮನುಷ್ಯನ ಪಶುಶಿಷ್ಯತ್ವವನ್ನು ತೋರಿಸುತ್ತದೆ. ಮತ್ತು ಆ ಮಂಗ, ತೋಳ, ಕಿರುಬಗಳು ಯಶಸ್ವಿಯಾಗಿ ತಲೆ ತಪ್ಪಿಸಿಕೊಂಡು ತಿರುಗುತ್ತಿರುವಾಗ ಈ ಮನುಷ್ಯಪಶುಗಳು ಕೂಡಲೇ ಸಿಕ್ಕಿಬಿದ್ದಿರುವುದೂ ಜನ-ಜನಾವರಗಳ ಭೂಮಿಕೆಗಳು ಅದಲು ಬದಲಾಗುತ್ತಿರುವುದಕ್ಕೆ ಸಾಕ್ಷಿಯೆಂದು ಒಬ್ಬ ಸಂಶೋಧಕರು ನನಗೆ ಹೇಳಿದರು.

### ಮಂತ್ರಿಜೀವನದ ಕೌತುಕಗಳು

ಉತ್ತರ ಪ್ರದೇಶದ ಮಂತ್ರಿಗಳಾದ ಶ್ರೀ ಸಂಪೂರ್ಣಾನಂದರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ ಟಂಡನ್ನರ ಜೀವನದ ಕೆಲ ಕೌತುಕಗಳನ್ನು ಒಂದು ಲೇಖನದಲ್ಲಿ

ಎತ್ತಿ ತೋರಿದ್ದಾರೆ. ಟಂಡನ್ನರು ತುಂಬ ಲಾಭದಾಯಕವಾದ ವಕೀಲಿಯನ್ನು ಬಿಟ್ಟು ರಾಜಕಾರಣಕ್ಕಿಳಿದದ್ದು ಭಾರತದ ಅನೇಕ ನಾಯಕರ ಕೃತಿಯ ಪುನರುಕ್ತಿಯಾದ್ದರಿಂದ ಅದರಲ್ಲಿ ಅಷ್ಟು ಸ್ವಾರಸ್ಯವಿಲ್ಲ. ಆದರೆ ಅವರಿಗೆ ರಾಧಾಸ್ವಾಮಿ ಪಂಥದ "ಗುರು" ಪಟ್ಟವೊಮ್ಮೆ ಕೊಡಮಾಡಲ್ಪಟ್ಟಿತ್ತೆಂಬುದು ಕುತೂಹಲ ಜನಕವೇ ಸರಿ. ಅವರು ಆ ಗುರುತ್ವವನ್ನು ಏಕೆ ಲಘು ಮಾಡಿಬಿಟ್ಟರೆಂದು ಮಾತ್ರ ಗೊತ್ತಿಲ್ಲ. ಇಂದು ಭಾರತದ ರಾಜಕಾರಣದಲ್ಲಿ-ಏಕೆ ಕರ್ನಾಟಕದ್ದರಲ್ಲಿ ಕೂಡ-ಅನೇಕ ಸ್ವಾಮಿಗಳಿರುವುದರಿಂದ ಒಂದು ಸ್ವಾಮಿ ಹೆಚ್ಚಾಗಿದ್ದರೆ ಏನೂ ನಷ್ಟವಿದ್ದಿಲ್ಲ. ಹೈದರಾಬಾದ್ ಕಾಂಗ್ರೆಸ್ಸಿಗೆ ಒಬ್ಬ ಸ್ವಾಮಿಗಳು ಅಧ್ಯಕ್ಷರಾಗಿದ್ದದ್ದು ಸರಿಯಾದರೆ ಅ.ಭಾ. ಕಾಂಗ್ರೆಸ್ಸಿಗೆ ಸ್ವಾಮಿಗಳು ಏಕೆ ಬೇಡ? ಬ್ರಿಟಿಷರಿಗೆ ಅವರನ್ನು ಸೆರೆಮನೆ ಸೇರಿಸಬೇಕೆನಿಸಿದ್ದರೆ ಮಠವನ್ನೇ ಸೆರೆಮನೆಯಾಗಿ ಮಾರ್ಪಡಿಸ ಬಹುದಾಗಿತ್ತು. ಆದರೆ ಅವರಿಗೂ ಸ್ವಾಮಿತ್ವಕ್ಕೂ ನಡುವೆ ನಿಂತದ್ದು ಅವರ ಗಡ್ಡವೆಂದು ನನಗೆ ಸಂಶಯವಿದೆ. ಗಡ್ಡದಿಂದ ದೊರೆಯುವ ಋಷಿತ್ವದ ಮುಂದೆ "ಮುಂಡಿತ ಕೇಶ ಖಂಡಿತ ಪಾಶ ಕಾಷಾಯವಾಸ"ದ ಸಂನ್ಯಾಸದ ಗೌರವ ಕಡಿಮೆಯೆಂದು ಅವರಿಗೆ ಕಾಣಿಸಿರಬೇಕು. "ಮಂಡೆ ಬೋಳಾದರೇನು ಋಷಿ ಪಟ್ಟವಿಲ್ಲವೋ!"

* * *

ಟಂಡನ್ನರ ಜೀವನದಲ್ಲಿ ಇನ್ನೂ ಸ್ವಾರಸ್ಯವಾಗಿರುವುದೆಂದರೆ ಅವರು ಒಳ್ಳೇ ಕ್ರಿಕೆಟ್ ಆಟಗಾರರಾಗಿದ್ದುದು. ಅಧ್ಯಕ್ಷ ಚುನಾವಣೆಯ ಕ್ರಿಕೆಟ್ಟಿನಲ್ಲಿ ಮೊದಲನೆ ಇನಿಂಗ್ಸಿನಲ್ಲಿ ಅವರು "ಪ್ಲೇಸ್ ಔಟಾ"ದರೂ ಎರಡನೆಯದರಲ್ಲಿ ಅವರು ಗೆದ್ದಿರುವುದು ಅವರ ಸ್ವಭಾವದ ಇನ್ನೊಂದು ಗುಣಕ್ಕೆ ಅನುಗುಣವಾಗಿಯೇ ಇದೆ. ಶ್ರೀ ಟಂಡನ್ನರು ಕೆಲಸಗಳನ್ನು ತೀರಮೆಲ್ಲಗೆ ಮಾಡುತ್ತಾರಂತೆ. ವಸ್ತುತಃ ಅವರು ಕಳೆದ ವರ್ಷವೇ ಅಧ್ಯಕ್ಷ ಚುನಾವಣೆಯ ಓಟವನ್ನು ಪ್ರಾರಂಭಿಸಿದ್ದರು. ಪಟ್ಟಾಭಿಯವರೊಡನೆ ಓಡತೊಡಗಿದ್ದ ಅವರು ಕೃಪಲಾನಿಯವರ ಸಂಗಡ ಗುರಿಯನ್ನು ಮುಟ್ಟಿ ಗೆದ್ದರು. ಆಮೆ ಮತ್ತು ಮೊಲದ ಕಥೆ ಇಲ್ಲಿ ಸ್ವಲ್ಪ ಹೆಚ್ಚು ಜಟಿಲವಾಗಿ ನಡೆಯಿತು. ಅಷ್ಟೇ. ಕಳೆದ ವರ್ಷವೇ ಟಂಡನ್ನರು ಅರ್ಧದಾರಿ ಓಡಿದ್ದರೆಂದು ಕೃಪಲಾನಿಯವರು ಮನಗಾಣದೆ ಸೋತರು. ಬಾಬು ಟಂಡನ್ನರ ಇನ್ನೊಂದು ವೈಶಿಷ್ಟ್ಯವು ಸಮಯನಿಷ್ಠೆಯ ಅಭಾವವಂತೆ. ಯಾವ ಕೆಲಸಕ್ಕೂ ಅವರು ಹೊತ್ತಿಗೆ ಸರಿಯಾಗಿ ಹಾಜರಿರುವದಿಲ್ಲವಂತೆ. ಅದು ಭಾರತೀಯರ "ಅನಂತ ಕಾಲ"ದ ಕಲ್ಪನೆಯ ದ್ಯೋತಕ. ಸಮಯನಿಷ್ಠೆಯಿಲ್ಲದಿರುವುದು ಭಾರತೀಯರ ಸಾಮಾನ್ಯ ಸ್ವಭಾವ. ಇಲ್ಲಿ ಜನರು ಗಾಡಿಯ ಹೊತ್ತಿಗೆ ಹೋಗುವುದಿಲ್ಲ, ಗಾಡಿಯೇ (ದೊಡ್ಡ) ಜನರ ಹೊತ್ತಿಗೆ ಹೊರಡುತ್ತದೆ. ಈ ವಿಷಯದಲ್ಲಿ ಟಂಡನ್ನರು ಭಾರತೀಯ ಸಂಸ್ಕೃತಿಯ ಅಥವಾ ಸಂಸ್ಕಾರದ ಹದಿನಾರಾಣೆ ಪ್ರತಿನಿಧಿಗಳೆಂದೊಪ್ಪಲೇಬೇಕು.

## ಉಪವಾಸ ಶಕ್ತಿ

ಶ್ರೀ ಕೆ.ಎಂ. ಮುನಶಿಯವರು—ನಮ್ಮ ಆಹಾರ ಮಂತ್ರಿಗಳು—ಆಹಾರದ ಗಂಡಾಂತರದಿಂದ ಭಾರತ ಸದ್ಯಕ್ಕೆ ಪಾರಾಗಿದೆಯೆಂದು ನಿಟ್ಟುಸಿರುಗರೆದಿದ್ದಾರೆ. ತಿರುವಾಂಕೂರಿನ ಒಂದು ಊರಿನಲ್ಲಿ ನಾಲ್ಕು ದಿನದಿಂದ ಅನ್ನವಿಲ್ಲದೆ ಬರಿ ಹೊಟ್ಟೆಯಲ್ಲಿ ರೇಶನ್ ಅಂಗಡಿಗೆ ಬಂದಿದ್ದ ಹುಡುಗನೊಬ್ಬ ಅಲ್ಲಿಯ ಖಾಲಿ ಚೀಲಗಳನ್ನು ನೋಡಿ ಸ್ಮೃತಿತಪ್ಪಿ ಬಿದ್ದದ್ದಕ್ಕೆ ಹಸಿವೆ ಕಾರಣವಲ್ಲೆಂದೂ ಖಾಲಿ ಚೀಲಗಳು ಮಾಡಿದ ಮಾನಸಿಕ ಆಘಾತವೇ ಕಾರಣವೆಂದೂ ಆದ್ದರಿಂದ ಅದು "ಉಪವಾಸದಿಂದ ಬಂದ ಮೂರ್ಛೆ"ಯೆಂಬ ವರ್ಗಕ್ಕೆ ಸೇರುವುದಿಲ್ಲೆಂದೂ ಸರಕಾರಿ ತಜ್ಞರು ನಿರ್ಣಯಿಸಿದ್ದಾರಂತೆ. ವಸ್ತುತಃ, ಆ ಹುಡುಗನು ಸಾಯದೇ ಇದ್ದುದರಿಂದ ಇನ್ನೊಂದು ಹೊಸ ತಥ್ಯ ಬೆಳಕಿಗೆ ಬಂದಂತೆ ಆಗಿದೆಯೆಂದು ತಜ್ಞರು ಹೇಳುತ್ತಿದ್ದಾರಂತೆ. "ವಾರಕ್ಕೊಂದು ಉಪವಾಸ"ದ ಚಳವಳಿ ಹೂಡಿದವರು ಭಾರತೀಯರ ಉಪವಾಸಶಕ್ತಿಯನ್ನು ತೀರ ತಪ್ಪಾಗಿ ಅಂದಾಜು ಮಾಡಿದ್ದರೆಂದೂ ವಾರಕ್ಕೆ ನಾಲ್ಕುಪವಾಸ ಮಾಡಿ ಜೀವ ಹಿಡಿಯಬಲ್ಲ, ಆತ್ಮಶಕ್ತಿ ಈ ದೇಶದಲ್ಲಿದೆಯೆಂದು ಈ ಘಟನೆಯಿಂದ ಸಿದ್ಧವಾಗಿದೆಯೆಂದೂ ತಜ್ಞರು ಮಾಡಿದ ವರದಿಯ ಆಧಾರದಿಂದಲೇ ಈಗ ಶ್ರೀ ಮುನಶಿಯವರು "ಗಂಡಾಂತರ ದಾಟಿತು" ಎಂದು ಹಸಿರುದೀಪ ತೋರಿಸಿದ್ದಾರಂತೆ.

## ಗಂಡಂದಿರನ್ನು ಹುಡುಕಿಕೊಳ್ಳುವ ವಿದ್ಯೆ

ಸ್ತ್ರೀಯರಿಗೆ ಉಚ್ಚ ವಿದ್ಯೆಯನ್ನು ಕೊಡುವುದರಿಂದ ಕನ್ಯಾಪಿತೃಗಳ ಕೆಲಸ ಸುಗಮವಾಗುವುದೆಂದೂ ಕನ್ಯೆಯರು ತಂತಮಗೆ ತಾವು ತಾವೇ ಗಂಡಂದಿರನ್ನು ಕಂಡುಕೊಳ್ಳುವರೆಂದೂ ಮದ್ರಾಸ್ ಮಂತ್ರಿ ಶ್ರೀ ಮಾಧವ ಮೆನನ್ನರು ಹೇಳಿದ್ದಾರೆ. ಸ್ತ್ರೀ ವಿದ್ಯೆಗೆ ಈ ಬಗೆಯ ಅತ್ಯಂತ ವ್ಯಾವಹಾರಿಕ ಪ್ರಯೋಜನವುಂಟೆಂದು ತೋರಿಸಿಕೊಟ್ಟದ್ದಕ್ಕೆ ಶ್ರೀ ಮೆನನ್ನರಿಗೆ ನಾವು ಆಭಾರಿಗಳಾಗಿರತಕ್ಕದ್ದು. ಆದರೆ ಎಷ್ಟೋ ವೇಳೆ ಸ್ತ್ರೀವಿದ್ಯೆ ಇದರ ವಿರುದ್ಧ ಪರಿಣಾಮ ಮಾಡುವುದರಿಂದ ವಿದ್ಯಾವತಿಯರು ಮತ್ತೂ "ಗಂಡಹೀನ"ರಾಗಿ ಕುಳಿತಿರುವುದುಂಟು. ಈ ಹೆಣ್ಣು ಜೇಡರು ಹೆಣೆದ ನವಿರುಬಲೆಯಲ್ಲಿ ಒಂದು ರಾತ್ರಿ ಆರಾಮವಾಗಿ ಮಲಗಿ ನಂತರ ಬಲೆಯನ್ನು ಹರಿದು ಹಾರಿಹೋಗುವ ಗಂಡು ನೊಣಗಳೂ ಕಾಣಬರುತ್ತವೆ. ಇದಕ್ಕೆ ಪ್ರತೀಕಾರವಾಗಿ ಕಾಲೇಜುಗಳಲ್ಲಿ ಹುಡುಗಿಯರಿಗೆ ಗಂಡಂದಿರನ್ನು ಹಿಡಿಯುವ ಉಪಾಯಗಳನ್ನು ಹೇಳಿಕೊಡಲು ವಾರಕ್ಕೆ ಕೆಲವು ಪೀರಿಯಡುಗಳನ್ನು ಮೀಸಲಿರಿಸಬೇಕು; ಮತ್ತು ವಿದ್ಯೆಯ ಉದ್ದೇಶ ಸಾಫಲ್ಯವಾಗುವಂತೆ ಇಮ್ಮಡಿ ಖಾತ್ರಿ ಮಾಡಿಕೊಳ್ಳುವುದಕ್ಕಾಗಿ ಗಂಡು ವಿದ್ಯಾರ್ಥಿಗಳಿಗೆ ಹುಡುಗಿಯರ ಬಲೆಯಲ್ಲಿ ಹೇಗೆ ಬೀಳಬೇಕು ಎಂಬುದನ್ನು ಕಲಿಸಲಿಕ್ಕೂ ಕೆಲ ಪೀರಿಯಡುಗಳನ್ನು ಮೀಸಲಿಡಬೇಕು.

❑

# 'ಪ್ರಿಸಮ್' ಕನ್ನಡ ಪ್ರಕಟಣೆಗಳು

## ಸಾಹಿತ್ಯ / ವಿಚಾರ

| | | |
|---|---|---|
| 1. | ಶತಮಾನದ ಸಣ್ಣಕತೆಗಳು / ಸಂ: ಎಸ್. ದಿವಾಕರ್ | 400/- |
| 2. | ಕೆ. ಸದಾಶಿವ: ಸಮಗ್ರ ಕತೆಗಳು | 120/- |
| 3. | ನೆನಪಿನ ಗಣಿಯಿಂದ / ಗೋಪಾಲಕೃಷ್ಣ ಅಡಿಗ (ಅನುಭವ ಕಥನ) | 110/- |
| 4. | ಮರೆಯಬಾರದ ಹಳೆಯ ಕತೆಗಳು / ಸಂ: ಡಾ|| ಗಿರಡ್ಡಿ ಗೋವಿಂದರಾಜ | 200/- |
| 5. | ಜಿ. ಎಸ್. ಸದಾಶಿವ: ಇದುವರೆಗಿನ ಕತೆಗಳು | 125/- |
| 6. | ಅವಳ ಕತೆಗಳು / ಸಂ: ಡಾ|| ಜಿ. ಎಸ್. ಆಮೂರ | 150/- |
| 7. | ನಗೆಗಾರ ರಾ.ಶಿ. / ಸಂ: ಅಪರಂಜಿ ಶಿವು | 120/- |
| 8. | ಶೋಧ : ಪತ್ತೇದಾರಿ ಕತೆಗಳು / ಸಂ: ದಿ|| ಎಂ. ಎಸ್. ಕೆ. ಪ್ರಭು | 135/- |
| 9. | ಜಗತ್ತಿನ ಅತಿಸಣ್ಣ ಕತೆಗಳು / ಆಯ್ಕೆ, ಅನುವಾದ: ಎಸ್. ದಿವಾಕರ್ | 100/- |
| 10. | ಬಾಗಲೋಡಿ ದೇವರಾಯ : ಸಮಗ್ರ ಕತೆಗಳು | 130/- |
| 11. | ಸಾಹಿತ್ಯ ಮತ್ತು ಶಿಕ್ಷಣ / ಪ್ರೊ. ಜಿ. ವೆಂಕಟಸುಬ್ಬಯ್ಯ | 75/- |
| 12. | ಕನ್ನಡ ವೈಜ್ಞಾನಿಕ ಕತೆಗಳು / ಸಂ: ಸುಭಾಷಿಣಿ | 80/- |
| 13. | ನಮ್ಮ ಕೈಲಾಸಂ / ಸಂ: ಪ್ರೊ|| ಚಿ. ಶ್ರೀನಿವಾಸರಾಜು | 100/- |
| 14. | ಕೈಲಾಸಂ ಮತ್ತು ನಾನು / ರಾ.ಶಿ. | 65/- |
| 15. | ಗಾಂಧೀಜಿಯ ಕಡೆಯ ದಿನಗಳು / ಕೆ. ಎಸ್. ನಾರಾಯಣಸ್ವಾಮಿ | 60/- |
| 16. | ಪಾ.ವೆಂ. ಆಚಾರ್ಯ: ಆಯ್ದ ಹರಟೆಗಳು / ಸಂ: ಆ.ರಾ. ಮಿತ್ರ, ಶ್ರೀನಿವಾಸ ಹಾವನೂರ | 70/- |
| 17. | ಪಾ.ವೆಂ. ಆಚಾರ್ಯ: ಆಯ್ದ ನಗೆಬಹರಗಳು / ಸಂ: ಶ್ರೀನಿವಾಸ ಹಾವನೂರ, ಆ.ರಾ. ಮಿತ್ರ | 60/- |
| 18. | ನಮ್ ಬೆಂಗ್ಳೂರು / ಕೆ. ಚಂದ್ರಮೌಳಿ | 100/- |
| 19. | ರಾಶಿ ನಗೆಹನಿಗಳು / ಆಯ್ಕೆ: ಅಪರಂಜಿ ಶಿವು | 45/- |
| 20. | ವೈದ್ಯನಲ್ಲದ ಡಾಕ್ಟರು / ಡಾ|| ಎಚ್. ಕೆ. ರಂಗನಾಥ್ | 50/- |
| 21. | ಓಡಿ ಹೋದಾ ಮುಟ್ಟಿ ಬಂದಾ / ಯಶವಂತ ಚಿತ್ತಾಲ | 90/- |
| 22. | ನಿರಾತಂಕ ಆಹಾರ-ಡಯಾಬಿಟಿಕ್‌ಗಳಿಗಾಗಿ ಪುಷ್ಟಿಕರ ಸವಿಯೂಟ | 60/- |
| 23. | ಭೂಮಿ / ಮೊಗಳ್ಳಿ ಗಣೇಶ್ | 95/- |
| 24. | ಕಾನನದ ಮಲ್ಲಿಗೆ / ಡಾ. ಹೆಚ್. ಕೆ. ನಂಜುಂಡಸ್ವಾಮಿ | 75/- |
| 25. | ಉಡುಪಿ ಅಡುಗೆ / ಯು. ಬಿ. ರಾಜಲಕ್ಷ್ಮಿ | 95/- |
| 26. | ಶ್ರೀ ತ್ಯಾಗರಾಜ ಯೋಗ ವೈಭವ (ಸಂಪುಟ - ೧) | 295/- |

| | | |
|---|---|---|
| 27. | ಶ್ರೀ ತ್ಯಾಗರಾಜ ಯೋಗ ವೈಭವ (ಸಂಪುಟ - ೨) | 295/- |
| 28. | ಪ್ರಿಸಂ ಇಂಗ್ಲಿಷ್-ಕನ್ನಡ ನಿಘಂಟು / ಸಂ: ಪ್ರೊ. ಜಿ. ವೆಂಕಟಸುಬ್ಬಯ್ಯ | 185/- |
| 29. | ಯರ್ಮುಂಜ ರಾಮಚಂದ್ರ : ಸಮಗ್ರ ಕತೆ, ಕಾವ್ಯ | 85/- |
| 30. | ಇಲ್ಲಿಯವರೆಗಿನ ಕವಿತೆಗಳು / ಯು. ಆರ್. ಅನಂತಮೂರ್ತಿ | 120/- |
| 31. | ಗಂಗಾಧರ ಚಿತ್ತಾಲ: ಎಪ್ಪತ್ತೆರಡು ಕವಿತೆಗಳು ಮತ್ತು ವಿಮರ್ಶಕರ ಸ್ಪಂದನ | 195/- |
| 32. | ಬೆಂಗಳೂರಿನ ನೋಟಗಳು / ಕೆ. ಚಂದ್ರಮೌಳಿ | 180/- |
| 33. | ಸಂವಹನ ಕಲೆ / ಎಚ್.ಜಿ. ಸೋಮಶೇಖರ್ | 85/- |
| 34. | ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ / ಬಿ. ವಿ. ಕಾರಂತ / ಸಂಗ್ರಹ, ಕೃತಿರೂಪ: ವೈದೇಹಿ | 435/- |
| 35. | ನಿಟ್ಟೂರು ಶ್ರೀನಿವಾಸರಾಯರು: ನೂರರ ನೆನಪು | |

## ವಿಜ್ಞಾನ ಪ್ರಕಟಣೆಗಳು

| | | |
|---|---|---|
| 1. | ಬಾಹ್ಯಾಕಾಶಕ್ಕೊಂದು ಸೇತುಬಂಧ / ಜಿ. ಆರ್. ಹತ್ವಾರ್ | 80/- |
| 2. | ಕಣ್ಣುಗಳು / ಪ್ರೊ. ಡಿ. ಆರ್. ಬಳೂರಗಿ | 35/- |
| 3. | ಆಕಾಶರತ್ನಗಳು / ಅನು: ನಾಗೇಶ್ ಹೆಗಡೆ | 35/- |
| 4. | ನೀವೂ ವಿಜ್ಞಾನ ಪ್ರದರ್ಶನ ಏರ್ಪಡಿಸಿ | |
| | ಭಾಗ - 1 ವಿಜ್ಞಾನ ಪ್ರದರ್ಶನಗಳು / ಪ್ರೊ. ಡಿ. ಆರ್. ಬಳೂರಗಿ | 32/- |
| 5. | ಭಾಗ - 2 ವಿಜ್ಞಾನ ಪ್ರದರ್ಶನಗಳು / ಪ್ರೊ. ಡಿ. ಆರ್. ಬಳೂರಗಿ | 32/- |
| 6. | ನೀನೇ ಮಾಡಿ ನೋಡಿ ಕಲಿ | 25/- |
| 7. | ಅದ್ಭುತ ಜೀವಜಗತ್ತು | 22/- |
| 8. | ಅಂತರಿಕ್ಷದ ಕರೆ | 40/- |
| 9. | ಮಂಗಳನಲ್ಲಿ ಜೀವಶೋಧ / ನಾಗೇಶ ಹೆಗಡೆ | 35/- |
| 10. | ಇರುವೆಯ ಇರವು / ಡಾ।। ಕೃಷ್ಣಾನಂದ ಕಾಮತ್ | 35/- |
| 11. | ಕಾಗೆಯ ಕಾಯಕ / ಡಾ।। ಕೃಷ್ಣಾನಂದ ಕಾಮತ್ | 35/- |
| 12. | ಅದ್ಭುತ ಲೋಕಗಳು: ರೋಬಾಟ್ ಕಂಡ ಸೌರವ್ಯೂಹ / ಗುರುಪ್ರಸಾದ್ | 45/- |
| 13. | ಬದುಕ ನೀಡುವ ಬದಲೀ ಜೋಡಣೆ / ಡಾ।। ನಾ. ಸೋಮೇಶ್ವರ | 65/- |
| 14. | ಸರ್ಪಸಂಕುಲ / ಡಾ।। ಕೃಷ್ಣಾನಂದ ಕಾಮತ್ | 25/- |
| 15. | ವ್ಯೋಮಗಾಥೆ / ಇಸ್ರೋ ಉಪಗ್ರಹಕೇಂದ್ರ, ಬೆಂಗಳೂರು | 210/- |
| 16. | ಸೌರವ್ಯೂಹ / ಬಿ. ಎಸ್. ಶೈಲಜ | 50/- |
| 17. | ಏಳುಸುತ್ತಿನ ಕೋಟೆಯಲ್ಲಿ ಎಂಟುಕೋಟಿ ಭಂಟರು / ಡಾ।। ನಾ. ಸೋಮೇಶ್ವರ | 55/- |
| 18. | ಚಂದ್ರ / ಬಿ. ಆರ್. ಗುರುಪ್ರಸಾದ್ | 80/- |



"**ಬೆಣ್ಣೆ ಹಾಕುವುದು**" ಸಭ್ಯವೋ ಅಲ್ಲವೋ ಎಂಬ ಗಹನ ಪ್ರಶ್ನೆ ಉತ್ತರಪ್ರದೇಶ ವಿಧಾನಸಭೆಯಲ್ಲಿ. ಈಚೆಗೆ ಒಬ್ಬ ಸದಸ್ಯರು ಇನ್ನೊಬ್ಬರ ಮೇಲೆ ಮಂತ್ರಿಗಳಿಗೆ ಬೆಣ್ಣೆ ಹಾಕುತ್ತಿದ್ದಾರೆ ಎಂದು ಟೀಕೆ ಮಾಡಿದಾಗ ಈ ವಿಷಯ ತಲೆಯೆತ್ತಿತ್ತು. ಸಭಾಪತಿಗಳು ಬೆಣ್ಣೆ ಹಾಕುವುದು ಅಸಭ್ಯವಲ್ಲ ಎಂದು ತೀರ್ಪನಿತ್ತು ಮರ್ಯಾದೆ ರಾಮನ ಘನತರವಾದ ಬುದ್ಧಿಸಂಪತ್ತಿಯನ್ನು ಪ್ರದರ್ಶಿಸಿದರು. ಲಾಂಗೂಲಾಚಾರ್ಯರು ಈ ತೀರ್ಮಾನಕ್ಕೆ ಒಂದೇ ಒಂದು ಚಿಕ್ಕ ತಿದ್ದುಪಡಿಯನ್ನು ಸೂಚಿಸುತ್ತಾರೆ. ಬೆಣ್ಣೆ ಹಾಕುವುದು ಅಸಭ್ಯವಲ್ಲ. ಆದರೆ ಆ ಬೆಣ್ಣೆ ವನಸ್ಪತಿ ಮಿಶ್ರಿತವಾಗಿರಬಾರದು ಅಷ್ಟೇ.

ಮೇಲ್ಕಾಣಿಸಿದ ತೀರ್ಪು ಉತ್ತರಪ್ರದೇಶಕ್ಕಷ್ಟೇ ಅನ್ವಯಿಸುವುದೆಂದು ದಕ್ಷಿಣ ಭಾರತದ ವಿಧಾನಸಭೆಗಳ ಸದಸ್ಯರು ನೆನಪಿನಲ್ಲಿಡಬೇಕು. ಉತ್ತರಪ್ರದೇಶವು ಮಾಖನಲಾಲರ ಪ್ರದೇಶ. ಅಲ್ಲಿ ಬೆಣ್ಣೆಗೆ ದರಿದ್ರವಿಲ್ಲ. ದಕ್ಷಿಣದಲ್ಲಿ ಹಾಗಲ್ಲ ಇಲ್ಲಿ ಬೆಣ್ಣೆ ಆಗಲೇ ಮಿತಿಮೀರಿ ತುಟ್ಟಿಯಾಗಿದೆ. ಆದ್ದರಿಂದ ವಿಧಾನಸಭೆಯಲ್ಲಿ ಯಾರಾದರೂ ಬೆಣ್ಣೆ ಹಾಕುವ ಪ್ರಯತ್ನ ನಡೆಸಿದರೆ ಅದು ಅಸಭ್ಯವೆಂದೇ ತೀರ್ಮಾನಿಸಬೇಕೆಂದು ಇಲ್ಲಿ ಸೂಚಿಸಲಾಗಿದೆ. ಇಲ್ಲದಿದ್ದರೆ ಬೆಣ್ಣೆಯ ಬೆಲೆ ಗಗನಕ್ಕೆ ಹಾರಿ ಅನಾಹುತವಾಗಬಹುದು. ಇಲ್ಲಿ ಚಕ್ರಗಳು ಸರಿಯಾಗಿ ತಿರುಗದಿದ್ದರೆ, ವಿಧಾನ ಸಭೆಯ ಹೊರಗೆ ಶುದ್ಧವಾದ ಕೀಲೆಣ್ಣೆ ಹಾಕುವುದು ಅಸಭ್ಯವೆಂದು ಪರಿಗಣಿಸಲ್ಪಡಲಾಗುವುದು.

- ಲಾಂಗೂಲಾಚಾರ್ಯ

**ಪ್ರಿಸಮ್ ಬುಕ್ಸ್ ಪ್ರೈ. ಲಿ.** ರೂ.70
**ಬೆಂಗಳೂರು - 560 070.**